4) ಎಲ್ಲ ಕಪಿಬಲವೆರಸಿ | ಸೇತುಭಂದನ ಮಾಡಿ | ಲಂಕಾಪುರವನೆ ಹೊಕ್ಕೂ ಲಂಕೆಯೊಳು ರಾವಣನ | ಶಿರವಚಂಡಾಡಿದನ | ದಶರಥ ರಾಮ ಎನ್ನಿರೋ| ಕೌಸಲ್ಯ ರಾಮನ || ಪಟ್ಟಾಭಿರಾಮ ಎನ್ನಿರೋ || ಶ್ರೀರಾಮ ||

**ಜಂಪೆತಾಳ ಕಾಂಬೋದಿರಾಗ**

**ಸಾಹಿತ್ಯ ಸಮ್ಮೇಳನಕೆ ಹಾಡುವ ಹಾಡು**

1) ಹೊಸವರುಷಕನವೋದಯಕೆ | ಕೂಡಿಬಂತು ಕನ್ನಡದ ಮೇಳಾ || ಕನ್ನಡದ ಮೇಳ | ಸಾಹಿತ್ಯ ಕಲೆ ಸಂಸ್ಕೃತಿಯ | ದಿಗ್ಗಜರೆಲ್ಲ ಮೇಲೈಸಿ | ಕನ್ನಡಮ್ಮನ ಸೇವೆಗೆ | ಜನಮನವ ಓಲೈಸಿ | ಸಂಸಂತಸದಿ ಸಕಲರೆಲ್ಲರು ಕೂಡಿಮೆರಸುವಾ ಮೇಳ | ಹೊಸ ವರುಷಕೆ ನವೋದಯಕೆ | ಕೂಡಿ ಬಂತು | ಕನ್ನಡದ ಮೇಳಾ || ಕನ್ನಡದ ಮೇಳಾ |

2) ಪರಮ ಪೂಜ್ಯರ ಸಾಹಿತ್ಯದಲ್ಲಿ | ಸಾಹಿತ್ಯ ಸೇವೆಯು ತುಂಬಿ ಮನದಲ್ಲಿ ಚಿರಂತರವಾಗಿ ನಡೆಯಲೀ | ಹರುಷದಿಂದಲಿ ಮೇಳಾ || ಹೊಸವರು

3) ಕೀರ್ತಿ ಮೆರೆಯುವಂತೆ ಜಗದಲ್ಲಿ | ಹಗಲಿರುಳು ಶ್ರಮಿಸುವ ಮನಮೂಡಲೀ ಸತ್ವರಲ್ಲಿ | ಭೇದಭಾವಬಿಟ್ಟು | ಸತ್ವರೆಲ್ಲರು ಕೂಡಿ | ಕನ್ನಡಮ್ಮನ ಸೇವೆ ಭಕ್ತಿಯಲಿಮಾಡಿ | ಹೊಸವರುಷಕೆ ನವೋದಯಕೆ | ಕೂಡಿಬಂತು ಕನ್ನಡದ ಮೇಳ | ಹೊಸವರುಷಕೆ |

**ಕಾಂಬೋದಿರಾಗ ಅಟ್ಟತಾಳ**

**ಭಜನೆಪದ**

1) ನಾಮಾಡಿದ ಕರ್ಮಬಲವಂತವಾದರೆ ನೀ ಮಾಡುವದೇನೋ ದೇವಾ || ಸಾಮಾನ್ಯವಲ್ಲವಿದು ಬ್ರಹ್ಮ ಬರೆದ ಬರಹನೇಮಾದಿಂದಲಿಯನ್ನಪಣೆಯೋಳ್ ಬರೆದುದಕೇ ‖ ನಾಮಾಡಿದ ಕರ್ಮಬಲವಂತವಾದರೆ ನೀ ಮಾಡುವುದೇನೋ ದೇವಾ | ಸಾಮಾನ್ಯ



2) ಅನ್ನಾಪಾನಂಗಳಿಗೆ | ಅಗ್ರಗಣ್ಯನು ಆಗಿ | ಸ್ನಾನಜಪತ ಪಾದಿಗಳ ನೀಗೀ | ಧಾನಾವಾಂತಕನನನ್ನಾ ಧ್ಯಾನಾವಮಾಡದೆ ಸ್ವಾನನಂತೆ ನಾನು ಮನೆ ಮನೆಯ ತಿರುಗಿ । ನಾ ಮಾಡಿದ ಕರ್ಮ || ಬಲವಂತವಾದರೆ ನೀ ಮಾಡುವುದೇನೋ ದೇವಾ ಸಾಮನ್ಯವಲ್ಲವಿದು ಬ್ರಹ್ಮ ಬರೆದ ಬರಹನೇ ಮಾದಿದಲಿಯನ್ನ ಪಣೆಯೋಳ್ ಬರೆದುದಕೇ || ನಾಮಾಡಿದಕರ್ಮ ||

3) ಇನ್ನಾದರು ನಿನ್ನಾದಾಸರ ಸಂಘವನಿತ್ತು | ಮನ್ನಿಸಿಸಲ ಹೈಯ್ಯಾ ಮನ್ಮಥಜನಕ ಅನ್ಯರೊಬ್ಬರ ಕಾಣೆ | ಆದರಿಸುವರಿಲ್ಲಾ | ಪನ್ನಗಶಯನ | ಶ್ರೀಪುರಂಧರವಿಠಲಾ ನಾ ಮಾಡಿದ ಕರ್ಮ | ಬಲವಂತವಾದರೆ ನೀ ಮಾಡುವುದೇನೋ ದೇವಾ||

**| | ತಾಳಜಂಪೆ | |**

1) ಮೂರ್ಖರಾದವರುಜನರು ಜನರು | ಲೋಕದೊಳಗೆ ಏಕದೇವನಬಿಟ್ಟು | ಕಾಕುದೈವನ ಭಜಿಸಿ || ಮೂರ್ಖರಾದವರು ಜನರು ಲೋಕದೊಳಗೇ ॥ ಏಕದೇವನ ಬಿಟ್ಟು ಕಾಕುದೈವನ ಭಜಿಸಿ | ಮೂರ್ಖರಾದವರು ||

2) ಒಂಟಿಯಲಿ ಹೆಂಡತಿಯ | ಬಿಡುವಾತ ಮೂರ್ಖ | ಗಂಟನೊಬ್ಬರಕೈಲಿ | ಕೊಡುವಾತ ಮೂರ್ಖ | ನೆಂಟರಿಗೆ ಸಾಲವನೂ | ಕೊಡುವಾತಮೂರ್ಖಾ ಜನಕಂಠಕನಾಗಿರುವ | ಕಡುಮೂರ್ಖನೈಯ್ಯಾ || ಮೂರ್ಖರಾದವರು ಜನರು ಲೋಕದೊಳಗೇಕಾಕುದೈವನ ಭಜಿಸಿ | ಲೋಕದೊಳಗೇ

3) ಪಡೆದ ಮಕ್ಕಳ ಮಾರಿ ಪಡಲು ಹೊರೆಯುವ ಮೂರ್ಖ | ಬಡತನವು ಬಂದಾಗ | ಬೈದುಕೊಂಬುವ ಮೂರ್ಖ | ದೃಢಭಕ್ತಿ ಇಲ್ಲದವ | ಕಡುಮೂರ್ಖನಯ್ಯಾ | ಮೂರ್ಖರಾದವರುಜನರು || ಲೋಕದೊಳಗೆ | ಕಾಕು

4) ಮುಪ್ಪನಲಿಮದುವೆಯನು || ಮಾಡಿಕೊಂಬುವ ಮೂರ್ಖ | ಸರ್ಪನಲ್ಲಿ ಸರಸ ಆಡುವಾತನೆ ಮೂರ್ಖ | ಇಪ್ಪತ್ತೊಂದು ಕುಲ | ಉದ್ಧರಿಸುವೆನೆಂಬುವನೆ ಮೂರ್ಖ ಅಪ್ಪರಂಗಯ್ಯನ ಸ್ಮರಿಸದವಮೂರ್ಖ | ಮೂರ್ಖರಾದವರು ಜನರು ಲೋಕದೊಳಗೇ | ಕಾಕುದೈವನಭಜಿಸೀ || ಲೋಕದೊಳಗೆ ||

**|| ಕಾಂಬೋದಿರಾಗ |**

5) ರಾಮನಾಮವಭಜಿಸಿ | ನೆನೆಯದವಮೂರ್ಖ | ಹೇಮವನುತಾಗಳಿಸಿ | ಉಣದವನೆ ಮೂರ್ಖಾ | ಭೂಮಿಧಾನವತೆಗೆದಾ ಭೂಪತಿಯೆ ಮೂರ್ಖಾ ಮೂರ್ಖರಾದವರು ಜನರು | ಲೋಕದೊಳಗೇ || ಏಕದೇವನ ಬಿಟ್ಟು | ಕಾಕುದೈವನ ಭಜಿಸಿ || ಮೂರ್ಖರಾ |

6) ಕಾಶಿಯಲಿ ದೇಹವನೂ 1 ತೊಳೆಯದಿದ್ದವಮೂರ್ಖ | ಶ್ರೇಷ್ಠ ಗಿರೀಶ್ರೀಕೃಷ್ಣನ ಭಜಿಸಿದಿದ್ದವಮೂರ್ಖ | ದಾಸನಾಗುವ ಮನುಜಾ ಕಡುಮೂರ್ಖನಯ್ಯಾ ಮೂರ್ಕರಾದವರು ಜನರು ಲೋಕದೊಳಗೇ || ಏಕದೇವನಬಿಟ್ಟು | ಕಾಕುದೈವನಭಜಿಸಿ | ಮೂರ್ಖರಾದವರು |

7) ಸತ್ತಕರುವಿನತಾಯ | ಹಾಲಕರೆಯುವ ಮೂರ್ಖ | ವತ್ತೆ ಇಲ್ಲದೆ ಸಾಲ | ಕೊಡುವಾತ ಮೂರ್ಖ | ಹತ್ತೆಂಟುಭಗೆಯಲ್ಲಿ | ಹಂಬಲಿಸುವ ಮೂರ್ಖ | ಹೆತ್ತತಾಯ ಬೈಯ್ಯ | ಕಡುಮೂರ್ಖನಯ್ಯಾ | ಮೂರ್ಖರಾದವರು ಜನರು ಲೋಕದೊಳಗೆ | ಕಾಕುದ್ಯೆವನ ಭಜಿಸಿ | ಮೂರ್ಖರಾದವರು ಜನರು ಲೋಕದೊಳಗೇ ॥

8) ಉಂಡಮನೆಗೆರಡನ್ನು | ಭಗವಾತಮೂರ್ಖ | ಕೊಂಡೆ ಮಾತನು ಕೇಳಿ ಕುಣಿಯುವವನೆ ಮೂರ್ಖ | ಪುಂಡರೀಕಾಕ್ಷ ಶ್ರೀ ಪುರಂದರವಿಠಲನ | ಕೊಂಡಾಡಿ ಭಜಿಸಿದವ ಕಡು ಮೂರ್ಖನಯ್ಯಾ ಮೂರ್ಖರಾದವರು ಜನರು ಲೋಕದೊಳಗೇ || ಕಾಕು ವನಭಜಿಸಿ || ಮೂರ್ಖರಾದವರು ಜನರು ಲೋಕದೊಳಗೇ ॥

**|| ಭಜನೆ ರಾಗ ಕಾಂಬೋದಿ ||**

**|| ಜಂಪೆತಾಳ (ಪಲ್ಲವಿ) | ಇದು ಭಾಗ್ಯ ಇದು ಭಾಗ್ಯ | ಇದು ಭಾಗ್ಯವಯ್ಯಾ ||**

**ಪಧುಭನಾಭನಪಾದ | ಭಜನೆ ಸುಖವಯ್ಯಾ | ಇದು ಭಾಗ್ಯ ಇದು ಭಾಗ್ಯ | ಇದು ಭಾಗ್ಯವಯ್ಯಾ||**

1) ಕಲ್ಲಾಗಿರಲು ಬೇಕು | ಕಠಿಣ ಭವತೊರೆಯೊಳಗೆ | ಬಿಲ್ಲಾಗಿರಲು ಬೇಕು | ಬಲ್ಲಾವರೊಳಗೇ | ಮೆಲ್ಲಗೆ ಮಾಧವನಾ | ಮನ ಒಪ್ಪಿಸಲು ಬೇಕು | ಬೆಲ್ಲವಾಗಿರಬೇಕು | ಬಂದು ಜನಗಳಿಗೇ || ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯಾ ಪದುಭನಾಭನಪಾದಭಜಿಸುವುದೆ ಸುಖವಯ್ಯಾ || ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯಾ |

2) ಬುದ್ಧಿಯಲಿತನುಮನವ ತಿದ್ದಿಕೊಳ್ಳಲಿಬೇಕು || ಮುದ್ದಾಗಿರಲು ಬೇಕು | ಮುನಿಯೋಗಿಗಳಿಗೆ | ಸಿದ್ದ ಜನರಬ್ಬಯಲೀ ಮೀನಾಗಿರಲು ಬೇಕು | ಶುದ್ಧನಾಗಿರಬೇಕು | ಕರಣತ್ರಯಗಳಲೀ | ಇದು ಭಾಗ್ಯ ಇದು ಭಾಗ್ಯ | ಇದು ಭಾಗ್ಯವಯ್ಯಾ | ಪದುಭನಾಭನಪಾದಭಜಿಸುವುದೆ ಸುಖವಯ್ಯಾ ||

3) ವಿಶಯ ಭೋಗದ ತೃಣಕೇ | ಉರಿಯಾಗಿರಲು ಬೇಕು | ನಿಶೆದಿನವು ಶ್ರೀಹರಿಯ ಭಜಿಸಲೂ ಬೇಕೂ || ವಸುಧೆಯೊಳುಪುರಂದರವಿಠಲನಿಗೆ ಸಮನಾದ | ಹಸನಾದ ದಾಸರನು | ಸೇರಲೂ ಬೇಕೂ || ಇದು ಭಾಗ್ಯ | ಇದು ಭಾಗ್ಯ ಇದು ಭಾಗ್ಯವಯ್ಯಾ ಪದುಭನಾಭನ ಪಾದ | ಭಜಿಸುವುದೆ ಸುಖವಯ್ಯಾ || ಇದು ಭಾಗ್ಯ ಭಾಗ್ಯವಯ್ಯಾ |

**|| ಜಂಪೆತಾಳ ||**

1) ತಲ್ಲಣಿಸದಿರು ಕಂಡ್ಯಾ ತಾಳು ಮನವೇ | ಎಲ್ಲರನುಸಲಹುವನು | ಇದಕೆ ಸಂಶಯವಿಲ್ಲಾ | ತಲ್ಲಣಿಸದಿರು ಕಂಡ್ಯಾ ತಾಳು ಮನವೇ ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲಾ



2) ಬೆಟ್ಟದಾ ತುದಿಯಲ್ಲಿ ಹುಟ್ಟಿರುವ ವೃಕ್ಷಕ್ಕೆ | ಕಟ್ಟೆಯನೂಕಟ್ಟಿ ನೀರೆರೆದವರು ಯಾರೋ || ಹುಟ್ಟಿಸಿದ ಶಿವತಾನೇ ಹೊಣೆಗಾರನಾಗಿರಲು | ಗಟ್ಟಾಗಿಸಲಹುವನು | ಇದಕೆ ಸಂಶಯವಿಲ್ಲಾ || ತಲ್ಲಣಿಸದಿರು ಕಂಡ್ಯಾ ತಾಳು ಮನವೇ ||

3) ಅಡವಿಯೊಳಗಾಡವ | ಮೃಗಪಕ್ಷಿಗಳಿಗೆಲ್ಲಾ | ಅಡಿ ಗಡಿಗೆ ಆಹಾರ | ಇತ್ತವರು ಯಾರೊ | ಪೊಡೆವಿಗೊಡೆಯ | ಮೃಢನು ಒಡೆಯ ತಾನಾಗಿರಲು! ಸಡಗರದಿ ಸಲಹುವನು | ಇದಕೆ ಸಂಶಯವಿಲ್ಲಾ || ತಲ್ಲಣಿಸದಿರು ಕಂಡ್ಯಾ ತಾಳುಮನವೆ | ಎಲ್ಲರನು ಸಲಹುವನು | ಇದಕೆ ಸಂಶಯವಿಲ್ಲಾ || ತಲ್ಲಣಿಸದಿರು ಕಂಡ್ಯಾ || ತಾಳುಮನವೇ

4) ಕಲ್ಲೊಳಗೆ ವಾಸಿಸುವ | ಕ್ರಿಮಿಕೀಟಗಳಿಗೆಲ್ಲಾ | ಅಲ್ಲಲ್ಲಿ ಗಾಹಾರ | ಇತ್ತವರು ಯಾರೋ | ಬಲ್ಲಿದನು ಶ್ರೀಹರಿಯು ಎಲ್ಲರನು ಸಲಹುವನು ಸಂಶಯವಿಲ್ಲಾ || ತಲ್ಲಣಿಸದಿರು ಕಂಡ್ಯಾ ತಾಳುಮನವೆ | ಎಲ್ಲರನು ಸಲಹುವನು। ಇದಕೆ ಸಂಶಯವಿಲ್ಲಾ || ತಲ್ಲಣಿಸದಿರು ಕಂಡ್ಯಾ ತಾಳುಮನವೆ || ಎಲ್ಲರನು ಸಲಹುವನೂ ಇದಕೆ ಸಂಶಯವಿಲ್ಲಾ || ಕಲ್ಲ ||

**|| ಕಾನಡ ರಾಗ ||**

**|| ನಾಟಕದ ಕಂದ | ಕರ್ಣ ||**

**|| ಕೊಲಲೇಪಾಂಡುಕುಮಾರರಾ | ಕೊಲ್ಲಲೆಯನ್ನ ತಂಮದಿರಾ || ದಾರಿ ||**

**|| ಆದಿತಾಳ || || ಶಿವನಭಕ್ತಿ ಹಾಡು || ಭಜನೆ ಹಾಡು ||**

1) ಇವನೇ ಗಿರಿಜಾ ರಮಣನು | ಇವನೇ ಪಾಲಾಕ್ಷ ಶಿವನು | ಚಂದ್ರಖಳಾಧರಶಂಕರ

ಶಿವನೂ | ನಾದಬಿಂದೂ ಕಲಾತೀತನು || ಇವನೇ ಗಿರಿಜಾ ರಮಣನು | ಇವನೇ ಪಾಲಾಕ್ಷ ಶಿವನೂ |

2) ಜಡೆಯೊಳು ಗಂಗೆಯು ತೊಡೆಯೊಳು ಗೌರಿಯು ಕರದಿತ್ರಿಶೂಲವಧರಿಸಿದ ಹರನು | ನೀಲಕಂಠನು ನಿಗಮಗೋಚರ | ಗಂಗಾಧರ ಗಜ ಚರ್ಮಾಂಬರ ಎನಿಸಿದ ಶಿವನೂ || ಇವನೇ ಗಿರಿಜಾರಮಣನೂ | ಇವನೇ ಪಾಲಾಕ್ಷ ಶಿವನು

3) ಗಜರಾಕ್ಷಸನ ಶಿರಹರಿದವನೂ | ಕುವರಗೆ ಗಜಶಿರ ಧರಿಸಿದ ಹರನು | ಗಜ ಚರ್ಮಾಂಭರ | ಎನಿಸಿದ ಶಿವನೂ || ಇವನೇ ಗಿರಿಜಾರಮಣನು || ಇವನೇ॥

4) ದಕ್ಷನ ಸುತೆಯು ಗೌರಿಪ್ರಿಯನು / ಪಕ್ಷಿವಾಹನ ಶಣುಕಪಿತನು | ಈಕ್ಷಿಸಿ ದಕ್ಷನ ಸಿರಿಹರಿಸಿದನು || ಸಕಲರ ರಕ್ಷಿಪ ಸಕಲೇಶ್ವರನೂ || ಇವನೇ ಗಿರಿಜಾರಮಣನು! ಇವನೇ ಪಾಲಾಕ್ಷ ಶಿವನು

5) ತ್ರಿಪುರವ ಕಟ್ಟಲು ವರಕೊಟ್ಟವನು | ತ್ರಿಪುರಾಸುರರಾಸಿರಹರಿದವನು || ಪಾಪಸಂಹರನು | ಕರುಣಾಕರನು | ಪೃಥ್ವಿಯ ಸುಜನರ ರಕ್ಷಿಪ ಶಿವನೂ ಇವನೇ ಗೌರೀಪ್ರಿಯನು ಇವನೇ ಪಾಲಾಕ್ಷ ಗಂಗಾಧರನೂ || ಶಿವನೂ |



6) ಕರುಣಾಕರನೂ ಕಾಣದೆ ಇಹನು | ಕಾಣದೆ ಜಗವಪಾಲಿಪನವನು | ಕಂಡೂಕಾಣದೆ | ಶಾಂತಿಯೊಳೀಹನು | ಹರುಷದಿ ಜನರ ಪಾಲಿಪ ಗಿರಿಜಾ ರಮಣನು | ಇವನೇ ಪಾಲಾಕ್ಷಶಿವನೂ

7) ಭಕ್ತರ ಭೀಷ್ಮಕೆ ವರಕೊಟ್ಟವನು | ಆಸಕ್ತರ ಮೊರೆಯಲಾಲಿಪನವನು || ಮೀರಿದ ಧಮಜರ | ವಧಿಸುವನವನೂ ಶಾಂತಿಯೊಳಜಗವಪಾಲಿಪನವನೂ || ಇವನೇ ಗಿರಿಜಾ ॥

**|| ಕಾನಡರಾಗ || ಆದಿತಾಳ || ಉಡುಪಿಕೃಷ್ಣ ಹಾಡು**

1) ಉಡುಪಿ ಕೃಷ್ಣಾಪೊಡವಿಗೊಡಯಾ ಬಿಡದೆನಾನಿಮ್ಮಡಿಗೆರಗುವೆ ಕಡಲಶಯನಾ ಬಡ ವರನ || ಕೈಬಿಡದೆ ಸಲಹೆ ಮೃಡನ ಸಖನೇ || ಉಡುಪಿಕೃಷ್ಣನೊಡವಿಗೊಡೆಯಾ | ಬಿಡದೆ ನಾನಿಮ್ಮಡಿಗೆರಗುವೇ | ಕಡಲಶಯನಬಡವರನ್ನು ಬಿಡದೆ ಸಲಹೋಮೃಢನಸಖನೇ ||

2) ಅಷ್ಟಮಠದ ಯತಿಗಳಿಂದ ಇಷ್ಟಪೂಜೆಗೊಳುವ ರಾಯಾ | ಇಷ್ಟಾರ್ಥಗಳ | ಇತ್ತು ಸಲಹೆ ಪುರಂದರ ವಿಠಲ ನಿಮ್ಮ ಭಜಿಪ್ ಉಡುಪಿಕೃಷ್ಣಾಪೊಡವಿಗೊಡೆಯಾ ಬಿಡದೆ ನಾನಿಮ್ಮಡಿಗೆರಗುವೆ | ಕಡಲಶಯನ ಬಡವರನ್ನು ಬಿಡದೆ ಸಲಹೊ ಮೃಡಸಖನೆ || ಉಡುಪಿ ||

3) ನಾರಿಜನರ ಸೀರೆ ಸೆಳೆದು ಚೋರತನದಿ ಏರಿ ಮರವ | ಕ್ಷೀರವನ್ನೇ ಸೂರೆಗೊಂಬ ಮಾರಜನಕಾ ಮಹಿಮೆ | ಪುರುಷಾ || ಉಡುಪಿ ಕೃಷ್ಣಾ ಪೊಡವಿಗೊಡೆಯ ಬಿಡುದೆನಾ ನಿಮ್ಮಡಿಗೆರಗುವೆ ||

4) ಬಾಲನಮಾತ ಕೇಳಿ ಗೋಪಿ | ಕಲಕಿ ಸ ಬಾಯತೆರೆದು | ಹಲವು ಬ್ರಹ್ಮಾಂಡಗಳನೆಲ್ಲಾ | ತೋರಿದಂತಾ | ದಾತನೀನೇ | | ಉಡುಪಿ ಕೃಷ್ಣಾ ಪೊಡವಿಗೊಡೆಯಾ | ಬಿಡದೆ ನಾ ನಿಮ್ಮಡಿಗೆರಗುವೆ || ಉಡುಪಿ ಕೃಷ್ಣಾ ಪೊಡವಿಗೊಡೆಯಾ | ಬಿಡದೆ ನ ನಿಮ್ಮಡಿಗೆರಗುವೆ ||

**|| ಕಾನಡರಾಗ || ಭಜನೆ || ಆದಿತಾಳ ||**

1) ಎಲ್ಲಾ ರೂಪವುತಾಂನತೆಶಿವ | ಎಲ್ಲರೊಳಗು || ತಾಳನಿಹನಂತೆ | ಅಲ್ಲಲ್ಲರಸುತೆ। ಗುಡಿಗಳ ತಿರುಗುತೆ | ಕಳ್ಳನ ನರಕಕಲ್ಲಂತೇಶಿವ | ಎಲ್ಲಾ ರೂಪವು ತಾನಂತೇ ಶಿವ ಎಲ್ಲರೊಳಗುತಾನಿಹನಂತೆ |

2) ಕಣ್ಣೆಂಬುದು ತನಗಿಲ್ಲಂತೆ ಶಿವ | ಕಣ್ಣಿಗೆ ಕಣ್ಣಾಗಿಹನಂತೇ ಶಿವ | ಕಣ್ಣು ತೆರೆದು ತಾನರವಸುವ ಜನರಿಗೆ | ಬಣ್ಣ ಬಣ್ಣವಾಗಿಹನಂತೇ || ಎಲ್ಲಾ ರೂಪವು ತಾನಂ ತೇಸಿವ | ಎಲ್ಲರೊಳಗು ತಾನಿಹನಂತೇ ||

3) ದುಷ್ಟವಿದೂರನು ತಾನಂತೇ ಶಿವ | ದುಷ್ಟಗೆ ದುಷ್ಟಾಗಿನಂತೆ | ದುಷ್ಟದೃಶ್ಯಗಳೆರಡರ ಮಧ್ಯೆ | ಶಾಶ್ವತ ತಾನಾಗಿ ಹನಂತೇ | ಎಲ್ಲಾ ರೂಪುವುತಾನಂತೆ ಶಿವ | ಎಲ್ಲರೊಳುಗುತಿನಿಹನಂತೆ ॥

**|| ಕಾನಡ ರಾಗ || ನಾರದ ಪ್ರವೇಶಕ್ಕೆ || ಆದಿತಾಳ |**

1) ನಂದಾಕುಮಾರ ನಟನ ವಿಚಾರ ಸಿಂ || ದುಶಯನ ಗೋವಿಂದ ಮುಕುಂದ ವಸುದೇವಜಾತಾ | ವಂದಿಪೇನಯ್ಯಾ | ವಸುದೇವಜಾತಾ ವಂದಿಪ್ರೇನಯ್ಯಾ | ವಸುದೇವಜಾತಾವಂದಿಪೆ ||

2) ಮಂದಾರೊದ್ದಾರಿ ಮಾನಿತಾ ಶೌರಿ ಸಿಂದುಶಯನ ಶ್ರೀ ಗೋವಿಂದಮುಕುಂದ ವಸುದೇವಾಜಾತಾ ವಂದಿಪೆನಯ್ಯಾ ವಸುದೇವಾಜಾತಾವಂದಿಪೇ ||

**|| ಆದಿತಾಳ || ದೇವಿಮಹಾತ್ಮ | ಬ್ರಹ್ಮ ವಿಷ್ಣುವಿಗೆ||**

**ಹಾಡು ಪ್ರಾರಂಭ**

ದೇವಾ ಕೇಳುಬನ್ನಪವನ್ನೂ ಬೇಡಿಕೊಂಬುವೆ | ದೇವಸತಿಯರಶಾಪವಹುದು! ಹೇಳಾಲಸದಳವೂ | ದೇವಾಕೇಳು ನಿನ್ನಪವನ್ನು ಹೇಳಾಲಸದಳವು | 2ನೇ ಕಾಲಕ್ಕೂ

**|| ಆದಿತಾಳ || ಸೀತಾಪರಿತ್ಯಾಗ | ರಾಮಸೀತೆ ||**

ಭೂಸೂತೆಯ ಹಿಂದೆ ನಾವು | ವನವಾಸಮಾಡಿದಾ | ಕ್ಲೇಷಸಾಲದೆ | ವನದ ಪೇಕ್ಷೆಯ | ಬಯಸುವುದು ಸರಿಯೆ | ಭೂಸುತೇಯ ಹಿಂದೆನಾವುವನ ವಾಸಮಾಡಿದ 2ನೇ ಕಾಲ

**|| ಆದಿತಾಳ | ಸೀತಾಪರಿತ್ಯಾಗ ಸೀತೆ ರಾಮನಿಗೆ ||**

ಕಳುಹನ್ನೊಡನೆ | ಲಕ್ಷ್ಮಣಾನ | ವನಕೇ ತೆರಳೂವೇ || ನಳಿ ನಾಕ್ಷರಾಮಚಂದ್ರು ನೀಜಾಲವ ಮಾಡೂವೇ || ಕಳುಹೆನ್ನೊಡನೆಲಕ್ಷ್ಮಣಾ ವನಕೇತರವೆ ||

– ಎರಡನೇ ಕಾಲಕ್ಕೆ ಕಳುಹೆನ್ನೊಡನೆಲಕ್ಷ್ಮಣನಾನವನಕೆತೆರಳೂವೇ ||

- || ಕೆಲವೆಲ್ಲಾ ರಾಗಗಳ ಭಾಮಿನಿ | 1+2+3+4+5+6+7 ರಾಗಗಳಲ್ಲಿ ಭಾಮಿನಿಗಳು

- || ತ್ರಿಪುರ ಸಂಹಾರ ಕಥೆಯಲ್ಲಿ||

**|| ಭಾಮಿನಿಗಳು ||**

1. ರೇಗುಪ್ತಿಯಲ್ಲಿ 2. ಶಂಕರಾಭರಣ 3. ಆನಂದಭೈರವಿ 4. ಭೈರವಿರಾಗ 5. ಗೌಳರಾಗದಲ್ಲಿ 6. ತೋಡಿರಾಗದಲ್ಲಿ 7. ವಿಜಯನಗರಿ ರಾಗ

1. ರೇಗುಪ್ತಿ ರಾಗದಲ್ಲಿ || ಕೌರವನಿಗೆ | ಶಲ್ಯ

ಕೌರವ ಕೇಳು ಎಂತು ತ್ರಿಪುರವಗೆಲಿದ | ಮುರಹರಗೆಂತುಸಾರಥಿಯಾದ ಬ್ರಹ್ಮನು | ನಿಂತು ಕಾದಿದರಾರು || ತ್ರಿಪುರವೆಂತುಪಟ್ಟಿತು | ಇದನೆಲ್ಲ ಅರುಹಬೇಕೆನುತ | ಸಂತಸದಿ ಕೇಲ ಮಾದೇಶಾ |



**|| ಭಾಮಿನಿ (ಕೌರವ) ||**

**2. ಶಂಕರಾಭಣ || ಕೌರವ | ಶಲ್ಯನಿಗೆ ||**

|| ಮಾವಕೇಳ್ ಪೂರ್ವದಲಿ | ತಾರಕಾದಿದೈತ್ಯರು ಮೇಲು ತಪದಲಿ ಮಯನ ಮೆಚ್ಚಿಸಿ | ವರವ ಪಡೆದು | ತಾವು ರಚಿಸಿದರು | ಮೂರುಪುರವನು ಅಂತರೀಕ್ಷದಲಿ ಭಾವಾ ||

**3. ಭಾಮಿನಿ || ಆನಂದಭೈರವಿರಾಗ | ಕೌರವ |**

ಭಾವ ಕೇಳ್ ರಜತದಿ | ಕಬ್ಬಿಣದಿ | ಮೇಲೆಲೋ ಹದಿ ತ್ರಿಪುರವ | ರಚಿಸಿ ತ್ರಿಪುರವನಾಳುತಿರಲು | ರಾಕ್ಷಸರು ಕೊಟ್ಟ ರಂಜಿಕೆಗಳನು 1 ಬಹುಕಷ್ಟಗಳಾ|| ಅಮರರು ತಾಳಲಾರದೆ | ಶಶಿಮೌಳಿಗರುಹಲು | ಅಭಯವ ಕೊಡುತ | ಕಾಲಹರ ಹೊರಟ | ತ್ರಿಪುರವದಿಸಲು ಭಾವಾ |

**4. ಭಾಮಿನಿ ಭೈರವಿ ರಾಗದಲ್ಲಿ**

ಧರಣಿಯೇ ರಥವಾಯ್ತು || ಗಾಲಿಗಳೂ ಹಿಮಕರನು ಭಾಸ್ಕರನು || ತುರುಗವೇವೇದಗಳು |

ಹಿಮಾಚಲವೇಧನುಸ್ಸಾಯ್ತು | ಉರುಗಪತಿಯೇ ಸೂತ್ರ | ಲಕ್ಷ್ಮೀವರನೆಬಾಣಗಳಾಗಿ ಸದೆಬಡಿದರು | ಅನಂತಾನಂತರಕ್ಕಸರ ಭಾವಾ

**5. || ಭಾಮಿನಿ | ಗೌಳರಾದಲ್ಲಿ||**

ಪುರದೊಳಗೆಮಯನು ನಿರ್ಮಿಸಿದ | ಪರಮ ಸಿದ್ದೋದಕದಕೂಪದಿ ರಣದಿ ಪ್ರಾಣವ ತೊರೆದ ಜೀವಿಗಳ ಹಾಕಲೂ || ಮರಳಿ ದುರಕೆ ಬರುವುದ ಕಂಡು | ಹರನು ಚಿಂತಿಸುತಿರೇ

**6. ತೋಡಿರಾಗದಲ್ಲಿ**

ಹರಿಯು ತಾಪಶುವಾಗಿ 1 ಕಮಲೋದ್ಭವನೆ ಕರುವಾಗಿಪುರವ ಸೇರುತ ಚೇರಿದರು ಕೊಳದ ಸಿದ್ದೋದಕರಸವಾ ವರಶಿವನು ಸವರಿದನು | ಅಖಿಳ ಧಾನವರಾ ॥

**7. ||ಭಾಮಿನಿ || ವಿಜಯನಗರಿ ರಾಗ ||**

ಹೇಳಿದೆನು ಎಲ್ಲವನು ಭಾವನೇ | ತಾಳಲಾರೆನು | ವೈರಿಗಳ ಉಪಠಳವ ಖಳರೆದುರೆನ್ನ | ಸಾರಥಿಯಾಗಿ ಕರ್ಣಗೆ 1 ಸಲಹ ಬೇಕೆಂದೆನುತ | ಕೈ ಮುಗಿದ | ಕೌರವಾ

**॥ ರಾಗಗಳ ವಿಚಾರ ||**

**|| ಹಾರಮನಿಮಾಸ್ಟರ್ ॥**

ಸನ್ಮಾನ್ಯ ಶ್ರೀ ರಂಗಧಾಮಾಜಚಾರ್ಯ್ರರು ಲಕ್ಕೇಹಳ್ಳಿ ನಾಗವಲ್ಲಿ ಅಂಚೆ ತಾಲ್ಲೋಕು ಜಿಲ್ಲೆ, ತುಮಕೂರು

ಫೋನ್ ನಂ.95816248216

ಅರಳಗುಪ್ಪೆ ಎ. ಹೊಸಹಳ್ಳಿ ನೆಂಟರು, ವೈಷ್ಣವರು

ರಂಗಗಳ ವಿವರ

**|| ಕಾಂಬೋದಿರಾಗ ||**

1) ರಾಗಾಂಗ ರಾಗ

2) ಭಾಷಾಂಗ ರಾಗ

3) ಉಪಾಂಗ ರಾಗ

1) ರಾಗಾಂಗ ರಾಗ ಅಂದರೆ ಪೂರ್ಣ ಜನಕಾಂಗ ರಾಗ

2) ಭಾಷಾಂಗರಾಗ ಅಂದರೆ ಅನ್ಯರಾಗಗಳನ್ನು ಜೊತೆಗೂಡಿಸಿಕೊಳ್ಳುವುದು (ಜನ್ನಿರಾಗ ಅಂತ)

3) ಉಉಪಾಂಗರಾಗ ಅಂದರೆ ಜನಕಾಂಗರಾಗಗಳನ್ನು ಹೋಲುವ ರಾಗಗಳು ಇಲ್ಲಿಂದ ಕಾಬೋದಿರಾಗದಲ್ಲಿ

**|| ರೂಪಕ ತಾಳ || ಶಿವಭಕ್ತಿ ಹಾಡು || ಕಾಂಬೋದಿರಾಗ ||**

1. ನಿರುಪಮಾಂಶಿವ ದೇವದೇವ | ಪಾಲಿಸೆನ್ನನೂ || ದೇವ | ನಿರುಪಮಾಂಶಿವ ನಿತ್ಯ ನಿರಂಜನ ಮೃತ್ಯುಂಜಯನೆ | ಭಕ್ತ ಭೀಷ್ಮವನಿತ್ತು ಕಾಪಾಡುವ | ನಿರುಪಮಾಂಶಿವದೇವ ದೇವ ಪಾಲಿಸೆನ್ನನೂ ||

2. ಜಡೆಯೊಳ್ ಗಂಗೆಯ ತೊಡೆಯೊಳ್ ಗೌರಿಯ ಬಿಡದೆ ದರಿಸಿಹದೇವಾ ನೀಲಕಂಠನೆನಿಗಮಗೋಚರ | ಬೇಡಿದ ಭೀಷ್ಮವ | ನೀಡುತ ಪಾಲಿಪ | ನಿರುಪಮಾಂಶಿವದೇವದೇವಪಾಲಿಸೆನ್ನನೂ ||

**|| ರೂಪಕತಾಳ || ಸತ್ಯ ಚಿತ್ರಕೇತು ಕಥೆ | ಚಾರುಮತೀಸುಮತಿಗೆ ||**

ಕರುಣವನ್ನು ತೊರೆದು ತಂಗಿ ದುರುಳ (ತನದೊಳು) ಮಾತನೂ ದೊರೆತ ಗರ್ಭವನ್ನು ನೋಡಿ || ಮರುಕಬಾರದೇ || ಕರುಣವನ್ನು ತೊರೆದು ತಂಗೀದುರುಳತನದೊಳು

**|| ರೂಪಕತೂಳ || ಚಾರುಮತಿ ಸುಮತಿಗೆ ||**

ಏನೆಸುಮತಿ ಸವೆತಿಮತ್ಸರ | ಕ್ಷಿತಿಪನೋಳೇಕೆ || ಧೀರ ಹರಿಯು ಮಾನನಿಧಿಯು ಕೊಟ್ಟವರವಿದೇ | ಏನೆಸುಮತಿ ಸವತಿ ಮತ್ಸರಕ್ಷಿತಪನೋಳೇಕೆ

**|| ಅಟ್ಟತಾಳ ||**

**ಚಿತ್ರಕೇತು ಕಥೆ | ಚಿತ್ರಕೇತುವಿಗೆ || ಚಾರುಮತಿ ||**

ಎಂತಾ ಅಪ್ಪಣೆ ಮಾಡಿದೆ ಪ್ರಾಣೇಶಾನೇ | ಎಂತ ಅಪ್ಪಣೆ ಮಾಡಿದೆ | ಎನಗೆ ಹವಿಯನ್ನು ಕೊಡಲು ಬೇಡಾವೆಂದೇಳಿದೆ. ಸತಿಯ ಮಾತನು ಕೇಳದೇ ಪ್ರಾಣೇಶನೇ ಎಂಥಾ ಅಪ್ಪಣೆ ಮಾಡಿದೇ |

**|| ಅಟ್ಟತಾಳ || ದೇವೀ ಮಹಾತ್ಮೆ ||**

1. ಆದಮದೈತ್ಯನೆ ನಿನ್ನಾ ಮಧವಮುರಿಯುವೆಮುನ್ನಾ | ಮದುಘಡಿಕನೆ ನಿನ್ನ ವಧೆಯ ಮಾಡದೆ ಬಿಡೆನು || ದುರಕೆನಿಲ್ಲೆಲೊದುರುಳ 1 ಕೇಳ್ ದುರುಳಾನೆದುರಕೆ ನಿಲ್ಲೆಲೋ ದುರುಳಾ

2. 2ನೇ ಕಾಲದಲ್ಲಿ ಈ ಅಧಮಾದೈತ್ಯನೆ ನಿನ್ನ ಮಧವ ಮುರಿಯದೆ ಬಿಡೆನು 3ನೇ ಕಾಲಕ್ಕೂ || ಮಧು ಗುಡಿಕನೆ ನಿನ್ನ ವಧೆಯ ಮಾಡದೆ ಬಿಡೆನು | ದುರಕೆ ನಿಲ್ಲೆಲೊ ದುರುಳ (ಮುಕ್ತಾಯ) ತದಿತೋಂ ಜಣ | ತದಿತೋಂ ತದಿತ್ಯೆ ||

**|| ಅಟ್ಟತಾಳ || 2ನೇ ಕಾಲದಲ್ಲಿ || ದೇವೀ ಮಹಾತ್ಮಯಲ್ಲಿ**

ಚಂಡನಾರಿಯೆ ನಿನ್ನ / ಮಂಡೇಯ ಕಂಡ್ರಿಸು (ವೆತೆ ॥ 3ನೇ ಕಾಲದಲ್ಲಿ | ದಂಡಧರನಾಲಯಕೆ ಕಳುಹದೆಬಿಡೆನಾನು | ಬಾರುಬಾರಲೆನಾರಿ / ಕೇಳೆಲೆನಾರಿಯೇ ॥ ಮುಕ್ತಾಯ || ಕದಿತೋಜಣ | ತದಿತೋಂ | ತದಿತೋಂ | ತದಿತ್ಯೆ ||

**|| ಆದಿತಾಳ || ದಕ್ಷಯಜ್ಞ ದಕ್ಷಬ್ರಹ್ಮನಿಗೆ | ದಾಕ್ಷಾಯಿಣಿ**

ಪಂಥ ಹಿಡಿವಳೆನಿರಾಲಿ | ಅಂದುನುಡಿನೆ ನಪೊಂದಿರಲಿ | ಒಂದಿರಲಿ – ಪಂಥ ಹಿಡಿದಳೇನಿರಾಲೀ | ಭವರಾಯರ ಪರಿಭವ ಮಾಡದೆನಿನ್ನ ಭವಣೆಯ ಕೆಡಸೆದೆ | ಬಿಡೆನೆ ಖುದುಮೂರ್ಖ ॥ ಪಂಥ ಹಿಡಿವಳೆ ನಿರಾಲಿ | ಅಂದ ನುಡಿನೆನಪೊಂದಿರಲಿ ನೆನಪೊಂದಿರಲಿ | ಪಂಥ ಹಿಡಿವಳೆನಿರಾಲಿ

|| ಅಟ್ಟತಾಳ || ಮಾರ್ಕಾಂಡಚರಿತ್ರೆ ವಸಿಷ್ಠರು ||

ಏನಿದೇನಿದುನಡತೆ (ನಿಧಾನಗತಿ) 1 ಸರಿಯೇ ಇದು ! ಏನಿದೇನಿದೂನಡತೇ| ನರಲೋಕದೋಳೀರದೇಸುರಲೋಕಖುಷಿಯು ಬೃಕಂಡ || ಮುನಿವರ ಮೃಕಂಡ ಬರಲೇಕೆ ಈ ಪರಿ || ಏನಿದೇ ನಿದುನಡತೆ ಸರಿಯೇಯಿದು | ಏನಿದೇನಿದುನಡತೇ ॥

**||ಅಟ್ಟತಾಳ || ಸತ್ಯಚಿತ್ರಕೇತುಕಥೆ || ಚಾರುಮತಿ || ಚಿತ್ರಕೇತುಗೆ**

ಏತಕೆನೀನೇತಕೆ | ಏತಕೆಚಿಂತಿಪೇ | ರಮಣ ಕರುಣಾಭರಣ | ಏತಕೆ ನೀನೇತಕೆ ಚಿಂತಿಪೇ || ಲೋಲನೆ ಚಿಂತೆಯ ಮಾಡುವದೇನಿದು | ತಾಳ್ಮೆಬಾಳ್ವೆ ಕಾಂತಾ | ಏತಕೆ ನೀನೇತಕೆಚಿಂತಿಪೇ



**|| ಅಟ್ಟತಾಳ || ಚಿತ್ರಕೇತುರಾಜ | ಚಂದ್ರಮಾಲಿನಿಗೆ||**

ಏಳೇಳೆಲೊಪ್ರಿಯಾ | ಏನಿದು ಮಾಯಾ ಏಳೇಳೆಲೊಪ್ರಿಯಾ ಏಳುಯನ್ನಯರಮಣ | ಏಳುಯನ್ನಯಪ್ರಿಯಾ || ಏಳು ಏಳೆಲೊಪ್ರಿಯ || ನಾನೆ ನಿನ್ನಲಿ ಬಂದು | ಧೀನತ್ವದಲ್ಲಿ ಬೇಡೆ | ಸುಮ್ಮನಿರುವುದುತರವೇ || ಸುಂದರಕಾಯಾ 2ನೇ ಕಾಲ || ಏಳು ಏಳಲೊ ಪ್ರಿಯಾಸುಂದರಕಾಯಾ ಏಳುಏಳೆಲೊಪ್ರಿಯಾ

**|| ಅಟ್ಟತಾಳ || ಕರಿಭಂಠನ ಚರಿತ್ರೆ || ಪುಂಡರೀಕಾಕ್ಷಿ ||**

ಯಾರೀತನ್ಯಾರೀತನು | ಸುಂದರನಿವನು || ಯಾರೀ ತನ್ನಾರೀತನು || ಯಾರೀತನ್ಯಾರೀತನೂ || ಮಾರನೋಮನ್ಮನೋ ಇಂದ್ರಾನೊಚಂದ್ರಾನೋ ಯಾರೀ ತನ್ಯಾರೀತನೂ || ಸುಂದರ ನಿವನೂ || ಯಾರೀತನ್ಯಾರೀ ತನೂ || 2ನೇ ಕಾಲಕ್ಕೂ 3ನೇ ಕಾಲಕ್ಕೂ ಹಾಡಬಹುದು

**|| ಅಟ್ಟತಾಳ || ರಕ್ತಬೀಜಾಸುರನ ಕಥೆ || ವಿಷ್ಣುವಿಗೆ | ಲಕ್ಷ್ಮೀ ಹೇಳುವುದು ||**

ಏನಿದೇನಿದೂಪೇಳ್ವುದು | ಕಾಂತರನೀವೂ || ಏನಿದೇನಿದುಪೇಳ್ವುದೂ ಅಂತರಂಗದಿ ನೀವು ಚಿಂತೇ ಮಾಳರೆ ಹೀಗೆ || ಏನಿ || ದುರಳದೈತ್ಯನ ಶಿರವ ಭರದಿಂದ ತರಿಯಾದೇ | ಏನಿದೇ ನಿದುಪೇಳ್ವುದೂ ‖ 2ನೇ ಕಾಲ + 3ನೇ ಕಾಲ

**|| ಅಟ್ಟತಾಳ || ದಕ್ಷಯಜದಲ್ಲಿ | ಪಾಶ್ವತಿ ಲಕ್ಷ್ಮಿಗೆ ಹೇಳುವುದು ||**

ಯನಗೆ ತಿಳಿಸದೆ ಕಾರ್ಯ | ಜನಕಮಾಡುವನೇನೆ ತ್ರಿಣಯನ ಕೇಳಿಬರುವೇ ತಂಗೆಮ್ಮ ಲಕ್ಷ್ಮೀ ತ್ರಿಣಯನ | ಕೇಳಿ ಬರುವೆ || ಕೇಳ ತಂಗಿ ನೀನು ಲಾಲಿಸುಯನ್ನ ಮಾತನು ತಂಗೆಮ್ಮಾ ‖ ಬಿಡತಿ ಮುಕ್ತಯ | ತದಿತೋಂಜಣತದಿತೋಂ ತದಿತ್ತೈ

**|| ಆದಿತಾಳ || ಗಿರಿಜಾ ಕಲ್ಯಾಣ | ಗಿರಿರಾಜನಿಗೆ || ಮೇನಕಿ ||**

ನಾಥಾರಿವರಾನನು | ಯಾತಕೆ ನೋಡಲಿಲ್ಲಾ | ದಾರಿಗೆ ಮಗಳೂ ನೂರು ಬಂದಿಹಾಳು | ನಾತರೆವರನನುಯಾತಕೆ ನೋಡಾಲಿಲ್ಲಾ || ಸೀಲೇಗೌರಿಗೇ ಪ್ರಾಣಾಲೋಲರಾರಿಹರಿನ್ನೂ | ನೀಲ ಕಂಠಾನೇಬಲ್ಲಾ | ಈ ಮಾಯವನೆಲ್ಲಾ || ನಾತಾರಿವರನನು ಯಾತಕೇ ನೋಡಲಿಲ್ಲಾ ||

**|| ಅಟ್ಟತಾಳ || ಕುಶಲವರಕಥೆ || ಸೀತಾಪರಿತ್ಯಾಗ ||ಸೀತರಾಮನಿಗೆ ||**

ಕಂದನಾಡುವ ಲೀಲೆಯ | ನೋಡುವ ಪುಣ್ಯ ಎಂದೊದಗುವುದೊಪ್ರಿಯಾ | ಅಂದದಿಂದಲಿ ಕರವೆರಡರಿಂದಲಿ ಎತ್ತಿ | ಎಂದುಣಿಸುವೆಸ್ತನ್ಯಾವ್ಯಾ || 2ನೇ ಕಾಲ | ಕಂದನಾಡುವಲೀಲೆಯ ನೋಡುವ ಪುಣ್ಯ || ಎಂದೊದಗುವುದೊ ಪ್ರಿಯಾ (ದಿಗಿತಾದಿಗಿತಾದಿತ್ತಕ್ಕ ತಿದಿಗಣತೋಂತದಿಗಿಣತ್ಕೈ ||) ಮುಕ್ತಾಯ



**||ಏಕತಾಳ | ದಕ್ಷಯಜ್ಞ | ಶಂಕರದಾಕ್ಷಾಯಿಣಿ ಪ್ರವೇಶ||**

ಬಾಬಾಬಾ ಶಂಕರ ಮೊರೆಯಿಡುವೆನು ಪ್ರಭುವೆ || ಬಾಬಾಬಾ ಶಂಕರ ಶಿವನೇಶಂಕರನೇ ಕರುಣಾಕರನೆ | ಕೃಪಾಕರನೆ | ಕರುಣದಯಾ ನಿಧಿಯೆ | ಗಂಗಾಧರನೆಹರನೆಶಿವನೇಶಂಕರನೇ ಸಕಲೇಶ್ವರನೇ | ಬಾ ಬಾ ಬಾ ಬಾಶಂಕರ | ಮೊರೆಯಿಡುವೆನೂ ಪ್ರಭುವೆ ಬಾಬಾಬಾ ಶಂಕರಾ ॥

**|| ಅಟ್ಟತಾಳ || ಕರಿಭಮಠನ ಚರಿತ್ರೆ || ಪುಂಡರೀಕಾಕ್ಷಿ | ಕರಿರಾಯನಿಗೆ||**

ಪೋಗುವ ಬಾಬಾ ರೋ ಮೋಹದರಮಣಾ ಹೋಗೂವಬಾಬಾರೋ ಶೀದೀನೀ || ಯನ್ನಮನೆಗೇ | ಸೋಗುವ ಬಾಬಾರೋ || 2ನೇ ಕಾಲ + 3ನೇ ಕಾಲ

**||ಅಟ್ಟತಾಳ | ಶನಿಮಹಾತ್ಮ | ಅಲೋಲಿಕೆ | ವಿಕ್ರಮನಿಗೆ||**

1. ಮಾತಾಡಬಾರದೇನೋ | ಮಾರಮಣಾನೇ | ಮಾತಾಡಬಾರದೇನೋ || ಮಾತಾಡಬಾರದೇಪ್ರೀತಿಗೊಲಿದ ಪ್ರಾಣ ಮಾತಾಡಬಾರಾದೇನೋ ಮಾರಮಣಾನೇ | 2ನೇ ಕಾಲ-3ನೇ ಹಾಡು

2. ಅಂಗಕ್ಕೆ ಬೆಳದಿಂಗಳ್ | ಬಿಸಿಲಾಗಿತೋರ್ಪುದು ಭಂಗವೇನಿದರೋಳು ತುಂಗವಿಕ್ರಮಕೇಳೂ || ಮಾತಾಡಬಾರದೇನೋ ಮಾರಮಣನೇ || ಮಾತಾಡಬಾರದೇನೋ॥ 2 ಮತ್ತು 3ನೇ ಕಾಲ |

**|| ಹಾಡು ||**

**|| ಅಟ್ಟತಾಳ || ಭಕ್ತ ಮಾರ್ಕಾಂಡೇಯನಿಗೆ || ಕಾಮಿನಿ | ಮೋಹಿನಿ ||**

ಆರ್ಯಾತುರವೇತಕೆ | ನಮ್ಮೊಳು ನೀವು ಸರಸವಾಡಲಿಬಾರದೇ | ವರರಿಲ್ಲಯಮಗಿನ್ನು ಮಾರಾನ ಭಾಧೆಯು / ಬಾರಿಭಾದಿಸುತ್ತಲಿದೇ | ಕೇಳೆನ್ನರಮಣಾ| ಭಾರಿ ಭಾದಿಸುತ್ತಾಲಿದೇ 2+3ನೇ ಕಾಲ |

**॥ ರೂಪಕತಾಳ ||**

ಕರುಣವನ್ನು ತೊರೆದು ತಂಗೀದುರುಳಮಾತನು ದೊರೆತಗರ್ಭವನ್ನು ನೋಡಿ ಮರುಕಬಾರದೇ || ಕರುಣವನ್ನೂ ತೊರೆದು ತಂಗಿ ದುರುಳ ಮಾತನೂ ||

**|| ಭಾಮಿನಿ || ಸತ್ಯಚಿತ್ರಕೇತು ಕಥೆ || ಚಾರುಮತಿ ಪ್ರವೇಶ ||**

ಶ್ರೀಕರದಿರಂಜಿಸು ಅಭವನಂ | ಸ್ತುತಿಗೈದು | ಮುಖಕಮಲ ಮಜ್ಜನವಮಾಡಿ ಹಣೆಗೆ ಕಸ್ತೂರಿತಿಲಕವನು ತಾನಿಟ್ಟು | ಪಟ್ಟೆಪಿತಾಂಭರವತಾ ತೊಟ್ಟು, ಪಟ್ಟಕೆ ಪುಟ್ಟಕುವರನಿಲ್ಲವೆಂದೆನುತ | ಅತಿ ದುಃಖದೊಳು ಚಾರುಮತಿಯು | ತಂಗಿ ಸುಮತಿಯೊಡನೆ ಬಂದು | ಪತಿಯೊಡನೆ ! ಏನೆನುತ್ತಿರ್ದಳ್ ||



**|| ಅಟ್ಟತಾಳ || ಚಾರುಮತಿ || ಚಿತ್ರಕೇತು ರಾಜನಿಗೆ ||**

ಕಂಜಾನಯನೆಯಾರು | ಭಂಜೆ ಎಂಬುವರೂ ರಂಜೀಪದವಿ ವಂಶ ಭಂಜನಾಯ್ತುಲ್ಲಾ || ರಮಣಾ || ಅಂಜಿಕಿಂದಲಿ ಕಾಲಹರಣವ | ಸಿಂಜಿನೀಪುರಿಭ್ರಮರಪುರಿಧರ || ಮಂಜುಳಾಂಗಿಯಯತ್ವವೇನದೆ | ಮನದೊಳು ಅತಿವ್ಯಸನವಹುದು || ಮಾನಾನಿಧಿಯೆ ಕೇಳು | ಏನಿದು ಲೋಲಾ |

**|| ಜಂಪೆತಾಳ || 1ನೇ ಕಾಲ 2ನೇ ಕಾಲ || ಚಿತ್ರಕೇತು ಚಂದ್ರಮಾಲಿನಿಗೆ||**

ಕ್ಷಿತಿಪತಿ, ನಾನಾಗಿ ಸತಿಸುತರನು ನೀಗಿ | ಅಥಿವ್ಯಥೆ ಪಡುತ್ತಿರುವೆ ನೀನ್ಯಾರೆ | ನಾರಿನೀನ್ಯಾರೆ || ವಾರುದೀಪುವಿನಲ್ಲಿ | ಹೇರುಗಳ ಹೊತ್ತು ಬಾರಿ ದುಕ್ಕದೊಳಿರುವೆವನೀನ್ಯಾರೆ || ನಾರಿನೀನ್ಯಾರೆ

**|| ಅಟ್ಟತಾಳ || ಮಾರ್ಕಾಂಡ ಚರಿತ್ರೆ || ಮೋಹಿನಿ ಪಡೆ ||**

ನೀಪೇಳ್ವ ಮಾತಿದೇನು | ಗಂಧರ್ವರು ಸಾಮಾನ್ಯರೆಂದು ತಿಳಿದು || ಬೇಕಾದ ಇಷ್ಟಾರ್ಥ ಕೊಟ್ಟು ರಕ್ಷಿಪೆ ನಾವು | ಮಧನಭಾದೆಯತೀರಿಸೋ | ಪ್ರಾಣನಾಥ | ಕರ ಮುಗಿದು ಬೇಡುವೆವು | ಪ್ರಾಣೇಷನೆ ಕರಮುಗಿದು ಬೇಡುವೆವೂ || 2ನೇ ಕಾಲಕ್ಕೂ ಹೇಳಬಹುದು

**|| ಅಟ್ಟತಾಳ || ತ್ರಿಪುರದಾನವರ ಕಥೆ 1 ಸುಮಾಲಿನಿ ಶ್ರೀಹರಿಗೆ||**

ಬೇಸರಮಾಡಬೇಡ ಪಾವನ ಚರಿತಾ | ಬೇಸರ ಮಾಡಬೇಡ || ಕಾರಾಣಾತ್ಮಕ ನಿಮ್ಮ ಚರಣಾವನಂಬಿದೆವು || ಶರಣಾಗಿಬೇಡುವೆವು ಕರುಣಾದಿಂದಲಿ ಕಾಯೋ ॥ ಬೇಸಾರ ಮಾಡಬೇಡ | ಪಾವನಚರಿತ | ಬೇಸರ ಮಾಡ ಬೇಡ || 2ನೇ ಕಾಲಕ್ಕೂ

**|| ಅಟ್ಟತಾಳ || ಸತ್ಯಚಿತ್ರಕೇತುಕಥೆ | ಚಾರುಮತಿ ಚಿತ್ರಕೇತುವಿಗೆ ||**

ಏತಕೆ ನೀನೇತಕೆ ಚಿಂತಿಪೆ || ರಮಣಾ ಕರುಣಾ ಭರಣಾ || ಏತಕೆ ನೀನೇತಕೆಚಿಂತಿಪೆ॥ ಲೋಲನೆ ಚಿಂತಯಾ ಮಾಡವದೇನಿದು ಜಾಲವ ಮಾಡದೇಪೇಳ್ವೆ | ತಾಳ್ಮೆ | ಬಾಳ್ಯ

ಕಾಂತಾ || ಏತಕೆ ನೀನೇಕೆ ಚಿಂತಿಪೆ ||

**|| ಅಟ್ಟತಾಳ || ಅಂಧಕಾಸುರನ ವಧೆ | ಶಂಕರಪಾರ್ವತಿಗೆ||**

ಕಾಂತೆ ನೀ ನೋಡಿದೆಯಾ | ಈವನದಸೊಬಗಾ | ಕಾಂತೆನೀನೋಡಿದೆಯಾ || ಮಲ್ಲೆಮಲ್ಲಿಗೆ ಜಾಜಿ | ಬಿಲ್ವಪತ್ತು ರೆಸತ್ವ | ಹೂಗಳ ನೋಡಿದೆಯಾ | ಕಾಂತೇ ಈ ಗಿರಿಯ ಸೊಬಗ ಗೌರಿ | ನೀ ನೋಡಿದೆಯಾ || 2ನೇ ಕಾಲಕ್ಕೂ

**|| ಅಟ್ಟತಾಳ || ಅಂಧಕಾಸುರ ವಧೆ | ಮೃದುವಾಣಿಗಳಿ | ಗಂಡುಗಳಿಗೆ**

ಎಲ್ಲಿಗೆ ಹೋಗಿದ್ದೆಯೋ | ಪುಲ್ಲಾಶರನೇನಿನೂ ಎಲ್ಲಿಗೆ ಹೋಗಿದ್ದೆಯೋ? | ಉಲ್ಲಾಸಮರೆತು | ನೀ ಅನ್ಯಾ ಕಾಂತೇಯೊಳು ಸರಸವಾಡೀ ಬಂದೆಯಾ ಪ್ರಾಣೇಶಾ ಎಲ್ಲಿಗೆ ಹೋಗಿದ್ದೆಯೋ ॥ 2ನೇ ಕಾಲಕ್ಕೂ

**|| ಅಟ್ಟತಾಳ || ಅಂಧಕಾಸುರವಧೆ || ಕಾಂಚನಾ ದೇವಿ ಕನಕಾಕ್ಷನಿಗೆ ||**

ಪತಿಯೇ ನಾನೇನ ಪೇಳ್ವೆ ಸುಕೃತ ಫಲವು || ಎಂತಿಹುದೋ ಕಾಣೆನೂ || ಪತಿಯೆ | ಸುತನನ್ನು ಪಡೆದಂತಾ ನಾರಿಯು ಈಜಗಕೆ || ಎಂಥಾ ಪುಣ್ಯಾತ್ಮಕಿಯೋ ರಮಣಾ ಎಂಥಾ ಪುಣ್ಯಾತ್ಮಕಿಯೋ || 2ನೇ ಕಾಲಕ್ಕೂ

**|| ಅಟ್ಟತಾಳ || ಕುರುಕ್ಷೇತ್ರದ ಕಥೆ | ರುಕ್ಮಿಣಿ ಶ್ರೀ ಕೃಷ್ಣನಿಗೆ||**

ಎಂಥಾಮಾತನು ಪೇಳಿದೇ ಪ್ರಾಣೇಶಾನೇ || ಎಂಥಾಮಾತನು ಪೇಳಿದೇ || ಕುಂತಿ ಸುತರಿಗೆ ನೀವು ಸಂತಸವ ತೋರದೆ | ಪಂಥಾದ ಕೌರುವಗೆ ಅಂಜುವುದುತರವೇನೋ (ಎಂಥಾ ಮಾತನು ಪೇಳಿದೆ) | ಪ್ರಾಣೇಶಾನೇ || ಎಂಥಾ ಮಾತನು ಹೇಳಿದೆ ||

**|| ಅಟ್ಟತಾಳ (2ನೇ ಕಾಲಕ್ಕೂ)**

ಪಾಂಡವರ ಪ್ರಾಣ ರಕ್ಷಕನೆಂದು ನೀನಿರ್ದು | ಸಂಧಿಕಾರ್ಯಕೆ ನೀನು ವಂದಿಸು ಕೌರವರ | ಎಂಥಾಮಾತನು ಪೇಳಿದೇ || ಪ್ರಾಣೇಶಾ ನೆ ಎಂಥಾ ಮಾತನು ಹೇಳಿದೆ | 2ನೇ ಕಾಲ + ಯ = ಅಟ್ಟತಾಳ

**|| ಆದಿತಾಳ || ಗಿರಿಜಾ ಕಲ್ಯಾಣ | ಮೇನಕಿ ಪದ ಗಿರಿರಾಜನಿಗೆ||**

ನಾಥಾರೆ ವರನನ್ನೂ ಯಾತಕೆ ನೋಡಲಿಲ್ಲಾ | ದಾರಿಗೆ ಮಗಳು ನೂತುಬಂದಿಹಳು || ನಾಥಾರೆ ವರನನು ಏತಕೆ ನೋಡಲಿಲ್ಲಾ |

**|| ಅಟ್ಟತಾಳ || ಮನ್ಮಥ ವಿಷ್ಣುವಿಗೆ || ಗಿರಿಜಾ ಕಲ್ಯಾಣ||**

ಪರಮಾತ್ಮ ರೂಪಾನೇ ಶೌರಿ ಪಾಲಿಸುಯನ್ನ ಶರಣಾಗತ ಸಂಹಾರೀ ॥ ಹರಿಯೇ ನೀನಾಡಿದಾ ಪರಮವಾಕ್ಯವ ಕೇಳಿ || ಹರನ ಭಯವು ಯನಗೆ | ಹೋಗಲಾರೆನು ನಾನು | ಪರಮಾತ್ರೆ ರೂಪಾನೇ ಶೌರಿ || ಪಾಲಿಸು ಎನ್ನ ಶರಣಾಗತ ಸಂಹಾರಿ |

**|| ಜಂಪೆತಾಳ | ರತಿ ಕಲ್ಯಾಣ | ಕೌಂಡಲೀಕ | ದುರ್ಗಿ ದ್ರೌಪದಿಗೆ**

ಖೂಳ ಹೆಂಗಸೇ ಕೇಳು ಕಾಳಗದೊಳು ನಿನ್ನ ಸೀಳೀ ಯಮನ ಪುರಕೆ | ಗಳಿಲಾನೆ ಕಳುಹುವೆ ನಿಲ್ಲನಿಲ್ಲೆಲೋ ನಾರಿ | (ಮುಕ್ತಾಯ) || ತದಿತೋಂಜಣ ತದತೋಂ ತದತೋಂ ತದಿತೈ ||



**| ಜಂಪೆತಾಳ || 2ನೇ ಕಾಲ | ರಕ್ತ ಬೀಜಾಸುರವಧೆ ದೇವೇಂದ್ರನಪದ**

ಯಾರಿವ ಯಾರಿವರು || ದುರುಳಾರೆನಿಮ್ಮಯ ಶೌರವ ಬಲ್ಲೆನು || ಯಾರಿವ ಯಾರಿವರು || ಮಧು ಘುಡಿಕರೆ ನಿಮ್ಮ ವಧೆಯ ಮಾಡದೆ ಬಿಡೆನು | ಯಾರಿವ ಯಾರಿವರೂ

**|| ಆದಿತಾಳ || ದಕ್ಷಯಜ್ಞ ಪಾರ್ವತಿ ದಕ್ಷನಿಗೆ**

ಪಂಥ ಹಿಡಿವಳೆ ನಿರಾಲಿ | ಅಂದ ನುಡಿನೆನಪೊಂದಿರಲಿ || ನೆನಪೊಂದಿರಲಿ ಪಂಥ ಹಿಡಿವಳೇ ನಿರಾಲಿ || ಮೃಢ ಗರ್ಪಿತಳಾಗಿ ವಡನೆ ನಿನ್ನಯ ಶಿರವ ಹರಿಸದೆ ಬಿಡೆನೆ ಕಡುಮೂರ್ಖಾ ನೀ ಕೇಳ್ ಪಂಥ ಹಿಡಿವಳೆ ನಿರಾಲಿ |

**ಕಲ್ಯಾಣಿ ರಾಗ**

**|| ಭಾಮಿನಿ ||**

ಹತ್ತೊಂದು ದಿನದೊಳಗೆ ಕೂಸಿಗೆ ಮುತ್ತೈದೆಯರು ಬಿಸಿನೀರೆರೆದು | ಸುತಗೆಭೂಸುರರು ಚಿತ್ರಾಂಗದೆಂಬ ಹೆಸರಿಟ್ಟು ತೆರಳಲು | ಇತ್ತ ಚಾರುಮತಿಯು | ಸುತನೊಡನೆ | ಸುಖ ನಿದ್ರೆಯೊಳು ಮಲಗಿರಲು ಘೋರ ಸ್ವಪ್ನವಂ ಕಂಡು | ಹೆದರುತ್ತ ಚೀರುತ್ತ ಪತಿಯೊಡನೆ ಎನೆನುತ್ತಿರ್ದಳು |

**|| ಶಾರದಾಸ್ತುತಿ ||**

ಪಕ್ಷಿದ್ರಗಮನೇ | ಕವಿಜಾನಾಪೇಕ್ಷೆ ಕರುಣಾಪೇಕ್ಷೆ ಕಮಲಾಯತಾಕ್ಷಿಯೇ । ನೀ ಯನಗಕ್ಷಯ ಸುಖವನಿತ್ತು ಪಾಲಿಸಮ್ಮ ಭಾರತೀಯ ಜನನೀ |

**|| ಆದಿತಾಳ || ಶಾರದಾ ಸ್ತೋತ್ರ - ಹಿಂದೆ ನಾಟಿರಾಗಕ್ಕೆ ಬರೆದಿದೆ ||**

ಪಾಲಿಸೌ ಶ್ರೀ ಶಾರದಾ ಸತತಂ | ನೀರೇಜಲೋಚನೆ || ಪಾಲಿಸೌ ಶ್ರೀಶಾರದಾ ಸತತಂ || ವಾಣಿಪನ್ನಗ ವೇಣಿ ಪುಸ್ತಕ ಪಾಣಿನೀರಜ ವೀಣಾಂಕ ವಧನೆಯೇ | ಪಾಲಿಸೌಶ್ರೀ ಶಾರದಾ | ಸತತಂ |

**|| ರೂಪಕತಾಳ || ಆದಿಶಕ್ತಿ ಸ್ತೋತ್ರ | ಹಾಡು**

ದೇವಿ ಮೀನಾಕ್ಷಿ ಮುಧಂ | ದೇಹಿಮಹಂ ಸತತಂ ಅಂಬಾ || ದೇವೀ ಮೀನಾಕ್ಷಿ | ಪಾವನಾಮಧುರಾನಿಲಯೇ | ಪಾಂಡುರಾಜ ನುತಯೇ | ಭವರಾಗ ತಾಳಾದಿತೆ | ಪರಿಶೋಭಿತೆ ಹೃದಯೇಶ್ವರಿ || ದೇವಿ ಮೀನಾಕ್ಷಿ ಮುಧಂ (ವೇಗದಗತಿಯಲ್ಲಿ ಭಾವಕ ಭಲಪ್ರದಾಯಿನಿ | ಭಕ್ತಮೋದ ಸಂದಾಯಿನಿ | ಸೇವಕ ಪಾಪವಿಮೋಚನೆ | ಶ್ರೀಕದಂಬ ವನವಾಸಿನಿ || ದೇವಿ ಮೀನಾಕ್ಷಿ ಮುದಂ | ಹಿಮಕರಾನಿಭಾವಧನೆ ಅಂಬಾ | ಭ್ರಮರ ಕುಂಜರಧನೆ | ರಮಣೀಯ ಮಣಿ ಸಧನೆ | ರಕ್ಷೀ ಪವದನೆ ಅಂಬಾ || ದೇವಿ ಮೀನಾಕ್ಷಿ ಮುದಂ ದೇಹಿಮೇ ಹಂ ಸತತಂ ಅಂಭ್ರಾದೇವಿ ಮೀನಾಕ್ಷಿ ||

**‖ ಏಕತಾಳ ||**

ಕಮಲಾ ವಿಲಾಸ ಕರೆ | ಸದಾಸುಶೀಲಾ ಪರಿಪಾಹಿ | ದೇವ ಕಮಲಾ ವೀಲಾಸಕರೆ | ಕಮಲಾಯ ತಾಕ್ಷಕಮಲಾಸನಾದಿ || ಕಮಲಾ ಯತಾಕ್ಷ ಕಮಲಾಸನಾದಿ

ಸುಮನಾಮ ಕೂಟ ಸುಮಪೂಜಿಪಾದ || ಕಮಲಾವಿಲಾಸಕರೆ | ಸದಾಸುಶೀಲ ಪರಿಪಾಹಿದೇವ || ಕಮಲಾ ವಿಲಾಸ ಕರೆ |

**|| ಏಕತಾಳ | ನಾರದ ಪ್ರವೇಶ ||**

ಕರುಣಾಸಾಗರ ಕಾಮಜನಕ ಹರಿ ಗಾನಲೋಲ ಶ್ರೀಘನಲೀಲಾ | ಮಾಯಾಮೋಹಿತ ಸುರಜಾಲ | ಮಾಯಾಮೋಹಿತ | ಮಾಯಾಮೋಹಿತಸುರಜಾಲ॥ ವೇದಗೋಚರ ವಸುಧೋದ್ಧಾರ || ಕಲಾಧರ ಯಧುನಾಥ | ಮಧುಸೂದನಶ್ರೀ | ಮಾನಸಲೋಲ ಪೊರೆಯ್ಕೆಬಾಸುರ ವನಮಾಲಾ || ಕರುಣಾಸಾಗರ

**|| ಏಕತಾಳ ||**

ಮಹಾರಾಜನೆ ಬಹುಸುಖಿಯಾಗ್ಯ | ಪ್ರಜೆಗಳ | ಪಾಲನೆ ಮಾಡುವನಾಗೈ ಮೂಜಗದೊಳುನಿನಗೆದುಗೆದುರಾರಿಹರ್ಯೆಮಾಜದೆ ಎನ್ನೊಳು ಹೇಳುವನಾಗೈ | ಮಹಾರಾಜನೇ ಬಹುಸುಖಿಯಾಗೈ | ಮಾಜದೆ ಎನ್ನೊಳು ಪೇಳವವನಾಗೈ

**|| ಆದಿತಾಳ || ಲಕ್ಷ್ಮಿಸರಸ್ವತಿಗೆ | ಗಜಾಸುರನ ವಧೆ |**

ನಿನ್ಯಾರು ಕರೆದಿರಿಲ್ಲಿಗೆಕೆಬಂದೆಯೇ ನೀರೆ ನೀಸಾರೆ || ನಿನ್ಯಾರು ಕರೆದರಿಲ್ಲಿಗೇಕೆ ಬಂದೆಯೇ | ಮಂಥರಗಮನೆ ಯುವತಿ | ಸತ್ಕರ ಭಾಗ್ಯ ಕೆನಿ | ನೀಚಾತ್ಮಳೆ ನಿನ್ನ ಪ್ರಾಚೀನವಸುಡು | ನಿನ್ಯಾರು ಕರೆದರಿಲ್ಲಿಗೇಕೆ ಬಂದೆಯೇ ||

**|| ಭಾಮಿನಿ || ಚಿತ್ರಕೇತು ಕಥೆ || ಕಲ್ಯಾಣಿರಾಗ ||**

ಧರಣಿ ಪತಿಕೇಳ್ ಇತ್ತ ಚಾರುಮಾರುತಿಯು ಹರಿಕೊಟ್ಟವರವ ವಿಶ್ವಾಸದಲಿ ಭುಂಜಿಸಲು | ಕಂಜನೇತ್ರಗೆ ಗರ್ಭ ಉದಿಸಲು ಇತ್ತಸುಮತಿಯೊಡನೆ ಸುಖಿಯೋರ್ವಳು ಏನೆನುತಿರ್ದಳು |

**|| ಭಾಮಿನಿ || ಮರ್ಕಾಂಡೇಯ ಚರಿತ್ರೆ | ಯಮನ ಸತಿ ಶ್ಯಾಮಲೆ ||**

ಈಪರಿಯೊಳು ದಂಢಧರನು ಕೋಪದಲಿ | ಮೃಕಂಡನ ಕುವರ | ಮಾರ್ಕಾಂಡನನು ಎಳೆತರುವೆನೆನುತ | ಕರದಿ ಶೂಲವಪಿಡಿದು ಹೊರಡಲು ಈ ವಾರ್ತಯಂ ಸತಿಯಾದಶ್ಯಾಮಲೆಯು ಕೇಳಿ | ಹರಭಕ್ತನಂ ಪಿಡಿಯಲು ಹೋಗಬೇಡೆಂದೆನುತ ಪತಿಗೆ ಬುದ್ದಿಯಂ ಪೇಳಲು | ಸಭೆಗೆ ನಡೆತಂದಳು ||

|| ಚಾಲು ಕಂದ | ಶ್ರೀ ಮಂಗಳಾಕಾರೆ ನಿತ್ಯ ಗುಣಗಂಭೀರೆ | ಶೃಂಗಾರದಲಿ ಪೊರೆಸದ್ಗುಣ ವಿಚಾರೆ ಅಂಗನಾಮಣಿಯರು | ಮಾಲಿನೀಸುಮಾಲಿ ನೀ ವಿಮಾಲಿನಿ ತ್ರಿಪುರ ರಾಕ್ಷಸರ ಸತಿಯರು | ಅರುಣೋ-



ದಯದೊಳೆದ್ದು ಮುಖಮಜ್ಜಿನವಮಾಡಿ | ಶಂಕರನಬಜಿಸುತ್ತ ಪತಿಗಳು | ರಣಕೆ ಪೋದವರ | ನಿರೀಕ್ಷಿಸುತ ಸಭೆಗೆ ನಡೆತಂದರು |

ರಾಮಕೇಳಿತ್ತ ಮುನಿಪನಾರದರು | ಅಸುರಂಗು ಪದೇಶವಂತಳಿದು | ನಸುನಗುತ ಹರಿಬ್ರಹ್ಮ ಶಿವನಡಿಗೆ ನಡೆತಂದು | ಘೋರ ಗರ್ವದ ಅಸುರರ ಮರ್ಧಿಸಲು ಸುರಂಗಿತ್ತ! ವಿವಾರವನರು ಹಿದರು ನಾರದರು

**|| ಅಟ್ಟತಾಳ || ಸತ್ಯಚಿತ್ರಕೇತು ಕಥೆ | ದೇವೇಂದ್ರನಿಗೆ ಸಚಿದೇವಿ ||**

ಏನೀದೇನಿದು ಪೇಳುದು | ಕಾಂತರೆ ನೀವು || ಏನೇದೇನಿದು ಪೇಳುದು || ನರನಾರಿಯರೊಳು | ಪತಿ ವ್ರತೆಯಾರಾರಿಹರು | ಸುರನಾರಿಯರನ್ನು ಜರಿವುದು ಉಚಿತವೆ | ಏನೀ ದೇನಿದು ಪೇಳ್ವುದು | ಕಾಂತರೆ ನೀವು ಏನೀದೇನಿದೂ ಪೆಟ್ಟುದೂ 2ನೇ ಕಾಲಕ್ಕು ಏಳಬಹುದು |

**|| ಕಂದ | ಗಿರಿಜಾ ಕಲ್ಯಾಣ ಕಥೆ | ಬಾರದ ಗಿರಿಜಾದೇವಿಯನ್ನು ಕಂಡು||**

ಪರಮಶಕ್ತಿಯನ್ನು ಕಂಡುಮುನಿಪತಿಯು ಚರಣ ಕಭಿನಮಿಸಿ || ಹರನ ಪಟ್ಟದರಾಣಿ ಜಯಜಯ | ನಿರುಪನುತ ಕಲ್ಯಾಣಿ ಜಯ ಜಯ | ವರವಪಾಲಿ ಪರಾಣಿ ಜಯಜಯ ದಕ್ಷನಯಗ್ನದಿ ಧ್ವಂಸವಾದ ದಾಕ್ಷಾಯಿಣಿಯೆ ಜಯ ಜಯ | ರಕ್ಷಿಸಮ್ಮ ನಮ್ಮನ್ನು ಗಿರಿಜಾತೇ ||

**|| ಭಾಮಿನಿ || ರತಿ ಕಲ್ಯಾಣ | ರತಿ ||**

ಘುಡಿಘುಡಿಸುವ ಪಿತನ ನುಡಿಯನು ಕೇಳಿ ದೌಪದಿಯ ಪಂಥವನು, ಗ್ರಹಿಸಿ ಕಮಲನಸುತೆ ರತಿಯು ಬಂದು | ತಂದೆಯ ಪಾದಕ್ಕೆರಗಿ | ದೌಪದಿಗೊಂದಿಸುತ | ತನ್ನ ಪೂರ್ವಜನ್ಮದ | ವಿವರವನು ಹರಹಿದಳು ತಂದೆಗೆ

|| ಭಾಮಿನಿ || ರತಿ ಕಲ್ಯಾಣ ||

ಈ ಪರಿಯೊಳು ಶ್ರೀ ಹರಿಯು ಸಖಲ ಬಂಧುಬಾಂದವರು ಸಹಿತಲಿ | ಮನ್ಮಥನಿಂ ದೊಡಗೂಡಿ ಕಮಲೇಶನ ಪುರಕೇ ಸಕಲ ಸಂಭ್ರಮದಿ ನಡೆತರಲು ಸರ್ವರನು ಸಂತೈಸಿದನು ಕಮಲ ಭೂಪತಿಯು

|| ಭಾಮಿನಿ || ಮಹಿರಾವಣನ ಕಥೆ | ವಿಭೀಷಣನ ಹೆಂಡತಿ||

ಲವನೇ ಕೇಳೀ ಪರಿಯೊಳು | ರಘುರಾಮ ಪವಡಿಸಲು | ಕಪಿಕುಲವೆಲ್ಲ | ಕಾಯ್ದಿರಲಿತ್ತ | ವಿಭೀಷಣನ ಸತಿ ಶರಮೆಯು ಮಹಿರಾವಣನ ವಾರ್ತೆಯಂ | ಪೇಳಲು ರಾಮರ ಬಳಿಗೆ ನಡೆತಂದಳು |



|| ಭಾಮಿನಿ || ಮಹಿರಾವಣನ ಕಥೆ | ಶರಮೆ ವಿಭೀಷಣನ ಹೆಂಡತಿ||

ಲವನೇ ಕೇಳೀ ಪರಿಯೊಳು | ರಘುರಾಮ ಪವಡಿಸಲು | ಕಪಿಕುಲವೆಲ್ಲ | ಕಾಯ್ದಿರಲಿತ್ತ | ವಿಭೀಷಣನ ಸತಿ ಶರಮೆಯು ಮಹಿರಾವಣನ ವಾರ್ತೆಯಂ ಪೇಳಲು ರಾಮರ ಬಳಿಗೆ ನಡೆತಂದಳು |

|| ಭಾಮಿನಿ || ಶಿವಜಲಂದರನ ಕಥೆ | ಬ್ರಹ್ಮ ||

ಹರುಷದಿಂದಾ ಶಿಶು ವನೆತ್ತಿ ರತ್ನಕರಂತೊಡೆಯೊಳಗಿರಿಸೆ || ಸರಸಿಜ ಭವಾಂಡವಡೆವಂತೆ | ಭೋರ್ಘರಿಸಿ ಸರದ ಬಳಿವಿಡಿಯಲ್ಲಿಯದು | ಬೊಬ್ಬೆ ಇದೇ ನೆನುತ | ಆ ಜಂ ಬಾಲನಿದ್ದಲ್ಲಿಗೆ ತಂದು ಪರಮೇಷ್ಟಿಯಂ ಕಂಡು ಸತಿಪತಿ ಈಶ್ವರು 1 ನಮಿಸಿ ತನಯಂಗೆ ಕರುಣದಿಂ ಹೆಸರಿಟ್ಟು | ಜಗದೊಳಾರಿಂದಲೂ | ಮರಣವಾಗದ ಓಲು | ವರವೀವುದೆಂದೆನುತ | ಅಜನಕೈಗೆ ಅಬ್ಬಿಸುತನಂ ಕೊಟ್ಟರು

|| ಆದಿತಾಳ || ಸತ್ಯಚಿತ್ರಕೇತುಕಥೆ ಚಾರುಮತಿ ||

ಸತಿಯಳು ಸೇವಿಸೆಹರುಷದಲಿ ಸತಿಪತಿಪಿತನಾಸ್ಕರಿಸುತಲಿ ಸುತನೆಮಗಿತ್ತರೆಸುರ ಮುನಿನಾಥಗೆ ಪ್ರತುಮೆಯ ಮಾಳ್ಪೆಸುವರ್ಣದಲಿ || ಯಕ್ಷಗಾನ ಅಟ್ಟತಾಳ || ಸತಿಯಳು

ಸೇವಿಸೆ ಹರುಷದಲಿ

**|| ಕಂದ | ಆದಿಶಕ್ತಿ ಸ್ತೋತ್ರ |**

ವಿಶ್ವಚೈತನ್ಯಾತ್ಮಮೂರ್ತಿಯೇ | ವಿಶ್ವನಾಟಕನಸ್ತ್ರಧಾರಿಯೇ | ವಿಶ್ವತೋಕೋಮಯಚಿತ್ರಭಾಸುರೇಮಾತೇ ಜನನೀ | ವಿಶ್ವ ನಿರ್ಮಿತೆ | ವಿಶ್ವಕೀರ್ತಿಯ ಕಂಡು ತಾಯೇ ನಿನ್ನಂಭಜಿಸುತ್ತಿಹೆವೂ | ವಿಶ್ವಕೀರ್ತಿಯೆ ರಕ್ಷಿಸುಮಾತೆ ಜಗಜ್ಜನನೀ



**ಶಂಕರಾಭರಣ ರಾಗ**

**|| ಕಂದ | ನಾರದರಿಗೆ ಸ್ತೋತ್ರ || ಶಂಕರಾಭರಣರಾಗ ||**

ಮೂರ್ಲೋಕವ ಚಲಿಸುವ ಮುನಿಪಾಲನೇ | ನೀನರಿಯದಿರ್ಪವಾರ್ತೆಯದುಂಟ ಜಗದೋಳ್ ॥ ಪೇಳಲಪೇಕ್ಷಿಪೆದಯದೀ / ಬಾಲನೊಡನೇನೀಂ ಕಂಡವರ್ತಮಾನವನೀಗಾಗಿ

**|| ಕಂದ | ದೌಪದಿ | ರತೀಕಲ್ಯಾಣದಲ್ಲಿ | ಶಿವ ಪಾರ್ವತಿಯರ ಕುರಿತು ||**

ಪಾವನಮೂರ್ತಿ ಶಂಕರಾ | ಜ್ಞಾನವ ಕೊಡುವ ಮಹೇಶ್ವರಿ | ಇಂದಿನ ದಿನದೆನ್ನಭಿಮತಕೇ | ಸಿದ್ಧಿಯನುಪಾಲಿಸಿ | ಮುಂದಿನ ಕಾರ್ಯಕೇ / ಜಯಾ ಅನುಗ್ರಹಿಸಿರಿ ಮಾತೇ ॥

**|| ಅಟ್ಟತಾಳ || ಸತ್ಯಚಿತ್ರಕೇತು ಕಥೆ | ಚಾರುಮತಿ ||**

ಮಾನಾನಿಧಿಯೇ ಕೇಳ್ | ಏನಿದೂ ಲೋಲಾ | ಸಾನೂರಾಗದಿ ಎಮಗೇ ಸುತರಾಗಲಿಲ್ಲಾ | ರಮಣಾ || ಕಂಜಾನಯನೆಯರು | ಭಂಜೆ ಎಂಬುವರೂ ರಂಜೀಪಥವಿವಂಶಾ | ಭಂಜನಾಯ್ತುಲ್ಲಾ | ರಮಣಾ | ವೇಗಗತಿ || ಅಂಜಿಕಿಂದಲಿ ಕಾಲಹರಣವ | ಸಿಂಜಿನೀ ಪುರಿಭ್ರಮರಪುರಧರ | ಮಂಜುಳಾಂಗಿಯಯತ್ನ ವೇನಿದೆ ಮನದೊಳತಿವ್ಯಸನಕಾಂತಾ || ಮನಾ ನಿಧಿಯೆ ಕೇಳ್ ಏನಿದು ಲೋಲಾ 1 ಸಾನೂರಾಗದಿ ಎಮಗೆ ಸುತರಾಗಿಲಿಲ್ಲಾ || ರಮಣಾ ಕರುಣ | ಭರಣಾ

**|| ಅಟ್ಟತಾಳ || ದಕ್ಷಯಜ್ಞ ಶಿವನಿಗೆ ಪಾಶ್ವತಿ ||**

ಯಾತಕೆ ನೀವೂ | ಮುನ್ನಿಸಿಕರೆಯಲಿಲ್ಲಾ | ತಾತನು ಬಂದು | ಕೋಪಿಸಿಹೋದಾನಲ್ಲಾ || ಶಂಕರಾ || ಯಾತಕೆ || ಕಾರ್ಯಾರ್ಥವೇನಿತ್ತೋ ಆಶ್ಚರ್ಯ ನಿಮ್ಮನು ಕಂಡು ಕಡುಕೋಪದಿಂತಿರುಗಿದಾ | ಯನ್ನಯ ತಂದೆಯು ಯಾತಕೆ ನೀವುಮನ್ನಿಸೀ ಕರೆಯಲಿಲ್ಲಾ || ಅಪ್ಪನು | ನನ್ನಪ್ಪನು ಬಂದು ಕೋಪೀಸಿವೋದರಲ್ಲಾ | ಮುಕ್ತಾಯಕ್ಕೇ || ಹೇರಮಣಶಂಕರನೇ ಪ್ರಾಣೇಶನೆ | ನೀವು ಲಾಲಿಸಿ | ಕಡ್ ಕಡ್ ತೋಂ | ಕಡತೋಂ ಕಡ್ಕಡತೈ | ಕಡ್ಕಡೆತಾ |



**|| ಅಟ್ಟತಾಳ || ದಕ್ಷಯಜ್ಞ ಪ್ರಸೂತಿ | ದಕ್ಷನಿಗೆ**

ನೀಪೋದರೇನಂದಾ | ನಿಮ್ಮ ಶುಭಚರಣಾ | ಭೂಪಾಲಶಿವನೇಕೆ ಬರಲಿಲ್ಲ ಕಾರಣ | ರಮಣಾ ॥ ಪರಿಣಾಮಹ ನಿನ್ನನುಸರಿಸಿದನೇ | ಮರ್ಯಾದೆಗಳ ಜರಿದು ಕುಂದು ಗೆಡಿಸಿದನೇ || ರಮಣಾ || ವೇಗಗತಿ ॥ ಅಂತಕಾಂತಬಾರದಿದ್ದರೆ ಎಂತು ನಡೆವುದು ಯಜ್ಞಕಾರ್ಯವು | ಅಮಹೇಶನು ಬಾರದಿರಲನು ಮಾನತೋರ್ಪುದು | ಎನಗೆ ರಮಣ | ನೀಪೋದರೇನಂದಾ || ನಿಮ್ಮ ಶುಭಚರಣ ಭೂಪಾಲಶಿವನೇಕೆ ಬರಲಿಲ್ಲ ಕಾರಣಾ||

**|| ಅಟ್ಟತಾಳ || ಮಾರ್ಕಾಂಡೇಯ ಚರಿತ್ರೆ || ಮೋಹಿನಿನಾರದರಿಗೆ ||**

ಏನೂ ನಾರದ ಮುನಿಪಾ ನೀಂ ಪೇಳುವ ಮಾತು ಕಾಮಕ್ಕೊಳಗಾಗದ ಮನುಜರಿರುವಾರೇ || ಮುನಿಪಾ | ವೇಗದಗತಿ || ಬೇಗ ಮಾರ್ಕಾಂಡೇಯನನ್ನು ಮೋಹಗೊಳಿಸಿತಪವಕೆಡಿಸಿ | ಹರನ ಕರುಣವಪಪಡೆಯದಿರ್ಧರೆ | ನಾವು ಜನಿಸಿ ಫಲವು ಏನು | ಏನೂ ನಾರದ ಮುನಿಪ ನೀ ಪೇಳುವಮಾತೂ | ಕಾಮಕ್ಕೊಳಗಾಗದ ಮನುಜರಿಹಾರ

**||ಅಟ್ಟತಾಳ | ಶನಿಮಹಾತ್ಮ ಪದ || ಅಲೋಲಿಕ | ಶೆಟ್ಟಿಗೆ||**

ತಂದೇ ಕೇಳಬಂದೀಹಪುರುಷನುಯನಗೇ ಗೆಲುವತೋರದೆ | ಮಲಗಿ ಸರವಕದ್ದಿ ಹನೊ || ವೇಗದಗತಿ || ಮಲಗಿದಂತೇನಠನೆ ಮಾಡೀಸರವಕೊಡದೆ ಸರೆಯನಾಡುವ ಸರದಪರಿಯನು ಕೇಳು ಜನಕಾ | ಕೊಡಿಸುಯನಗೆ ಸರವನೀನೂ || ಕಂದೇಕೇಳ್ ಬಂದೀಹ ಪುರಶನುಯನಗೆ | ಗೆಲುವತೋರದೆ | ಮಲಗಿಸರವಕದ್ದಿಹನೂ |

**|| ಭಾಮಿನಿ || ವಿಕ್ರಮ-ಶನೇಶ್ವರನಿಗೆ||**

ವಿಕ್ರಮನೂ ತನ್ನ ಕಷ್ಟವತೊರೆದು ಧರೆಯ ಸಕಲಮಾನವರಂ | ಕಾಡದಂತೆ ವರವಂಕೇಳಲು | ಶನೇಶ್ಚರನೂ | ವಿಕ್ರಮನಿಗೆ ಅಭಯವಿತ್ತು | ಅದೃಶ್ಯವಾಗಲನಂತರ ರವಿಯು ಮೂಡಲು | ಪದ್ಮಾವತಿಯು

ನಿದ್ರೆಯಿಂದೆದ್ದು ನೋಡಲು ಸುಂದರವಿಕ್ರಮನಂ ನೋಡಿ | ಕಡುಚೋದ್ಯಗೊಳುತಾ | ಇವಸ್ಮರನೊಶೌರಿಯೋ | ಸರಸಿಜಾನನೊ | ಸುರಪತಿಯೇ ಎಂದೆನುತೆ | ಅಚ್ಚರಿಯಂತಾಳಿದಳು ಬಾಲೇ |

**|| ಅಟ್ಟತಾಳ | ಪದ್ಮಾವತಿ ವಿಕ್ರಮನಿಗೆ||**

ನಾನೊಪ್ಪೆಈಮಾತ | ನಿಜದಸ್ತಿಯನ್ನು ಹೇಳೀ ಮನ್ಮಥನ ಬಾಧೆಯು ಯನ್ನ | ಸೂರೆಗೊಳ್ಳು ತಲಿಹುದೂ ಕೇಳೆನ್ನರಮಣಾ | ಸೂರೆಗೊಳ್ಳುತಲಿಹುದು || ಯಕ್ಷಗಾನ ಅಟ್ಟತಾಳದಲ್ಲೂ ಹೇಳುವುದು



**||ರೂಪಕತಾಳ ||ಶನಿಮಹಾತ್ಮೆ| ಪದ್ಮಾವತಿ | ದೇಶ್ ತೋಡಿರಾಗ||**

ಸತಿಯು ಇಹಳೂ ಸುತರು ಇಹರು | ಉಜ್ಜೈನಿಗೆ ದೊರೆಯುನಾನೂ | ಎಂತುವರಿಸಲಮ್ಮನಿನ್ನಾ ಸತ್ಯಮನವು | ವಪ್ಪದೂ | ಸತಿಯು ಇಹಳೂ ಸುತರು ಇಹರೂ | ಉಜ್ಜೈನಿಗೆ ದೊರೆಯು ನಾನೂ

**|| ಕಂದ ಮಾರ್ಕಾಂಡ ಚರಿತ್ರೆ | ದೇವೇಂದ್ರ ||**

ಜಯಜಯಮಂಗಳ ಮಹೋದಯ | ಜಯಮಂಗಳಾಕಾಯ | ನಿತ್ಯಜಯಜಯ! ನಿರೂಪಾಯ | ಜಯಗಿರಿಜಾ ಭಾಗ್ಯಧಯ | ಜಯ ಮೃತ್ಯುಂಜಯ | ಸಮಸ್ತ ಸರಮುನಿಗೆ ಜಯಜಯಾ | ಹರಬ್ರಹ್ಮರಿಗೆ ಜಯಜಯ | ಲಕ್ಷ್ಮೀ ರಮಣಗೆ ಜಯಜಯ ಶಾರದಾಪತಿಗೆ ಜಯಜಯ ಮಂಗಳಂ ಸತ್ವರಿಗೂಮಂಗಳಜಯಜಯಾ |

**|| ಕಂದ || ಭೀಮದುಶ್ಯಾಸನರ ಯುದ್ಧದಲೀ ರುದ್ರರೂಪಪನು ಪಡೆಯ |**

ಜಯ ಹರಕೃಪಾಕರಮೂರ್ತಿಯೆ | ಶಂಕರಾಕರುಣಾಕರನೇ | ತ್ರಿಪುರಸಂಹಾರನೇ ಜಯಜಯ | ಹರನೇ | ಶತೃನಿಗ್ರಹಕೇ ವರವಂ | ಕರುಣಿಸಿ ಕೃಪೆಯಿಟ್ಟು | ಯನ್ನವೈರಿಯ ಸಂಹಾರಕೆ | ಕರುಣವನೀಡುಶಿವನೇ || ವರವನ್ನು ಪಾಲಿಸು ದೇವಾ |

**|| ಕಂದ | ಹೈರಾವತ | ಗಜಗೌರಿಥ | ದುತರಾಷ್ಟ್ರ | ನಾರದನಿಗೆ**

ಸಕಲಲೋಕವಸಂಚರಿಪಮುನಿಪಾಲನೇ | ನಮ್ಮಯ | ಮನಕೊಂದು | ವ್ಯಸನವದಿಗಿರ್ಪುದೂ | ಅದನು ಪರಿಹರಿಸು | ಮುನಿವರನೇ ||

**|| ಅಟ್ಟತಾಳ || ಪದ್ಮಾವತಿ ವಿಕ್ರಮನಿಗೆ || ದೇಶ್ ತೋಡಿರಾಗ ಈ ದಾರಿ**

**ಬಾರೇಸತಿಯಮ್ ||**

ಪರಮಪುರುಷರೇನೀವೂ 1 ಹಾಡಿದರಾಗವನೂ | ಪನಃ | ವಿಚಿತ್ರಗತಿಯೊಳು ಹಾಡಿರಿ ಇನ್ನೂ | (ವೇಗದಗತಿ) ಮನಕೆ || ಹರುಷವಮೂಡಿಸೆನಗೇ ! ನಿನ್ನ ವಿವರವ ತಿಳುಹುಎನಗೇ || ಪರಮಪುರುಷರೇ ||

**|| ಅರಬಿ ರಾಗ ||**

**|| ತ್ರಿಪುಟತಾಳದಲ್ಲಿ | ಗುಹಚರಿತ್ರೆ | ಗಿರಿಜಾ ಕಲ್ಯಾಣ | ಬ್ರಹ್ಮ-ಮನ್ಮಥಗೆ ||**

ಏಕೆ ಈ ಪರಿನುಡಿವೆ ಮಧನನೆ | ಲೋಕಸೃಷ್ಟಿಯ | ವೃದ್ಧಿಗೊಳಿಸುವೆ | ಪಿನಾಕಿಯಾಜ್ಞೆನಿತ್ತನಲ್ಲವೆ | ಜೋಕೆಯಿಂದ | ಸರ್ವಜಗದುಪಕಾರಕಾರ್ಯವ | ನಿರ್ವಹಿಸಿ ನೀಮಾಡೆನಿನ್ನೊಳು | ಸರ್ವಗತ ಸರ್ವಜ್ಞ ಮುನಿವೆನೆ ಸರ್ವತಾನೂ || ಧೀರರಾಗುತ ನುಡಿದ ಸುರಸಂತಾನವನು ಕಾಣುತ್ತ ಕಠಿಣತೆ | ಯಾಗುವರೆಪಾಶಾಣ ಇತ್ತನು ನೀನು ಜಗದೀ ||



**|| ಭಾಮಿನಿ ||**

ಅರಸಲಾಲಿಸಿಕೇಳು | ಧರ್ಮಜನಪ್ಪಣೆಯಂಕೈಗೊಂಡು ಪಾರ್ಥನು | ದ್ವಾರಕಿಗೆ ಹೊರಡಲು | ದುರ್ಯೋಧನನು | ತತ್ ಸಮಯದಿ | ದ್ವಾರಕಿಗೆ ಬರುವುದಂ | ದಿವ್ಯದೃಷ್ಠಿಯಲಿಶ್ರೀಹರಿಯು | ನೋಡುತ | ಸಾತ್ಯಖಿಯಂಕರೆದು | ಏನೆನುತಿರ್ಧನಾಶ್ರೀಹರಿಯು||

**॥ ಗೌಳ ರಾಗ**

**|| ನಾಟಕದಲ್ಲಿ | ರಾಮಾಯಣ | ರಾವಣನ ಕಂದ||**

ಸೇವಿಸೆ ಬಂದಿ ರ್ಪೇ |   ರಾಜೀಯತನ ನೆ 1 ಸೇವಿಸ ಬಂದಿರ್ಪೆರಾಜೀಯತನಯನೆ | ನಿನ್ನ ಅನುರಾಗವಂ || ಠೀವಿಯಿಂಬಂದಿಹಾ | ಠೀವಿಯಿಂಬಂದಿಹ ಈಧಾನವನಂ | ಪರಿಭಾವಿನಿ | ನುಡಿರಮಣೀಕೋಕಿಲ ವಾಣೀ |

**|| ಭಾಮಿನಿ || ದೇವಿಮಹಾತ್ಮ || ರಕ್ತಬೀಜಾಸುರನ ವಧೆ |**

ಲಾಲಿಸೈ ಋತುಪರ್ಣ | ಮುಂದಣಕಥೆಯನೂ | ದುರಳರಕ್ತಬೀಜಾಸುರ ನದೆಸೆಯುಲೋಕಕೆಗ್ಗಳವಾಯ್ತು | ದೇವತರನಿಷ್ಠನೇಮವುಕೆಟ್ಟು ಹೋಯಿತೂ | ದಿನಪನಡುಗಿದನು | ಇಂಧೇನಮಾಡಲಿ ಎಂದೆನುತ / ಸುರಪತಿಯು ನಡೆತಂದು | ಚತುರ್ಮುಖಗೆ ಕೈಮುಗಿದಾ |

**|| ಭಾಮಿನಿ | ಗಜಶಿರಪ್ರಧಾನ || ಗಣಪತಿಗೆ ಗಜಾಸುರನ ಶಿರಪ್ರಧಾನ ಮಾಡಿದ ಕಥೆ||**

ಆಲಿದ್ಯೆ ಸಿದ್ದರಾಮೇಶನೇ | ಮುಂದಣ ಕಥೆಯನು | ಪಿರಿದೆನಿಪಗಸ್ಯ ಮುನಿಶಾಪದಿಂ | ಗಂಧ | ಗಜಾಸುರನಾಗಿ ಜನಿಸೇ || ಹರಿಬ್ರಹ್ಮಾದಿಸುರದಿಕ್ಪಾಲಕರಂಸೆರೆ ಹಿಡಿಯೆ || ಗೋಳಿಡುತ ಸುರರೆಲ್ಲರು ಕೂಡಿ | ಹರನಂಬೇಡೆ | ಹರನು ಅಗಜಾಸುರನ ಶಿರಹರಿದು | ಆಶಿರವಂ | ಕೈಲಾಸಗಿರಿಗೆ ಹಿಡಿತಂದು ದ್ವಾರದಳಿರ್ಧಕುವರನಶಿರಹರಿದು | ಹಿಡಿತಂದ ಶಿರವಂಕುವರಂಗೆ ಧರಿಸಿ ಗಣಪತಿಯೆಂದು ಅಗ್ರಪೂಜೆಗೆ | ಕರ್ತನ ಮಾಡಿದ ನುಶಂಕರನೂ ||

**|| ಭಾಮಿನಿ || ದಕ್ಷಯಜ್ಞ ದಕ್ಷ | ಕೈಲಾಸಕ್ಕೆ ಬಂದು ||**

ಇತ್ತಲಾ ದಕ್ಷಪ್ರಜೇಶ್ವರನು | ಸಂತನದಿ ಶಿವನ ಸಿಂಹಾಸನದ ಪರಿಯಂತರಂ ಬಂದರೂ ಶಿವಸಮೂಹದೇವಗಣ ಮುನಿಗಣ ಸಿದ್ದಗಣ | ಸಾಧ್ಯಗಣರೆಲ್ಲರೂ | ಶಿವಯೋಗದೊಳಿರ | ಶಿವ ಮಾತಾಡಿಸಲಿಲ್ಲೆಂದೆನುತ | ದಕ್ಷ ಬ್ರಹ್ಮಕದುಕೋಪದೊಳುಶಿವನಕುರಿತು | ಏನೆಂದೆನುತ್ತಿರ್ದನೂ ||

## ಭಜನೆ ಹಾಡು

### || ಆದಿತಾಳ ||

1. ಮಂಗಳವಾಗಿ ದೇಜಯಜಯ। ಮಂಗಳವಾಗಿದೆ ಜಯಶುಭಮಂಗಳವಾಗಿದೇ | ಜಯ ಹರಮಂಗಳವಾಗಿದೇ || ಕಂಗಳ ಕೊನೆಯೊಳು | ಥಳ ಥಳಹೊಳೆಯುವ | ತಿಂಗಳ ಬೆಳಕಿನ | ತಿಳಿರಸಉಕ್ಕುತ 1 ಮಂಗಳವಾಗದೇ ಜಯಜಯ |

2) ಆರುಚಕರವಮೀರೀ | ಸೂಕ್ಷ್ಮದ್ವಾರದೊಳಗ ಸೇರಿ ಏರಿಸಾಸಿರದಳ ಪದ್ಮಸಿಂಹಾಸನ | ಭೂರಿಬ್ರಹ್ಮಾನಂದ ಪದವಿಯ ಸೇರಲು || ಮಂಗಳವಾಗಿದೆ ಜಯ ಜಯ |

4) ವಿರತಿಯೆಂಬುವ | ಭಕ್ತಿ ಭಕ್ತಿಯು ಯರಕವಾಗಿದೆ ತೈಲ ಎರಡು ಒಂದಾಗಿದೆ | ಅರುವೆಂಬ ಜ್ಯೋತಿಯು | ಉರಿಯಲು ತಾಮಸ | ಕತ್ತಲೆ ಅಳಿವುದು | ಮಂಗಳವಾಗಿದೆ ಜಯ ಜಯ |

5) ರವಿಶಶಿತಾರೆಗಳೂ | ಬೆಳಗುವ | ಪ್ರವಿಮಲಚೆತ್ಕಳೆಯು | ಕವಿಗೊಳಗೆರಡೆಂಬ | ಒಂದನು ತೋರದೆ 1 ಅವಿರೊಳ ಗುರುಮಹಲಿಂಗನ ತೇಜಗೆ ಮಂಗಳವಾಗಿದೆ ಜಯ ಜಯ

### | ರೂಪಕತಾಳ || ಕರಿಭಂಟನ ಚರಿತ್ರೆ | ಮಂತ್ರಿಗೆ |

ಮಂತ್ರಿಬಾರಯ್ಯಾ ಕಾರ್ಯಸ್ವಸಂತ್ರಕೇಳಯ್ಯಾ ಮುಂದೆ ಬರುವುದಾವೂದಯ್ಯ॥ ಮಂತ್ರಿಬಾರಯ್ಯಾ ಕಾರ್ಯಸ್ವಸಂತ್ರಬಾರಯ್ಯಾ ॥

### ॥ ರೂಪಕತಾಳ || ಕರಿಬಂಟನ ಚರಿತ್ರೆ | ಪುಂಡರೀಕಾಕ್ಷಿ | ಕರಿಯನಲ್ಲಿ ॥

ಯಾರ ಪೋಲ್ವನೋ ಈತಾ | ಯಾರದೋಲ್ವನೋ ಹರಿಯು ಎಂದು ಭಾವಿಸಿ | ಮೆರೆವನಾಲ್ಕು ಕರಗಳಿಲ್ಲ | ಶಿವನು ಎಂದು ತಿಳಿಯಲಿಕ್ಕೆ || ಮೂರು ನೇತ್ರಮುಖದೊಳಿಲ್ಲಾ | ಯಾರಸೋಲ್ವನೋ ಈತಾ ಯಾರಸೋಲ್ವನೋ ಈತ ಯಾರದೋಲ್ವನೋ॥

### || ರೂಪಕತಾಳ | ಚಿತ್ರಕೇತುವಿಗೆ | ಚಾರುಮತಿ ||

ಬೇಡ ಬೇಡಾ ಬೇಡ ಪ್ರಿಯಾ | ಬೇಡಿಕೊಂಬೇನೋರಾಯ ಬೇಡ ಪಡದವರವಯನಗೆ ಕೊಡಲು | ಪಡೆದವರವಾಯನಗೆ ಕೂಡಲು | ದುಡುಕಿನಿಂದ ಸುಮತಿ ನುಡಿವಳೂ || ಬೇಡ ಬೇಡಾ ||

**|| ರೂಪಕತಾಳ || ಚಿತ್ರಕೇತು | ಅಂಗೀರಸ ಋಷಿಗಳಿಗೆ ||**

ಹಂಸರಾಜನೆ ಪರಮ ಹಂಸವಂದ್ಯನೇ | ಹಂಸರಾಜಕಂಸಮಥನ | ಹಂಸಭೂಪಶಿರವು(ಕೆ) ಪಾದ | ಹಂಸರಾಜನೇ ಪರಮ ಹಂಸವಂದ್ಯನೇ || 3ನೇ ಕಾಲದಲ್ಲಿ



**|| ಆದಿತಾಳ || ಚಿತ್ರಕೇತುವಿಗೆ || ಅಂಗೀರಸ ಋಷಿಗಳು ||**

ಕೂಡಿತೀಗಸಮಯಾನಾಘಾಡದಿ ಪೋಗುವೆನೂ ಘಾಡಾದಿಂಪೋಗೂತೇ ರಾಜನಸತ್ಯವ || ನೀ ಗುವೆನಾನೀಗಾ ಬೇಗಾ || ಕೂಡತೀಗಸಮಾಯಾನಾಘಾಡಾದಿಂ ಪೋಗುಪೆನೊ

**| ರೂಪಕತಾಳ || ಚಿತ್ರಕೇತು ರಾಜ || ಮಂತ್ರಿಯಲ್ಲಿ |**

ಮಂತ್ರಿಶೇಖರಾ ತಿಳಿಸೊ ರಾಜ್ಯವಿಚಾರ | ಎಂತು ಇರುವುದೆನ್ನ ಪ್ರಜೆಯು | ಸಂತಸಾದಿಂಪೇಳೋ ವಿವರ | (3ನೇ ಕಾಲಕ್ಕೆ ) ಮಂತ್ರಿಶೇಖರ ತಿಳಿಸೊರಾಜ್ಯವಿಚಾರ

**|| ರೂಪಕತಾಳ || ಮಂತ್ರಿ | ರಾಜನಲ್ಲಿ ||**

ರಾಜಾದಿರಾಜ ಲಾಲಿಸೆನ್ನಾ | ರಾಜಕಾರ್ಯವಾ | ನೈಜಗುಣನೆ ನಾನು ಪೇಳ್ವೆ ಕೇಳೊ ವಿಶಯವಾ | 3 ಕಾಲಕ್ಕೆ

**‖ರೂಪಕತಾಳ || ರಾಜಮಂತ್ರಿಗೆ ||**

ಕಾಲಕಾಲಕೇ ಮಳೆಯು ಸುರಿಯುತೇ | ಇಳೆಯಪ್ರಜೆಗಳೆಲ್ಲ ಸುಖದಿಬಾಳುತಿರುವರೇ ‖ 3ನೇ ಕಾಲಕ್ಕೆ ಕಾಲಕ್ಕೆ ಮಳೆಯು ಸುರಿಯುತ್ತೇ ಇಳಯ ಪ್ರಜೆಗಳೆಲ್ಲ ಸುಖದಿ ಬಾಳುತಿರುವರೇ | ತದಿತೋರಜಣ | ತದಿತೋಂತದಿತೋಂ ತದಿತೈ

**|| ಭಾಮಿನಿ | ದಕ್ಷ ಪ್ರಜೇಶ್ವರ ||**

ಇತ್ತಲಾದಕ್ಷ (ಪ್ರಜೇಶ್ವರ) ಸ್ವಯಂಭುಕಡುಕೋಪದಿಶಂಬುಮೂರ್ತಿಯಂನಿರಾಕರಿಸಿ ತನ್ನಯ ನಿಜಸ್ವರ್ಗಮಂದಿರಕೆ ಬಂದು | ಕರ್ಕಸ ವಾನನಾಗಿ | ವಾಮಕರಕಮಲವಂಕದಪಿಗಿಟ್ಟು ಶಿವದ್ರೋಹಿ ಯೋಚನೆ ಯಲಿಚಿಂತಿಸುತ್ತಿರಲು | ಪ್ರಸೂತಿಯುಂ ಬಂದು | ಇದೇನು ಚೋದ್ಯವೆನುತ | ಪತಿಯ ಪಾದಕ್ಕೆ ನಮಸ್ಕರಿಸುತ್ತ

ಏನೆನೆತಿರ್ದಳ್ ||

**|| ಅಟ್ಟತಾಳ || ಹಾಡು ||**

ನೀಪೋದರೇನಂದನಿಮ್ಮಶುಭಚರಣ | ಭೂಪಾಲ ಶಿವನೇಕೆಬರಲಿಲ್ಲ ಕಾರಣಾ ಪರಿಣಾಮಹನ್ನೆ ನಿನ್ನನು ಸರಿಸಿದರೇ || ಮಯ್ಯಾದೆಗಳ ಜರಿದು ಕುಂದುಪಡಿಸಿದರೇ ನಿಮೋದರೇನಂದ ನಿಮ್ಮ ಶುಭ ಚರಣಾ | ರಮಣಾ || ವೇಗಗತಿ ಅಂತಕಾಂತಕಬಾರದಿದ್ದರೆ | ಎಂತು ನಡೆವುದು | ಯಜ್ಞಕಾರ್ಯವೂ || ಆ ಮಹೇಶನು ಬಾರದಿರಲನು ಮಾನತೋರ್ಪುದೂ | ಎನಗೆ ರಮಣಾ || ನೀಪೋದರೇನಂದಾನಿಮ್ಮ ಶುಭಚರಣಾ | ರಮಣಾ



**|| ರೂಪಕತಾಳ || ಕರಿಬಂಟನಿಗೆ | ಪುಂಡರೀಕಾಕ್ಷಿ ||**

ಯರಸೋಲ್ಲನೋ ಈತ | ಯಾರಸೋಲ್ಲನೋ ಮರೆವನಾಲ್ಕುಕರಗಲಿಲ್ಲಾ ಹರನು ಎಂದು ಭಾವಿಸಿ ಮೂರುನೇಮುಖದೊಳಿಲ್ಲಾ|| ಹರಿಯು ಎಂದೂ ಭಾವೀಸಲೇ ಯಾರದೋಲ್ವನೋ ಈತ ಯಾರ ಪೋಲ್ವನೋ ಈತ | ಯಾರದೋಲ್ವನೋ

**‖ ಅಟ್ಟತಾಳ ||**

**‖ ಶಿವಜಲಂದರನಿಗೆ | ಹೆಂಡತಿ | ವೃಂದಾದೇವಿ |**

1. ಸುಂದರಾಂಗನ ಪ್ರೇಮಭಾವದೊಳು | ಇಂದು ಮುಧದಿಂದವರಿಸುವೇ | ಚಂದದಿಂದಲಿ ಕಂಠದೇಹಕೆ | ಕುಸುಮಹಾರವಹಾಕುವೇ || ಸುಂದರಾಂಗನ ಪ್ರೇಮ || ಭಾವದಿ ಇಂದು ಮುದದಿಂದೊರಿಸುವೆ ||

2. ಮಂಗಳಾರತಿ ಇಂದು ಬೆಳಗಿರಿ ಚಂದದಾರತಿ ಸುಂದರಾಂಗಿಯ ರಮಣಗೇ| ಕಂದು ಕೊರಳಿಗೆ ಕಂತೆ ಪುರುಷಗೆ || ಸುಂದರಾಂಗಿಯ ರಮಣಗೆ ದಕ್ಷಶಿಕ್ಷೆಗೆ ಮೋಕ್ಷರಕ್ಷಣೆ 1 ಪಕ್ಷಿವಾಹನಪೇಕ್ಷಣೇ | ಲಕ್ಷಪೇಕ್ಷಗೆ |

ಶಿಕ್ಷಧನುಜಗೆ | ಸುಂದರಾಂಗಿಯರಮಣಗೇ || ಇಂದು ಬೆಳಗಿರಿಚಂದದಾರತೀ | ನಂದಿ ವಾಹನ ರೂಢಗೇ | ಕಂದು ಕೊರಳಗೆ ಕಾಂತಿಪುರುಷಗೆ || ಸುಂದರಾಂಗಿಯರಮಣಗೇ||

3. ಗರಳಕಂದರಗೆ | ಸುರರಪೊರೆದಗೆ | ಸರಸಿಜಾಂಭಕವರಧಗೇ || ತರಣಿ ನೇತ್ರಗೆ ಪುರುವಸುಟ್ಟಗೆ ಧರೆಗೆಶರಗನು ಕೊಟ್ಟಗೇ | ಇಂದು ಬೆಳಗಿರಿ ಚಂದ ದಾರತಿ ನಂದಿವಾಹನ ರೂಢಗೇ ||

**|| ಭಾಮಿನಿ || ಕುರುಕ್ಷೇತ್ರ ಕಥೆ || ವಿರಾಠನಿಗೆ 1 ಪಾಂಡವರು |**

**ವಿರಾಟಪರ್ವ**

ಅಜ್ಞಾತವಾಸದಲಿ | ರಕ್ಷಿಸಿದ | ಸುಜ್ಞಾನ ವಿರಾಠಭೂವರನೇ 1 ನಿಷ್ಠೆಯಿಂದಲಿ ಕಳೆದವು | ಅಜ್ಞಾತ ವನವಾಸವನು | ಪ್ರಜ್ಞೆಯಂಬಿಟ್ಟು | ಮತ್ತೆಷ್ಟು ದಿವಸಿರಲಿ | ನಿಮ್ಮ ಪುರದೊಳು || ಅಜ್ಞಾನದಿಂದಿರುವ ಕೌರವನಂ | ನಮ್ಮಯ ರಾಜ್ಯವಕೇಳಲು | ತೆರಳುವೆವು ನಿಮ್ಮಿಷ್ಟವೇನಿದಕೆಂದೆನುತ | ಭಿನ್ನವಿಸಿದರು ವಿರಾಠಭೂವರಗೆ | ಪಾಂಡವರೂ

**|| ಆದಿತಾಳ | ಅಂಗೀರಸ ಋಷಿಗಳು ||**

ಕೂಡಿತೀಗ ಸ ಮತಾನಾ ಘಾಡ ದಿಂಪೋಗುವೆನ ಘಾಡಾದಿಂಪೋಗುತೇರಾಜಾನಸತ್ಯಾವ | ನೀಗುವೆನಾನೀಗಾ ಈಗ || ಕೊಡಿತೀಗ ಸಮಯಾನಾಘಾಡಾದಿಂಪೋಗುವೆನೂ - ಯಕ್ಷಗಾನದ ಅಟ್ಟತಾಳ

**||ಅಟ್ಟತಾಳ | ಶನಿಮಹಾತ್ಮ | ಅಲೋಲಿಕೆ ||**

ತಂದೇಕೇಲ್ ಬಂದೀಹ ಪುರುಷನೂ | ಯನಗೇ | ಗೆಲುವಾತೋರದೆ ಮಲಗಿ ಸರವಾಕದ್ದಿಹನು (ವೇಗದಗಗತಿ) 1 ಮಲಗಿದಂತೆ ನರನೆ ಮಾಡೀಸರವ ಕೊಡದೆ |

ಸರೆಯನಾಡುವ | ಸರದಪರಿಯನ್ನು ಕೇಳಿ ಜನಕ ಕೊಡಿಸಿಯನಗೆ ಸರವನೀಗ | ತಂದೇ ಕೇಳಬಂದೀಹ ಪುರುಷನು ಯನಗೇ | ಗೆಲುವತೋರದೆ ಎನ್ನ | ಸರವ ಕದ್ದಿಹನೂ

**|| ಅಟ್ಟತಾಳ || ಸನಿಮಹಾತ್ಮ | ಪದ್ಮಾವತಿ | ಸಖಿಯಲ್ಲಿ||**

ಪೋಗೀನೀವ್ ಕರೆತನ್ನಿ | ರಾಗಾಹಾಡಿದ ಪ್ರಿಯನ ಬೇಗಾಧೋಳ್ | ಕರೆದು ತನ್ನಿ | ಕೇಳಮ್ಮಾಸಖಿಯೇ | ಬೇಗಾದೋಳ್ ಕರೆದು ತನ್ನೀ (ವೇಗಗತಿಯಲ್ಲಿ) ರಾಗ ಹಾಡಿದ ಪ್ರಿಯನ ನೋಡದೆ ಸಹಿಸದಿನ್ನೂ ಯನ್ನಮನವು | ರಾಜಪುತ್ರಿಯು | ನಿಮ್ಮ ಕರೆದಳು ಎಂದು ತಿಳಿಸುತ | ಬೇಗಾದಿಂಕರೆದುತ | ಪೋಗೀನೀವ್ ಕರೆದುತ॥ (ಮುಕ್ತಾಯ)

**|| ಅಟ್ಟತಾಳ || ಸಖಿ | ಪದ್ಮಾವತಿಗೆ||**

ಏನೀದು ದೊರೆಪುತ್ರಿ | ಸರಿರಾತ್ರಿ ವೇಳೆಯೊಳು | ಈ ನಡತೆ ನಿಮಗೆ ಸರಿಯೇ | ಕೇಳಮ್ಮಾ ತಾಯೇ ಈ ನಡತೆ ನಿಮಗೆ ಸರಿಯೆ || (ವೇಗದಗತಿ) | ನಿಮ್ಮ ತಂದೆ ಚಂದ್ರಸೇನಗೆ | ಕುಂದಂದಂತಾಗಲಿಲ್ಲವೆ | ಮನದ ಆಸೆಯ ತ್ಯಜಿಸಿ ನೀವು ಘನದಿ ಯೋಚಿಸು ಮಾತೆ ನೀನು || ಏನಿದೂ ದೊರೆ ಪುತ್ರಿ | ಸರಿರಾತ್ರಿ ವೇಳೆಯೊಳು ಈ ನಡತೆ ನಿಮಗೇ ಸರಿಯೇ ॥

**|| ರೂಪಕತಾಳ || ಪದ್ಮಾವತಿ | ತಂದೆ ಚಂದ್ರಸೇನನಿಗೆ || ಈ ಧಾರಿ**

**ಯಾರದೋಲ್ |**

ವಿವರ ಹೇಳುವೇ ಜನಕ | ಕರೆದೊಯ್ದು ಈತನ | ಕದ್ದ ಸರದ ವಿವರವನ್ನೂ ನಂದ್ಯೆಶೆಟ್ಟಿಯ ಮನೆಯೊಳಿನ್ನೂ | ವಿವರ ಪೇಳುವೆ ಜನಕ ಕರೆದೊಯ್ದು ಈತನ ವಿವರ ತಿಳಿಯಿರಿ ಜನಕಾ ॥

**॥ ಅಟ್ಟತಾಳ || ಶನಿಮಹಾತ್ಮ | ಪದ್ಮಾವತಿ | ನಂದ್ಯೆಶೆಟ್ಟಿಗೆ |**

ತಂದೇ ಈ ಮಹಾತ್ಮರನೂ ಧಾರೆಂದೂ ನೀ ತಿಳಿದು | ಯನ್ನಾ ನೀವರನಿಗೆ ಪರಿಣಯವನಡೆಗೂ ನೀ ತಂದೆ | (ವೇಗದ ಕಾಲ) ದುರಿತತನದೊಳು ಸತ್ಯ ಪುರುಷರ ವಿವರ ಅರಿಯದೆ | ಮೋಸವಾದುದುಯನಗೆ | ಪಿತನೆ | ತಂದೆ ಈ ಮಹಾತ್ಮಾರು! ಧಾರೆಂದು ನೀ ತಿಳಿದೂ | ಯನ್ನನೀವರನಿಗೆ | ಪರಿಣಯವನಡೆಸೂ

**|| ಅಟ್ಟತಾಳ | ತ್ರಿಪುರಧಾನವರ ಕಥೆ ಗಂಗೆ ಗೌರಿ ವಾದದಲ್ಲಿ ಗೌರಿ ||**

ಎಲ್ಲೀ ಅಂದರೆ ಅಲ್ಲಿ 1 ಹರಿಹರಿದೂಪೋಗೂವೆ ಬಲ್ಲೇ ಬಲ್ಲೆನೆ ನಿನ್ನಾ | ಸಲ್ಲದ ತನವಬಲ್ಲೇ ಬಲ್ಲೆನೆ ನಿನ್ನಾ | ನಲ್ಲೇ ನೀನಿಂತಲ್ಲಿ ಕೊಲ್ಲಿದ ಕೊಳಕಾಗಿ|

ಬಲುನಾರುತಿರುವೆಯಲ್ಲೇ || ನಲ್ಲೆಯೇಕೇಳು | ಬಲ್ಲುನಾರುತಿರುವೆಯಲ್ಲೇ ॥ 2ನೇ ಕಾಲ | ಎಲ್ಲಿ ಅಂದರೆ ಅಲ್ಲಿ | ಹರಿದರಿದುಹೋಗುವೆ | ಬಲ್ಲೆ ಬಲ್ಲೆನೆನಿನ್ನಾ | ಯಕ್ಷಗಾನ ಅಟ್ಟತಾಳ || ಮುಕ್ತಾಯ ||

**॥ ಅಟ್ಟತಾಳ || ಗಂಗೆ ||**

ಶುಭಕಾರ್ಯದಲ್ಲಿ ಮೊದಲು | ಯನ್ನ ಪೂಜಿಪರಿನ್ನೂ || ಆಶುಭಳೂ ನೀನೆಂದು! ಯನ್ನೊಳತೊಳೆಯುವರೂ || ಕೇಳೆಲೆ ಗೌರೀ | ಅಶುಭಳು ನೀನೆಂದು ಯನ್ನೋಳ್ ತೊಳೆಯುವರೂ | (2ನೇ ಕಾಲಕ್ಕೆ) + ಯಕ್ಷಗಾನದ ಅಟ್ಟತಾಳ

**|| ಮಂಗಳಾರತಿ || ಅಟ್ಟತಾಳ ||**

1) ಮಂಗಳಂ ಮಂಗಳಂ | ಹರಾಹರಾಮಂಗಳಂ ಮಂಗಳಂ || ಶನಿದೇವಾಗೇ| ಮಂಗಳಂ ಮಂಗಳಂ || ಮಂಗಾಳಾರತಿ ಎತ್ತಿ | ಕಪ್ಪರೂಪಾದವಗೆ | ವಸುಧೆಯೋಳ್ | ಮಹಾಶ್ರೇಷ್ಠಾನೆನಿಸಿ ಧಾತನಿಗೇ || ಮಂಗಳಂ ಮಂಗಳಂ

2) ದುರಿತಸಂಹಾರನಿಗೆ | ಸುರಪತಿಯ ನೀವನಿಗೆ | ಹರುಷದೋಳ್ಪ | ರವಿಯಾ (ಸುತಗೇ) ಪುತ್ರನಿಗೇ | ಮಂಗಳಂ ಮಂಗಳಂ | ಹರಾಹರಾ ॥ ಶನಿಕಥೆಯ ಪ್ರತಿದಿನವೂ | ಪಠಿಸಿದಭಕ್ತರಿಗೂ | ಸದ್‌ಭಕ್ತಿಯಿಂಕೇಳಿದ | ರವಿಯ ಪುತ್ರನಿಗೇ | ಮಂಗಳಂ ಮಂಗಳಂ || ಶನಿದೇವನಿಗೇ | ಮಂಗಳಂ ಮಂಗಳಂ ॥

**|| ಭಾಮಿನಿ || ತ್ರಿಪುರದಾವರ ಕಥೆ ||**

**॥ ಗೌಳರಾಗ |**

ರಾಮಕೇಳಿತ್ತ | ಶಂಕರನು | ಸರಸನ್ನಾಹದಿಂತ್ರಿಪುರಕೆ ದಾಳಿಯನಿಡಲನುವಾಗೆ ಅತ್ತ ಅಸುರದಾನವರೂ | ತಮ್ಮ ಕುಲದೇವಿ | ನಿಕುಂಬಳಾ ದೇವಿಯನು | ತಪದಿಮೆಚ್ಚಸುತಿರ್ದುದಂಕಂಡು | ಶಿವಮಾರ್ಬಲ | ಘರ್ಜಿಸುತ್ತಿದ್ದದ್ದುದೂ

**|| ನಿಕುಬಿಳಾದೇವಿಯನ್ನು ಕುರಿತು | ತ್ರಿಪುರದ ರಾಕ್ಷಸರು | ಮಂಗಳಾರತಿ**

**ಅಟ್ಟತಾಳದಲ್ಲಿ**

1. ಅಟ್ಟತಾಳ 1) ಕುಲಮಾತೆನಿಕುಂಬಿಳಿಯೇ | ಪಾಲಿಸುವರವ | ಗೆಲಿಯಾಲುವೈರಿಗಳಾಗ ನಾವಿಲ್ಲಾದಸಮಯದಿ | ಗೊಲ್ಲಕೃಷ್ಣನು ಯಮ್ಮಾ ವಲ್ಲಾಭಯರುಗಳ ವಂಚೇಸಿಕರೆದೊಯ್ದು | ಕುಲಮಾತೆನಿಕುಂಬಿಳಿಯೇ | ಪಾಲಿಸುವರವಾ ಗೆಲಿಯಾಲು ವೈರಿಗಳಾ |

2. || ಪಥಗೆಟ್ಟು ಬಾಳೂವವೂ | ಮಾತೆಯೆ ನಮಗೆ | ಮತಿಯಿತ್ತೂ ಪಾಲಿಸು (ವೇಗದಗತಿಯಲ್ಲಿ) ಹಿತದಿ ಸತಿಯರ ಪ್ರಥವಗೆಡಿಸಿದ | ರತಿಯಪತಿಯ |



ಪಿತನೆಜ್ಜೈಸಿ | ಹತವಮಾಡಿ | ಹಿತದಿ ಬಾಳೂವ ಶಕುತಿಕರುಣಿಸಿ | ಪೊರೆಯೆ ಮಾತೆಯ | ಕುಲ ಮಾತೆ ನಿಕುಂಬಿಳಿಯೇ | ಪಾಲಿಸುವರವಾ | ಗೆಲಿಯಾಲೂವೈರಿಗಳಾ |

3. ಅಮೃತಾಳ || ಸುರರಪಿಡಿಯಲು ಹೋದ | ಪ್ರಿಯರೇಕೆ ಬರಲಿಲ್ಲಾ ಸ್ವರ್ಗಸುಖದೊಳು ನಮ್ಮ ಮರೆತಾರೋ ಇನ್ನೂ || ಸುರರಪಿಡಿದರೋ (ವೇಗದಗತಿ) ರಣದಿಮಡಿದರೆ | ಅವರವಿವರವ | ಅರುಹರಿಲ್ಲವೂ | ಸುರರ ಸತಿಯರ ಕೂಡಿ ಸುಖದಿ ನಲಿಯುತ್ತಿರುವರೊ | ತಿಳಿಯದಿನ್ನೂ ಸುರರಾಪಿಡಿಯಲು ಹೋದ | ಪ್ರಿಯರೇಕೇ ಬರಲಿಲ್ಲಾ || ಸ್ವರ್ಗ ಸುಖದೊಳು ನಮ್ಮನು ಮರೆತಾರೋ ಇನ್ನೂ |

**||ಭಾಮಿನಿ ||**

ಸಿದ್ಧರಾಮಕೇಳಿತ್ತ ತ್ರಿಪುರನಾರಿಯರನುಭೌದ್ಧಾವತಾರದೊಳು | ಮದನಪಿತನು ಜೊತೆಯಲ್ಲಿ ಕರೆದೊಯ್ಯ || ಇತ್ತದಿ ವಿಜರ ಗೆದ್ದು ಬರುತ್ತಿರ್ದ ತ್ರಿಪುರರ ಕೂಡೆ || ಮುದ್ದು ನಿಮ್ಮ ನಾರಿಯರು | ವಥಗೆಟ್ಟು | ಶ್ರೀ ಹರಿಯ ಕೂಡೇ ಪೋದವಿವರವನು|| ಮುನಿಪನಾರದರು | ಅರುಹಿದರು ಅಸುರರಿಗೇ ||

**|| ಭಾಮಿನಿ || ಅಹಿರಾವಣ | ಮಹಿರಾವಣ ಕಥೆ | ವಿಭೀಷಣ ||**

ದೇವಲಾಲಿಸಿಕೇಳು | ಈಕೆಯು ದೇವಿ ಜಾನಕಿಯಲ್ಲಾ | ನಮ್ಮ ವರಕಪಟವಿದೂ ದೇವಿಜಾನಕಿ ಇಹಳೂ | ಅಶೋಕವನದೊಳಗೇ | ನೋಡಿಬಾಯೆಂದೆನುತ || ಮಾರುತಿಯ ಕಳುಹೆಂದನೂ | ಶರಣ ವಿಭೀಷಣನೂ ||

**|| ಭಾಮಿನಿ || ಕುರುಕ್ಷೇತ್ರ | ಕರ್ಣಪರ್ವ||**

ಧರಣಿ ಪಾಗಣಿಕೇಳು | ಅರಸ ಕೌರವರಾಯ | ಒಡೋಲಗದೊಳೊಪ್ಪಿರೇ | ಗರುಡೀಯಾಚಾರ್ಯರ | ದುರವ ನಿರೀಕ್ಷಿಸುತ್ತಿರಲು | ಶರದ ಗುರುವಿನ ರಥವ | ಸಾರಥಿಯು | ತಿರುಗಿಸಿದನು | ಕೌರವರಪಾಳ್ಯಕೇ ||

**|| ರೂಪಕತಾಳ || ಲವಕುಶರಕಥೆ | ಅಶ್ವಮೇದ ಯಾಗ | ಗುರುಶಿಷ್ಯರು ಸೀತೆಗೆ |**

**‖ ಗೌಳ ರಾಗ||**

1) ವನಜನೇತ್ರೆ | ಕೇಳೆ, ಪೇಳ್ವವೂ ಈ ವನದೊಳೆಲ್ಲಾ ವಿನಯದಿಂದ ಆಡುತಿರ್ದೆವೂ ಜನಪತಿಗಳದೊಂದು ತುರಗ ಮುನಿಗಳೊನಕೆ | ಬರಲು ಅದನೂ || ಘನಪರಾಕ್ರಮಾದಿನಿನ್ನ ತನಯಲವನೂ ಹಿಡಿದು ಕಟ್ಟಿದಾ || ವನಜನೇತ್ರೆ | ಕೇಳು ಪೇಳ್ವೆವೂ |



2) ಬಂದು ಸೇನೇ ಕವಿದುಕೋಪದಿಂದ | ಭವರಗೈದು || ಲವನಕೊಂದು | ಕುದುರೆಯನ್ನು ಹೊಡೆದುಕೊಂಡು ಹೋದಾರಮ್ಮ | ವನಜನೇತ್ರ ಕೇಳೆ ಪೇಳ್ವೆವೂ ||

3) ವಸುದೆಗಧಿಖ ತುಮಕಿಪುರವ ಕುಶಲದಿಂದ ಪಾಲೀಸವ || ಅಸಮನಯನಾನಾಣೇಲವನೂ | ಅಸುವನಳಿದು ಮಲಗಿದಾನು || ವನಜನೇ ಕೇಳೆ ಪೇಳ್ವೆವೂ |

**|| ಭಾಮಿನಿ | ಸೀತಾಪರಿತ್ಯಾಗ || ಕುಶಲವರಕಥೆ ||**

ಈ ಪ್ರಕಾರದಿಂದ | ವಸಿಷ್ಠಾಮುನಿಗಳು | ಸೀತಾದೇವಿಗೆ ಪತ್ರೋತ್ಸವದ | ಮಂತ್ರವಂ | ಉಪದೇಶ ಮಾಡಿಲ ತನ್ನಾಶ್ರಮಕೆ ತೆರಳಲು | ಇತ್ತ ಜಾನಕಿಗೆ | ಘರ್ಭಚಿನ್ನೆಯು | ಕಾರಲು | ತನ್ನ ಸಖಿಯರೊಡನೆ ಸೀತೆಯು ಬಯಕೆಯ ವಿವರವನ್ನು ಹೇಳುತ್ತಿರ್ದ್ದಳೂ |

**||ರೂಪಕತಾಳ | ಸೀತೆ ಸಖಿಯಲ್ಲಿ ||**

ಚದುರೆಕೇಳೆಪದುಳದಿಂದ | ವದಗತಾರುಮಾಸವೆನಗೇ | ಸುದತಿ ಮೌಕ್ತಿಕಹಾರ ಪದಕಕಂಠೀಸರವತಾರೇ ನೀನು || ವಾರಿಜಾಕ್ಷಿ | ಸಖಿಬಾಬಾರೇ ||

**|| ರೂಪಕತಾಳ || ಅಶ್ವಮೇದಯಾಗ | ಕುಶಲವರಕಥೆ | ಲವಕುಮಾರ ||**

1) ತುರುಗದಾರದೋ | ಇದರ ಪರಿಯು ತಿಳಿಯದೋ ಮರುಗಮಲ್ಲಿಗೆ | ಮರುಗಾಮಲ್ಲಿಗೆ ವೃಕ್ಷಲತೆಯ 1 ಮುರಿಯುತಿರ್ಪೂದೋ ! ತುರುಗದಾರದೊ ಇದರ ಪರಿಯು ತಿಳಿಯದೋ ||

2) ಯತಿಯುಬಂದರೇ | ಶಿವನೇ | ಖಥಿಯಗೊಳುವರೂ ಗತಿಯನ್ನೇನು | ಮಾಳ್ವದಿನ್ನೂ | ಯತಿಸುತ್ತಾರೇ | ಪೇಳೀರೀಗ ತುರುಗಧಾರದೋ | ಇದರ ಪರಿಯು ತಿಳಿಯದೂ ||

3) ವಾಜಿಪಣೆಯೊಳ್ | ಆಹಾ ರಾಜಲಿಪಿಗಳೂ | ಮಾಜಾದೊಪ್ಪುತಿಹುದು ಏನೋ ಸೊಬಗುನಿಧಿಗಳಾ | ತುರುಗದಾರದೋ | ಇದರ ಪರಿಯು (ತೋರದೂ) ತಿಳಿಯದೋ ||

**|| ಅಟ್ಟತಾಳ | ಶನಿಮಹಾತ್ಮ || ಅಲೋಲಿಕೆ ||**

ತಂದೇ ಕೇಳ್ ಕರೆತಂದ ಪುರುಷನು ಎನಗೆ ಗೆಲುವತೋರುದೆ | ಮಲಗಿ ಸರವಕ ಹನೂ ಮಲಗಿದಂತೆ | ನಟನೆ ಮಾಡಿ | ಸರವಕೊಡದೆಸಟಿಯ ನಾಡುವು ಸರದವಿವರವ ಕೇಳಿ ಜನಕ | ಕೊಡಿಸುಯನಗೇ ಸರವನೀನೂ | ತಂದೆ ಕೇಳ್ ಬಂದಿಹ ಪುರುಷನುಯನಗೇ ‖ ಗೆಲುವ ತೋರದೆ ಮಲಗಿ ಸರವಕದ್ದಹನೂ



**|| ಭಾಮಿನಿ ಕೃಷ್ಣ |**

**‖ ಗೌಳರಾಗ | ರತೀಕಲ್ಯಾಣ |**

ತಂಗಿ ದ್ರೌಪದಾ | ಕೋಮಲಾಂಗಿಯೇ| ನಾ ಹಿಂದೆ ಮಾಡಿದ | ಉಪಕಾರವನೆನೆನೆನೆದು ! ಈಗ ಬಂದು ಎನ್ನ ಮಾನಭಂಗವ | ಕಾಯಬೇಕೆಂದು ಶ್ರೀ ಹರಿಯು | ತಂಗಿಯನು ನೆನೆದನು ಬಂದು ನನ್ನ ಕಾರ್ಯವನಡೆಸೆಂದೂ

**|| ಅಟ್ಟತಾಳ || ಕನಕಾಂಗಿ ತಂದೆ ಬಲರಾಮನಿಗೆ |**

**ಈ ಧಾಠಿ || ನೀ ಹೋದರೇನಂದ ||**

ಕರೆಸೀದಪರಿಯೇನು | ಹರುಷದಿಂದರುಹು ನೀ ಮನದ ಬಯಕೆಯ ಎನಗೇ। ವಿವರಾದಿಪೇಳ್ | ನೀಮರೆಮಾಜದೆ ಎನಗೇ ತಂದೇ ತಂದೇ ||

**|| ಅಟ್ಟತಾಳ || ಲಗ್ನಕಾಯದಲ್ಲಿ ಯಾವ ಕಥೆಗಾದರೂ |**

ಸುಂದರಾಂಗನೆ ಪ್ರೇಮೆಭಾವದೊಳ್ | ಇಂದುಮುದಿದಿಂವರಿಸುವೇ ಚಂದದಿಂದಲೀ ಕಂಠದೇಹಕೆ | ಕುಸುಮಹಾರವಹಾಕುವೇ || ಸುಂದರಾಂಗನೆ ಪ್ರೇಮಭಾವದೊಳ್ ಇಂದು ಮುಧದಿಂದೊರಿಸುವೇ |

**|| ಭಾಮಿನಿ || ಧರ್ಮರಾಯ ಪಾರ್ಥನಿಗೆ || ಕುರುಕ್ಷೇತ್ರ ಕಥೆ ||**

ಅನುಜಪಾರ್ಥನೇ | ನೀಲಾಲಿಸಿಕೇಳೂ 1 ಬಂದೊದಗಿಹುದುನಾಳೆಯುದ್ಧವೂ ದ್ವಾರಕಿಗೆ ನೀಮೋಗಿ | ಅಪಾಂದವ ಶ್ರೀ ಹರಿಯ ಕರೆತಾರಂದೆನುತ | ನೇಮಿಸಿದನುಧರ್ಮಜನೂ ||

**|| ಭಾಮಿನಿ || ಭೀಮ | ದುಶ್ಯಾಸನರ ಯುದ್ಧದಲ್ಲಿ ||**

ರುದ್ರರೂಪದಲ್ಲಿ ಸಾರಿದೆನು ಎಲ್ಲವನೂ ಈ ಆದಮನಸುವಕಾಯು(ವರಿಲ್ಲಾ)ವ ರಾರಕಾಣೆನೂ ಈ ಕುರಭಲದೊಳಗೇ ! ಅದಮರೇ ಎನುತಲಿ | ವಾರಿಜಾಕ್ಷನ ಕಡೆಗೆ ಮೋರೆಯನು ತಿರುವುತ್ತ | ಹರಿ ನೀನು ಬಿಡಿಸ್ಕೊ | ನಿನಗೆ ಇವ | ಭಾಂದವನಲ್ಲವೇ | ಮರಣವಾದುದು (ಪತ್ಯವೇ) ಬಲುಸಂಭ್ರಮವೇ ಎಂದು ಘರ್ಜಿಸಿದ ಕಲಿಭೀಮಾ |

**|| ಭಾಮಿನಿ || ಕುರುಕ್ಷೇತ್ರ | ಕೃಷ್ಣ ಪಾರ್ಥ ರಥದಲ್ಲಿ | ಶಲ್ಯ ಕರ್ಣ |**

**ಈ ಭಾಮಿನಿ || ಗೌಳರಾಗ ||**

ಅರಸಕೇಳಿ ಪರಿಯೊಳು | ಶಲ್ಯನ ಸಾರತತ್ವದಿ ಕರ್ಣರಥವೇರಿ ಬರುತಿರೇ | ರಣರಂಗದ ಮಧ್ಯದೊಳು ಹರಿಯ ಸಾರತತ್ವದಿ | ಪಾರ್ಥ ಗೆದುರಾಗಿರಥವೇರಿ ಬರುತಿರೆ | ಮಾದೇಶನಂ ಕಂಡು ಹರಿಯುಮೂದಲಿಸಿದನ | ನಗುನಗುತಾ

**|| ಅಟ್ಟತಾಳ || ಶಿವಜಲಂಧರ ಕಥೆ | ಭುಕರ್ಣಿಕೆ | ಸಮುದ್ರ ರಾಜನಿಗೆ**

1. ಚಿನ್ಮಾಯಾತ್ಮಕ ಪರಾಶಿವ ಕೃಪೆ ಇಲ್ಲದೇ ಸುಮ್ಮಾನೆ ತರುಳರು ಉದಿಸುವರೇ (ರಮಣಾ) (ವೇಗಗತಿಯಲ್ಲಿ) || ಪ್ರಿಯಾ ಸಥಥ ದುಖಃವ

ಮಾಡುತಿರ್ಧರೇಸುತರುನಮಗೆ | ಉದಿಸಲುಂಟೇ | ನಿರುತ ಈಶನ ಚರಣ ಕಮಲವ | ಹಿತದಿ ಜಪಿಸಲು | ಸುತನಕರುಣಿಪ ‖ ಚಿನ್ಮಾಯಾತ್ಮಕ ಪರಿಶಿವಕೃಪೆ ಇಲ್ಲದೇ | ಸುಮ್ಮನೆ ತರಳರು ಉದಿಸುವರೆ ರಮಣಾ

2. ಸಂದೂಪೋಗಿಹಸುತನ | ಸ್ಮರಿಸಿ ಫಲವೇನೂ | ಚಂದ್ರಧರನ ಕೃಪೆಯು ನಮ್ಮ ಮೇಲಿರಲು (ವೇಗದ ಗತಿಯಲ್ಲಿ) ‖ ಅಂದು ಕಂದನ | ಪಡೆದು ಮುಂದೆ ಬಂದ ಶತೃಗಳನ್ನು ವಧಿಸಲು ಅಂದಚಂದದ ಕಂದನನ್ನು ! ಇಂದು ನೀಕರುಣಿಪುದು ಎನುತಲಿ ‖ (ನಿಧಾನಗತಿ) ಚಿನ್ಮಾಯಾತ್ಮಕ ಪರಶಿವಕೃಪೆ ಇಲ್ಲದೇ | ಸುಮ್ಮಾನೆ ತರುಳರು | ಉದಿಸುವರೇ ರಮಣಾ ‖

**‖ ಭಜನೆ ಪದ | ರೂಪಕತಾಳ |**

1. ಹಂಸನಾಗೆಲೋ | ಪರಮಹಂಸವಾಗೆ | ಹಂಸ ಹಂಸಹಂಸನೆನುತ ದ್ವಂಸಗೈದದ್ವೆತ ಭಾವ | ಹಂಸವಾಗಲೋ ಪರಮ ಹಂಸವಾಗಲೋ |

2. ಮಾಯಾಮೂಲವನ್ನು ತಿಳಿದು | ಮಾಯಾಮೂಲಗಳನ್ನು ಅಳಿದು ಮಾಯೆ ಕಳೆಯ | ಸೆಳೆದು ಮುದದಿ | ಮಾಯಕಳೆಗತೀತವಾಗಿ | ಹಂಸವಾಗೆಲೋಪರಮಹಂಸವಾಗೆಲೋ

3. ನೀರನುಳಿಸಿ ರಾಜಹಂಸ | ಕ್ಷೀರ ಸವಿಯುವಂತೆಜಗದಿ ‖ (ಮಾ) ಮಾರುದೇಹವಳಿದು ಪೊಳೆವ ಸಾರತತ್ವಸಾರಸವಿವ | ಹಂಸವಾಗೆಲೊ ಪರಮಹಂಸವಾಗೆಲೋ | ಹಂಸ, ಹಂಸ, ಹಂಸ ಎನುತೆ | ದ್ವಂಸಗೈದು | ರೈತ ಭಾವದ | ಹಂಸವಾಗಲೋ | ಪರಮಹಂಸ ನಾಗೆಲೋ ಪರಮಹಂಸನಾಗಲೋ |

4. ನಿರುತಪಾಪ ಪುಣ್ಯವೆಂದು | ಮೆರೆವಕಮಲವದನು ಮೆಲುತೆ | ಸ್ಮರಿಪಜ್ಞಾನವೆಂಬ ಬವದಿ | ಪರಮಸುಖದೀಚರಿಸುವಂಥ ‖ ಹಂಸ ನಾ ಪರಮಹಂಸನಾಗೆಲೋ ಹಂಸ, ಹಂಸ, ಹಂಸ ಎನುತೆ | ದ್ವಂಸಗೈದ (ದ್ವಿ) ದ್ವೆತಭಾವದಿ | ಹಂಸವಾಗೆಲೋ ಪರಮಪಹಂಸನಾಗೆಲೋ ।

5. ನಿರುತಬ್ರಹ್ಮಚರ್ಯಶಾಂತಿ | ಕರವೆನಿಪ್ಪಬ್ರಹ್ಮಪುರದೊಳಿರುವ ಅಮೃತಕೊಳದಿ ಮುಳಿಗಿ ಪರಮ ಅಮೃತರಸವ ಸವಿವ | ಹಂಸನಾಗೆ ಲೋ ಪರಮಹಂಸವಾಗಲೋ । ಹಂಸ ಹಂಸ ಹಂಸ ಎನುತ ದ್ವಂಸಗೈದ ದ್ವೆತಭಾವಧಿ ಹಂಸಾ ಪರಮ ‖

6. ಪೂರ್ಣಬ್ರಹ್ಮದಲ್ಲಿ ಆಡಿ | ಪೂರ್ಣಭೋದೆಗಾಗಿ ಉಂಡು | ಅನ್ನ ಅಮೃತಮಾಡಿ ಸವಿದು | ಚಿನ್ನಶ್ರೀಗುರುರಂಗನೆಂಬ | ಹಂಸನಾಗಲೊ ಪರಮಹಂಸನಾಗಿ ಹಂಸ, ಹಂಸ, ಹಂಸ ಎನುತ | ದ್ವಂಸಗೈದ ದ್ವೆತಭಾವದಿ | ಹಂಸನಾಗೆಲೋ ಪರಮಹಂಸನಾಗಲೋ

**|| ಮಧ್ಯಮಾವತಿರಾಗ ||**

**|| ಭಜನೆ ಪದ | ತಾಳಮೃದಂಗ ಶೃತಿ ಹಿಮ್ಮೇಳದೊಡನೆ ||**

ಭಾಮಿನಿ | ತಾರಕನಕೊಲಲೆಂದು ಶಿವನಕುಮಾರಕನೂ । ಪರತದಿ ತಾಜನಿಸೇ॥ ಮೂರುಲೋಕದ ವಡೆಯ ಸುಬ್ರಹ್ಮಣ್ಯ | ಸಲಹುಸಲಹೆಂದಾ ||

**|| ಭಜನೆ ಪದ || ಅಟ್ಟತಾಳ ||**

ಭಜನೆ ಮಾಡುವ ಬನ್ನಿರೋ | ಸದಾಶಿವನ ಭಜನೆ ಮಾಡುವ ಬನ್ನಿರೋ ಭಜನೆ ಮಾಡುವ ನಿತ್ಯ ಸುಜನರೆಲ್ಲರು ಕೂಡಿ

1. ಕುಜನಸಂಘವ ದೂರಮಾಡಿ ಸದ್ಭಕ್ತಿಯಿಂ ॥ ಭಜನೆ ಮಾಡುವ ಬನ್ನಿರೋ ಸದಾಶಿವನ ಭಜನೆ - ಮಾಡುವ ಬನ್ನಿರೋ

2. ಶತಕೋಟಿ ಪಾಪವನೂ | ಮಾಡಿದ ಮಹಾ | ಪತಿತರುನಾವು ನೀವೂ ಪತಿತಪಾವನನೆಂಬೊ ಬಿರುದುಳ್ಳದೇವನಾ | ಕ್ಷಿತೆಯೊಳುತ್ತಮಗತಿ | ತೋರೆಂದು ಶಿವನಾ | ಭಜನೆ ಮಾಡುವ ಬನ್ನಿರೊಸದಾ ಶಿವನಾಭಜನೆ ಮಾಡುವ ಬನ್ನಿರೋ

3. ಘುಡಿಘುಡಿಸುತಾ ಬರುವಾ | ಯಮನಾಳ್ ಗಾಳಂ ಕಡಿದುಮಾಡುತ ಕೋಪವಾ ಜಡಿದುಶೂಲದಿಭಕ್ತರನು ಕೈಯ್ಯಾ ಪಿಡಿದು | ಕಡುಕರುಣದಿಪೊರೆವ | ಮೃತ್ಯುಂಜಯನಾ | ಭಜನೇ ಮಾಡುವ ಬನ್ನಿರೋ | ಸದಾಶಿವನ | ಭಜನೆ ಮಾಡುವ ಬನ್ನಿರೋ |

4. ಪಂಚವಿಂಶಶಿತತ್ವದಿ | ತಾನಿದು ಪ್ರಪಂಚದೋಳಾನಂದದಿ | ಪಂಚವಿಂಶತಿಲೀಲೆ ತೋರಿತನಭಕ್ತರ ಸಂಚಿತ ಕರ್ಮವ | ನರುಹಿದಶಿವನಾ | ಭಜನೆ ಮಾಡುವ ಬನ್ನಿರೋ | ಸದಾಶಿವನ | ಭಜನೆ ಮಾಡುವ ಬನ್ನಿರೋ

5. ಕಷ್ಟ ಕರ್ಮಗಳಾ ನೋಡಿ | ನಿಮಿಶಾರ್ಧದಿ | ಸುಟ್ಟು ನಿರ್ಮಲವ ಮಾಡಿ | ಇಷ್ಟಾರ್ಥಗಳನಿತ್ತು | ಕರುಣದಿಪಾಲಿಪ | ಅಷ್ಟದಳದಲ್ಲಿರುವ ಪಾವನ ಶಿವನಾ ಭಜನೆ ಮಾಡುವ ಬನ್ನಿರೋ | ಸದಾಶಿವನಾ | ಭಜನೆ ಮಾಡುವ ಬನ್ನಿರೋ॥

6. ಕರುಣಾರಸವನೇ ಭೀರಿ | ಯೋಗವು ತತ್ವ | ನೆರೆಶಾಂತಿವಿರತಿತೋರಿ | ಧರೆಯೋಳ್ ಅಧಿಕಜ್ಞಾನ | ಬೋಧಿಸಿ ಪೊರೆಯುವ | ಗುರುಮಾಹಲಿಂಗನೆ ನೀನೆಂದು ಶಿವನಾ ಭಜನೆ ಮಾಡುವ ಬನ್ನಿರೋ | ಸದಾಶಿವನ ಭಜನೇ ಮಾಡುವ ಬನ್ನಿರೋ ||



**|| ಭಜನೆ ಪದ || ಅಟ್ಟತಾಳ ||**

1. ಮಾತು ಮಾತಿಗೂ | ಶಂಕರ | ಶ್ರೀಗುರುವೆ | ಸರೋತ್ತಮನೆನಬಾರದೆ || ಜ್ಯೋತಿಸಂಗುರಿದೋಗ ಕರ್ಪೂರದಂತೆ ಪಾತಕ ರಾಶಿನಿಂತುರಿದೋಗುವುದಾಗಿ ಮಾತುಮಾತಿಗೂ ಶಂಕರ | ಶ್ರೀ ಗುರುವೆ ಸರೋತ್ತಮನೆನಬಾರದೆ

2. ಸ್ನಾನವ ಮಾಡುವಾಗ 1ನೇ ಮದಿಅತ ಧ್ಯಾನವ ಮಾಡುವಾಗ || ಜಾಣತನದಿ ಅನ್ನ ಉಂಡುಂಗಂಗಾಮೃತ | ಪಾನಾವ ಮಾಡುವ ಕಾಲದಿ + ಮನವೇ | ಮಾತುಮಾತಿಗೂ ಶಂಕರ ಶ್ರೀಗುರವೆ ಸರೋತ್ತಮನೆನಬಾರದೆ

3. ಬಿಸುಜಾಕ್ಷಿ ನೋಡುವಾಗ | ಕೂಡುತ ನಿತ್ಯವಸೆದು ಮಾತಾಡುವಾಗ || ಬಸುರಲಿಬಂದ ಮಗನ ಮುದ್ದಿಸುವಾಗ ಹಸನಾದ ವಸ್ತ್ರಂಗಳುಡುವಾಗಮನವೇ ಮಾತುಮಾತಿಗೂ ಶಂಕರ ಶ್ರೀಗುರುವೆ ಸರೋತ್ತಮನೆನಬಾರದೆ

4. ಬೆಟ್ಟವನೇರುವಾಗ 1 ಕಾಲ್‌ಮುರಿವಲ್ಲಿ 1 ಥಟ್ಟನೆ ಬೀಳುವಾಗ | ಅಷ್ಟಭೋಗದಿ ನಿತ್ಯಲೋಲುಪ್ತಿ ಪಡೆವಾಗ | ದಟ್ಟದಾರಿದ್ರಾ ಬಂದಾಗಲು ಮನವೆ || ಮಾತುಮಾತಿಗೂ ಶಂಕರ ಶ್ರೀಗುರುವೆ ಸರೋತ್ತಮನೆನಬಾರದೆ

5. ಸುಲಿವಕಳ್ಳನು ಬಂದಾಗ | ಘೋರಾರಣ್ಯದಲಿ ವ್ಯಾಘ್ರಾಮುರಿಯುವಾಗ | ಚಳಿಜ್ವರಕೆಮ್ಮು ಉಬ್ಬು ಸುರೋಗ ಬಂದಾಗ | ಮಳೆಗಾಳಿ ಸಿಡಿಲಿನಾರ್ಭಟದಲ್ಲಿ ಮನವೇ ಮಾತುಮಾತುಗು ಶಂಕರ | ಶ್ರೀಗುರುವೆ ಸರೋತ್ತಮ ನೆನಬಾರದೇ

6 ಗುರುಸೇವೆಗೈಯ್ಯುವಾಗ | ಶ್ರೀಗುರುಕೊಟ್ಟ | ವರಮಮಂತ್ರಜಪಿಸುವಾಗ || ಗುರುವೆ ಗುರುವೆ ಕಲ್ಪತರುವೆ ಪಾಲಿಸು ಎಂದು | ಗುರುಮಹಲಿಂಗ ರಂಗನ ನಂಬಿ ಮನವೇ || ಮಾತುಮಾತಿಗೂ ಶಂಕರ ಶ್ರೀ ಗುರುವೆಸತಮನೆನಬಾರದೇ||

## || ಆದಿತಾಳ ಮಂಗಳಾರತಿ

1) ದೇವಾಪರಿಪಾಹಿಪರಮೇಶಾ | ಶಂಕರಗೌರಿಪಾಲ್ವತಿರಮಣ ನೀಲಕಂಠ | ಶಿವಶಿವಶಂಭೋ | ಕಲ್ಲೇಶ್ವರನೆ ಹರಹರ ಶಂಭೋನಾಶಡ್ಡಿಂಗೇಶನೆ | ಶಂಕರಶಂಭೋ | ದೇವಪರಿಪಾಹಿಪರಮೇಶ | ಶಂಕರ ಗೌರಿ ಪಾರತಿರಮಣಾ। ನೀಲಕಂಠನೆ ಶಿವಶಿವಶಂಬೋ ॥ ದೇವಾಪರಿಪಾಹಿಪರಮೇಷ ||

2) ಧೀನನಾಥನೆ ನೀಂದಯವನುತೋರಿ | ಕರುಣದಿ ಪೊರೆಯೋ | ನೀಲಕಂಠ | ಧೀನರರಕ್ಷಿಪ | ಸುಜನರಪಾಲಿನ 1 ಧರೆಯೊಳು ಅರಳಗುಪ್ಪೆಪುರದೊಳುನೆಲಸಿಹ ದೇವಾಪರಿಪಾಹಿಪರಮೇಶಾ || ಶಂಕರಗೌರಿಪಾಠತಿರಮಣಾ ನೀಲಕಂಠಾ ಶಿವಶಿವಶಂಭೋಕಲ್ಲೇಶ್ವರನೆ ಹರಹರಶಂಭೋ | ಬಸವೇಶ್ವರನೇ ಶಿವಶಿವಶಂಭೋ ವಿಶ್ವೇಶ್ವರನ ಶಂಕರಶಂಭೋ || ದೇವಾಪರಿಪಾಹಿಪರಮೇಶಾ ||

3) ದೇವಾಪರಿಪಾಹಿಪರಮೇಶಾ ॥ಧರೆಯಾಪುರದೊಳು ಅರಳಗುಪ್ಪೆನಗರದಿ | ದೇವದಿಕ್ಕಿನೋಳ್ ಷಡ್ಡಿಂಗದಮಧ್ಯೆ ನಾಟ್ಯವನಾಡುವ ನಟರಾಜನನೀಂ | ನಾಂಟ್ಯವನಾಡುತನಲಿಯುತಪೊರೆಯೋ ದೇವಾಪರಿಪಾಹಿಪರಮೇಶಾ | ಶಂಕರ ಗೌರಿ ಪಾಶ್ವತಿರಮಣಾ |



ನೀಲಕಂಠಾಶಿವಶಿವಶಂಭೋ | ಬಸವೇಶ್ವರನೇ ಶಿವಶಿವಶಂಭೋ ಸಕಲೇಶ್ವರನೇ ಶಂಕರಶಂಭೋ | ದೇವಾ ಪರಪಾಹಿ ಪರಮೆಶ ಶಂಕರ ಗೌರಿ ಪಾಶ್ವತಿರಮಣ ನೀಲಕಂಠ ಶಿವಶಿವಶಂಭೋದೇವಪರಿಪಾಹಿಪರಮೇಶ

4) ಅಷ್ಟದಿಕ್ಷಾಲರ | ಮಧ್ಯದಿ ಮೆರೆಸುತ | ದ್ರಿಷ್ಟಿಸಿ ನೋಡಲು || ಎದುರೊಳು ಬಸವನ ಶ್ರೇಷ್ಟದಿ ಉಮೆಯನು ಕೂಡುತ ನಲಿಯುತ | ಹರಿಯನಸೂರ್ಯನ ನೋಡುತ ನಲಿಯುವ | ದೇವಾ ಪರಿಪಾಹಿ ಪರಮೇಶ ||

## || ಆದಿತಾಳ | ಚಾಲು | ಶಾರದೆ ಕುಣಿಸಲು ಹಾಡು ||

ಶ್ರೀಶಾರದಾಂಬಾ | ನಲಿದಾಡುಯನ್ನ / ನಾಲಿಗೆಯಾ ಮೇಲೆ | ಒಂದು ಗತಿ ಮುಕ್ತಾಯ | ತಜ್ಝಂತಕಜಂದೊಗುಡ್ಡ | ದೋಗುಡತಕ | ದಿಮ್ಮಿದಿಮ್ಮಿ 1 ಕಡ್ಕಡ್ | ದೀಂ ದೀಂ | ದಿನ್ನಕಡ್ ತೊಂದಿನ್ನಕಡಕತ್ಯೆ | ದಿನ್ನಕಡೆಕಡೆತಾ ||

ಶ್ರೀಶಾರ ದಾಂಬಾನಲಿದಾಡುಯನ್ನ ನಾಲಿಗೆಯಾ ಮೇಲೆ 1ತೋಂದ್‌ನಾನಾನಾನಾನಾ । ನ್ನನನ್ನನನಾನನನ್ನಾ ತೋಂ ನಾನಾನಾನಾನಾ ನನ್ನನನನಾ ನನನನನಾ ॥ ಆಆಆಆಆಆಆಆ ದಿಗಿತಾ, ದಿಗಿತ್ ದಿತ್ತನೇ ತದಿಗಿಣಿತೋಂ ತದಿಗಿಣಕತ್ಶೈ, ತದಿಗಿಣತಾ ॥

**॥ ಭಜನೆ ಹಾಡು ಮಧ್ಯಮಾವತಿರಾಗ ॥**

**ಆದಿತಾಳ ॥**

1. ಎಲ್ಲಾ ರೂಪವು ತಾನಂ ತೇಶಿವ । ಎಲ್ಲರೊಳಗು ತಾನಿಹನಂತೇ । ಅಲ್ಲಲ್ಲರಸುತೆ, ಗುಡಿಗಳ ತಿರುಗುತೆ । ಕಳ್ಳನರರ ಕಣ್ಣೆಕಲ್ಲಂತೆ ಶಿವ ಎಲ್ಲಾ ರೂಪುವುತಾನಂ ತೇಶಿವ ಎಲ್ಲರೊಳಗುತಾನಿಹನಂತೇ

2. ದುಷ್ಟವಿಧರನು ತಾನಂತೇಶಿವ । ದುಷ್ಟಗೆ ದುಷ್ಟಾಗಿಹನಂತೇ । ದುಷ್ಟದಶ್ಯಗಳೆರಡರ ಮಧ್ಯೆ । ಶಾಸ್ವಿತತಾನಾಗಿ ಹನಂತೇ ॥ ಎಲ್ಲಾ ರೂಪುವುತಾನಂಕೇಪೇಶಿವಾ ಎಲ್ಲರೊಳಗು ತಾನಿಹನಂತೆ ।

3. ಕಣ್ಣೆಂಬುದು ತನಗಿಲ್ಲಂತೇಶಿವ । ಕಣ್ಣಿಗೆ ಕಣ್ಣಾಗಿಹನಂತೇ । ಕಣ್ಣು ತೆರೆದು ತಾನರಸುವಜನರಿಗೆ ಬಣ್ಣಬಣ್ಣವಾಗಿಹನಂತೇ ॥ ಎಲ್ಲಾ ರೂಪವು ತಾನಂತೇ ಶಿವ ಎಲ್ಲರೊಳಗುತಾನಿಹನಂತೇ

**॥ ಅಟ್ಟತಾಳ ॥**

ಪ್ರತಿವ್ರತೆಯಾಗಿರಮ್ಮಾ । ಪಾರ್ವತಿಪತಿ ಹಿತದಿಪಾಲಿಪನುನಿಮ್ಮಾ ॥ (ವೇಗದ ಗತಿ) । ಪತಿಯದೈವವು । ಎನುತಕೃತಿಸಿರಿ + ತತಿಗಳೊಯ್ಯುತಲಿಹವು ಡಂಗುರ ಹಿತದಿವರಿಸುತ ನಿಮ್ಮ ಪುರುಷನಕ್ಷಿತೆಯೋಳಿಕ್ಷಿಸದನ್ಯಪುರುಷರ । ಪತಿವ್ರತೆಯಾಗಿರಮ್ಮಾ ಪಾಶ್ವತಿಪತಿಹಿತದಿಪಾಲಿಪನುನಿಮ್ಮಾ

1. ವರಪತಿ ಆಯ್ಕೆಯಿಂದ ತಾರಕ ಬೋಧೆ ಸದ್‌ಗುರುದೇವನಿಂದರಿತೂ ॥ (ವೇಗದಗತಿ) । ಪುರುಷಸತಿಶ್ರೀಗುರುವೆ + ಸಾಕ್ಷಾತತ್ವರಮಶಿವನೆಂದರಿತು । ಭಕ್ತಿಯೋಳ್‌ಸತ್ಕರಣ । ನಿರ್ಮಲದಿಂದ ನಂಬಿ । ಗುರುಪದಾಂಭುಜ ಸೇವೆ ವೆಗೆಯ್ಯುತೆ ॥ ಪತಿವ್ರತೆಯಾಗೀರಮ್ಮ । ಪಾಶ್ವತಿಪತಿಹಿತದಿಪಾಲಿಪನಿಮ್ಮಾ ॥

2. ವಿಮಲವಾದೆಡೆಯ ನೋಡಿ । ನಿಶ್ಚಲವಾಗಿ । ಕಮಲಾಸನವಾನೋಡಿ (ವೇಗದಗತಿ) । ಕಮಲೆ ಏಕಾಶ್ರಿತದಿ ರಾಜಿಪ । ಕಮಲೆಯುಗಳವ ಮುಚ್ಚರಳಿದ ಕಮಲದೊಳು । ಶೋಭಿಸುವ ಪದ । ಕಮಲತೇಜೋ ರಾಶಿಕೂಡಿ । ಪತಿವ್ರತೆಯಾಗಿರಮ್ಮ । ಪಾರತಿಪತಿ । ಹಿತದಿ ಪಾಲಿಪನುನಿಮ್ಮಾ ॥

3. ವರಚೌಕ ಪೆಟ್ಟಿಗೆಯಾ । ಗುರುಕೀಲಿನಿ ತೆರೆದು ಶೋಧಿಸಿನೋಡಿರಿ । (ವೇಗದಗತಿ) ಇರುವ ಉನ್ನತ + ಚಂದ್ರಹಾರವು । ಮೆರವವಜ್ರದ ಕಡಗ ಕಂಕಣ । ಉರುತರಾಕಟ್ಟಾಣಿಸರಗಳ 1 ಧರಿಸಿ ನಿಮ್ಮಾಜಲಸಾರ್ತಕ । ಪತಿವ್ರಥೆಯಾಗಿರಮ್ಮಾ ಪಾಶ್ವತಿಪತಿಹಿತದಿಪಾಲಿಪನುನಿಮ್ಮಾ ॥

4. ಅನುಸೂಯದೇವಿಯಂತೆ । ಪತಿಭಕ್ತಿಯಿಂದಾನೂದೀನಾಚರಿಸಿ ನೀವೂ । (ವೇಗದಗತಿ) + ಅನಘ + ಗುರುಮಾಹಲಿಂಗ ನಿಮ್ಮಯ । ಮನಕೆಸಾಕ್ಷಿತನಾಗಿ ತೋರುವ ॥ ವನಜಯಮುಖಿಯನ್ನೇಳೋದೇನಿದೆ । ಜನನಮರಣದ ಬಾಧೆ ಅಳಿವುದು + ಪತಿವ್ರತೆಯಾಗೀರಮ್ಮಾ । ಪಾಶ್ವತಿ ಪತಿಹಿತದಿಪಾಲಿಪನೂ ನಿಮ್ಮಾ

**॥ ಆದಿತಾಳ ॥ ಮಧ್ಯಮಾವತಿ + ಸುರಬಿರಾಗ ॥**

**- ಭಜನೆ ಪದ ॥**

1) ಶ್ರೀ ಗುರು ಮಾಂಪಾಹಿಸಂತತ ॥ ಶ್ರೀಗುರುಮಾಪಾಂಹಿ ॥ ರಾಗರಹಿತಮುನಿಹೃದಯಾಬ್ಧಿವರ ಸೋಮಾ ಆಗಮವಂದ್ಯ ವಿರಾಜಸದ್ಗುಣ ಸೂಮ ॥ ಶ್ರೀ ಗುರುಮಾಂಪಾಹಿಸಂತತ + ಶ್ರೀ ಗುರುಮಾಂಪಾಹಿಸಂತತ । ಶ್ರೀಗುರು ಮಾಂಪಾಹೀ

2) ಪ್ರಣವ ಪರಾತ್ಪರನೇ ಅನಘನ । ಅನುಪಮ ಅದ್ವಯನೇ ॥ ವನಜಭವಾಚ್ಯತರುದ್ರವಂದಿತನೇ । ವನಜಭವಾಂಡ । ಪಿಂಡಾಂಡಮಂಡಿತನೇ॥ ಶ್ರೀ ಗುರುಮಾಂಪಾಹಿ । ಸಂತತ । ಶ್ರೀ ಗುರುಮಾಂಪಾಹಿ

3) ಮಿತ್ಯಮಾಯರಹಿತ । ನಿರ್ಮಲ । ಸತ್ಯಜ್ಞಾನ ಭರಿತಾ । ಸತ್ತುಚಿದಾನಂದ । ನಿಜಪರಿಪೂರ್ಣನೆ ಭಕ್ತರ ಭಾಗ್ಯದ । ನಿಧಿಯೆನಿಸಿರುವನೆ ॥ ಶ್ರೀಗುರುಮಾಂಪಾಹಿ ಸಂತತ ॥ ಶ್ರೀಗುರುಮಾಂಪಾಹಿ । ಸಂತಸ ಶ್ರೀಗುರುಮಾಂಪಾಹೀ ॥

4) ಪರಮತತ್ವಸಾರ | ಭೋದಿತವರಗುಣ ಗಂಭೀರ | ಶರಣುಶರಣು | ನಿಮ್ಮ ಚರಣ ವನಂಬಿದೆ | ಗುರುಮಹಲಿಂಗರಂಗದಯಾನಿಧೇ ಶ್ರೀ ಗುರುಮಾಂಪಾಹಿ। ಸಂತತ | ಶ್ರೀಗುರುಮಾಂಪಾಹೀ ||



**|| ಮಧ್ಯಮಾವತಿರಾಗ || ಭಾಮಿನಿ |**

ಭಾಮಿನಿ | ತಾರಕನಕೊಲಲೆಂದು ಶಿವನ ಕುಮಾರಕನು ಪಶ್ವತದಿ ರಾಜನಿಸೇ ಮೂರು ಲೋಕದವಡೆಯ ಸುಬ್ರಹ್ಮಣ್ಯ | ಸಲಹು ಸಲಹು ದೇವಾ

**ಸಣ್ಮುಖನನ್ನು ಕುಣಿಸಲು**

**|| ಆದಿತಾಳ || ಚಾಲು**

1) ಕುಂಡಲಮಣಿ ಮಕುಟ ಸುಬ್ಬರಾಯ ದೇವ | ಮಂಡಲನಾಯಕನೇ | ಸುಬ್ಬರಾಯ ದೇವಾ || 3ನೇ ಕಾಲಕ್ಕೆ || ಮುಕ್ತಾಯಕ್ಕೆ ॥ ಸುಬ್ಬರಾಯ | ಕೊಡುವರವ | ನಾಂಬೇಡುವೆ (ನಾಂಬೇಡವೇ || ಕೂಚು) ನಾಂಬೇಡುವೆ ಕೊಡುವರವಾ | ದೇವದೇವನೇ ಶಣ್ಮುಖನೇ ತದಿತೋಂಜಣ ತದಿತೋಂ ತದಿತೋಂ ತದಿತ್ಯೆ ||

2) ಹಣ್ಣು ಹೂವಿನ ಪೂಜೆ ಮಾಡುವೇ ದೇವ || ಪರಿಪರಿವಿಧದಿಂದ ಬೇಡೂವೆ ॥ ಮುಕ್ತಾಯಕ್ಕೆ ॥ ಸುಬ್ಬರಾಯ ಕೊಡುವರವ ನಾಂ ಬೇಡುವೇ ನಾಂ ಬೇಡುವೇ (ಕೂಚು) || ಶಣ್ಮುಖನೆ ದೇವದೇವನೇ | ತದಿತೋಂಜಣ | ತದಿತೋಂ ತದಿತೋಂ ತದಿತ್ಯೆ |

**ಆದಿತಾಳ || ವಿಷ್ಣುಹರಿ | ಕೃಷ್ಣ ರಾಮ ಇವರನ್ನು ಕುಣಿಸಲು**

ಚಾಲು | ಆಡುತ್ತಾಡುತಾಬಂದ ಕೃಷ್ಣಾ (ಹರಿಯು) (ರಾಮಾ) ಆನಂದದಿಂದಾ ಆಡೂತಾಡುತ ಬಂದ ಕೃಷ್ಣ || ಆನಂದದಿಂದಾ | ಗೋಪಾಲಕೃಷ್ಣಾ || ಆಡುತ್ತಾಡುತ್ತಾ ಬಂದ ಕೃಷ್ಣ (2ನೇ ಕಾಲಕ್ಕೆ ) ಆಡುತಪಾಟುತ ನೋಡುವ ಜನರಿಗೆ | ಬೇಡಿದ ವರಗಳ | ನೀಡಲು ಬಂದಾ ಆಡುತಾಡುತ ಬಂದಾ ಕೃಷ್ಣಾ ||

ಆನಂದದಿಂದದಾ ಆಡೂತಾಡುತ ಬಂದ ಕೃಷ್ಣ (2ನೇ ಕಾಲ) ಆಡೂತಾಡುತಾ ಬಂದಾಕೃಷ್ಣಾ | ಆನಂದದಿಂದಾ ಆಡೂತಾಡೂತ ಬಂದಾ ಕೃಷ್ಣಾ (3ನೇ ಕಾಲ) | ಆನಂದದಿಂದಾ ಆಡೂತಾಡೂತೆ ಬಂದಾ ಕೃಷ್ಣಾ | | (ಮುಕ್ತಾಯ) ತದಿತೋಂಜಣ ತದಿತೋಂ ತದಿತೋಂ | ತದಿತ್ಯೆ

**|| ಆದಿತಾಳ || ಲಕ್ಷ್ಮೀದೇವಿ ಕುಣಿಸಲು**

ಭಾಗ್ಯಾದ ಲಕ್ಷ್ಮೀ ಬಾರಮ್ಮ । ನಮ್ಮಮ್ಮಾ ಸೌಭಾಗ್ಯದಲಕ್ಷ್ಮಿ ಬಾರಮ್ಮ ॥ ಹೆಜ್ಜೆಯ ಮೇಲೊಂದೆಜ್ಜೆಯನಿಡುತ । ಗೆಜ್ಜೆಯನಾದವ ಘಳಲನೆ ಮಾಡುತ ॥ ಮಜ್ಜಿಗೆಯೊಳಗಣ ಬೆಣ್ಣೆಯ ತೆರೆದೊಳು । ಕುಣಿಯುತ ನಲಿಯುತ ಹಾಡುತ ಬಾರೇ । ಭಾಗ್ಯಾದ ಲಕ್ಷ್ಮೀ ಬಾರಮ್ಮಾ ನಮ್ಮಮ್ಮ ಸೌಭಾಗ್ಯದ ಲಕ್ಷ್ಮೀ ಬಾರಮ್ಮಾ

**|| ಯಕ್ಷಗಾನದ ಅಟ್ಟತಾಳದಲ್ಲಿ ಮುಕ್ತಾಯ | ಯಕ್ಷಗಾನ ಅಟ್ಟತಾಳ || ಮೇಲೆ 1**

**||ಆದಿತಾಳ || ಅಶ್ವಮೇದಯಾಗ | ಕುಶಲವರ ಕಥೆ || ಕುಶ || ಜಾನಕಿಯಲ್ಲಿ**

ತಾಯೇ ನಿವೇತಕೆ ಮರುಗುವೆ ಸರಿಯೇ । ಈ ಪರಿಯಾತನೆ । ನಿಮಗೇ ಸರಿಯೇ ॥ ತಾಯೇ ನಿವೇತಕೆ ಮರುಗುವೆ ಸರಿಯೇ । ತಾಯೇ ನಿವೇತಕೆ ಮರುಗುವೆ



ಸರಿಯೇ ॥ ಈಯಾತನೆಯಾರಿಂದಾಯಿತು ನಿಮಗೇ । ಈಯತಿ ಗೃಹದೊಳಗೇ । ನೋಯಿಸಿದ ವರ ಸಾಯಸಲಿಕ್ಕೆ । ಯಮರಾಯ ನಿಗೊಪ್ಪಿಸಿಬರುವೇ ॥ತಾಯೇ ನೀವೇತಕೆ ಮರುಗುವೆ ಸರಿಯೇ ॥ ಈ ಪರಿಯಾತನೆ ಸರಿಯೇ । (ಯಕ್ಷ ಅಟ್ಟತಾಳ ಮುಕ್ತಾಯ) ।

**|| ಆದಿತಾಳ ||**

ಅಮ್ಮಾ ತಮ್ಮಾ ಲವನೆಲ್ಲಿಗೆ । ಹೋಗಿಹನಮ್ಮ । ನಮ್ಮಮ್ಮಾ ಹೇಳಮ್ಮಾ ಲವನೆಲ್ಲಿಗೆ ಹೋಗಿಹನಮ್ಮ ॥ ಅಮ್ಮಾ ತಮ್ಮಾವನೆಲ್ಲಿಗೆ ಹೋಗಿಹನಮ್ಮಾ ನಿಮ್ಮೊಡನೇಕಿಲ್ಲವಮ್ಮಾ । ಮರ್ಮವಿದೇನೊ । ತಿಳಿಯದಮ್ಮಮ್ಮಾ । ಅಮ್ಮಾ ತಮ್ಮಾಲವನೆಲ್ಲಿಗೆ ಪೋಗಿಹನಮ್ಮಮ್ಮಾ ॥ ನಂತರ ಅಟ್ಟ ತಾಳದಲ್ಲಿ (ಯಕ್ಷಗಾನದಲ್ಲಿ)

**|| ಭಾಮಿನಿ || ಕುಶಲವರ ಕಥೆ | ಅಶ್ವಮೇದಯಾಗ || ಕುಶನಿಗೆ | ಜಾನಕಿ ||**

ಏನುಪೇಳಲಿಮಗನೇ । ಈಗ ಬಂದಿಹ । ಹೀನಯಾತನೆಗಳನೂ । ಕೇಳೆನ್ನಾಕಂದಾ ಭೂನಾಥರವರೊಂದತ್ವವೂ ಮುನಿಗಳೊನವಂ ಪೊಕ್ಕು । ನಾನಾಥಿಶಯವಾದ । ಪೂವನಂಗಳನೆಲ್ಲಾ ಮುರಿದು ತುಳಿದು । ಇಳಿಗುದುರಿಸುತ್ತಿರಲು । ಕಂದಾಸುತಲವನು! ಹಯಪ್ಪಿಡಿದು । ಬಂಧಿಸಲು । ಸೇನೆಬಂಧಾರ್ಭರಿಸಿ ।

ಕವಿದು । ಕಣೆಗೆರೆದು । ಅಸುಳೆಯ । ತ್ರಾಣಗೆಡಿಸಿ । ಅನರಾಪರೂ ॥ ಕುವರ ಸಹಿತದಿರಥವೇರಿ । ಪಥವಿಡಿದು ಸುತನಂ ಕರೆದೊಯ್ದರಂತೇ ಕಂದಾಕಂದಾಕಂದ । (ಮುಕ್ತಾಯ)

**|| ಆದಿತಾಳ || ಕುಶ | ಸೀತಾಮಾತೆಯಲ್ಲಿ ||**

ಅಮ್ಮಾ ತಮ್ಮಾಲವನೆಲ್ಲಿಗೆ ಹೋಗಿಹನಮ್ಮಾ । ಅಟ್ಟತಾಳ ॥ ಅಮ್ಮಾ । ಭೂತಳದೊಳಘದಿಕ ಎನಿಸಿದ ನಮ್ಮ ॥ ಗುರು ಪಿತ ವಾಲ್ಮೀಕಿಗಳಿರುವರಮ್ಮಾ । ದುರಿತವ । ಹರಿಪರಮ್ಮಾ ಭಯವಿನ್ನಕೆಮ್ಮಾ । ಅಮ್ಮಾ ತಮ್ಮ ಲವನೆಲ್ಲಿಗೆ ಹೋಗಿಹನಮ್ಮ ಅಟ್ಟತಾಳ ।

**|| ಭಾಮಿನಿ || ತ್ರಿಪುರದಹನ | ಶುಕ್ರಾಚಾರ್ಯ | ತಾರಕಾಕ್ಷನಿಗೆ ||**

ಕೇಳುದೈತ್ಯನೆ ನಮ್ಮಯ ತ್ರಿಪುರದ ಮಧ್ಯದಲಿ ಮಯನಿರ್ಮಿತದ । ಸಿದ್ಧೋಧಕ ಅಮೃತದ ಕೊಳವಿಹುದು । ಅಳಿದಿಹ ನಮ್ಮವರೆಲ್ಲರನು । ಅಕೊಳದೊಳಗದ್ದಿದೊಡೇ ಅಳಿದ ಜೀವಿಗಳೂ ಪುನರ್ ಜೀವಿತರಾಗುವರು । ಭಯವೇಕೆ ಚಿಂತೆಯನ್ನು ಬಿಡು । ಕೋದದೊಳು ನಡೆಸು ಸಮರವನು ವೀರಾ

**|| ಭಾಮಿನಿ || ಕುರುಕ್ಷೇತ್ರದಲ್ಲಿ | ಶ್ರೀಕೃಷ್ಣ | ಅರ್ಜುನ+ಕೌರವನಿಗೆ||**

ಕಲಿವೀರ ಅರ್ಜುನ ಕುರುಕುಲಾಗ್ರಣೀ । ಕೌರವನೇನೀವೀರರುಲಾಲಿಸೀ । ಒಂದ ಕೋಹಿಣಿ ನಮ್ಮಯ ಮಾರ್ಬಲವೆಲ್ಲಾ ಒಂದೆಡೆ । ನಾನೋರನೇ ಒಂದೆಡೆ ಇಹೆವು । ನಿಮಗಿಷ್ಟಯಾರಿಗೆ ಯಾವುದು । ಬಯಸಿನೀವೆಂದ ವಾಸುಕೀಶಾ ॥



**|| ಭಾಮಿನಿ || ಶಶಿರೇಖಾ ಪರಿಣಯ (ಕನಕಾಂಗಿ ಕಲ್ಯಾಣ) | (ಮಾಯಾಬಜಾರ್) |**

ಇನಿಪರಿಯೊಳು ಬಲಭದ್ರನೂ । ಗಾರ್ಗೇಯರ ನುಡಿಯಂಕೇಳಿ । ತನ್ನಪುರವಂ ಬಣ್ಣ ತಳಿರುತೋರಣಗಳಿಂದಲಂಕರಿಸುತಿದೆ । ಏನಿದಾಶ್ಚರ್ಯ । ಇದೇನಿದು ಚೋದ್ಯವ " ಎನುತ ಸುಬದ್ರೆಯು ಮನ ದೊಳ್ ಅಚ್ಚರಿಗೊಳತಾಪುರದಸಾರಥಿಯೊಡನೆ ಏನೆನುತ್ತಿರ್ದಳೂ

**|| ಅಟ್ಟತಾಳ || ಸುಭದ್ರೆ ಸಾರಥಿಯಲ್ಲಿ||**

1. ಇದೇ ನಿದು ವೈಭವವೊ । ಈ ಪುರದೊಳಿನ್ನೇನು । ಬಹು ಸಂಭ್ರಮವೋ । ಗೋಚರವಿಲ್ಲಾದೆ ಆಶ್ಚರ್ಯತೋರ್ಪುದು ಇಂದೇಕೀ ಸಂಭ್ರಮವೂ । ಅಣ್ಣಾನ ಪುರದೊಳು 11 ಇದೇನಿದು ವೈಭವ ವ ಈಪುರದೊಳಿನ್ನೇನುಬಹುಸಂಭ್ರಮವೂ

2. ಅಣ್ಣಾ ಮಾಡಯ್ಯ ಮದುವೆಯನು । ಅಭಿಮಾನ್ಯುವಿಗೇ ಮಾಡಯ್ಯಾ ಮದುವೆಯನೂ ॥ ಪಾಂಡುವವಂಶದೋಳ್ ಉದಸೀದಬಾಲಗೇ । ಸಡಗರದಿಂದಲೀ । ಜಡಜಾಕ್ಷಿಯಳನಿ । ಮಾಡಯ್ಯಾ ಮದುವೆಯನೂ ಅಣ್ಣಾಯನ್ನಸುತನ ಮಾಡಯ್ಯಾ ಮದುವೆಯನೂ

**|| ಭಾಮಿನಿ | ಮಧ್ಯಮಾವತಿರಾಗ || ಬಲರಾಮನಿಗೆ ಸುಭದ್ರೆ||**

ಬಾಲನೆಲಾಲಿಸು । ಲಲನೆಯ ನುಡಿಯನೂ ಛಲವೇಕೆ ಬಿಡುಬಿಡು । ನೆರೆದಿರುವ ಸಭೆಯೊಳಗೇ । ಕಂದನಿಗೆ । ಸುಂದರಿಯ ಕೊಡುವೆನೆಂದೆನುತಾ ॥ ಮುಂದಾಗಿ ಭಾಷೆಯನಿತ್ತು । ಸತಿನುಡಿಗೆ ಕಿವಿಗೊಟ್ಟು । ಈಗ ಬಿಕ್ಕುವುದುಚಿವೆ । ಅಣ್ಣಾಕರಮುಗಿವೆ । ಸರಿಜನರು ನಗುವುರೂ ಬೇಡೆವೆವು ಯನ್ನಸುತಗೆ ನಿನ್ನ ಸುತೆಯ ನಿತ್ತು ನಡೆಸು ಪರಿಣಾಯವನೂ । ಅಣ್ಣಾ

**ಭಾಮಿನಿ || ಕುರುಕ್ಷೇತ್ರ ಕಥೆ || ಕೌರುವಶಕುನಿಗೆ ||**

ಮಾವಕೇಳೈ ನಾಳೆ ಯುದ್ಧವು । ಯಾವ ಪರಿಯಲಿ ನಡೆಯಬೇಕು 1 ಯೋಚಿಸಿ ಸರ್ವ ಮಾರ್ಭಲವೆಲ್ಲ ಸೇರಲೀ । ರಣರಂಗಕೆ ಎಂದೆನುತ । ಕೌರವನು । ಶಕುನಿಯೊಳು ಪೇಳಿ । ಹರಿಯ ಮೊರೆಗಾಗಿ ದ್ವಾರಕಿಗೆ ಹೊರಟ ಕುರುಕುಲಾಗ್ರಣಿಯೂ

**|| ಸೂರ್ಯಸ್ತೋತ್ರ ||**

ಸ್ವಾಮಿ ದೇವನೆಲೋಕಪಾಲನೆತೇನಮೋ (ಅಟ್ಟತಾಳ) ಸ್ತುನಮೋಸ್ತುತೇ ।

1) ಪ್ರೇಮದಿಂದಲಿ ನೋಡು ನಮ್ಮನು ತೇನಮೋಸ್ತುನಮೋಸುತೆ ॥ ಸ್ವಾಮಿದೇವನೆ ಲೋಕಪಾಲನೆ ತೇನಮೋಸ್ತುನಮೋಸ್ತುನ ಮೋಸ್ತುತೇ ॥

2) ಕಾವರಿಲ್ಲವು ನಿನ್ನ ಬಿಟ್ಟರೆ । ಸೂರ್ಯನೇ ಜಗದೀಶನೇ ॥ ಜೀವರಾಶಿಯು ನಿನ್ನ ಈ ಬೆಳಕಿಂದ ಜೀವಿಸುವಲ್ಲವೇ । ರಾತ್ರಿ ನಿದ್ರೆಯ ಗೈವ ಕಾಲದಿ ।

ನೀನೆನಮ್ಮನು ಕಾಯ್ದಯ್ಯ । ದೇವನೆಂಬುವ ನಾಮಧೇಯವು । ಸತ್ಯವಾಯಿತು ನಿನ್ನೊಳು । ಸ್ತೋತ್ರ ಮಾಡುವರಾಗಿ ನಿನ್ನನು ಜೀವಿಗಳ ಧ್ವನಿಗೈವವೇ । ಚಿತ್ರಭಾನುವೆ । ನಿನ್ನನೋಡಿ ನಿನ್ನವದಲ್ಲಿ ಪೋದುದು ಕತ್ತಲೇ । ಸ್ವಾಮಿ ದೇವನೆಲೋ ಕಪಾಲನೆತೇ ನಮೋಸ್ತುನಮೋಸ್ತುತೇ ॥

**ಬಡುಬಡುಕಿ ಮಧ್ಯಮವತಿರಾಗ**

**॥ ಬೌದ್ಧಾವತಾರ ತ್ರಿಪುರದಾನವರ ಕಥೆ । ಏಕತಾಳ ॥**

ಅಪ್ಪಿಬೇಡುವೆ ತಾಯೆ | ದ್ರೌಪದ ದೇವಿಯೆ | ಅಪ್ಪನಾನುಡಿಗೆ ನೀವ್ | ಕೋಪಿಸಬೇಡಿ | (ಅಟ್ಟತಾಳದಲ್ಲಿ) | ಅಪ್ಪಾನ ನುಡಿಗೆ ನೀವ್ | ಕೋಪಿಸಬೇಡೀ

**ಅಟ್ಟತಾಳ || ಕುಶಲವರ ಕಥೆ | ಸೀತೆ ರಾಮನಿಗೆ**

ಜನಕಾ ಸಂಬವೆ ಸೀತೆ ಕೇಳೇ | ರಮಣೀ ಕೇಳೆ | ಯನ್ನಮನಕೊಂದು ಚಿಂತೆ ಸಂಗ್ರಹಿಸಿದ ವೇಳೆ | ಮಕ್ಕಳಿಲ್ಲದೆ ನಮ್ಮ ಬಾಳು ಬಹುಗೋಳು | ಅರ್ಕವಂಶಕೆ ಇನ್ನೂದಿಕ್ಕಾರೆ ರಮಣೀ | ಜನಕಾ ಸಂಭವೆ ಸೀತೆಕೇಳೆ ರಮಣೀಕೇಳೆ

**ರೂಪಕತಾಳ || ಸತ್ಯಚಿತ್ರಕೇತು ಕಥೆ | ಅಂಗೀರಸರ ಹಾಡು**

**ಆನಂದಭೈರವಿರಾಗ ಆದಿತಾಳ 3ನೇ ಕಾಲಕ್ಕೆ**

ಧಾನಶೀಲ ಸುಜನಪಾಲಾ | ಭೂರಿಭಾಸುರ | ಸ್ವರ್ಣ ಯಾಗಮಾಡಬೇಕ್ಕೈ | ಭೀಷ್ಮದಾಯಕ ದಾನಾ ಶೀಲಾಸು ಜನಪಾಲ | ಭೂರಿಭಾಸುರ ಸ್ವರ್ಣಯಾಗಮಾಡಬೇಕೂ ಭೀಷ್ಮದಾಯಕ | ದಾನಶೀಲಸುಜನಪಾಲಭೂರಿಭಾಸುರ | ಸ್ವರ್ಣ |

**|| ಆದಿತಾಳ || ದಕ್ಷಯಗ್ನ ದಕ್ಷಬ್ರಹ್ಮ | ಬೃಗುರುಷಿಗೆ**

ದಾರಮಾತಕೇಳುವೆನಲ್ಲಾ ಮುನಿರಾಯ ಮಾರಹರನ ಕರೆಯೋದಿಲ್ಲ ಯತಿರಾಯ ಮೊದಲ ಭಾಗಹರಿಗೆ ಕೊಡುವೆ ಗುರುರಾಯ ಮುದದಿನಡೆಸೊಯಗ್ನವನ್ನು ಗುರುವಾ (ಗುರುರಾಯ ಯತಿವರನೇ ) ಕೂಚು ಮುನಿರಯಾ ತದಿತೋಜಣ ತದಿತೋಂ ತದಿತೋಂ ತದಿತೈ |

**|| ಅಟ್ಟತಾಳ | ತೋಡಿರಾಗದಲ್ಲೂ ಯಕ್ಷಗಾನ ಆನಂದಭೈರವಿಯಲ್ಲೂ || ಶುದ್ಧ**

**ಯಕ್ಷಗಾನದಲ್ಲಿ**

**ಇಂದ್ರಜಿತು ಕಾಳಗದಲ್ಲಿ | ಶ್ರೀರಾಮ | ಲಕ್ಷ್ಮಣನಿಗೆ | ಆದಿತಾಳ ||**

ಬಲುದಣಿಸಿದೆನಯ್ಯಾ ಬಲವನ್ನೂ ಇಂದಿನಲಿ | ಬಲವಂತ ನೀನಿರಲು | ಖಳನವಧೆಯಾಯ್ತು | ಅನ್ನಾವಜಿವೆಂತು | ತೊರೆದೆಯೋ ನೀತಮ್ಮಾ | ರತಿಯ ಸುಖವನೆಂತು | ತೊರೆದೇಯೋನಿತಮ್ಮಾ

**ಚಾಲು || ರತಿಕಲ್ಯಾಣ ರುಕ್ಕಿಣಿಗೆ ರಾಧೆ | ಆದಿತಾಳ ||**

ತಂಗೀ ನಿನ್ನಯ ಮುಖ ಕಂದಿಹುದೇತಕ್ಕೆ 1 ಇಂದೂಯನ್ನೊಳು ನೀನು | ಚಂದದಿಂತಿಳಿಸೇ || ಅಟ್ಟತಾಳ |

ಇಂದೂಯನ್ನೊಳು ನೀನು ಚಂದದಿಂತಿಳಿಸೇ ||

ಬಾಲಗೋಪಾಲಕುಣಿತಕ್ಕೆ ದಕ್ಷಿಣಾದಿಗೆ

ಬಾಲಗೋಪಾಲಬಾಲ | ಒಂದು ಗತಿ

**| ಆದಿತಾಳ |**

ಬಾಲಾಗೋಪಾಲ ಬಾಲ ‖ ಯಾದಾವಶೀಲಾ ‖ ಬಾಲಾ ಗೋಪಾಲಬಾಲ ವಸುದೇವ ವೈಕುಂಠವನ ಮಾಲಾ । ನಂತರ ಅಟ್ಟತಾಳ ‖ ವಸುದೇವ ವೈಕುಂಠ ವನಮಾಲ । ಹೇ ದೇವಾ ನೀನು ಲಾಲಿಸು ।

**ಚಾಲು || ಆದಿತಾಳ | ಬಬ್ರುವಾಹನ ಕಥೆ | ಚಿತ್ರಾಂಗದೆ**

ಮಗನೆಲಾಲಿಸು ನೀನು । ಮನದೋಳು ಖತಿಗೊಳಬೇಡ 1 ಮಮತೆಯಿಂದಲಿ ಪೇಳ್ವೆ ಕೇಳೆನ್ನಾ ಕಂದಾ । (ಯಕ್ಷಗಾನ ಅಟ್ಟತಾಳದಲ್ಲಿ) ‖ ಮಮತೆಯಿಂದಲಿ ಪೇಳ್ವೆ ಕೇಳೆನ್ನಾ ಕಂದಾ



**ಯಕ್ಷಗಾನ ದಕ್ಷಿಣಾದಿ ಧಾರಿಯಲ್ಲಿ**

**ಆದಿತಾಳ || ರತಿಕಲ್ಯಾಣಕದಲ್ಲಿ ಧರ್ಮರಾಯ**

**ಭೀಮಪಾರ್ಥನಿಗೆ | ಯಕ್ಷಗಾನ | ದಕ್ಷಿಣಾದಿ**

1) ಸಂಹರಿಸಿರಿ ನಿಮ್ಮ ಮಧ್ಯೆ (ತಮ್ಮಗಳಿರಾ ) ಭೀಮಪಾರ್ಥಾ । ನಿಮ್ಮ ಜಗಳ ಬಿಟ್ಟು ಯನ್ನ ತಮ್ಮಗಳಿರಾ

ಅಟ್ಟತಾಳ ‖ ನಿಮ್ಮಾಜಗಳ ಬಿಟ್ಟು ಯನ್ನ ತಮ್ಮಗಳಿರಾ ‖ ಯಕ್ಷಗಾನದಲ್ಲಿ ಬಿಡತಿ) ಮುಕ್ತಾಯ (ದಕ್ಷಿಣಾದಿ ಬಿಡತಿ)

(ದಕ್ಷಿಣಾದಿಯಲ್ಲಿ) ಕೇಳ್ ಪಾರ್ಥ ಕೇಳ್ ಭೀಮ ತರವಲ್ಲ ನಿಮ್ಮಗಿದೂ ತರವೇನೂ ತದಿತೋಂಜಣ ತದಿತೋಂ ತದಿತೋಂ ತದಿತೈ

**ಶುದ್ಧಯಕ್ಷಗಾನದಲ್ಲಿ**

**ದಕ್ಷಿಣಾದಿ ಎರಡೂ ಧಾರಿ**

**|| ಬಬ್ರುವಾಹನ ಕಾಳಗದಲ್ಲಿ | ಆದಿತಾಳ**

ಮಗನೇ ಲಾಲಿಸು ನೀನು । ಮನದಿ ಖತಿಗೊಳಬೇಡ । ಮಮತೆಯಿಂದಲಿ ಪೇಳ್ವೆ ಕೇಳೆನಾಮಗನೇ ॥ ಕೇಳ್ ಮಗನೆ ಬೇಡ ಬೇಡವೊ ತರವಲ್ಲವೋ ಕಂದಮ್ಮ ತದಿತೋಂಜಣ ತದಿತೋಂ ತದಿತೋಂ ತದಿತೈ ॥

**ಆದಿತಾಳ ಚಾಲು ಬಭ್ರುವಾಹನ ಕಾಳಗ ಮಗನಲ್ಲಿ ಚಿತ್ರಾಂಗದೆ**

ಕಂದಾ ಕೇಳ್ ಪಾರ್ಥರು ತೀರ್ಥಯಾತ್ರೆಗೆ ಬಂದು ನಿಂದಾರು ದಿವಸೆನ್ನ ಕೂಡಿದರುಮಗನೇ ॥ ಅಂದಿನಿಂದಲೂ ನಿನ್ನ ಗರ್ಭಸೂಚನೆಯಾಯ್ತು ಇಂತೂ ಉದಿಸಿದೆ ನೀನು ಮಗನಾಗಿ ಕಂದಾ । ಯಕ್ಷಗಾನಕ್ಕೆ ಬಿಡತಿ

**ದಕ್ಷಿಣಾದಿ ಬಭ್ರುವಾಹನ ಕಾಳಗ ದಕ್ಷಿಣಾದಿಯಲ್ಲಿ ಮಗನಿಗೆ ಚಿತ್ರಾಂಗದೆ**

2) ಕಂದಾ ಕೇಳ್ ಪಾರ್ಥರು । ತೀರ್ಥಯಾತ್ರೆಗೆ ಬಂದು ನಿಂದಾರು ದಿವಸೆನ್ನಾ ಕೂಡಿದರು ಮಗನೇ ॥ ಅಂದೀನಿಂದಲೂ ನಿನ್ನ ಗರ್ಭಸೂಚನೆಯಾಯ್ತು ಇಂತೂ ಉದಿಸಿದೆ ನೀನು ಮಗನಾಗಿ ಕಂದಾ (ಬಿಡತಿ) । ಕೇಳ್ ಮಗನೆ ನೀನು ಲಾಲಿಸು । ನಿನ್ನ ಪರಿಯಾನಾ ಪೇಳುವೇ । ತದಿಗಿಣಿತೋಂ ತದಿಗಿಣತೆ ತದಿಗಿಣತಾ

**॥ ಯಕ್ಷಗಾನ ॥**

ಕಂಡೇ ಕನಸಿನಲ್ಲಿ । ಕೆಂಡ ಸಂಪಿಗೆ ಹೂವಾ । ಮುಂಡಯೊಳಗೆ ಮುಡಿದುದನ್ನೂ ಕಂಡೆ ಕಂದಮ್ಮಾ ! ಗಂಡುಗುದುರೆಯನೇರಿ । ದಂಡಧರನಾಲಯಕೇ ಪೋದಂತಕನಸಾನು ಕಂಡೇನು ಕಂದಾ(ಅಟ್ಟತಾಳ) ದಂತಕನಾನಾನು ಕಂಡೇನು ಕಂದಾ ।



**॥ ದಕ್ಷಿಣಾದಿ ॥**

ಕಂಡೇಕನಸಿನಲ್ಲಿ ಕೆಂಡ ಸಂಪಿಗೆ ಹೂವ ಮುಂಡೆಯೊಳಗೆ ಮುಡಿದುದನ್ನು ಕಂಡಕಂದಮ್ಮಾ ಗಂಡು ಗುದುರೆಯನೇರಿ । ಧಂಡಧರನಾಲಯಕೆ । ಪೋದಂತಕನಸನು ಕಂಡೇನು ಕಂದಾ (ಬಿಡತಿ) ಕೇಳ್ ಮಗನೆ ಬೇಡ ಬೇಡವೊತರವಲ್ಲವೋ । ನೀವೋಪುದು ತದಿತೋಜಣ । ತದಿತೋಂ ತದಿತೋಂ । ತದಿತೈ

**ಆನಂದ ಭೈರವಿ ರಾಗ**

**ಅಹಿರಾವಣ ಮಹಿರಾವಣ ಕಥೆ**

**ಯಕ್ಷಗಾನ ದಕ್ಷಿಣಾಧಿ 2 ಧಾರಿ**

**|| ಆದಿತಾಳ + ಅಟ್ಟತಾಳ || ಇಂದ್ರಜಿತುವಿಗೆ ಮಂಡೋದರಿ |**

ಯಕ್ಷಗಾನ ಯಾತಕಿಂತ ಬುದ್ಧಿ ನಿನಗೆ ಕಂದ ಕಂದ ಬಾಲಾ | ಪ್ರೀತಿಯೇನೊ ಪರಲೋಕವು ಕಂದ ಕಂದ || ನೀತಿಯಲ್ಲಾ ಪೋಪುದಿನ್ನೂ ಕಂದಾ ಕಂದಾ ಮಗನೆ ಯನ್ನ ಘಾತಿಸಿ | ಪೋಗ್ಯೆ ಮಗನೆ ಕಂದ ಕಂದಾ (ಅಟ್ಟತಾಳ || ಯನ್ನಾಘಾತಿಸಿನಿಪೋಗ್ಯೆ ಮಗನೆ ಕಂದ ಕಂದಾ || ದಕ್ಷಿಣಾದಿ | ಕೇಳ್ ಮಗನೆ ನೀನು ಲಾಲಿಸು ಬೇಡ ಬೇಡವೊ ತರವಲ್ಲವೊ ತದಿತೋಜಣ ತದಿತೋಂ ತದಿತೋಂ ತದಿತೈ |

**|| ಆದಿತಾಳ || ಕರ್ಣಪರ್ವ | ಕುಂತಿ | ಕರ್ಣನಿಗೆ**

ಯಾತಕೀಪರಿ ಕೋಪ | ಮಾತಲಾಲಿಸು ಮಗನೆ | ಯಾತಕೀ ಪರಿ ಕೋಪ

ಮಾತಾಲಾಸು (ಮಗನೇ) ಸುತನೆ | ಜಾತನಾದುದ ಪೇಳ್ವೆ | ಭೂತಾಳದೊಳಗೇ || ಜಾತನಾದುದ ಪೇಳ್ವೆ ಭೂತಾಳದೊಳಗೇ || (ದಕ್ಷಿಣಾದಿ) ಕೇಳ್ ಮಗನೆ ನೀನು ಲಾಲಿಸು ನಾಪೇಳುವೆ)

**|| ಚಾಲು ಆದಿತಾಳ || ಕುಂತಿ | ಕರ್ಣನಿಗೆ ||**

**| ಯಕ್ಷಗಾನ |**

ಕರವಾ ಮುಗಿಯುವೆ ಮಗನೆ | ಶರಗೊಡ್ಡಿ ಬೇಡುವೆ || ಕರವಾ ಮುಗಿಯುವೆ ಮಗನೆ ಶರಗೊಡ್ಡಿ ಬೇಡುವೆ | ಶರವಂದು ಗುರಿವಂದು ಬಾಶೆಯನು ಕೊಡು ನೀ || ಕೇಳ್ ಮಗನೆ ಕೊಡುಭಾಷೆ ತದಿತೋಜಣ ತದಿತೋಂ | ತದಿತೋಂ | ತದಿತೈ |

**|| ರೂಪಕತಾಳ | ದಕ್ಷಿಣಾದಿ ಆನಂದ ಭೈರವಿರಾಗ ||**

ಧರಣೇಂದ್ರ ವಂದ್ಯ ರಾಜಸುಗುಣ ಭೂರಿಬಾಸುರಾ | ಸ್ವರ್ಣಯಾಗ ಮಾಡಬೇಕು ಭೀಷ್ಮದಾಯಕ | ೩ನೇ ಕಾಲ || ಧರಣೇಂದ್ರವಂದ್ಯ |

**|| ಮುಖಾರಿ ರಾಗ || ದಕ್ಷಿಣಾದಿ ದಾರಿ ||**

**|| ಭಾಮಿನಿ ||**

ಇತ್ತಲಾ ಸತಿದೇವಿ ದಕ್ಷಾಧ್ವರಕೆ ತೆರಳುವ ಮಾರ್ಗದೊಳು । ಎತ್ತೆತ್ತ ನೋಡಿದರೂ । ಮತ್ತೆ ಮತ್ತೆ ಅಪಶಕನುಗಳೆ ಕಾಣುತ್ತಿಹವೂ । ನಂದಿಶಾ । ಅಂತಕಾಂತಕನ ಕರುಣೆ ಎಂತಿಹುದೋ । ಪತಿಯ ಮಾತನು ಮೀರಿದೆನು ಕಂದಾ । ಕಂದಾ ನಂದೀಶ ಮುಂದೇನು ಗತಿಶಿವನೇ ಶಿವನೇ ಶಿವನೇ ॥

**|| ಅಟ್ಟತಾಳ || ಗೌರಿ ನಂದೀಶನಿಗೆ || ದಕ್ಷಯಜ್ಞದಲ್ಲಿ**

ಪತಿಯಾ ಮಾತನು ಮೀರೀ । ಹೀನಾಪ ಶಕುನಗಳ । ಕಾಣಲುನಾ ಬಂದೆನೂ ಕಂದಾ । ಕಂದಾ । ಅಂತಕಾಂತಕನದಯ ಎಂತಿಹುದೊ । ಕಂದಾ ॥ ಮತಿಗೆಟ್ಟು ಪತಿಯ ಮಾತ ಮೀರಿದೆ ನೂ ಕಂದಾಮಗನೆ । ಬಲಗಣ್ಣು ಬಲಬುಜನಿಲ್ಲಾದೆ ಹಾರುವವು ವಲವು ತಿಳಿಯದು ಯನಗೇ ಶಿವನೇ ಶಿವನೆ ಶಿವ ಶಿವನೇ ॥

**ಅಟ್ಟತಾಳ || ಸೀತಾಪರಿತ್ಯಾಗ | ಸೀತೆ ಲಕ್ಷ್ಮಣನಿಗೆ |**

ಧೀರಾಲಕ್ಷ್ಮಣನೊಡ್ಯೆದಾರಿಯೋಳುತ್ಪಾತ ಕೋರುತಲಿದೆಯಮಗೆ । ಭಾರಿ ಸರ್ಪವು ಎಮಗೆ । ಕಂದಾ ದಾರಿಯೋಳ್ ಅಡ್ಡಾಯ್ತು 1 ಗೂಗೆಕಾಗೆಗಳು ಆರ್ಭಟಿಸುತ್ತಿಹವೂ ಮೈದುನನೇ ॥ ಲಕ್ಷ್ಮಣನೇ ॥

**॥ ಅಟ್ಟತಾಳ || ದೇವಿಮಹಾತ್ಮ್ | ದೇವಿ ಹರಿಬ್ರಹ್ಮಾದಿಗಳು॥**

ತಾಯೇ ನಿಮ್ಮಯ ಸತ್ವಸಾಹಾಸದಿಂದಲಿ । ಅಜರುದ್ರರಿರುತಿರ್ಪವೂ । ಮಾಯೇಯಂದದಿ ತೋರ್ಪದುಷ್ಟನಿಗ್ರಹದೊಳು ದೇವಿಕಾಯ್ದುದು ನಮ್ಮನೂ ತಾಯೆ! ಅಮ್ಮಯ್ಯಾ ಜಗಜ್ಜನನೀ ॥

**|| ಅಟ್ಟತಾಳ || ಕುರುಕ್ಷೇತ್ರ | ಕುಂತೀ ||**

ಮಿಂಚಿದಾ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲಾ । ಅಂತರಂಗದೊಳಿದನೂ ಕಂತುಪಿತನ । ದಯದಿಂತೂ ಸೇರಿದೆವಿಲ್ಲ ! ಬ್ರಾಂತು ಬಿಡುನೀ ಕಂದನೇ ಕಂದಾಕರ್ಣಾ ಮಗನೇ ಮಗನೇ ।

**|| ರಕ್ತಬೀಜಾಸುರನ ಕಥೆ || ತಾಯಿ ನಿಕಶಾದೇವಿ ||**

1) ತರವೇನೋತರಳಾನೇ | ದುರುಳಾರ ತೆರದೊಳು | ಈ ಪರಿಯೋಚನೆಯೂ ರೂಡಿಯೊಳಗೆ ನೀನೂ ನಾಡಾಪಾಲಿಪಹರಿಯ | ಕೂಡೆ ವೈರವು ಬೇಡವೋ ಕಂದಾ ಬೇಡ ಬೇಡವೊ

2) ಕಂಡೇ ಕನಸಿನೋಳು | ಕೆಂಡ ಸಂಪಿಗೆ ಹೂವಾ | ಮಂಡೆಯೋಳ್ ಮುಡಿದುದನೂ ಕಂಡೆ ಕಂದಮ್ಮಾ || ಗಂಡು ಗುದುರೆಯನೇರಿ | ಧಂಡಧರನಾಲಯಕೇ | ಪೋದಂತ ಕನಾಸಾನು ಕಂಡೇನು ಮಗನೇ (ಅಟ್ಟತಾಳ)



|| ಗಂಡುಗುದುರೆಯನೇರಿದಂಡಧರನಾಲಯಕೆ ಹೋದಂತ ಕನಸಾನು ಕಂಡೇನುಕಂದಾ ||

**|| ಅಟ್ಟತಾಳ || ಕುರುಕ್ಷೇತ್ರ || ಕುಂತಿ ಕರ್ಣನಿಗೆ |**

2) ಮಗನೇ ಲಾಲಿಸು ನೀನು | ಮಗನೆ ಬಾರೆ ಈಗ ಮನೆಯೋಳು ಸುಖವಾಗಿ ಇರುವನಾಗ್ಯೆ | ಮಗನೇ ಅನುಜಾದಿಗಳ ಸೇರಿ / ಅನುವಿಂದ ನೀವೆಲ್ಲಾ | ತನುವಾಗಿ ರಾಜ್ಯವ | ಬಲದಿಂಪಾಲಿಸಿರಿ | ಮಗನೇ ಕರ್ಣ

**|| ಅಟ್ಟತಾಳ || ಕುಂತಿ ಕರ್ಣನಿಗೆ ||**

3) ಪಂಥವೇ ಪಾಂಡುವರೋಳ್ | ಕಂತು ಸಮರೂಪಾನೆ | ಇಂಥ ಛಲವೇತಕೋ। ಕುಂತಿಸುತ ನಿನ್ನ ಅನುಜಾದಿಗಳ ಸೇರಿ ಸಂತಾಸದಿಂದಲಿ | ರಾಜ್ಯಭಾರದೊಳ್ ಕಂದಾ ಕಂದಾ ಕಂದಾ ಕರ್ಣಾ ಮಗನೇ

**ಅಟ್ಟತಾಳ || ಸತ್ಯಚಿತ್ರಕೇತು ಕಥೆ | ಚಾರುಮತಿ ಮಗ ಚಿತ್ರಾಂಗ**

**ಮಡಿದಿರುವಸಮಯದಲ್ಲಿ |**

ಅಪ್ಪಾ ಮಗನೆ ನಿನ್ನಾ | ಸರ್ಪಾವು ಕಡಿದಾಗ | ಅಮ್ಮಾ ಅಮ್ಮಾ ಎಂದಳುತಿರ್ದೆಯಾ ಕಂದಾ | ಮಗನೇ ಪಿತಮೋರೆ ಇಲ್ಲವಾಯ್ತು ಪತಿ ಎತ್ತ ಹೋದರೋ ! ಅತಿಕಷ್ಟಬಂತೆನಗೆ ಸುತನೇ ಈಗೊಂಡಾರಣ್ಯದೊಳ್ ||

**ಅಟ್ಟತಾಳ | ಶನಿಮಹಾತ್ಮ | ವಿಕ್ರಮ ಶೆಟ್ಟಿ ಮನೆಯಲ್ಲಿ**

ಯಾರಿವಳು ಕರುಣಿಯು ಮಗ್ಗುಲೊಳು ಮಲಗಿಹ | ಪರಿಯೇನೊ ಶನಿನಿನ್ನಾ ಮಾಯಾವು ಎನಗೇ | ಯಾರ ಸೇರಿದರಿನ್ನೂ ಪ್ರಾರಾಯ್ದಾ ಬಿಡದಿನ್ನೂ | ಗತಿಯ ಕಾಣೆನು | ದೇವಾ | ದೇವಾ ದೇವಾ ||

**ಭೈರವಿ ರಾಗದಲ್ಲಿ**

**ದಕ್ಷಿಣಾದಿಧಾರಿ**

**|| ಭಾಮಿನಿ || ಸತ್ಯಚಿತ್ರಕೇತು ಕಥೆ ||**

ಹತ್ತೊಂದು ದಿನದೊಳಗೆ ಕೂಸಿಗೆ | ಹೆತ್ತವಳಿಗೇ || ಮುತ್ತೈದೆಯರು | ಬಿಸಿನೀರೆರೆದು | ಪೃಥ್ವಿಪಾಲನಸುತಗೆ | ಭೂಸುರರು ಚಿತ್ರಾಂಗದನೆಂಬ | ಹೆಸರಿಟ್ಟು | ಸತ್ವರೂ ತೆರಳಲೂ || ಇತ್ತ ಚಾರುಮತಿಯು ಸುತನೊಡನೆ | ಸುಖನಿದ್ರೆಯೊಳು ಮಲಗಿರಲು ಘೋರಸ್ವಪ್ನವಂ ಕಂಡು | ಹೆದರುತ್ತ ಚೀರುತ್ತ ಕೂಗುತ್ತ ಪತಿಯೊಡನೆ ಏನೆನುತ್ತಿರ್ದ ಚಾರುಮತಿಯೂ

**|| ಅಟ್ಟತಾಳ || ಚಾರುಮತಿ | ಗಂಡ | ಚಿತ್ರಕೇತುವಿನಲ್ಲಿ||**

1) ಕನಸಾನ ಕಂಡೇ | ಮನಿಸಿಜಾರೂಪಾ || ಕನಸನಾ ಕಂಡೇ || ಕನಸನು ಕಂಡೆನು ಮನದೋಳು ನೊಂದೇನು || ಕನಸಾನ ಕಂಡೇನು ಮನದೊಳು ನೊಂದೇ | ಮನಸಿಜ ರೂಪಕನಸಾನ ಕಂಡೇ ||

2) ಬಾಲಾನು ಮಲಗಿರೆ | ವ್ಯಾಳಾನುತಾ ಬಂದು ಬಾಲಾನಕಾಲನು ಕಚ್ಚಿದ ತೆರನಾಯ್ತು | ಕನಸಾನ ಕಂಡೇ ಮನಸಿಜ ರೂಪ || ಕನಸಾನಾ ಕಂಡೇ ||

**ರೂಪಕತಾಳ || ಭಜನೆ ಪದ ||**

3) ನಡುನೀರೊಳು ಕೈಯಾ ಬಿಡುವರೇ | ಕಡೆಗಾಯಿಸೊ ಹೇ ಮುರಾರೇ || ನಡುನೀರೊಳು ಕೈಯ ಬಿಡುವರೇ | ತಡವೇತಕೊ ಕಂಸಾರೆ | ಓಡಿಬಾರೋ ಶೌರೇ | ನಡುನೀರೊಳು ಕೈಯ್ಯಾ ಬಿಡುವರೇ ||

2) ಸಾಗರಾದೊಳೀ ಸಂಸಾರ | ಕಡಲಿನೊಳಗೆ ನೂಕಿದೂರ | ನೋಡಿ ನಗುವ ವ್ಯಾಪಾರ | ಓಡಿಬಾರೋ ರಘುವೀರ | ನಡುನೀರೊಳು ಕೈಯಾ ಬಿಡುವರೇ ಕಡೆಗಾಯಿಸೊಹೇ ಮುರಾರಿ | ನಡುನೀರೊಳು ಕೈಯಾ ಬಿಡುವರೆ | ತಡವೇತಕೊಕಂ ಸಾರಿ | ಓಡಿಬಾರೊ ಶೌರಿ | ನಡುನೀರೊಳು ಕೈಯಾ ಬಿಡುವರೇ ॥

3) ಯಾರಿಗೆ ಮೊರೆ ಇಡಲೊ ಶ್ರೀಹರಿ | ಕೊರಗಿಸಾಬಹುದೇನೋ ಈಪರಿ || ಕರಿಣಿಸೊ ನಿನ್ನ ಪಾದತೋರಿ ಶಂಕುಚಕ್ರಗಧಾದಾರಿ || ನಡುನೀರೊಳು ಕೈಯಾ

ಬಿಡುವರೇ | ಕಡೆಗಾಯಿಸೊ ಹೇಮುರಾರಿ || ನಡುನೀರೊಳು ಕೈಯಾ ಬಿಡುವರೇ||

4) ಕರಿದ್ರುವಾಪ್ರಹ್ಲಾದನಾರದ | ಪರಮಭಕ್ತರ ಭೀಷ್ಟಫಲದ ತರುಣೀ ಅಹಲ್ಯ ಶಾಪಶಮನ | ಓಡಿ ಬಾರೊ ಗೋವಿಂದ | ನಡುನೀರೊಳು | ಕೈಯ್ಯಾ ಬಿಡುವರೇ ಕಡೆಗಾಯಿಸೊ ಹೇಮುರಾರಿ || ನಡುನೀರೊಳು ಕೈಯಾ ಬಿಡುವರೇ ಪರರ ನೀಗ ಬೇಡಲಾರೆ || ಪರರ ನೀಗ ಬೇಡಲಾರೆ ||

5) ಪರರ ಸ್ತುತಿಯ ಮಾಡಲಾರೆ । ಪರರ ಮಾತ ಕೇಳಲಾರೆ || ನಡುನೀರೊಳು ಕೈಯ್ಯಾ ಬಿಡುವರೇ ಕಡೆಗಾಯಿಸೊ ಹೇಮುರಾರೆ || ನಡುನೀರೊಳು ಕೈಯಾ ಬಿಡುವರೇ || ಪರರ ಹಿಂದೆ ಓಡಲಾರೆ | ಪರರಿಗೇ ನಾನಮಿಸಲಾರೆ | ಪರಮ ಮಂಗಳ ಮೂರ್ತಿ ನೀನಿರೆ |

6) ಪರರ ಬೇಡುವಂತೇ ಮಾಳ್ವರೇ || ನಡುನೀರೊಳು ಕೈಯಾ ಬಿಡುವರೇ | ಕಡೆಗಾಯಿಸೊ ಹೇಮುರಾರೆ | ತಡವೇತಕೊಕಂಸಾರ ಓಡಿಬಾರೋ ಶೌರಿ | ನಡುನೀರೋ

7) ಅಡಿಗಡಿಗಾಧಾರವಿಲ್ಲ | ಪಿಡಿಯಲೆನಗೆ | ತೃಣವು ಇಲ್ಲ ! ನೋಡಿ ನಗುವ ಸಮಯವಲ್ಲ ಓಡಿಬಾರೊ ಗೋಪಾಲ | ನಡುನೀರೊಳು ಕೈಯಾ ಬಿಡುವರೇ। ಕಡೆಗಾಯಿಸೋಹೇ ಮುರಾರೆ | ನಡುನೀರೊಳು ಕೈಯ್ಯಾ ಬಿಡುವರೇ

8) ವಿಶಯದಾಸೆ ತೀರಲಿಲ್ಲ | ವಿಶಯಕೆ ಮನಸೋತೆನಲ್ಲ | ವಿಶಯವಾನೀ ಬಲ್ಲೆಯಲ್ಲಾ ಪ್ರಾಣೇಶ ವಿಠಲನೇ ನಡುನೀರೊಳು ಕೈಯ್ಯಾ ಬಿಡುವರೇ | ಕಡೆಗಾಯಿಸೊ ಹೇಮುರಾರಿ | ನಡುನೀರೊಳು ಕೈಯಾ ಬಿಡುವರೇ

9) ವಿಶವ ಮನದೊಳಗಿಡದೆ | ಪೋಶಿಸ್ಸೈ ಗಿರೀಶ ನೀನೆ | ನಿನ್ನ ನಂಬಿದೆ ಶ್ರೀನಿವಾಸ | ದಯದಿಪೊರೆಯೊ ಶೇಷಾಶಯನನೇ | ನಡುನೀರೊಳು ಕೈಯ್ಯಾ ಬಿಡುವರೇ | ಕಡೆಗಾಯಿಸೊ ಹೇಮುರಾರೆ | ತಡವೇತಕೊ ಕಂಸಾರ | ಓಡಿಬಾರೊ ಶೌರೇ || ನಡುನೀರೊಳು ಕೈಯ್ಯಾ ಬಿಡುವರೇ ||

**ಅಟ್ಟತಾಳ || ಭಜನೆ ಪದ |**

1) ಹಿಗ್ಗುವೆಯಾಕೋ | ಈ ದೇಹಕ್ಕೆ | ತಗ್ಗುವೆಯಾಕೊ | ಹಿಗ್ಗುವೆ ತಗ್ಗುವೆ | ಮಗ್ಗುವೆ ಮರುಗುವೆ || ಅಗ್ನಿಯೊಳಗೆ ಬಿದ್ದು | ದಗ್ಧವಾಗುವ ದೇಹಕ್ಕೆ ಹಿಗ್ಗುವೆಯಾ || ಹಿಗ್ಗುವೆ ತಗ್ಗುವೆಮಗ್ಗುವೆ ಮರುಗುವೇ ! ಹಿಗ್ಗುವೆಯಾಕೋ ಈ ದೇಹಕ್ಕೆ

2) ಸತಿಪತಿಗಳು ಕೂಡಿ | ರತಿಕ್ರೀಡೆಗಳ ಮಾಡಿಪಥನಾವಾದಿಂದ್ರೀಯ / ಪ್ರಥುಮೆಯ ದೇಹಕ್ಕೆ ಹಿಗ್ಗುವೆಯಾಕೋ | ಈ ದೇಹಕ್ಕೆ ಹಿಗ್ಗುವೆಯಕೋ

3) ಪರರ ಸೇವೆಯ ಮಾಡಿ | ನರಕ ಬಾ ಜನನಾಗಿ | ಮರಳಿ ಮರಳಿ ಬಿದ್ದು | ಉರುಳುವ ದೇಹಕ್ಕೆ ಹಿಗ್ಗುವೆಯಾಕೋ ಈ ದೇಹಕ್ಕೆ | ಹಿಗ್ಗುವೆಯಾಕೋ ಹಿಗ್ಗುವೆತಗ್ಗುವೆ ಮಗ್ಗವೆ ಮರುಗುವೆ | ಅಗ್ನಿಯೊಳಗೆ ಬಿದ್ದು ದಗ್ಧವಾಗುವ ದೇಹಕೆ | ಹಿಗ್ಗುವೆಯಾಕೋ | ಈ ದೇಹಕ್ಕೆ ತಗ್ಗುವೆಯಾಕೋ ||



4) ಆಗಬೋಗಗಳನ್ನು ಆಗುಮಾಡುತಲಿದ್ದೇ ರೋಗ ಬಂದರೆ ಬಿದ್ದೂ ಹೋಗುವ ದೇಹಕ್ಕೆ ಹಿಗ್ಗುವೆಯಾಕೋ ಈ ದೇಹಕ್ಕೆ ತಗ್ಗುವೆಯಾಕೋ ಹಿಗ್ಗುವ ತಗ್ಗುವೆ ಮಗ್ಗುವೇ ಮರುಗುವೆ ಹಿಗ್ಗುವೆಯಾಕೋ

5) ಸೋರುವದೊಂಬತ್ತು ದ್ವಾರದಿಂದಲಿ ಮಲನೀರಿಲ್ಲಾದಿದ್ದಾರೆ | ನಾರೂವ ದೇಹಕ್ಕೆ ಹಿಗ್ಗುವೆಯಾಕೋ | ಈ ದೇಹಕ್ಕೆ (ಹಿಗ್ಗುವೆಯಾಕೊ) ತಗ್ಗುವೆ ಯಾಕೋ | ಈ ದೇಹಕ್ಕೆ ಹಿಗ್ಗುವೆ ತಗ್ಗವ ಮಗ್ಗುವೆ ಮರುಗುವೇ | ಅಗ್ನಿಯೊಳಗೆ ಬಿದ್ದು ದಗ್ಧವಾಗುವ ದೇಹಕೆ | ಹಿಗ್ಗುವೆಯಾಕೋ ||

6) ಪುರಂದರ ವಿಠಲನ | ಚರಣ ಕಮಲಕ್ಕೆ ಎರಗಾದೆ ಇರುತಿಹ ಗರ್ವಾದ ದೇಹಕ್ಕೆ | ಹಿಗ್ಗುವೆಯಾಕೋ | ಈ ದೇಹಕ್ಕೆ ತಗ್ಗುವೆಯಾಕೋ | ಹಿಗ್ಗುವ ತಗ್ಗುವೆ ಮಗ್ಗವೆ ಮರುಗುವೆ | ಅಗ್ನಿಯೊಳಗೆ ಬಿದ್ದು ದಗ್ಧವಾಗುವ ದೇಹಕೆ ಹಿಗ್ಗುವೆ ಯಾಕೋ ಈ ದೇಹಕ್ಕೆ ತಗ್ಗುವೆಯಾಕೋ ಹಿಗ್ಗುವೆ ತಗ್ಗುವೆ ಹಿಗ್ಗುವೆ ಮಗ್ಗುವೆ ಮರುಗುವೆ ಅಗ್ನಿಯೊಳಗೆ ಬಿದ್ದು | ದಗ್ಧವಾಗವ ದೇಹಕೆ

**1 ಬೈರವಿರಾಗ || ಕಂದ | ದೇವಿ ಮಹಾತ್ಮ | ಚತುರ್ಮುಖ ಬ್ರಹ್ಮನ**

ಪರಮ ಸತಿಪರಶಕ್ತಿ | ಪರಮ ಗುಣಸಾವಿತ್ರಿ | ಮಾಯಾತರುಣಿ | ಮಂಗಳಗೌರಿ! ಸಕಲಚೈತನ್ಯ ಬಿಂದುವಿಳಾಸಿನಿ | ವಿಕ್ಟೋದ್ಧಾರಿ | ಎಂದೆನುತ ವಾರಿಜೋದ್ಭವನು | ಸ್ತುತಿಗೈದಾ |

**|| ಅಟ್ಟತಾಳ || ಸತ್ಯಚಿತ್ರಕೇತು ಕಥೆ | ಸುಮತಿ ತಂದೆ ಅಂಗೀರಸರಿಗೆ |**

ಬೇಡಮ್ಮ ಕೂಸೇ | ಮಾಡುವಮೋಸಾ | ಬೇಡಮ್ಮ ಕೂಸೇ ಮಾಡುವಾಮೋಸಾ॥ ನಡೆಸಾಲು ಕೃತುಮವಪಡುವನು ಕಷ್ಟಾವ | ಅದರಿಂದ ಪೊಡವಿಪ | ಬಹುಕಷ್ಟ ಪಡುವನು || ಬೇಡಮ್ಮಾ ಕೂಸೇ | ಮಾಡುವಾ ಮೋಸಾ |

**| ಅಟ್ಟತಾಳ || ಶನಿಮಹಾತ್ಮ ಕಥೆ | ಲಕ್ಷ್ಮೀದೇವಿ | ಗಾಣಿಗಶೆಟ್ಟಿಗೆ |**

ಭಾವಯ್ಯ ಕೇಳೀ ಈ ದೊರೆಯ ವಿಶಯ | ಭಾವಯ್ಯ ಕೇಳೀ | ಇವರು ಉಜ್ಜೈನಿಪುರವನ್ನು ಅಳ್ವವಿಕ್ರಮರಿವರು | ವಿಧಿವಶದಿ ಈ ರೀತಿಯಾಗಿದೇ | ಇವರಿಗೆ ಭಾವಯ್ಯ ಕೇಳೀ | ಈ ದೊರೆಯ ವಿಶಯ | ಈ ದೊರೆಯಾ ವಿಶಯಾ | ಬಾವಯ್ಯಾ ಕೇಳೀ

**|| ರೂಪಕತಾಳ || ಚಿತ್ರಕೇತು ಕಥೆ | ಚಾರುಮತಿ ||**

ಮಗನೆ ಪ್ರಾಣವ ನೀಗಿದಾ | ಅಗಲಿ ದುಃಖವ ತೋರಿದಾ || ಮಗನೆ ಪ್ರಾಣವನೀಗಿದಾ | ಮಗುವೆ ಎಣ್ಣೆ ನೀರಿನರುಣವು ತೀರಿತೆ (ನಿನ್ನ ಪ್ರಾಣವು ಮೊದಲೆ ಹಾರಿಕೆ) ಬೇಗ ಪ್ರಾಣವು ಹಾರಿಹೋಯಿತೇಮಗನೆ ಪ್ರಾಣವ ನೀಗಿದಾ |



**|| ಆದಿತಾಳ || ದೇವಿಮಹಾತ್ಮ | ಶ್ರೀಹರಿಗೆ ಲಕ್ಷ್ಮೀ**

ನ್ಯಾಯವೇನೋ ದೇವ ದೇವ | ತೋಯಜಾಮಾಧವಾ || ರಾಯಕೇಳೊಯನ್ನಾವಾಕ್ಯ || ಕಾಯಬೇಕೊ ಕೇಶವ | ನ್ಯಾಯವೇನೊ ದೇವ ದೇವಾ||

**|| ಸತ್ಯಚಿತ್ರಕೇತು ಕಥೆ | ಚಂದ್ರಮಾಲಿನಿ**

**|| ರೂಪಕತಾಳ |**

ಆರೊಕಾಣೆ ಮಧನ ರೂಪ | ಮಾರಾಸಮಾರೂಪ ಭೂಪ || ಪೂರ್ಣಕಾಂತಿಯ ಚಂದ್ರನಂತೆ | ತೋರನೀತಮಾರರೂಪ ಆರೊಕಾಣೆ ಮಧನರೂಪಾ || 3ನೇ ಕಾಲಕ್ಕೆ + ಆದಿಕಾಲ + ಯಕ್ಷಗಾನ ಅಟ್ಟತಾಳ

**| ಅಟ್ಟತಾಳ || ದಕ್ಷಯಜ್ಞದಲ್ಲಿ ಶಿವನಲ್ಲಿ ದಾಕ್ಷಾಯಿಣಿ |**

ತ್ರಿನಯನೆ (ತ್ರಿನೇತ್ರನೆ) ಪೋಗುವೆ 1 ಈಗಲೆ | ಪೋಗುವೆ | ಬೇಗದಿ ಪೋಗುವೆ ಜನಕನ ಯಾಗಕೆ | ತ್ರಿನಯನೆ ಹೋಗುವೇ || ಶಂಕರಾ |

**|| ಭೈರವಿ ರಾಗ || ತ್ರಿಪುರ ಸಂಹಾರದ ಕಥೆ | ನಾರದ | ಶ್ರೀಹರಿಯಲ್ಲಿ |**

**|| ಅಟ್ಟತಾಳ ||**

ಬೇಡುವೆ ವರವಾ | ಪಾಲಿಸು ದೇವಾ ಪಾಲಿಸು ದೇವಾ ಬೇಡುವೆ ವರವಾ ಖಳಾತ್ರಿಪುರಾಸುರರು | ಕಾಳಗದೋಳ್ ಸುರರ | ಬಾಳೂಗೆಡಿಸಿತಾವೂ | ಮೀರಿ ನಡೆಯುತಲಿಹರು | ದೇವಾ ಬೇಡುವೆ ವರವಾ | ಪಾಲಿಸು ದೇವಾ |

**॥ ಬ್ರಹ್ಮ ಶ್ರೀಹರಿಯಲ್ಲಿ ||**

2) ಎಂಥಾ ಅಪ್ಪಣೆ ಮಾಡಿದೆ | ಕಂತು ಪಿತನೆ ನೀ ಎಂಥಾ ಅಪ್ಪಣೆ ಮಾಡಿದೆ | ನಿಂತೂ ಅಧೈತ್ಯರ – ಪಂಥದಿಂಕೊಲ್ಲದಿರೆ | ಎಂತು ಬಾಳುವುದು ಹೇಗೇ | ಕಂತೂಪಿತನೆ ಎಂತೂ ಬಾಳುವುದು ಹೇಗೆ |



**ಜಂಜ್ಯೂಟಿ ರಾಗದಲ್ಲಿ**

**॥ನಾಟಕದ ಹಾಡು ರಾಮಾಯಣ ||**

**|| ಅಟ್ಟತಾಳ ||**

ಎಲ್ಲಿ ನೋಡಲು ಶೋಬಿಪು | ಅಲ್ಲಲ್ಲಿಗಾ | ಎಲ್ಲಿ ನೋಡಲು ಶೋಬಿಪು ॥ ಮಲ್ಲೆಮಲ್ಲಿಗೆ ಜಾಜಿ ಕೆಂಪುಗುಲಾಬಿಯು ಪುಲ್ಲಾಪಷ್ಪವಚೆಲ್ಲರೊ | ಅಲ್ಲಲಿಗಾ | ಎಲ್ಲಿ ನೋಡಲು ಶೋಬಿಗೂ

**॥ ರೂಪಕತಾಳ || ರಾಮಾಯಣ || ರಾಮ || ತಂದೆಗೆ ॥**

ತಂದೆಯೇ ತಮಪಾದಕ್ಕೀಗ ವಂದಿಸೂವೇನು | ತಂದೆಯೇ ತಂದೆಯೇ | ಇಂದು ಯನ್ನನು ಕರೆಸೀದಾಪರಿ | ಇಂದೂ ಯನ್ನನು ಕರೆಸಿದಾಪರಿ | ಚಂದದಿಂದರು ಹೈತಂದೆಯೇ ತಮಪಾದಕ್ಕೀಗ ವಂದಿಸೂವೆನೂ ಕರೆಸಿದ ಪರಿಯನು ಭರದೊಳರಹುವರೆವೆನಾ ನೀಗಾ | ತಂದೆಯೇ ತಮಪಾದಕ್ಕೀಗ ವಂದಿಸೂವೇನೂ

ತಂದೆಯೇ ತಂದೆಯೇ

**॥ ರೂಪಕ | ಗಣಪತಿ ಸ್ತೋತ್ರಕ್ಕೆ ||**

1) ಅಟ್ಟಹಾಸದಿ ಮೊಟ್ಟಮೊದಲು ಮುಟ್ಟೆ ಪೋಜುವೆ | ಸೃಷ್ಟಿಫಧಿಕ ಇಳೆಪುರೀಯ ಶ್ರೇಷ್ಟ ಗಣಪನೇ || 3ನೇ ಕಾಲಕ್ಕೂ ಹೇಳಬಹುದು

2) ಜಯಜಯ ಗಣನಾಥ ದುರಿತ ಭಯನಿವಾರಣ || ಜಯವಿಸುಮಮ | ಜಗದೊಡಯನೆ | ಜಗದಪಾಲಕ || 3ನೇ ಕಾಲಕ್ಕೂ |

3) ಕರಿಯ ಮುಕ್ಕನೆ ಪಾಶ್ವತಿಗೆ ಪರಮಪುತ್ರನೇ ವರನ ಕೊಡುವ | ವರದ ದೇವನೆ | ವರವ ಪಾಲಿಸೊ | ಕರಿಯಮುಖನೆ ಪಾರ್ವತಿಗೆ ಪರಮಪುತ್ರನೆ || 3 ಕಾಲ

4) ಗಿರಿಜಸುತನ ವರದನುತನೇ | ಗುರುವೆ ಮಂಗಳ ವರವ ಕೊಡುವ ವರದ ದೇವನೆ | ಧರೆಗೆ ಮಂಗಳ | 3 ಕಾಲ

5) ವಿದ್ಯಕೆಲ್ಲಾ ಅಧಿಕ ಗುರುಪ್ರಸಿದ್ಧ ದೇವನೇ ವಿದ್ಯಗಳನು ಕರುಣಿಸಮಗೆ | ಸಿದ್ಧಿವಿನಾಯಕನೇ || ಗಿರಿಜ ಸುತನೆ ವರದನುತನೆ | ಗುರುವೆ ಮಂಗಳಾ ॥



**|| ರೂಪಕತಾಳ || ಕರಿಭಂಟನ ಕಥೆ | ಕರಿಭಂಟ ತಾಯಿ ಬನವಂತೆಗೆ ||**

ಕರಗಳೆತ್ತಿ ಕೈಯ್ಯಾ ಮುಗಿವೆ | ಶರಣುತಾಯಮ್ಮಾ || ಹರಸಿ ಕಳೂಹು ಬೆದರಬೇಡು ಹರಸಿ ಕಳುಹು ಬೆದರಬೇಡ |ಸರಸದಿಂದಲಿ || 3ನೇ ಕಾಲಕ್ಕೆ || ಹರಸಿ ಕಳುಹು ಬೆದರಬೇಡ / ಶರಣತಾಯಮ್ಮಾ || (ಯಕ್ಷಗಾನಕ್ಕೆ ಅಟ್ಟತಾಳ ದಕ್ಷಿಣಾದಿಗೆ)

**|| ಅಟ್ಟತಾಳ ಸತ್ತಚಿತ್ರಕೇತು ಕಥೆ | ಸುಮತಿ ಚಾರುಮತಿ**

ದುರಳಳೆ ಛೇ ಚೀ ಸರಿಮಾತುಗಳೂ ಏಕೆ || ದುರಳಳೇ ಛೇಛೀ ॥ 2ನೇ ಕಾಲ ದುರುಳಳೆ ಛೀ ಛೀ ಸರಿಮಾತುಗಳೂ ಏಕೆ ||

**|| ಆದಿತಾಳ || ಚಾರುಮತಿ ಪುತ್ರ ಚಿತ್ರಾಂಗದನಿಗೆ**

ಕಂದ ಬಾರೆಲೋ ಮುದ್ದೂ ಸುಂದರಾಂಗನೇ ಬಾರೋ | ಕಂದ ಬಾರೆಲೋ ಮುದ್ದೂ ಸುಂದರಾಂಗನೇ ಬಾರೋ ॥

ತಂದೆಯನ್ನು ಕಾಣದೆ ತಂದೆಯನ್ನೂ ಕಾಣದೇ | ಮಂದಭಾಗ್ಯನಾದೆಯಾ | ಕಂದ ಬಾರೆಲೋ ಮುದ್ದೂ ಸುಂದರಾಂಗನೇ ಬಾರೋ |

**|| ದಕ್ಷಿಣಾದಿ ಮತ್ತು ಯಕ್ಷಗಾನಕ್ಕೂ ||**

**|| ರೂಪಕತಾಳ ||**

ಎತ್ತಪೋದೋ ಎನ್ನ ಕಂದ ಉತ್ತು ಮಾಮಣಿ | ಕತ್ತನೆತ್ತೂ ಮುಖವ ತೋರೊ ರತ್ನದಾಮಣಿ | ಯಕ್ಷಗಾನಕ್ಕೆ ಅಟ್ಟತಾಳ || ಎತ್ತಾ ಹೋದೊಯನ್ನಾ ಕಂದಾ ಉತ್ತುಮಾಮಣಿ ಇತ್ತಾಬಾ ರೊಮುಖವಾತೋರೊ | ರತ್ನದಾಮಣೀ ||

ದಕ್ಷಿಣಾದಿಗೆ || 3ನೇ ಕಾಲ | ಎತ್ತಪೇದೋ ಎನ್ನ ಕಂದ ಉತ್ತಮಾಮಣಿ ಇತ್ತ ಬಾರೊ ಮುಖವ ತೋರೊ ರತ್ನದಾಮಣಿ || ಕೇಳ್ ಮಗನೇ ನೀನು ಲಾಲಿನೋಯನ್ನೊಚನೆ | ತದಿತೋಂ ತದಿತೋಂ ತದಿತೋಂ ತದಿತ್ತೈ ||

**|| ರೂಪಕ ತಾಳ ಚಿತ್ರಕೇತು ಕಥೆ ಸುಮತಿ ||**

ನೀರಿಗಿಂಥಾ ಲಘುವು ನಾನು || ಲಘುವು ನಾನು || ಪ್ರೀತಿ ತೋರದೆ | ಯನ್ನೋಳ್ | ಸಾತಿಶಯದ ಪ್ರೀತಿಯೇನೊ ಮಾತಿನೊಳಿದೂ ನೀರಿಗಿಂಥಾಲಘುವು ನಾನು || ಲಘುವು ನಾನು || ಪ್ರೀತಿ ತೋರದೆ

**|| ಕಾನಡರಾಗ | ಇಂದ್ರಜಿಸು ಕಥೆ | ರಾಮಸೀತಯನ್ನು ನೆನೆದು ||**

**ಆದಿತಾಳದಿಂದ**

ಜನಕಾತ್ಮಜೇ ಜಾಣೇ ಯರರಸೀ ಮುನಿಸ್ಯಾತಕೇ ಮಾತನಾಡೇ | (ಅಟ್ಟತಾಳ) ಮುನಿಸ್ಯಾತಕೇ ಮಾತನಾಡೇ | (ಅಟ್ಟತಾಳ) ಮುನಿಶ್ಯಾತಕೇ । ಮಾತನಾಡೇ ಮುಕ್ತಾಯ

(ದಕ್ಷಿಣಾದಿ) ಮುನಿಶ್ಯಾತಕೆ ಮಾತನಾಡೆ | ಕೇಳೆ ರಮಣಿ || ತದಿತೋಜ ತದಿದೋಂ ತದಿತೊ ತದಿತ್ಯೆ

**| ಜಂಟಿ ರಾಗ ||**

**|| ಅಟ್ಟತಾಳ || ವಿದುರ ಕೃಷ್ಣನಿಗೆ ಕುರುಕ್ಷೇತ್ರದಲ್ಲಿ ||**

ಕೃಷ್ಣಾನೀದಯಾತೋರಿಸೋ | ವಾಸೂದೇವಾ | ಕೃಷ್ಣಾನೀದಯತೋರಿಸೋ ದಯದೀ ನಿನ್ನಯ ಮುಖ | ದಯದೀ ನಿನ್ನಯ ಮುಖ ಮುದದಿಂದ ತೋರಿಸೋ ಹರಿಯೆ ನಿನ್ನಯ ನೆನವರಿಕೆ ಮಾಡಿದೆ | ಕೃಷ್ಣಾನೀದಯತೋರಿಸೋ ವಾಸೂ ದೇವಾ ಕೃಷ್ಣಾ ನೀ ದಯತೋರಿಸೋ

**|| ರೂಪಕತಾಳ | ಕೃಷ್ಣವಿದುರನಿಗೆ || ಕುರುಕ್ಷೇತ್ರ ||**

ಪರಮಭಕ್ತ | ವಿಧುರ ಕೇಳೂ | ಪರಿಯ ಹೇಳುವೇ || ಪಾಂಡುವರಿಗೆ ಬರುವ ರಾಜ್ಯ ಕೇಳ್ ಬಂದಿಹೆ || ಕೌರವನನ್ನು ಸಂತೈಸೂವೆ ಸಂಧಿಕಾರ್ಯಕೇ ॥ ಪರಮಭಕ್ತವಿದುರ ಕೇಳು ಪರಿಯ ಪೇಳೂವೇ || ವಿದುರ ಭಕ್ತ ಕೌರವನನು ನೀ ಕರೆದು ಪೇಳೀಗ || ಪರಮಭಕ್ತ ವಿದುರಕೇಳೋ ಪರಿಯ ಪೇಳೂವೆ |

**|| ರೂಪಕತಾಳ || ಕೌರವನಿಗೆ ಶ್ರೀಕೃಷ್ಣ ||**

ರಾಜ ನೀನು ಲಾಲಿ(ಸೈಯ್ಯಾ) ಸೀಗ | ಪೇಳ್ವ ಮಾತನು ಮೂಜಗಾದೋಳ್ ಖ್ಯಾತಿಯನ್ನೂ ಪಡೆದುಬಾಳೀಗ || ಕಲಹ ಬೇಡ (ಜಗಳ ಬೇಡ) ಇಳೆಯೊಳಿನ್ನೂ ಅಳಿವರೆಲ್ಲರೂ ಸುಲಲಿತಾದಿಕುಂತೀಸುತರಿಗೆ (1/2) ಅರ್ದರಾಜ್ಯವಾ || ರಾಜನೀನೂ ಲಾಲಿಸೀಗ ಪೇಳಮಾತನೂ |

**|| ರೂಪಕತಾಳ || ಭೀಷ್ಮಾಚಾರ್ಯ | ಕೌರವನಿಗೇ ॥**

ಏತಕ್ಕೆ ನಿನಗಿಷ್ಟು ದುರಿತ | ಕೌರವೇಂದ್ರನೆ | ಮಾತಿನಂತೆ | ವನವಾಸ ಮುಗಿಸಿದ ಕುಂತಿ ಸುತರೊಳು | ಏತಕ್ಕೆ ನಿನಗಿಷ್ಟು ದುರಿತ | ಕೌರವೇಂದ್ರನೇ ||

**|| ವಿಜಯನಗರಿ ರಾಗ ||**

**|| ನಾಟಕದಲ್ಲಿ ರೂಪಕತಾಳ ||**

ವಿಜಯಾಂಬಿಕೆ | ವಿಮಲಾಂಬಿಕೆ | ವಿಜಯಾಂಬಿಕೇ || ಅಜಾವಂದಿತೆ ಅಮರೇಂದ್ರನುತೇ | ನಿಜಕಲ್ಪಗೀತೆ | ನಿಜಸ್ತುತಿಯ ಮಾತೆ | ವಿಜಯಾಂಬಿಕೆ | ವಿಮಲಾಂಬಿಕೇ | ವಿಜಯಾಂಬಿಕೇ

**|| ಭಾಮಿನಿ || ರಕ್ತಬೀಜಾಸುರನ ಕಥೆ ಪುಷ್ಪಮಾಲಿನಿ |**

ಕೇಳುತಾಕ್ಷಣ ನುಡಿಯ ಯುವತಿಯು | ಧಾತ್ರಿಯೊಳೊರಗಿ ಛೇತರಿಸುತ್ತಾ | ಹರಹರಾಕಾಲಸೂಚನೆಯು | ಕವಲು ಕಡದುದು | ಬುಡವು ಜಾರಲು | ಪೊಡವಿಪಗೆ ಮುಂದೇನು ಗತಿ (ಎನುತ) ಯೆಂದೆನುತ ಧರೆಗೆ ಬಿದ್ದೊರಳಿದಳು (ಬಾಲೆ) ಪುಷ್ಪಮಾಲಿನಿಯು

**|| ಭಾಮಿನಿ || ದಕ್ಷಯಜ್ಞ ದಾಕ್ಷಾಯಿಣಿ ಯಜ್ಞಕುಂಡಕ್ಕೆ**

ಪತಿಯೆ ನಿನ್ನಯ ಮಾತಮೀರಿ ಬಂದೆನು ಪಿತನು ಸೇರದೆ ಹೋದ | ಪ್ರಥಮ ಶಿವಗರ್ಪಿಪ ಯಜ್ಞದ ಭಾಗವನು | ಪಿತತಾನೆ ತಿಂದು ಗತಿಗೆಡಿಸಿದ ಯನ್ನಬಾಳನು ತಿರುಗೆಂತು ಬಂದು ತೋರಲಿ ಶಿವ ನಿನಗೆ ಮುಖವಾ | ಹತಳಾಗುವುದೆ ಲೇಸು ಪಿತಮಾಳ್ವ ಯಗ್ನ ಕುಂಡಕೆ ಅರ್ಪಿಸುವೆ | ಯನ್ನ ಪ್ರಾಣವ | ಯನ್ನತಪ್ಪನು ಮನ್ನಿಸೂ ಮನ್ನಿಸೂ ಶಂಕರಾ ಶಂಕರಾ | ಶಿವನೇ ||

**| ರೂಪಕತಾಳ | ದಕ್ಷಯಜ್ಞ | ದಾಕ್ಷಾಯಿಣಿ ಹಾಡು ||**

ಪತಿಯೆ ನಿನ್ನ ಮಾತ | ಮೀರಿ ಬಂದೆನು | ಪಿತನು ಸೇರದೋದನೂ | ಶಿವನೇ ಶಿವನೇ | ಶಿವನೇ || ಶಂಕರನೇ || ಶಿವನೇ || ನಿನ್ನ ಪ್ರಥಮ ಭಾಗವ ತಾನೇ ತಿಂದನೂ ಗತಿಗೆಡಿಸಿದ ಯನ್ನ ಬಾಳನು ಎಂತು ತಿರಿಗಿ ಬಂದು ನಿನಗೆ 1 ಮುಖವನೆಗೆ ತೋರಲಿ | ಶಂಕರಾ | ಪಿತನು ಮಾಳ್ವಯಗ್ನಕುಂಡಕೆ | ಅರ್ಪಿಸುವೆನು ಯನ್ನ ಪ್ರಾಣವ ಶಿವನೇ ಶಿವನೇ | ರಕ್ಷಿಸು ರಕ್ಷಿಸೂ ರಕ್ಷಿಸೂ ದೇವಾ |

**|| ರೂಪಕತಾಳ || ಕರಿಬಂಠನ ಚರಿತ್ರೆ || ಪುಂಡರೀಕಾಕ್ಷಿ ಹಾಡು ||**

ವದನದೇವತೆ ಕರುಣಿಸೆನಗೆ | ತಕ್ಕವರವ ಮಾತೆಯೇ | ತಕ್ಕಾವರನ ಮಾತೆಯೇ। ತಾಯೇಯನ್ನ (ತಾಯಿಯೇ) ಮಾತೆಯೇ | ದುರುಳ ರಕ್ಕಸಗೆನ್ನ ಮದುವೆ ಮಾಳ್ವಳೂ ಮಾತೇ ನಿನ್ನ ಪಾದ ನಂಬಿ ಬಂದಿಹೆ | ಯನ್ನ ನೀನೂ ರಕ್ಷಿಸೂ || ಯನ್ನ ನೀನು ರಕ್ಷಿಸೂ ರಕ್ಷಿಸೂ ಜಗಜ್ಜನನೀ |

**|| ಭಾಮಿನಿ | ಸೀತಾಪರಿತ್ಯಾಗ ಲಕ್ಷ್ಮಣ ಸೀತೆ ||**

ನುಡಿಯ ಕೇಳುತ ಅಡವಿಯೊಳು ಭೂಸುತೆಯು ಥಥಥನೆ ನಡುಗುತ್ತಾ ರಾಮಾ ಎಂದು | ಸಿಡಿಲೊಡೆದ ತೆರನಂತೆ | ಭೂತಳಕ್ಕೊರಗಲೂ | ಅತ್ತಿಗಮ್ಮ ಎಂದೆನುತ ಲಕ್ಷ್ಮಣನು | ಸಂತೈಸೇ | ಭುಸುತೆಯು | ಕಣ್ತೆರೆದು ನೋಡಿ | ಇಂತೆದಳಾಕ್ಷಣದೀ ॥

|| ವಿಜಯನಗರಿ ರಾಗ | ಆದಿಕಾಲಕ್ಕೂ ರೂಪಕತಾಳಕ್ಕೂ ಬರೆದಿದೆ || ಯಕ್ಷಗಾನದ ಅಟ್ಟತಾಳಕ್ಕೂ ಹೇಳುವುದು |

**|| ಆದಿತಾಳ ||**

1. ಹೇಗೆ ಬಿಟ್ಟು ಹೋಗಲಿನ್ನೂ ಭೂಮಿಜಾತೆಯಾ ನಾಗವೇಣೀ ಬಾಲೆಯಳನೂ | ಈಗುಣಾಢ್ಯಳಾ | ಆಆಆಆ || ಅಡವಿಯೊಳಗೆ ಅಳುತ ಬಾಯ್ ಬಾಯ್ ಬಿಡತಲಿರುವರೂ | ಮೃಢನೆ ಕಾಯೋ | ಕರುಣದಿಂದ ಪೊಡವಿನಂದನೆಯಾ || ಪೊಡವಿನಂದನೆಯಾ

**|| ರೂಪಕತಾಳ ||**

2. ಹೇಗೆ ಬಿಟ್ಟು ಹೋಗಲಿನ್ನೂ | ಭೂಮಿಜಾತೆಯಾ | ಭೂಮಿಜಾತೆಯಾ | ನಾಗವೇಣಿ ಬಾಲೆಯಳನೂ ಈಗುಣಾಢ್ಯಳಾ | ಈಗುಣಾಢ್ಯಳಾ || ಆಆಆಆಆ ಯಕ್ಷಗಾನ ಅಟ್ಟತಾಳ ಅಡವಿಯೊಳಗೆ ಅಳುತ ಬಾಯ್ ಬಾಯ್ ಬಿಡುತಲಿರುವರೂ | ಮೃಢನೇ ಕಾಯೋ | ಕರುಣದಿಂದಾ । ಭೂಮಿಜಾತೆಯಾ ನಾಗವೇಣಿಯಾ | ಪೊಡವಿನಂದನೆಯಾ | ಪೊಡವಿನಂದನೆಯಾ || ಯಕ್ಷಗಾನ ಅಟ್ಟತಾಳ ಮುಕ್ತಾಯ ||

**|| ಆದಿತಾಳ ||**

ದೇವ ದೇವ ನಿಮ್ಮ ಪಾದ | ಕಂಡು ನಾವು ಬದಕೆಲೆಂದು ಬಂದೇವಯ್ಯಾ || ಭಾವಭಕುತಿಯಿಂದ ನಿಮ್ಮಾ | ಪಾದನಂಬಿ ಬಂದೇವಯ್ಯಾ || ಕಾವರಾರು ನಿನ್ನ ಬಿಟ್ಟರೆ, ಭುವಿಯೊಳಗೆ ಶಂಭುವೇ | ದೇವಾ ದೇವಾ ದೇವಾ

**|| ಕಾನಡರಾಗ || ನಾಟಕ | ಕಂದ ಕರ್ಣ ಕಂದ**

**ಕೊಲಲೇ ಪಾಂಡುಕುಮಾರರಾ**

**ಶಿವನ ಭಕ್ತಿ ಹಾಡು || ಭಜನೆ ಪದ ||**

**| ಆದಿತಾಳ |**

1) ಇವನೇ ಗಿರಿಜಾ ರಮಣನೂ | ಇವನೇ ಪಾಲಾಕ್ಷಶಿವನೂ || ಚಂದ್ರಖಳಾದರ ಶಂಕರ ಶಿವನೂ | ನಾದಬಿಂದೂ ಖಲಾತೀತನು || ಇವನೇ ಗಿರಿಜಾ ರಮಣನೂ ಇವನೇ ಪಾಲಾಕ್ಷ ಶಿವನೂ |

2) ಜಡೆಯೊಳು ಗಂಗೆಯ ತೊಡೆಯೊಳು ಗೌರಿಯು ಕರದಿತ್ರಿಶೂಲವ ಧರಿಸಿದ ಹರನೂ | ನೀಲಕಂಠನು ನಿಗಮಗೋಚರ | ಗಂಗಾಧರ ಗಜಚರ್ಮಾಂಬರ ಎನಿಸಿದ ಶಿವನೂ || ಇವನೇ ಗಿರಿ |

3) ಗಜರಾಕ್ಷಸನ ಶಿರ ಹರಿದವನೂ ಗಜಶಿರಕುವರಗೆ ಧರಿಸಿದ ಹರನೂ | ಗಜಚರ್ಮಾಂಭರ ಎನಿಸಿದ ಶಿವನೂ ಭವಭಯಗಳನೂ ಹರಿಸುವ ಶಿವನೂ ಇವನೇ ಗಿರಿಜಾ ರಮಣನೂ || ಇವನೇ ||

4) ದಕ್ಷನ ಸುತೆಯು ಪಾಶ್ವತಿ ರಮಣನೂ ಪಕ್ಷಿವಾಹನ | ಶಣ್ಮುಕ ಪಿತನು | ವೀಕ್ಷಿಸಿ ದಕ್ಷನಸಿರಹರಿಸಿದನೂ ಇವನೇ ಗಿರಿಜಾರಮಣನೂ (ನಂತರ ಮುಕ್ತಾಯ) ದಕ್ಷಗೆ ಈಗರಿನಶಿರಧರಿಸಿದನೂ || ಇವನೇ ||

5) ತ್ರಿಪುರವ ಕಟ್ಟಲು ವರಕೊಟ್ಟವನು | ತ್ರಿಪುರಾಸುರರ ಶಿರಹರಿದವನು | ಪಾಪಸಂಹರನೂ ಕರುಣಾಕರನೂ ಪಾರ್ವತಿ ರಮಣನೂ | ಪರಮೇಶ್ವರನು ಇವನೇ | ಗಿರಿಜಾರಮಣನು |

6) ಕರುಣಾಕರನೂ ಕಾಣದೆ ಇಹನೂ | ಕಾಣದೆ ಜಗವಪಾಲಿಪನವನೂ ಕಂಡೂ ಕಾಣದೆ | ಶಾಂತಿಯೊಳಿಹನೂ | ಹರುಷದಿಜಗವಾಪಾಲಿಹರನೂ || ಇವನೇ ಗಿರಿಜಾರಮಣನೂ | ಇವನೇ || ಪಾಲಾಕ್ಷ ಶಿವನೂ

7) ಭಕ್ತರ ಭೀಷ್ಮಕೆ ವರಕೊಟ್ಟವನು | ಆಸಕ್ತರ ಮೊರೆಯಾ ಪಾಲಿಪನವನೂ | ಮೀರಿದ ಧನುಜರವಧಿಸುವನವನೂ | ಶಾಂತಿಯೊಳಜಗವಾ ಪಾಲಿಪನವನೂ ಇವನೇ ಗಿರಿಜಾ ರಮಣನೂ || ಇವನೇ ಪಾಲಾಕ್ಷ ಶಿವನೂ

**|| ಉಡುಪಿ ಶ್ರೀಕೃಷ್ಣನ ಹಾಡು || ಆದಿತಾಳ ಭಜನೆ ಹಾಡು ||**

1) ಉಡುಪಿ ಕೃಷ್ಣಾಪೊಡವಿಗೊಡೆಯಾ | ಬಿಡದೆನಾ ನಿಮ್ಮಡಿಗೆರಗುವೇ | ಕಡಲಶಯನಾ ಬಡವರನ್ನಾ ಕೈಬಿಡದೆ ಸಲಹೊ ಮೃಢನ ಸಖನೇ || ಉಡುಪಿ ಕೃಷ್ಣಾ ಪೊಡವಿಗೊಡೆಯಾ | ಬಿಡದೆ ನಾನಿಮ್ಮಡಿಗೆರಗುವೇ ಕಡಲಶಯನಾ ಬಡವರನ್ನೂ ಕೈಬಿಡದೆ ಸಲಹೋ ಮೃಢನಸಖನೇ | ಉಡುಪಿ ಕೃಷ್ಣಾ ಪೊಡವಿ ॥ ಬಿಡದೆ

2) ಅಷ್ಟಮಠದಯತಿಗಳಿಂದ ಇಷ್ಟಪೂಜೆಗೊಳುವ ರಾಯ | ಇಷ್ಟಾರ್ಥಗಳ ಇತ್ತು ಸಲಹೊ | ಪುರಂಧರ ವಿಠಲಾ ನಿಮ್ಮ ಭಜನೆ | ಉಡುಪಿ ಕೃಷ್ಣಾ |

3) ನಾರಿ ಜನರ ಸೀರೆ ಸೆಳೆದು ಚೋರತನದಿಏರೀಮರವ | ಕ್ಷೀರವನ್ನೇ ಸೂರೆಗೊಂಬ ಮಾರಜನಕಮಹಿಮೆ ಪುರುಷಾ || ಉಡುಪಿ ಕೃಷ್ಣಾ ಪೊಡವಿಗೊಡೆಯಾ ಬಿಡದೆ ನಾ ನಿಮ್ಮಡಿಗೆರಗುವೇ || ಅಡಿಗೆರಗುವೆ

**|| ಭಜನೆ ಪದ | ಆದಿ(ಕಾಲ) ತಾಳ**

1) ಎಲ್ಲಾ ರೂಪವು ತಾನಂತೇ ಶಿವ ಎಲ್ಲರೊಳಗು ತಾನಿಹನಂತೆ | ಅಲ್ಲಲ್ಲಿರಸುತೆ ಗುಡಿಗಳ ತಿರುಗುತೆ | ಕಳ್ಳನ ನರರ ಕಣೆ || ಕಲ್ಲಂತೇ ಶಿವ || ಎಲ್ಲಾ ರೂಪವು ತಾನಂತೇ ಶಿವ ಎಲ್ಲರೊಳಗು ತಾನಿಹನಂತೇ ||

2) ಕಣ್ಣೆಂಬುದು ತನಗಿಲ್ಲಂತೆ ಶಿವ | ಕಣ್ಣಿಗೆ ಕಣ್ಣಾಗಿಹನಂತೇ ಶಿವ || ಕಣ್ಣು ತೆರೆದು ತಾನರಸಿದ ಜನರಿಗೆ | ಬಣ್ಣ ಬಣ್ಣವಾಗಿಹನಂತೇ | ಎಲ್ಲಾ ರೂಪವು ತಾನಂತೇ ಶಿವ ಎಲ್ಲರೊಳಗುತಾ ನಿಹನಂತೇ ॥

3) ದುಷ್ಟವಿದೂರನು ತಾನಂತೇ ಶಿವ ದುಷ್ಟಗೆ ದುಷ್ಟಗಿಹನಂತೆ | ದುಷ್ಟದಶ್ಯಗಳೆರಡರ ಮಧ್ಯೆ | ಶಾಶ್ವತ ತಾನಾಗಿಹನಂತೇ || ಎಲ್ಲಾ ರೂಪವು ತಾನಂತೇ ಶಿವ ಎಲ್ಲರೊಳಗು ತಾನಿಹನಂತೇ ಶಿವಾಶಿವಾ |

**|| ನಾರದನ ಪ್ರವೇಶಕ್ಕೆ | ಏಕತಾಳ || ಆದಿತಾಳ ||**

ನಂದಾಕುಮಾರ ನಟನ ವಿಚಾರ | ಸಿಂದುಶಯನಗೋವಿಂದ ಮುಕುಂದ | ವಸುದೇವಜಾತ ವಂದಿಪೇ || ವಸುದೇವಜಾತ ವಂದಿಪೇ || ವಸುದೇವಾಜಾತಾ ವಂದಿಪೆನಯ್ಯಾ ವಸುದೇವಾಜಾತಾ ವಂದಿಪೇ || ಮಂದರೆದ್ದಾರಿ ಮಾನಿತ ಶೌರೀ | ವಂದಿಪೆ ಗೋವಿಂದ ಮುಕುಂದ ವಸುದೇವಾಜಾತಾ ವಂದಿಪೆ | ವಸುದೇವಾಜಾತಾ ವಂದಿಪೇ

**|| ರೂಪಕತಾಳ | ಆದಿತಾಳ + ಅಟ್ಟತಾಳ || ತ್ರಿಪುರ ಸಂಹಾರ || ದೇವೇಂದ್ರ**

ದೇವದೇವ ನಿಮ್ಮ ಪಾದಕಂಡು ನಾವು ಬದುಕಲೆಂದು ಬಂದೆವಯ್ಯಾ | ಭಾವಭಕುತಿಯಿಂದ ನಿಮ್ಮ ಪಾದನಂಬಿ ಬಂದೆಪಯ್ಯಾ || ದೇವದೇವ ನಿಮ್ಮ ॥ ಕಾವನ್ಯಾರು ನಿನ್ನ ಬಿಟ್ಟರೆ | ಭುವಿಯೊಳಗೆ ಶಂಭುವೇ | ಶಂಭುವೇ ದೇವೇ ದೇವಾ ದೇವಾ ॥

**|| ದಕ್ಷಿಣಾದಿ ರೂಪಕತಾಳ |**

ಎತ್ತಿ ಸಾಕಿ ಸಲಹಿದಂತಾ ತೋಳು ತೊಡೆಗಳು || ವ್ಯರ್ಥವಾಯ್ತು ಎನ್ನ ಬಾಳು ಮೃತ್ಯುಂಜಯನೇ । ಎತ್ತಿ ಸಾಕಿ ಸಲಹಿದಂತೆ ತೋಳತೊಡೆಗಳು

**|| ಆದಿತಾಳ || ದೇವಿಮಹಾತ್ಮ | ಬ್ರಹ್ಮ ವಿಷ್ಣುವಿಗೆ**

ದೇವಾ ಕೇಳೂ ಬಿನ್ನಪವನ್ನೂ ಬೇಡಿಕೊಂಬವೇ ದೇವಾ ಸತಿಯರ ಶಾಪಾವಹುದೂ ಹೇಳಾಲಸದಳವೂ | ದೇವಾ ಕೇಳೂ ಭಿನ್ನಪವನ್ನು ಹೇಳಲಸದಳವೂ | 2ನೇ ಕಾಲಲಿ | ದೇವಾ ಕೇಳು | ಭಿನ್ನಪವನ್ನೂ ಬೇಡಿಕೊಂಬುವೇ || ಯಕ್ಷಗಾನ

**|| ಕಾನಡರಾಗದಲ್ಲಿ ಚಾಲು ಅದಿತಾಳದಲ್ಲಿ ||**

(ಶುದ್ಧಯಕ್ಷಗಾನದಲ್ಲಿ) ಎತ್ತಿಸಾಕಿ ಸಲಹಿದಂತಾ | ತೋಳೂ ತೊಡೆಯು | ವ್ಯರ್ಥವಾಯ್ತು ಎನ್ನ ಬಾಳು ಮೃತ್ಯುಂಜಯನೇ ಯಕ್ಷಗಾನ ಅಟ್ಟತಾಳ | ಎತ್ತಿಸಾಕೀ ಸಲಹಿದಂತಾ ||

**|| ಆದಿತಾಳ || ಸೀತಾಪರಿತ್ಯಾಗ || ರಾಮಸೀತೆಗೆ ||**

ಭೂಸುತೆಯೆ ಹಿಂದೆ ನಾವು ವನವಾಸ ಮಾಡಿದಾ | ಕ್ಷೇಪಾಸಾಲದೆ ವದನಪೇಕ್ಷೆಯ ಬಯಸುವುದೂ ಸರಿಯೇ || ಭೂಸುತೆಯೆ ಹಿಂದೆ ನಾವು | ವನವಾಸ ಮಾಡಿದಾ || 2ನೆ ಕಾಲಕ್ಕೆ ಭೂಸುತೆಯೆ ಹಿಂದೆ ನಾವು ವನವಾಸ ಮಾಡಿದಾ ಯಕ್ಷಗಾನ ಅಟ್ಟತಾಳ

**|| ಆದಿತಾಳ || ಸೀತೆ || ರಾಮನಿಗೆ||**

ಕಳುಹೆನ್ನೊಡನೇ ಲಕ್ಷ್ಮಣಾನ | ವನಕೆ ತೆರಳೂವೆ | ನಳಿನಾಕ್ಷ ರಾಮಚಂದ್ರಾ | ನೀಜಾಲವಮಾಡೂವೇ || 2ಕಾಲ || ಕಳೂಹನ್ನೊಡನೇ ಲಕ್ಷ್ಮಣಾನವನ ಕೇತೆರಳೂವೇ

**|| ಹಂಸಧ್ವನಿರಾಗ ||**

**ಗಣಪತಿ ಸ್ತೋತ್ರ**

**ವಾತಾಪಗಣಪತಿಂಭಜೆ | ವಾರಣಾಸ್ಯ ಈ ಧಾರಿ ||**

**|| ಗಣಪತಿ ಸ್ತುತಿ | ಆದಿತಾಳ ||**

ಗಜಮುಖಾ ಗಣಪತಿ | ತ್ರಿಜಗವಂದಿತನೇ | ಸುಜನರ ಪೊರೆವನೇ || ಗಜಮುಖಾಗಣಪತೇ || ಪಾಶಾಂಕುಶಧರ | ಪರಮ ಪವಿತ್ರಾನೆ | ಮೂಶಕವಾಹನ | ಮುನಿಜನ ಪ್ರೇಮಾ | ಗಜಮುಖಾ ಗಣಪತಿ ತ್ರಿಜಗವಂದಿತನೇ | ಸುಜನರ ಪೊರೆವನೇ॥ || ಆದಿತಾಳ || ದಕ್ಷಯಗ್ನ | ಪ್ರಸೂತಿ ದಕ್ಷನಿಗೆ ||

1) ಬೂಕಾಂತ ಗುಣವಂತ | ದಯವಂತ | ಇಂಥಾ ಪಂಥ ಬೇಡವೋ || ಮಗಳ ಮುಖವನೋಡೋ ಯಮ್ಮಯ ಬಳಗಕೆನಗೆ ಗೇಡೋ || ಜಗದ ಜನರು ನಿನ್ನಗರಣಮಾತಿಗೆ | ನಗುವರು ನಿನಗಿದು ಸೊಗಸೇನೋ | ಭೂಕಾಂತಗುಣಂತ ದಯವಂತಾ | ಇಂಥಾ ಪಂಥ ಬೇಡವೋ

2) ಸಾರತರದ ಸುಖವೋ | ಹೆಣ್ಣಿಗೆ ತವರುಮನೆಯು ಘನವೋ | ನಾರೀಮಣಿಯಳ ಈ ಸತಿಮನ್ನಿಸು | ಧೀರಶಂಭುವಮೀರಿ ಬಂದಿಹಳು || ಭೂಕಾಂತ ಗುಣವಂತ ಇಂತಾ ಪಂಥ ಬೇಡವೋ |

**|| ಆದಿತಾಳ ||**

1) ಬಿಡುಬಿಡು ಕೋಪ ಸುಂದರ | ಮೃಢರಾಯರಮೇಲಿನ್ನು ದುಗುಡಾ | ಬಿಡುಬಿಡು ಕೋಪಸುಂದರ ಮಗಳ ಮುಖವ ನೋಡೊ | ಎಮ್ಮಯ ಬಳಗಕೆ ನಗೆ ಗೇಡೋ || ಜಗದ ಜನರು ನಿನ್ನಗರಣ ಮಾತಿಗೆ | ನಗುವರು | ನಿನಗತಿ ಸೋಗಸೇನೊ ಬಿಡು ಬಿಡುಬಿಡು ಬಿಡು | ಕೋಪಸುಂದರ ಮೃಢರಾಯರ ಮೇಲಿನ ದುಗುಡಾ || ಬಿಡುಬಿಡು ಬಿಡುಬಿಡು ಕೋಪಸುಂದರ

**|| ಆದಿತಾಳ || ಗಜಾಸುರನ ವಧೆ | ಲಕ್ಷ್ಮೀ ಸರಸ್ವತಿವಾದ |**

ನಿನ್ಯಾರು ಕರೆದರಿಲ್ಲಿ ಗೇಕೆ ಬಂದೆಯೇ ನೀರೆ ನೀಸಾರೆ | ಕರೆದವರಾರೆ | ನಿನ್ಯಾರು ಕರೆದರಿಲ್ಲಿಗೇಕೆ ಬಂದೆಯೇ || ಮಂದರಗಮನೇ ಯುವತಿ | ನಿಸತ್ಕರಭಾಗ್ಯಕೆನೀ ಯೋಗ್ಯಳ ನೀಚಾತ್ಮಳೆ ನಿನ್ನ ಪ್ರಾಚೀನವಸುದು | ನಿನ್ಯಾರು ಕರೆದರಿಲ್ಲಿಗೇಕೆ ಬಂದೆಯೇ। ನೀರೇ ಸಾರೆ ಕರೆದವರಾರೇ | ನಿನ್ಯಾರು ಕರೆದರಿಲ್ಲಿಗೇಕೆ ಬಂದಿಯೇ

**|| ಮೋಹನರಾಗ ||**

**|| ನಾಟ್ಯರಾಮಾಯಣ | ಕಂದ | ರಾವಣ |**

ನೋಡು ಕಲಶಾಂಭುದಿ ಚಂದ್ರನಾ || ನೋಡು ಕಲಶಾಂಭುದಿ ಚಂದ್ರನಾ ನೋಡು ರಣಧೀರ ಪ್ರತಾಪನಾ ||

ನೋಡು ಚಂಡ ಪ್ರಚಂಡ | ಧೋರ್ದಂಡನಾ || ನೋಡು ಚಂಡ ಪ್ರಚಂಡಧೋರ್ದಂಡನಾ | ನೋಡು ರಾವಣ ಚಕ್ರೇಶ್ವರನಾ |

**| ಭಾಮಿನಿ |**

**|| ದೇವಿ ಮಹಾತ್ಮ | ಚಂಡಚಾಮುಂಡರ ಮರಣ |**

ಕಂಡು ವನಮಧ್ಯದಲಿ | ಕಂಡು ವನಮಧ್ಯದಲಿ | ತುಡುಕಿದ | ಚಂಡಚಾಮುಂಡಕರ ಪ್ರಾಣವ | ಕೊಂಡಳಂಬಿಕೆ | ಚಂಡಿಚಾಮುಂಡೇಶ್ವರಿ ಎಂಬ ನಾಮದಲೀ |

**|| ನಾರದನ ಹಾಡು || ಪ್ರವೇಶಕ್ಕೆ ಮಗ ಮನಕ್ಕೆ |**

**|| ಏಕತಾಳ ||**

ಯಾದವ ಕುಲನಾಥಾ | ಶ್ರೀನಾಥಾಯಾದವಕುಲನಾಥಾ || ಯಾದವನಾಥ ವೇದ ಸುಗೀತ ಸಾದುಜನಾವಳಿ ಮೋದಸಂಪ್ರೀತ | ಯಾದವ ಕುಲನಾಥ | ಮಂಜುಳಭಾಸರಂಜಿತಯೋಶ | ಕುಂಜಮಧುರಬಾಸಾನಿರಾಕುಲ || ಯಾ || ಸುಲಲಿತನರ್ಧನ ಸುಂದರ ಲೀಲ | ವಿಲಸಿತ ವನಮಾಲ | ನಿರಾಕುಲ | ಯಾಧವ ಕುಲನಾಥಾ |

**|| ಋಷಿಗಳು ಗುರುಗಳು ಪ್ರವೇಶಕ್ಕೆ ||**

**|| ಆದಿತಾಳ ||**

ಶಂಕರಗಿರಜೇಶಾ | ಸದಾಶಿವಶಂಕರಗಿರಿಜೇಶ || ಲಂಕಾದೀಶಾ ಭಿಂಕವಿನಾಶ | ಪಂಕಜಾಂಡ ಪೋಶಾಸದಾಶಿವಶಂಕರ ಗಿರಿಜೇಶಾ ||

**|| ಭಜನೆ ಪದ || ಆದಿತಾಳ ||**

1) ವಂದಿಪೆ ನಿಮಗೇ ಗಣನಾಥ | ಮೊದಲೊಂದಿಪೆ ನಿಮಗೆ ಗಣನಾಥ | ಮೊದಲೊಂದಿಪೆ ನಿಮಗೇ ಗಣನಾಥ |

2) ಆದಿಯಲ್ಲಿ ಧರ್ಮಜನು ಪೂಜಿಸಲು ನಿಮ್ಮ ಪಾದ | ಸಾಧಿಸಿದ ಕೀರ್ತಿಯನ್ನು ನಾಥಾ | ವಂದಿಪೆ ನಿಮಗೆ ಗಣನಾಥ | ಮೊದಲೊಂದಿಪೆ ನಿಮಗೆ ಗಣನಾಥಾ

3) ಮಂಗಳ ಮೂರತಿ ರಂಗವಿಠಲ ನಿನ್ನ | ತುಂಗನೆ ಪಾಲಿಸೊ ಗಣನಾಥಾ | ವಂದಿಪೆ ನಿಮಗೆ ಗಣನಾಥ | ಮೊದಲೊಂದಿಪೆ ನಿಮಗೆ ಗಣನಾಥಾ

4) ಹಿಂದೆ ರಾವಣನು ಮದದಿಂದ ನಿನ್ನ ಪೂಜಿಸದೆ | ಸುಂದರಣದಲಿ ಗಣನಾಥಾ ಮೊದಲೊಂದಿಪೆ ನಿಮಗೆ ಗಣನಾಥ || ಮೊದಲೊಂದಿಪೆ ನಿಮಗೆ ಗಣನಾಥಾ

**|| ಅಟ್ಟತಾಳ | ಕರಿಭಂಠನ ಕಾಳಗ (ಚರಿತ್ರೆ) ಪುಂಡರೀಕಾಕ್ಷಿ ಕರಿರಾಜನಿಗೆ||**

ಏರುಮಂಚವಾರಾಯ | ಪರಿಹರಿಸೋಯನ್ನ ಪರಿಹರಿಸೋಯನ್ನಾ ಮಧನತಾಪವ ಪ್ರಿಯಾ | ರಥಿಯ ಸುಖವನೀಡೋರಮಣಾ ಯನಗೆ ಪತಿಯಾಗು ನೀನು ಬಾರೋ ಯನ್ನಾ ಮಧನತಾಪವ | ಪರಿಹರಿಸೋ|(ವೇಗದ ಗತಿಯಲ್ಲಿ) ಮಾತೆ ಭಯಕೆ ಹೆದರಬೇಡ | ನೀತಿ ಮಾರ್ಗವ ಬಿಡೆನು ನಾನು ನಿನ್ನ ಪ್ರಾಣಕೆ ನನ್ನ ಪ್ರಾಣವ ಅರ್ಪಿಸುವೆನು ಪ್ರಾಣಕಾಂತ | ಇದು ಸತ್ಯಸತ್ಯಾ | ಏರುಮಂಚವರಾಯ | ಪರಿಹರಿಸೊಯನ್ನ | ಮದನಾ ತಾಪವ ಪ್ರಿಯಾ ||

**|| ಅಟ್ಟತಾಳ || ಭಕ್ತಮಾರ್ಕಾಂಡೆಯ ಚರಿತ್ರೆ | ನಾರದ ಶಿವನಿಗೆ||**

ಕೇಳು ಪರಮೇಶನೆ | ಕೇಳು ಗೌರೀಶನೆ | ಬಾಲಮರ್ಕಾಂಡನು | ತಪದೊಳು ನಿಮ್ಮನೂ || ಕೇಳು ಪರಮೇಶನೆ ಕೇಳು ಜಗದೀಶನೆ || ವಲಿಯದೆ ನೀನಿರಲು | ಜಲವನು ಸೇವಿಸನು ಲಯವನು ಮಾಡದೆ | ಸಲಹುನೀ ಬಾಲನ | ಕೇಳು ಪರಮೇಶನೆ ಕೇಳು ಗೌರೀಶನೇ

**|| ಬೇಹಾಗ್ ರಾಗ ||**

**|| ಸತ್ಯಚಿತ್ರಕೇತು ಮಹಾರಾಜನ ಕಥೆ ||**

**|| ಕಂದ ||**

1. ಸತ್ಯವೇ ನಿತ್ಯವು ಲೋಕದಿ | ಸತ್ಯವೇ ಮೋಕ್ಷಕೆ ಸಾಧನಂ | ಸತ್ಯವನು ತೊರೆದರೆ ಜಗದಿ || ಯತಿವರಾ ನರಕಬಾಜನರ ಹರ್ಕೈ

2. ಕನಸೊಕಳವಳವೋ | ಮೇಣ್ಮನಸಿನವಿಭ್ರಮೆಯೊ ನಿದ್ರೆಯ ಭರವೋ | ಮಿರುಗುವಕನಕದಬೊಂಬೆಯೋ | ಮೇಣ್ಸತಿಸುತರ ಭಾದೆಯೆ | ಸಹಿಸಲಾರೆನು ಹರಿಯೇ ಹರಿಯೇ | ಹರಿಯೇ |

**|| ಏಕತಾಳ + ಆದಿತಾಳ || ಅಂಜನೇಯ ಭಕ್ತಿಯ ಹಾಡು ||**

1) ಎಲ್ಲಿರುವೆ ತಂದೆ ಬಾರೋ ಮಾರುತಿ ಎಲ್ಲಿರುವೆ ತಂದೇಬಾರೋ ಮಾರುತಿ | ಎಲ್ಲಿರುವೆ ತಂದೆ ಬಾರೊ || ಎಲ್ಲಿ ಎಲ್ಲಿ ನೋಡಿದರು ಅಲ್ಲಿ ನಿನ್ನ ಕೀರುತಿ ಎಲ್ಲಿ ನೋಡಿದರು ನಿನ್ನ ಕೂಡಿರುವ ಶ್ರೀಪತಿ | ಎಲ್ಲಿರುವೆ ತಂದೇ ಬಾರೋ ಮಾರುತಿ | ಎಲ್ಲಿರುವೆ ತಂದೇ ಬಾರೋ ||

2) ರಂಗನರ್ದಾಂಗಿಗೆ ಉಂಗುರವನಿತ್ತುವನ | ಭಂಗವ ಪಡಿಸಿದಲ್ಲೋ ಮಾರುತಿ ಎಲ್ಲಿರುವೆ ತಂದೇ ಬಾರೋ ಮಾರುತಿ | ಎಲ್ಲಿ ಎಲ್ಲಿ ನೋಡಿದರು || ಅಲ್ಲಿ ನಿನ್ನ ಕೀರುತಿ | ಎಲ್ಲಿ ನೋಡಿದರು ನಿನ್ನ ಕೂಡಿರುವ ಶ್ರೀಪತಿ || ಎಲ್ಲಿರುವೆ ತಂದೇ ಬಾರೋ ಮಾರುತಿ |

3) ರಕ್ಕಸರ ಸೊಕ್ಕ ಮುರಿ | ಇತ್ತೀಲಂಕೆಗೆ ಉರಿ | ಸಿಕ್ಕಿದಂತೆ ಓಡೋಡಿದೋ ಮಾರುತಿ | ಎಲ್ಲಿರುವೆ ತಂದೆ ಬಾರೋ ಮಾರುತಿ | ಎಲ್ಲಿ ಎಲ್ಲಿ ನೋಡಿದರು ಅಲ್ಲಿ ನಿನ್ನ ಕೀರುತಿ | ಎಲ್ಲಿ ನೋಡಿದರು ನಿನ್ನ ಕೂಡಿರುವ ಶ್ರೀಪತಿ | ಎಲ್ಲಿರುವೆ ತಂದೇ ಬಾರೊ ಮಾರುತಿ ಎಲ್ಲಿರುವೆ ತಂದೆ ಬಾರೋ ||

**|| ಏಕತಾಳ || ನಾರದ ಪ್ರವೇಶ ಅಥವ ನಿರ್ಗಮನಕ್ಕೆ||**

1) ಯಾದವ ಕುಲನಾಥ ಶ್ರೀನಾಥಾ | ಯಾದವಕುಲನಾಥಾ || ಯಾದವನಾಥ ವೇದಸುಗೀತ ಸಾದು ಜನಾವಳಿ ಮೋದ ಸಂಪ್ರೀತಾ || ಯಾದವಕುಲನಾಥಾ

2) ಮಂಜುಳ ಭಾಸ ರಂಜಿತ ಯೋಶಾ | ಕುಂಜಮಧುರಬಾಸಾನಿರಾಕುಲ || ಯಾದವಕುಲನಾಥಾ ಶ್ರೀನಾಥಾ ಯಾದವಕುಲನಾಥಾ | ಯಾದವನಾಥ ವೇದ ಸುಗೀತಸಾಧುಜನಾವಳಿ ಮೋದ ಸಂಪ್ರೀತ | ಯಾದವಕುಲನಾಥಾ |

3) ಸುಲಲಿತನರ್ಧನ ಸುಂದರಲೀಲ | ವಿಲಸಿತ ವನಮಾಲಾ | ನಿರಾಕುಲ | ಯಾದವಕುಲನಾಥಾ ಶ್ರೀನಾಥಾ ಯಾದವಕುಲನಾಥಾ | ಯಾದವನಾಥಾ ವೇದ ಸುಗೀತ ಸಾಧುಜನಾವಳಿ ಮೋದಸಂಪ್ರೀತ | ಯಾದವಕುಲನಾಥಾ |

**|| ಆದಿತಾಳ || ಭಕ್ತಿಯ ಹಾಡು || ನಾರದ | ಭಕ್ತಮಾರ್ಕಾಂಡೇಯ ಕಥೆ ||**

ನಾದಪ್ರಿಯಾ ಶಿವನೆಂಬುವರು | ನಾದಪ್ರಿಯ ಶಿವನಲ್ಲವಯ್ಯಾ || ವೇದಪ್ರಿಯ ಶಿವನೆಂಬುವರೂ | ವೇದ ಪ್ರಿಯಶಿವನಲ್ಲವಯ್ಯಾ ॥ ವೇದಪ್ರಿಯನು ಅಲ್ಲ | ನಾದಪ್ರಿಯನು ಅಲ್ಲ | ಭುಕತರ ಪ್ರಿಯ ನಮ್ಮ | ಕೂಡಲಸಂಗಮಾ | ನಾದಪ್ರಿಯಾಶಿವನೆಂಬುವರೂ

**|| ಆದಿತಾಳ || ನರ್ತಕಿಯರು ದೇವತರ |**

1) ಮಾನಸಖಿ ಪರೆ ಮಾನಂಧಕರವಿದು | ಮನೋಹರಯರೇ ಕ್ರೀಡೆಯು | ಮನೋಹರಯರೇ ಕ್ರೀಡೆಯು ತೊಳಗಿಬೆಳಗುವ ಬೆಳದಿಂಗಳೊಳು | ನದಲಿದು ಪಾಡುವ ವಲಿದು ಹಾಡುವ | ತರತರ ವಿಧದಲಿ ಮನೋಹರಯರೇ ಕ್ರೀಡೆಯು ಮಾನಸಖಿ ಪರ ಮಾನಂದಕರವಿದು ಮನೋಹರಿಯರೇ ಕ್ರೀಡೆಯೂ ತಾನನಾನಾನನ | ತಾನಾನಾನನ್ನನನ ತಾನನನ್ನಾ ನನ್ನಾ ನನ್ನ 2ನೇ ಕಾಲ ತಾನ ನಾನನನ್ನಾನನ ತಾನಾನಾನನನ್ನಾನನ ತನನನನತತಾನನನನ್ನಾ || ಯಕ್ಷಗಾನ ಅಟ್ಟತಾಳ |

**|| ರೂಪಕತಾಳ || ನರ್ತಕಿಯರು ದೇವತರು |**

2) ಮೋರೆಮಕುಟ ಶ್ಯಾಮಹಾಯಿರೇ ಬಾನ್‌ಸುರೀ ಬಜಾಯಿರೆ | ಬಾನ್ ಸುರೀಬಜಾಯರೆ ಶ್ಯಾಮ | ಮೊರಳೀ ಸುನಾಯಿರೆ | ಮೋರೆ ಮೊಕುಟ ಶ್ಯಾಮಹಾಯಿರೆ ಬಾನಾಸುರೀ ಬಜಾಯಿರೆ ಇಂದ್ರಗುಪಸೆ ಶಿಷ್ಠಿ ಬರಸೆ | ಗೋಪಗೋಪಿಯರ ಕರಸೆ || ಮೋರೆ ಮುಕುಟ ಶ್ಯಾಮಹಾಯಿರೆ | ಬಾನಸುರಿಬಜಾಯಿರೇ | ಬಾನಸುರಿಬಜಾಯಿರೆ | ಮೊರಳಿಸುನಾಯಿರೆ ತಾನನಾನಾ ನನ್ನನನತನನನತನನನ್ನತನನಾ + 2ನೇ ಕಾಲ ಯಕ್ಷಗಾನ ಅಟ್ಟತಾಳ

**|| ಆದಿತಾಳ | ಬ್ರಾಹ್ಮರ ಪ್ರವೇಶಕ್ಕೆ**

ರಾಜರ ಮನೆಯಲಿ ಭೋಜನವೆಂದರೆ | ಯೋಜನವಾದರೂ ಹೋಗುವೆವೂ ಯೋಜನವಾದರೂ | ಹೋಗುವೆವೂ ಭೋಜನವನ್ನು ಮಾಡುವೆವು || ಅಪ್ಪಳವ ಸಂಡಿಗೆಯ | ದಪ್ಪದಪ್ಪಲಾಡುಂಡೆಗಳ | ಎಪ್ಪತ್ತಾದರೂ ಹೊಡೆಯುವೆವೂ || ರಾಜರಮನೆಯಲಿ ಭೋಜನವೆಂದರೆ ಯೋಜನವಾದರು ಹೋಗುವೆವು + 2ನೇ ಕಾಲ ಯಕ್ಷಗಾನ ಅಟ್ಟತಾಳ



**|| ಆದಿತಾಳ || ಸಾರಥಿ ಹಾಸ್ಯಕ್ಕೆ**

ಹೋಗ್ತಿಂತಿಂಕಣೆ ಹೋಗ್ತಿಂಕಣೆದೊಡ್ಡಬಳ್ಳಾಪುರಕೆ | ತತ್ರೀಂಕಣೆತಂಕಣೆ ನೆಲಗಡ್ಡೆ ಕಾಯಾ | ತಿನ್‌ಬೇಡ ಕಣೆ ತಿನ್ನಬೇಡ | ನೆಲಗಡ್ಡೆಕಾಯಾ | ತಿಂನಿತಿಂತಾ ತಿಮಿರುಬತ್ಕೈತೆ | ನೆಲಗಡ್ಡೆಕಾಯ 1 ಹೋಗುತ್ತಿದ್ದೆ ಹೋಗಿತಿನ್ | ದೊಡ್ಡಬಳ್ಳಾಬುರಕೆ ಯಕ್ಷಗಾನ ಅಟ್ಟತಾಳ

**|| ಆದಿತಾಳ || ಸಾರಥಿ**

ಯಕ್ಲಾಪುಟ್ನಂಜ ಪುಟ್ನಂಜೆಹೊತ್ತೆಂತೆ | ಯಾಕಲಾ ಪುಟ್ನಂಜ | ಇನ್ನೆಲ್ಲಾ ಇಲ್ಲಾ ಬಿಡಂಗೆ ಇಲ್ಲೆಲ್ಲಾ ಬಿಡ್ಡಿಂಗ್ ಎದ್ದು ಎದ್ದು ಹೊಡ್ಡಂತೆ | ಯಾಕ್ಲಾಪುಟ್ನಂಜಿ | 2ನೇ ಕಾಲ

**|| ಅಠಾಣ ರಾಗ ||**

**| ಕಂದ |**

1. ಸಿರಿಕುಲಾರಾಜ್ಯವಬಿಡದಿರೇ || ಸಿರಿಕುಲಾರಾಜ್ಯ ವಬಿಡದಿರೆ | ಹಿಡಿಹಿಡೀಶಾಪವ ಕೊಡುವೇ ಪೊಡವಿಯೊಳಗೆ ನೀಂಸತ್ಯಸಂದನನೆಂದು ನೀಹೊಡಿಸಲೇತಕೆ ಭೇರಿ

2. ಪರಿಪರಿ ಕಷ್ಟವನಿತ್ತೊಡಾಂ | ಪರಿಪರಿಕಷ್ಟವನಿತ್ತೊಡಾಂ || ಅರಸನು ಸತ್ಯಭ್ರಷ್ಠನಾಗನೂ । ಧರೆಯೋಳ್ | ಪುತ್ರಗೇ ಮೃತ್ಯುವು ಬಾರದು ! ಪುತ್ರಗೇ ಮೃತ್ಯುವು ಬಾರದು || ವ್ಯರ್ಥವಾಯಿತು ಯನ್ನ ಕೃತ್ಯವು ಧರೆಯೋಳ್

3. ಮೆಚ್ಚಿದೇ ನಿನ್ನಯ ಭಕ್ತಿಗೆ ಮೆಚ್ಚದೇ ನಿನ್ನಯ ಭಕ್ತಿಗೆ ಚಿತ್ರಭೂಪನೆ ನಿನಗೆ ದುಃಖವಿದೇಕೈ | ಹೆಚ್ಚನಾ ವರವನು ಕೊಡುವೆನು ಹೆಚ್ಚಿನಾವರವಂ ಕೊಡುವೆನು ಚಿತ್ರಭೂಪನೆ ನಿನನಗೆ ದುಃಖವಿದೇಕೈ + ಸಚ್ಚರಿತ್ರದಿಂದಿರು ಭೂಪಾ |

**|| ಭುಪಾಳಿ ರಾಗ ||**

**| ತ್ರಿಪುಟತಾಳ || ತ್ರಿಪುರ ಸಂಹಾರ | ಶಿವಕಾರಕಾಕ್ಷನಲ್ಲಿ||**

1. ಘುಡುಘುಢಿಸಿ | ಆರ್ಭಠಿಸಿ ಶಂಕರಾ ಅಡಿಗಡಿಗೆ ಕಡಿಯು ತಲಿಪಲ್‌ಗಳ | ಶಿಡಿದುರೋಷದಿ | ಹಿಡಿದು ಧೈತ್ಯರ | ಧರೆಗೆ ಅಪ್ಪಳಿಸೇ |

2. ಹರನಶೂಲಕ್ಕೆ ಅಸುರ ನಡುಗುತ ಧರಣಿಯೊಳು ಬಿದ್ದೊರಳುತಾಕ್ಷಣ | ಸುರರು ಸಕಲರು ಹರುಷದಿಂದಲಿ | ಪರಶಿವನ ಕೊಂಡಾಡೆ ||

**|| ತ್ರಿಪುಟತಾಳ ಕರಿಬಂಟನ ಚರಿತ್ರೆ ||**

ಘೋರಧಾನ್ನವಿಬರುತಲಿರ್ದಳು ಘೋರನಾಧವ ಮಾಡುತ । ಭಾರಿ ಹೆಣಗಳ ಕಡಿದು ತಿನ್ನುತಾ ಹಲ್ಲನೂಖರಖರನೆಕಡಿಯುತಾ | ತಮ್ಮ ಬೊಮ್ಮನ ಸಹಿತದಿಂದಾ ||



**ಸಾವೇರಿ ರಾಗ**

**|| ಭಾಮಿನಿ || ತ್ರಿಪುರ ದಾನವರ | ಸಂಹಾರ ||**

ಇಂತು ತ್ರಿಪುರದಸುರರ | ಕಂತು ಹರಪರಶಿವನು ಮರ್ಧಿಸೇ | ಅತಿಹರುಷದಲಿ ದೇವದುಂದುಬಿಯೊಳಗೆ ದೇವತರುಪುಷ್ಪರುಷ್ಠಿಯಂಗೈದು | ಹರುಷದಿಂದೋಲಾಡಲು ತ್ರಿಪುರದ ಕಥೆಯ | ಸಿದ್ಧರಾಮೇಶಂಗೆ | ಚೆನ್ನಬಸವೇಶ್ವರರು ಪೇಳೀ ಕಥೆಯು | ಶಿವನದಯದೊಳು | ಸಂಪೂರ್ಣ ಮಾದುದೂ ||

**|| ಭಾಮಿನಿ || ರಕ್ತಬೀಜಾಸುರನ ಕಥೆ || ರಾಜಪುಷ್ಪಮಾಲಿನಿ||**

ಕೇಳುತಾಕ್ಷಣ ನುಡಿಯ ಯುವತಿಯು | ಧಾತ್ರಿಯೊಳೊರಗಿ | ಭೇತರಿಸುತ್ತ | ಹರಹರಾ ಕಾಲಸೂಚನೆಯು ಬಾಯಿಂದಲಾಡಿಸುತಿಹುದೆಂದೆನುತ ಬಾಲೆ ಬಿದ್ದೊರಳಿದಳು ಧರಣಿಗೆ

**|| ಪುಷ್ಪಮಾಲಿನಿ | ರಕ್ತಬೀಜಾಸುರನಿಗೆ | ಅಟ್ಟತಾಳ ||**

1. ಲಾಲಿಸು ಲಾಲಿಸು ಪ್ರಾಣಕಾಂತಾ ಪ್ರಾಣಕಾಂತ || ಪುತ್ರರುಪುತ್ರರುಶುಂಬಾಸುರರೂ ಕೇಳ್ ಸುರರು | ಹರನ ಕುರಿತು ತಪವಮಾಡಿ ಮರಣವಿಲ್ಲದ ವರವ ಪಡೆದರೂ ಲಾಲಿಸು ಲಾಲಿಸು ಲಾಲಿಸು ಪ್ರಾಣಕಾಂತಾ ಪ್ರಾಣಕಾಂತಾ |
2. ಧರ್ಮಬರ್ಪದು ಸತಿಯರಿಂದಾ | ಪ್ರಾಣಕಾಂತ | ಮರ್ಮಭೇಧವು ಪುಟ್ಟಿತಿನ್ನೂ ಕೇಳಿನ್ನೂ ಕರ್ಮತೊಡಗುವುದಿನ್ನೂ ರಮಣಾ ಕೇಳ್ ರಮಣ | ಲಾಲಿಸು ಲಾಲಿಸು ಲಾಲಿಸು | ಪ್ರಾಣಕಾಂತಾ | ಪ್ರಾಣಕಾಂತ

**|| ರೂಪಕತಾಳ || ಸತ್ಯಚಿತ್ರಕೇತುವಿಗೆ ಚಾರುಮತಿ |**

ಏಕೆ ತಡವೊ ಪ್ರಿಯಾ | ಹಾಕುಖಡ್ಗವರಾಯ ಬೇಕಿಲ್ಲವೆನಗೀ ದೇಹಾ | ಸಾಕುಮಾಡೊ ಪ್ರಿಯಾ | ಏಕೆ ತಡವೊ ಪ್ರಿಯಾ | ಘಾತಿಸಿಯನ್ನ ಸ್ವಾಮಿ ಮಾತನಾಲಿಸಿ ಪ್ರೇಮೀ | ಸತ್ಯದಿನಡೆ ನೀ ಸ್ವಾಮಿ ಪುತ್ರನ ಉಳಿಸಿ ಪ್ರೇಮೀ |



**| ಭಾಮಿನಿ ||**

**|| ದಕ್ಷಯಜ್ಞ ದಾಕ್ಷಾಯಿಣಿ ಅಗ್ನಿ ಪ್ರವೇಶವಾದ ನಂತರ**

**ನಂದೀಶನಿಂದ ಶಿವನು ವಿಷಯ ತಿಳಿದ ನಂತರ ||**

ಮಡದಿ ಮಡಿದೆಯ | ನೀನವತರಿಸು ಗಿರಿರಾಜ ಮೇನಕಿಯರ | ಘರ್ಭದೊಳು ವೀರೇಶ ನೀ ನಡೆಸು | ಕೈಲಾಸ ಭಾರವನು ಎಂದೆನುತ ರುದ್ರನು | ಸಡಗರದಿ ಆಬಯ ನೀಡುತ || ಶಕ್ತಿಯ ಯೋಗದೊಳು | ಶಿವತಾ ದಕ್ಷಿಣಮೂರ್ತಿಯಾಗಿ | ಅಂತರ್ ಮುಖನಾಗಿ ಕುಳಿತಿರೆ ! ನಾರದರು | ಗಿರಿರಾಜನಲ್ಲಿ ಗೈ ತಂದು ಗಿರಿಜಯ ವಿವರವಂತಿಳಿಸಿ | ಸತ್ವರೂ ಸೇರಿ ಗಿರಿಜಾ ಕಲ್ಯಾಣಂ ನಡೆಸಿದರೆಂಬಲ್ಲಿಗಾಯಿತಿ ಕಥೆಯು | ಸಂಪೂರ್ಣವಾದುದೂ

**|| ಯಕ್ಷಗಾನದ ಹಾಡು ಕೌರವ - ಶಲ್ಯನಲ್ಲಿ 1 ಕರ್ಣಪರ್ವದ ಕಥೆ ||**

**|| ದಕ್ಷಿಣಾದಿ ದಾರಿ || ಅಟ್ಟತಾಳ**

1. ದೊರೆರಾಯಲಾಲಿಸ್ಯೆಯ್ಯಾ | ಸಂಗರದವೃತ್ತಾಂತಗಳ ಕೇಳಯ್ಯಾ | ಅರುಹುವುದಕೆಯನಗೆ | ಅಂಜಿಕೆಯಾಗಿಹುದು | ಕರುಣದಿ ಮನವಿಟ್ಟು ಲಾಲಿಸು ಕಿವಿಗೊಟ್ಟು ದೊರೆರಾಯ ಲಾಲಿಸಯ್ಯಾ ॥ 2ನೇ ಕಾಲ | ದೊರೆರಾಯಲಾಲಿಸಯ್ಯ ಸಂಗರದ ವೃದ್ಧಾಂತಗಳ ಕೇಳಯ್ಯ?

**|| ಅಟ್ಟತಾಳ ||**

1. ಮಾವ ಕೋಪವೇಕೊ ಮಾವಯ್ಯ ಮಾವ ಮಾವ ಕೋಪವೆ | ನಾ ಪೇಳಿದ ಮಾತುಗಳಿಂದೇಕೊ | ಪರರಾಪತ್ತಿಗಾಗಿ | ಕಾಯಬೇಕು ಎನುತಲಿ ಶಿರಬಾಗಿ ನಮಸುವೆ || (ಯಕ್ಷಗಾನ) ಮಾವಕೋಪಾವೇಕೊ ಮಾವಯ್ಯ ಮಾವ ಮಾವ ಕೋಪವೇಕೋ

2. ವಂಗದೇಶಾದಿಪನು ಕರ್ಣನು ತಾನು ಸಂಗರದಲ್ಲಿ ಶೂರನು || ಭಂಗವೇನಿದರೊಳು | ತುಂಗವಿಕ್ರಮನಾಥ || (ಯಕ್ಷಗಾನ ಅಟ್ಟತಾಳ) ವಂಗದೇಶಾದಿಪನು ಕರ್ಣನು ತಾನು ಸಂಗರದಲಿ ಶೂರನು | ಭಂಗವೇನಿದರೊಳು | ತುಂಗ ವಿಕ್ರಮನಾಥಾ | ವಂಗದೇಶಾಧಿಪನೂ

**|| ಆದಿತಾಳ || ಮಂಗಳಾರತಿ**

1. ಇಂದಿನ ದಿನವೆ ಶುಭದಿನವು ಇಂದಿನವಾರವೆ ಶುಭವಾರ || ಮಂಗಳ ಯದುಕುಲತಿಲುಕನಿಗೆ | ಮಂಗಳದ್ವಾರಕಿ ನಿಲಯನಿಗೆ || ಅಜ ಇಂದ್ರಾದಿಗಳಿಂದನುತಿಸಿ ಕೊಂಬವನಿಗೆ| ಅರ್ಜುನಗೊಲಿದು ಸಾರಥಿಯಾದವರೇ | ಇಂದಿನ ದಿನವೇ ಶುಭ ॥



2. ನಾರದವಂದ್ಯಗೆ ಪ್ರಹಲ್ಲಾದನ ತೊರೆದಗೆ ನಾರಿಯರಿಗೆ ಮೋಸ ಪಡಿಸಿದಗೆ | ಮಂಗಳ || ಯದುಕುಲತಿಲುಕನಿಗೆ ಜಯಮಂಗಳ ದ್ವಾರಕಿ ನಿಲಯನಿಗೆ ಇಂದಿನ ದಿನವೇ ಶುಭವಾರ

ಶೇಷಶಯನನಿಗೆ | ದೋಷವಿದೂರಗೆ ವಿಶಕಂಠನ ಸರಿಪೋಲುವಗೇ | ಮಂಗಳಯದುಕುಲತಿಲುಕನಿಗೇ ಜಯ | ಮಂಗಳದ್ವಾರಕಿ ನಿಲಯನಿಗೆ | ಇಂದಿನ ದಿನವೇ ಶುಭ ದಿನವು ಇಂದಿನವಾರವೆ ಶುಭವಾರ | ಜೈ ಮಂಗಳ ಗುರು ನಮಃ ಪಾಶ್ವತಾಪತಯೇ ಹರಾಹರಮಹಾದೇವ

**| ಕುರುಜಂಪೆತಾಳ ||**

1) ಜಯಮಂಗಳಂ ನಿತ್ಯ ಶುಭಮಂಗಳಂ ಜಯಜಯತು ಜಗಜ್ಜಗಜ್ಜನನಿ | ಬಗಳಾಂಬೆಗೆ | ಜಯಮಂಗಳಂ ನಿತ್ಯ ಶುಭ ಮಂಗಳಂ ||

2) ಕಾಳೀಕೆಯು ಎನಿಸುತಲಿ | ಕೀಳುಮಧುವೆಂಬುವರ | ಖೂಳ ಕೈಟಬರೆಂಬ ಅಸುರರ್ಕಳ | ತಾಳಿಪುರುಷತ್ವವನು | ಸೀಳುತಲಿ ಮಸ್ತಕವ ಹೋಳೂ ಸಹಸ್ರಮಾಡ್ಡ ಪಾಲಾಕ್ಷಿಗೇ || ಜಯಮಂಗಳಂ ನಿತ್ಯ ಶುಭ ಮಂಗಳಂ

3) ದುಷ್ಟಮಹಿಷಾಸುರನು | ಅಷ್ಟದಿಕ್ಷಾಲಕರ ಪಟ್ಟಣಕೆ ದೊರೆಯಾಗಿ | ದೇವರ್ಕಳಾ ನಿಷ್ಠೆಯಿಂರೋದಿಸಲು | ಕುಟ್ಟಿಮಹಿಷನ ಕೊಂದ | ಮಹಾಲಕ್ಷ್ಮಿಗೆ | ಜಯಮಂಗಳಂ ನಿತ್ಯ ಶುಭ ಮಂಗಳಂ

4) ಹಿರಿಯ ಶುಂಭನು ತಾನು ಕಿರಿಯನು ನಿಂಭಾ ಸುರರ ಬಾದಿಸಲವರು | ಮೊರೆಯಿಡುತಿರೇ | ಹರಸಿ ಹರುಷನ ತಾಳ ಗುರುಚಿದಾನಂದ ಭಾರತೀ ದೇವಿಗೆ | ಜಯಮಂಗಳಂ ನಿತ್ಯ ಶುಭಮಂಗಳಂ ಜಯಜಯತು ಜಗಜ್ಜನನೀ ಬಗಳಾಂಬೆಗೆ | ಜಯಮಂಗಳಂ ||

## || ಅಟ್ಟತಾಳ ||

ಎತ್ತಿದಾರತಿ ಗಿರಿಜಾವರರೇ | ಮತ್ತೆ ಗಜಗಮನೆಯರೆಲ್ಲಾ ಹರಗೇ | ಸಾಂಬಶಿವಗೆ ಮೃತ್ಯುಜಯಗೇ | ಮುರಹರೆಗೆ | ಎತ್ತಿದಾರತಿ ಗಿರಿಜಾವರಗೆ ಮತ್ತಗಜಗಮನೆಯರೆಲ್ಲಾ ಹರಗೆ | ಸಾಮಬಶಿವಗೇ ಮೃತ್ಯುಂಜಯರೇ | ಮುರಹರಗೆ | ಎತ್ತಿದಾರತಿ ಗಿರಿಜಾವರಗೆ ಸತ್ಯಸಮರಸ ಉಳ್ಳಬಾಲೆಯರರ್ಥಿಯಿಂದಲಿ ಪಾಡುತ | ಚಿತ್ರಗೆಲಸದೊಳೊಪ್ಪುತಿಹ ನವರತ್ನದಾರತಿ ಬೇಗನೇ | ಎತ್ತಿದಾರತಿ ಗಿರಿಜಾ ವರಗೇ ॥

ಶ್ರೀ ವಿಶ್ವರಾಯ ನಮಃ

ಶ್ರೀ ಕಲ್ಲೇರ್ಶವರ ಸ್ವಾಮಿಯೇ ನಮಃ

ಶ್ರೀ ಮಂಜುನಾಥೇಶ್ವರಾಯ ನಮಃ

ಶ್ರೀ ಶಾರದಾಯ ನಮಸ್ತೇ ನಮಃ

ಆದಿಶಕ್ತಿಯೇ ನಮಸ್ತೇ ನಮಃ

ಲಕ್ಷ್ಮೀದೇವಿಯೇ ನಮಃ

ಗಂಗಾಮಾತೆಯೇ ನಮಸ್ತೇ ನಮಃ

ಜೈ ಮಂಗಳ ಗುರು ನಮಃ

ಶ್ರೀ ವಿಷ್ಣು ದೇವಾಯ ನಮಃ

ಶ್ರೀ ಬ್ರಹ್ಮ ದೇವಾಯ ನಮಃ

ಶ್ರೀ ಗುರು ದೇವಾಯ ನಮಃ

ಶ್ರೀ ಮಾರುತಿಯೇ ನಮಃ

ಶ್ರೀ ಸರ್ವೇಶ್ವರಾಯ ನಮಃ

ಪಾರ್ವತಿ ಪತಿಯೇ ಹರಾಹರ ಮಹಾದೇವ 1

ಶುದ್ಧ ಯಕ್ಷಗಾನದ ಹಾಡುಗಳು | ಶುದ್ಧದಕ್ಷಿಣಾದಿ

ಸುಮಾರು ಕಥೆಗಳ ಕೆಲವು ಹಾಡುಗಳು

ರಾಗತಾಳಗಳನ್ನು ಗುರುತಿಸಿ ಬರೆದಿರುವ ಹಾಡುಗಳು ಭಾಮಿನಿಗಳು ಕಂದಗಳು ಬರೆದವರು ಕಲ್ಲುಮನೆ ಎ.ಎಸ್.ನಂಜಪ್ಪ ಭಾಗವತ್ ಅರಳಗುಪ್ಪೆ, ಕಿಬ್ಬನ ಹಳ್ಳಿ ಹೋಬಳಿ, ತಿಪಟೂರು ತಾಲೂಕು ತುಮಕೂರು ಜಿಲ್ಲೆ ತಾಯಿ ರುದ್ರಮ್ಮ, ತಂದೆ ಕಲ್ಲು ಮನೆ ಶಿವನಂಜಪ್ಪನವರು ಹಿರೇ ಹೆಂಡತಿ ರುದ್ರಮ್ಮನವರು ಕಿರಿಯ ಹೆಂಡತಿ ಭಾಗೀರತಮ್ಮ. ಹಿರಿಯ ಹೆಂಡತಿಯ ಮಗ ಕಲ್ಮನೆ ಎ.ಎಸ್.ನಂಜಪ್ಪ ನನ್ನ ಹೆಂಡತಿ ಸಿದ್ದಲಿಂಗಮ್ಮ ಫೋನಂ 97402-35507 ಗ್ರಾಮ ಅರಳಗುಪ್ಪೆ ತಾಲೂಕು ತಿಪಟೂರು ಜಿಲ್ಲೆ ತುಮಕೂರು ನನ್ನ ಗುರುಗಳು ಮೂಲೇಮನೆ ಭಾಗವತ ಸಿದ್ದಲಿಂಗಯ್ಯನವರು ಭಾಗವತ್ ದಿವಾಕರಾಚಾರ್ ಕಲ್ಲು ಮನೆ ಶಾಂತವೀರಪ್ಪನವರು ಭಾಗವತ್ ತಿಮ್ಮೇಗೌಡ್ರು (ಬ್ಯಾಟಪ್ಪನವರ) ಭಾಗವತರು ಇವರೆಲ್ಲರಿಗೂ ಅರಳಗುಪ್ಪೆಯವರು ಗ್ರಾಮದವರೇ 1ನೇ ಗುರು ನನ್ನ ತಾತ ಕಲ್ಲುಬಾಗಿಲು ನಂಜಪ್ಪನವರ ತಾಯಿಯ ತಂದೆ ಭಾಗವತ್ ಮಲ್ಲಿಕಾರ್ಜುನಪ್ಪನವರು ಇವರ ಸಮಕಾಲೀನರು ಮತ್ತು ಮರಾಠಿ ಜನಾಂಗದ ರಾಮನಜ್ಜನವರು ಇವರು ಮೂರು ತಲೆಮಾರಿನ ಭಾಗವತರು ಅರಳಗುಪ್ಪೆಯವರು. ನಾಲ್ಕು ತಲೆಮಾರಿನಿಂದಲೂ ಅರಳಗುಪ್ಪೆಯಲ್ಲಿ ಯಕ್ಷಗಾನ ದಕ್ಷಿನಾದಿ ಎಂಬ ಎರಡು ದಾಟಿಯಲ್ಲಿ ಬಯಲಾಟ ಅಭಿನಯಸುತ್ತಿದ್ದರು ಎಂದು ತಿಳಿದು ಬಂದಿದೆ. ಸತ್ಯದ ಸಂಗತಿ ವಿದ್ಯುತ್ ಲೈಟು ಮತ್ತು ಪೆಟ್ರೋಮ್ಯಾಕ್ಸ್ ಇಲ್ಲದೆ ಇದ್ದ ಕಾಲದಲ್ಲಿ ಮಣ್ಣಿನ ಕುಂಬಗಳಿಗೆ ವಂಗೆಎಣ್ಣೆ, ಹಿಪ್ಪೆಎಣ್ಣೆ, ತುಂಬಿ ಬಟ್ಟೆಯಲ್ಲಿ ಬತ್ತಿವಸೆದು ರಂಗಸಜ್ಜಿಕೆಯ ಮುಂದೆ

ಎರಡೂ ಭಾಗದಲ್ಲು ಈಚಲ ಮರದ ಕಂಬಗಳನ್ನು ನೆಟ್ಟು ಅದರ ಮೇಲೆ ಈ ಕುಂಭಗಳನ್ನು ದನಿನಸಗಣಿ ಇಟ್ಟು ಕುಂಭಗಳನ್ನು ಇಟ್ಟು ದೀಪಗಳನ್ನು ಹಚ್ಚಿ ಆ ಬೆಳಕಿನಲ್ಲಿ ಯಕ್ಷಗಾನ ಬಯಲಾಟ ಆಡುತ್ತಿದ್ದರು. ನನ್ನ ಸುಮಾರು 4ನೇ ವರ್ಷದ ಹುಡುಗನಲ್ಲಿ ಕನಸಿನಲ್ಲಿ ಕಂಡ ಹಾಗೆ ನೋಡಿದ್ದೂ ಉಂಟು, ಹಿರಿಯರು ಹೇಳಿದ್ದು ಉಂಟು.



**ಶುಭಮಸ್ತು**

**ನಾಟಿ ರಾಗ**

**ಶುದ್ಧಯಕ್ಷಗಾನಧಾಟಿಯಲ್ಲಿ**

ಗಣಪತಿ ಸ್ತೋತ್ರ || ವಿಜ್ಞಾದ್ವಾಂತ ನಿವಾರುಕರಣಿ | ವಿಘ್ನಾಠರವೀಹವ್ಯವಾಟ್ ವಿಜ್ಞಾವ್ಯಾಳ ಕುಲೋಪಮತ್ತ ಗರುಡೋ ವಿಶ್ಲೇಶ್ವರಂ || ಪಾತುಮಾಂ

ವಿಜಸ್ತುಂಗಗಿರಿ ಪ್ರಭೇದನಪವಿ | ವಿಜೇಬ್ಬಿಕಂಭೋದ್ಭವಂ | ವಿಕ್ಟೋಗೌಘನ ಪ್ರಚಂಡ ಪವನಂ | ವಿಶ್ಲೇಶ್ವರಂಪಾಹಿಮಾಂ |

**|| ಝುಂಪೆ ತಾಳ ||**

1. ಶ್ರೀಗೌರೀವರಬಾಲಾ | (ಒಂದು ಗತಿ) ಶ್ರೀಗೌರಿವರಬಾಲಾ ಸಿಂಧೂ ರಾಂಕಿತ ಪಾಲ | ನಾಗೇಂದ್ರವರಪಾಲನತಸತ್ಯಶೀಲಾ ||
2. ನಿಟಿಲಾನೇತ್ರನ ಸುತನೇ || (ಒಂದು ಗತಿ) ಸಿಟಿಲಾನೇತ್ರ ನಸುತಕನೇ ನಿಗಮಾಗಮವಂದಿತನೇ | ಘಠಿಕಾಸನ್ನಿಬಕರ್ಣ ಕುಂಡಲಧರನೇ ||
3. ಶ್ರೀ ಕಾತ್ಯಾಯಿನಿತನಯ || ನೀ ಕರುಣಿಸು ಘನವತಿಯಾ | ಕರುಣಾದಿಂದಲಿಯಮಗೆ ಕೃಪೆಯಿಟ್ಟು ಸಲಹಮ್ಮಾ |
4. ವೇದಾಗಮಶೃತಿಗಳಿಗೆ ಆದಿದೇವನು ನೀನೂ ನೀದಯಾಮಾಡೆನಗೆ 1 ಮತಿಗೆ ಮಂಗಳವಾ ||
5. ಭವಹರನ ಭವಸುತನೇ | ಭುವನಾರ್ಚಿತಪಾಲಕನೇ | ಭುವಿಯಾಜನರುಗಳನ್ನೂ ಕರುಣಾದಿಂದಲಿ ಪೊರೇ ಗಣಪಾ |

**|| ಶಾರದಾಸ್ತುತಿ | ರೇಗುಪ್ತಿ ಅಟ್ಟತಾಳ || (ರೇಗುಪ್ತಿ ರಾಗ) ಮೋಹನ ||**

1) ನಂಬಿದೆ ನಿಮ್ಮ ಪಾದಾಂಭುಜಯುಗಳವಾ | ಶಾರದಾಂಬಾ | ಅಂಬಾ ತಾಯೇ ಶಾರದಾಂಬ | ತಾಯೇ ಬೆಂಬಿಡದ ಸುದಿನ | ನಮ್ಮಮ್ಮೆಲ್ಲರ ಸಲಹಮ್ಮಾ ಶಾರದಾಂಬಾ ||

2) ಸೃಷ್ಟಿಗಧಿಕವಾದ ಶೃಂಗೇರಿ ಪುರವಾಸಿ ಶಾರದಾಂಬಾ | ಅಂಬಾ ತಾಯೇ ಶಾರದಾಂಬ | ತಾಯೇ ಶ್ರೇಷ್ಠತನದಿ | ನಮ್ಮೆಲ್ಲರ ಸಲಹಮ್ಮ ಶಾರದಾಂಬಾ

3) ಕಪಟ ನಾಟಕಿ ನಿನ್ನ ಮಹಿಮೆಯ ನರಿವರೇ | ಶಾರದಾಂಬ ಅಂಬಾ ತಾಯೇ ಶಾರದಾಂಬ | ತಾಯೆ ಕೃಪೆಯಿಂದ ನಮಗೆ ಮತಿಯಿತ್ತು ಸಲಹಮ್ಮಾ ಶಾರದಾಂಬಾ ||

4) ಕಮಲಬ್ರಹ್ಮ ರಾಣಿ | ಕರದಿ ಪುಸ್ತಕವೇಣೀಶಾರದಾಂಬ | ಅಂಬಾ ತಾಯೇ ಶಾರದಾಂಬಾ || ಕರುಣದಿಂದಲಿ ನೀನು ಕೃಪೆಯಿಟ್ಟು ಸಲಹಮ್ಮಾ ಶಾರದಾಂಬಾ



**ಆರ್ಬಿರಾಗ**

**ಕರ್ಣಪರ್ವ ಕಥೆ ಕುರುಕ್ಷೇತ್ರ | ತ್ರಿಪುಟತಾಳ || ಕರ್ಣ ಅಶ್ವತ್ಥಾಮನಿಗೆ ||**

ಗರುಕುಮಾರ ಮಾತಿಗಾಕ್ಷಣ | ಕರ್ಣಪೇಳಿದ ನಿಮ್ಮ ತಂದೆಯು | ದೊರೆತನಕೆ ನೀವಿರಲು ! ಯನ್ನು ಕರೆಸಬಹುದೇ

**| ತ್ರಿಪುಟ ತಾಳ || ಅಶ್ವತ್ಥಾಮ | ಕರ್ಣನಿಗೆ |**

ಯಾಕವರ ಮಾತಿನ್ನು ಸೇನಾ ವಿವೇಕ ಭಾರವ ನಡೆಸುನೀನದ | ಅಕುರುಕ್ಷಿತ ಭೂಪನಡೆವ ವಿವೇಕತನದಿಂದಾ ||

**|| ತ್ರಿಪುಟ ತಾಳ || ಅಶ್ವತ್ಥಾಮರು ಕೌರವನಿಗೆ ||**

ಬುದರು ಮಂತ್ರಾಗಮದಿ ಪಂಕಜ | ವದನೆಯರು ಶೋಭಾನದಿಂದಲಿ | ದಳಪತಿತ್ವವ | ಸೂತಜನಿಗೆ ನೇಮಿಸ್ಯೆ ನೀನೂ

**|| ತ್ರಿಪುಟತಾಳ || ಶಲ್ಯಭೂಪತಿ | ಕೌರವನಿಗೆ |**

ಏನಬೊಗಳಿದೆ ! ಎಲವೊ ಕೌರವ ಹಾಳು ಮಾಡಿದೆ ಸೂತಗೆನ್ನನು | ಹೇಳಿ ಫಲವಿನ್ನೇನು | ನಿನ್ನಯ ಖಳತನವಾ

**| ತ್ರಿಪುಟತಾಳ || ಶಲ್ಯಕೌರವನಿಗೆ**

ನೀನು ಮಾಡಿಲ್ಲೊದೊಡೆ ನಿನ್ನಯ | ಸೂನುಅನುಜಾದಿಗಳು ಮಾಡಲಿ | ಹೀನಕರ್ಣನ ಕಾಲ ಕೆಲಗೆ ಸಾರಥೀತನವಾ |

**|| ತ್ರಿಪುಟತಾಳ || ಬಬ್ರುವಾಹನನ ಕಥೆ | ಬಬ್ರುವಾಹನ | ಅರ್ಜುನನಿಗೆ||**

ಏನಬೊಗಳಿದೆ | ಎಲವೊಪಾರ್ಥನೇ | ಜಾರಿಣಿಯ ಮಗನೆಂದು ನುಡಿವೆಯ | ಹರಿವೆ ನಿನ್ನಯ ಗರ್ವವನುನಾ | ದುರುಳ ಕೇಳೆಲವೋ |

**|| ಮಧ್ಯಮಾವತಿರಾಗ ||**

**|| ಭಾಮಿನಿ | ಕರ್ಣಪರ್ವ ಕಥೆ |**

ಧರಣಿಪಾಗ್ರಣಿ ಕೇಳಿತ್ತ | ಕೌರವನು | ಗರುಡಿಯಾಚಾರ್ಯರ | ಧುರವ (ರಣವ) ನಿರೀಕ್ಷಿಸುತಿರಲು ಚರನೋರ ನಡೆತಂದು | ಗುರುರಣದಿ ಮಾಡಿದ ವಾರ್ತೆಯಂ | ಕುರುಪತಿಗೆ | ಪೇಳ್ವನು ಸಾರಥಿಯು |

**|| ಅಟ್ಟತಾಳ || ಕರ್ಣಪರ್ವ (ಸಾರಥಿ ವಿದುರ) ಕೌರವಗೆ ||**

ಗರುಡೀಯಾಚಾರ್ಯರಿಗೆ 1 ಧುರದೋಳಪಜಯವಾಯ್ತು | ಬಿಲ್ ಮುರಿದು ವಿಧುರನು | ಮೊದಲೇ ಜಾರಿದನೂ



**|| ಅಟ್ಟತಾಳ || ಕರ್ಣಪರ್ವ | ಶಲ್ಯ ಕರ್ಣನಿಗೆ ||**

ಅಹಹ ಮೆಚ್ಚಿ ದೇನಿದಕೆ | ನಿಮ್ಮಾಯ ಸಾಹಸಕೆ ಅಹಹ ಮೆಚ್ಚದೆನಿದಕೇ ಹರಿಗಾಳಗೆಲುವೂದಕೆ | ಅಸದಳವೆನು ತಾಲಿ ತಂದೂ ಕೊಂಡಿರಿ ನೀವು ಈರ್ವರೊಳೂ ಕದನಾವ ಅಹಹ ಮೆಚ್ಚಿದೆನಿದಕೇ |

**|| ಭಾಮಿನಿ || ರತೀಕಲ್ಯಾಣ | ಕೃಷ್ಣ ||**

ತಂಗಿ ದ್ರೌಪದನಾ ಹಿಂದೆ ಮಾಡಿದ | ಉಪಕಾರವ ನೆನೆನೆನೆದು | ಈ ಕಷ್ಟ ಕಾಲದಿ ನೀ ಬಂದೆನ್ನ | ಮಾನಹಾನಿಯತಪ್ಪಿಸಿ | ಯನ್ನ ಪ್ರಾಣವ ಉಳಿಸಮ್ಮ ತಂಗಿ ದೌಪದಿಯೇ |

**|| ಅಟ್ಟತಾಳ | ರತೀಕಲ್ಯಾಣ | ಕೃಷ್ಣದ್ರೌಪದಿಗೆ ||**

ತಂಗೀ ನೀ ಬಂದೂದು | ಲೇ ಸಾಯ್ತು ಕಾರ್ಯಕೆ || ಲೇಸಾಯ್ತು ಕಾರ್ಯಕ್ಕೆ ಬೇಗಾದಿಂದಲಿಹೋಗಿ ಸುತಗೇ ಕನ್ನಿಕೆಯಾ

**| ಅಟ್ಟತಾಳ || ಇಂದ್ರಜಿತು ಕಾಳಗ || ಇಂದ್ರಹಿತು ಸುಲೋಚನೆಗೆ |**

ತರುಣೀರನ್ನಳೆಕೇಳು | ತಡೆವುದು ಚಿತವಲ್ಲ || ತಡೆವು | ಹರಿಗಾಳ ಗೆಲೊವ ವೇಳೆಯೊಳ್ ನೀನೂ ||

**|| ಭಾಮಿನಿ || ಇಂದ್ರಜಿತು || ಇಂದ್ರಜಿತು ಕಾಳಗ ||**

ಚಿಂತೆಯಾತಕೆ ತಂದೆ | ರಿಪುಕುಲ ಅಂತಕನು ನಾನಿರಲು | ಕಪಿಕುಲದ ಸಂತತಿಯ ಗೆಲುವುದಕೆ | ಕೊಡುವೀಳ್ಯವ ತನಗೆಂದಾ |

**|| ಅಟ್ಟತಾಳ || ಕುರುಕ್ಷೇತ್ರ ಕರ್ಣಪರ್ವ | ಕೃಷ್ಣಧರ್ಮರಾಯನಿಗೆ||**

ನಿನ್ನಾ ಸದ್ಧರ್ಮಾಫಲ ಅನ್ಯಾರನು ಜೈಸೀದುದು || ಅನ್ಯಾರ || ಯನ್ನಿಂದಲೇ ನಹುದು ! ಕೇಳೋ ಧರ್ಮಜನೇ

**|| ಅಟ್ಟತಾಳ ||**

ಕರುಣಾವಾರುಧಿ ನೀವು | ಆರುಹೂವುದು ಸಹಜಾ ಗುಣ || ಅರುಹುವುದು ಸಹಜಾ ಗುಣ | ಧರೆಯೊಳಗೆ ಸುಜನಾರು | ತಮ್ಮ ಪೊಗಳೂವರೇ |

**|| ಭಾಮಿನಿ | ಕರ್ಣ ಪರ್ವ | ಸಾರಥಿ ಕೌರವನಿಗೆ||**

ಕಂದನಶ್ವತ್ಥಾಮ | ಸುರಪುರಕೆ ತೆರಳಿದಲಿನೆನಲು ಕೊಂದನತಿ ದೇಹಗಳ | ಬಿಸುಟಾ ನಂದವನ | ಬಳಿಗೈಲಿ | ಮಂದಮತಿ | ದೃಪದನಸುತ | ಖಂಡಿಸಿದನು | ಗುರುಗಳ ದೇಹವನು ||



**|| ಅಟ್ಟತಾಳ || ಕೌರವ | ಕರ್ಣಗೆ ಶಲ್ಯನಿಗೆ ||**

ಗೆಲುವಾ ತಂದಿರಿ ನಮಗೆ | ಇನಸುತನೊಳು ನೀವು | ಕಲಹಮಾಳ್ಪುದ ನೋಡಿ | ನಗವರೂ ಹರಿಗಾಳು ಅಹಹ ಮೆಚ್ಚಿದೇನಿದಕೇ |

**|| ಅಟ್ಟತಾಳ || ರತೀಕಲ್ಯಾಣ | ಕೃಷ್ಣದೌಪದಿಗೆ ||**

ಬಾರಮ್ಮ ತಂಗೀ ನೀ । ಹೋದ ಕಾರ್ಯವು ಈಗ || ಹೋದ | ಕೈಸೇರಿತೇನಮ್ಮಾ ತಂಗೀ ದೌಪದಿಯೇ |

**|| ಅಟ್ಟತಾಳ || ಕೃಷ್ಣ | ರುಕ್ಮಿಣಿಗೆ |**

ತರಳಾ ಮನ್ಮಥನಿಗೆ | ತಕ್ಕಾ ರತ್ನವ ತಂದು | ತಕ್ಕರತ್ನವ ತಂದು | ಪರಿಣಾಯವನಡೆಸವೆ || ಕೇಳೆನ್ನಾರಮಣೀ ||

**|| ಅಟ್ಟತಾಳ || ರತೀಕಲ್ಯಾಣ | ಶ್ರೀಹರಿ | ಸಾರಥಿಯಲ್ಲಿ**

ಆಡೀದಂದಿ ಎಂಟು ದಿನಗಳೆದು ಬರುತೀದೆ || ನಾಡೀನೋಳ್ ಅಪವಾದ ಬರುವಾತೆರನಾಯ್ತು |

**|| ಭಾಮಿನಿ | ರತೀಕಲ್ಯಾಣ | ದ್ರೌಪದೀ ||**

ಅಂಗಜನಪಿತನಿಂತು ಧ್ಯಾನಿಸೇ | ಮಂಗಳಾಂಗಿ ದ್ರೌಪದಿಯು || ಹರಿ ಹರಿ ಶ್ರೀಹರಿ ಅಣ್ಣಾ ಜನಾರ್ಧನ | ಯನ್ನನೆನೆದ ಪರಿಯೇನೆನುತ | ಅಂಥಾ ಕಷ್ಟವೇನು (ಎಂದೆನುತ) ಅಣ್ಣಾ ಎಂದೆನುತ | ಅಧಿದುಃಖದೊಳು | ಹೋಡೋಡಿ ಬಂದಾಗ ವಂದಿಸಿದಳು | ಅಗ್ರಜನ ಪಾದಂಗಳಿಗೇ

**|| ಅಟ್ಟತಾಳ || ಶ್ರೀಹರಿ ಬ್ರೌಪದಿಗೆ ||**

ತಂಗೀ ನೀ ಬಂದೂದು ಲೇಸಾಯ್ತು ಕಾರ್ಯಕ್ಕೆ | ಸುಂದರ ಕಂದರ್ಪಗೆ | ತಕ್ಕಾ ಕನ್ನಿಕೆಯಾ |

**ಅಟ್ಟತಾಳ || ಅಹಿರಾವಣ | ಮಹಿರಾವಣ ಕಥೆ | ರಾವಣ ||**

ಅರುಹಿದನು ಪೂರ್ವಾದಲಿ | ಸತ್ಯವಂತನು ಯನಗೆ || ಸತ್ಯಾವಂತನುಯನಗೆ ಕಷ್ಟಕ್ಕಾಗುವೆನೆಂದು || ಇತ್ತೀಹ ಭಾಷೆ |

**ಅಟ್ಟತಾಳ || ರಾವಣ | ಮಹಿರಾವಣನಿಗೆ**

ಪಾತಾಳವಾಸೀ ಕೇಳು | ಭೂತಾಳದೊಳಗಿನ್ನು | ಭೂತಾಳದೊಳಗಿನ್ನೂ | ದಶರಥನಸುತರಂತೆ | ರಾಮಲಕ್ಷ್ಮಣನರೂ |

**ಅಟ್ಟತಾಳ || ಬಬ್ರುವಾಹನ ಕಾಳಗ || ಬಬ್ರುವಾಹನ ತಾಯಿಗೆ |**

**ಮೂಡಲಪಾಯ ಯಕ್ಷಗಾನ -3ನೇ ಪ್ರತಿ**

**| ತೋಡಿ ರಾಗ || ರೂಪಕ ತಾಳ | ಚಿತ್ರ ಕೇತು (ದೇಶ್ ತೋಡಿರಾಗ -2)**

ಏನು ಮೋಸವಾಯಿತೀಗ | ಕೆಟ್ಟೆನಕಟಕೆಟ್ಟೆನೂ 1 ಹಾನಿಯಾಯ್ತು | ರಾಜ್ಯಸುತೆಗೆ ಧಾನವಾಂತಕಾ || ಏನು ಮೋಸವಾಯಿತೀಗ | ಕೆಟ್ಟೆನಟಕೆಟ್ಟೆನೂ

**| ದೇಶ್ ತೋಡಿರಾಗ || ಅಟ್ಟತಾಳ**

ಬಾರೇ ಸತಿಯೇ ಚಾರೂ ಮತಿಯೇ | ತಾರೇಸುತನ ಮೋರೆಯನೋಲ್ವೇ ಬಾರೇ || ತೆರಳೇವನಕೇ | ರಾಜ್ಯಾವತೊರೆದು | ಧರೆಯೋಳ್ ಹೀನನುನಾನೂ ತೊರೆಯೆ ರಾಜ್ಯವನೂ | ಬಾರೇ ಸತಿಯೇ ಚಾರೂಮತಿಯೇ ||

**|| ತೋಡಿ ರಾಗ || ಅಟ್ಟತಾಳ || ಚಿತ್ತಕೇತುಕಥೆ | ಚಾರುಮತಿಸುಮತಿಗೆ**

ಅಂದದ್ದೂ ಅಪರಾಧತಂಗೀ | ಶರಗೊಡ್ಡಿಬೇಡಿಕೊಂಬೆ ಮಂಗಳಾಂಗಿ | ಹಡೆದಾಮಗನನಿನ್ನಾ ಹುಡಿಯೋಳ್ ಹಾಕುವೆನಮ್ಮಾ! ಇಂದೂಯನ್ನನ್ನು ಮನ್ನಿಸೂ ತಂಗೆಮ್ಮ ಕೇಳು | ಎನ್ನಾತಪ್ಪನು ಮನ್ನಿಸೂ | ಕೂಚು || ತಂಗೆಮ್ಮಾ

|| **ದೇಶ್ ತೋಡಿರಾಗ | ರೂಪಕ ತಾಳ || ಸತ್ಯಚಿತ್ರಕೇತು**

ಪಾಪಿಜನ್ಮ ಏತಕಿಂತು | ತಾಪಕೇಗುರಿಯಾದೇನಿಂತೂ || ಇನುತುಭಾಗ್ಯವಿದ್ದರೇನು ಹರುಷದಿಂದಪಾಲಿಸಲೆ ತನಯನೋರನಿಲ್ಲದಿರಲೂ ತನೂವನಾನಿದನೇನಮಾಡಲಿ ಪಾಪಿಜನ್ಮಾವೇತಕಿಂತು ತಾಪಕೆ ಗುರಿಯಾದೆನೂ

**|| ತೋಡಿ ರಾಗ || ಅಟ್ಟತಾಳ || ದೇವೀ ಮಹಾತ್ಮ | ಪುಷ್ಪಮಾಲಿನಿ ||**

ಗತಿಯೇನು ಮುಂದೆ ಹಾವಿಧಿಯೇ | ದುಃಖಾಬುದಿಯೇ ಸುತನು ಈ ಗತಿಯೇನು ಮುಂದೆ ಹಾವಿಧಿಯೇ

ಪರಿಯೊಳು | ಹಟವ ಮಾಡಿದನೂ ದುಃಖಾಂಬುದಿಯೇ ದೇವಾ || ಕೂಚು

**|| ತೋಡಿ ರಾಗ ||**

**|| ಅಟ್ಟತಾಳ || ದಕ್ಷಬ್ರಹ್ಮನಿಗೆ – ಪಾರ್ವತಿ ||**

ಶರಗೊಡ್ಡಿಬೇಡಿಕೊಂಬೆನೊಡೆನ್ನ ಜನಕಾಶರಗೊಡ್ಡಿ ಬೇಡಿಕೊಂಬೆ | ಮೃಢನುನಿಮ್ಮನು ಕಂಡು | ನುಡಿಸಾಲಿಲ್ಲವು ಎಂದೂ | ಹಿಡಿದಾಕೋಪವನೂ ಬಿಡೂ ಹೇಜನಕಾ ಆ ಆ ಆ || ಮುಕ್ತಾಯ |

**|| ದೇಶ್ ತೋಡಿರಾಗ ||**

**|| ರೂಪಕ ತಾಳ | ಚಿತ್ರಕೇತುಕಥೆ || ಸುಮತಿ-ಅಂಗೀರಸಋಷಿಗಳಿಗೆ||**

1) ತಾತಮುನಿಪತೀ ಆಹಾಹಾ | ದುಃಖದಾರೀತಿ ಮಾತಾಡಲಾರೆನೋ ನಡೆದ ಸಂಗತಿ | ತಾತಮುನಿಪತೀ ಆಹಾದುಃಖದಾರೀತಿ ||

2) ಎಷ್ಟ ಹೇಳಲೋಪರಾಮೇಷ್ಠಿಜಾತನೇ | ಕೆಟ್ಟಚಾರುಮತಿಯು ಎನಗೆ | ಭ್ರಷ್ಟೆ ಮಾಡಿದ | ವಿವರಣೆಯನೂ | ಎಷ್ಟ ಹೇಳಲೋಪರಾಮೇಷ್ಠಿಜಾತನೇ

**|| ತೋಡಿ ರಾಗ ||**

**|| ಅಟ್ಟತಾಳ || ರಕ್ತ ಬೀಜಾಸುರನ ಕಥೆ || ಪುಷ್ಪಮಾಲಿನಿಗೆ ||**

ಸಾರೀಪೇಳಿದೆ ನಿಮಗೇ | ಪ್ರಾಣೇಶಾನೆ ಬಾರಾಲಿಲ್ಲವುದಯವು | ಸೂರೆಹೋಯಿತುರಾಜ್ಯ | ಯಾರೂ ಮಾಡುವುದೇನು | ಪುತ್ರಹೀನಾರಾದೇವೂ | ಅಯ್ಯೋರಮಣೀ || ಕೂಚು

**|| ದೇಶ್ ತೋಡಿರಾಗ ||**

**|| ತ್ರಿಪುಟತಾಳ || ರಕ್ತಬೀಜಾಸುರ-ತಾಯಿ ನಿಕಷಾದೇವಿಗೆ ||**

ಬಿಡುಬಿಡೋಕನ ಸೀನ ಫಲಗಳನ | ಹಡೆದಮ್ಮ ಕೇಳೂ ||ಬಿಡುಬಿಡೂಕನಸೀನಫಲಗಳನ್ನೂ||

ಜಡಜಲೋಚನೆ | ಹಿಡಿಯಲೋಸುಖ | ಸಡಗರದಿನೇಮವನೂ ಪಾಲಿಸೂ ಬಿಡುಬಿಡಕನ ಸೀನ ಫ ಲಗಳನೂ || ಹಡೆದಮ್ಮ ಕೇಳೂ ಬಿಡುಬಿಡೂಕನಸೀನಫಲಗಳನೂ(ಮುಕ್ತಾಯ)

ಜಗಜ್ಜನನೀ | ಅಮ್ಮಯ್ಯಾ | ದಯೆನೀಡು ಮಾತೆಯೇ || ಕೂಚು | ಜನನೀಯೇ ಮುಕ್ತಾಯ | ಜನನಿಯ ಮಾತೇಯೆ | ತದಿತೋಂಜಣತದಿತೋಂ | ತದಿತೋಂ| ತದಿತ್ತೈ ||

**|| ತೋಡಿ ರಾಗ ||**

**|| ಅಟ್ಟತಾಳ || ಚಿತ್ರಕೇತುಕಥೆ || ಸುಮತಿ- ಅಂಗೀರಸ ತಂದೆಗೆ ||**

ಸನುಮಥವೇಮುನಿಪಾ | ತನಯಾಳಾ ಘನದುಃಖಲಾಲಿಸದೆ || ಮೌನದೀ ಕಣ್ಮುಚ್ಚಿಜಪಿಸೂವಜಪಮಣೀ | ವಿಪರೀತಯೋಗಾದಲೀ | ನೋಡೆನ್ನ ಜನಕಾ | ವಿಪರೀತಯೋಗಾದಲೀ | ಹೇಜನಕಾ || ಮುಕ್ತಾಯ



**|| ದೇಶ್ ತೋಡಿರಾಗ |**

|| **ರೂಪಕತಾಳ + ಆದಿತಾಳ || ಮಾರ್ಕಾಂಡೇಯ || ಮರುಕೃತಿಮೃಕಂಡರಿಗೆ ||**

ಹೇಳಬಾರದೇಕೆ ಎನಗೆ | ನಿಮ್ಮ ಮನದ ದುಃಖವನ್ನು | ಅಳಿಸದಿರ್ದೊಡೇ ನಿಮ್ಮ ವ್ಯಸನವಾ | ಬಾಳಲೋಚನನೊರದಿ ಜನಿಸಿ ನಾನು ಫಲವು ಏನು ಜನಕಾ ಮಾತೆಯೇ || ಆಹಾದುಃಖದಾರಿತಿ

**|| ತೋಡಿ + ಆನಂದ ಭೈರವಿ ಜನ್ನಿರಾಗ ರಾಗ || ಅಟ್ಟತಾಳ ||**

**|| ಮಾರ್ಕಾಂಡೇಯ ಚರಿತ್ರೆ || ಪಾರ್ವತಿ- ಶಿವನಿಗೆ ||**

ಏನೂ ನಿನ್ನಯನಡತೇಶಿವನೇಶಂಭುಶವನೇ ಮುನಿಬಾಲತನುವನ್ನೂ ಬಳಲಿಸುತ್ತಿಹನೂ | ಕೃಪೆಯಿಟ್ಟು ಹೊರೆನೂಸುತನಾ | ಮುನಿಸುತನಾ | ದೇವಾ | ಶಂಕರನೇ ಮಹಾದೇವನೇ (ತದಿತೋಂಜಣತದಿತೋಂ ತದಿತೋಂ ತದ್ದಿತ್ತೈ )

**|| ದೇಶ್ ತೋಡಿ ರಾಗ || ಅಟ್ಟತಾಳ || ಮಾರ್ಕಾಂಡೇಯ ||**

ಹರನೇ ಕಾಯೋ | ಕರುಣಾಳುಶಿವನೇ | ಕಾಲಾನುಬಂಧಿಹನೂ | ಪ್ರಾಣವಸೆಳೆಯಲು || ಮೀರಿತಪಗೈದರೇನು | ಫಲವಿಲ್ಲೆನಗೆ 1 ಪರಶಿವನೆಕೃಪೆನೀಡಿ ಪೊರೆಯೋನೀಶಿವನೇ || ಹರನೇ ಕಾಯೋ | ಕರುಣಾಳು ಶಿವನೇ ||

**|| ಶನಿ ಮಹಾತ್ಮ ಕಥೆ || ವಿಕ್ರಮ ಕಟುರಿಗೆ || ರೂಪಕ ತಾಳ |**

ನೂಕಬೇಡಿರೀ | ಕಾಪಾಡಿಪೊರೆಯಿರಿ | ಚೋರತನವಮಾಡಿಲ್ಲಾವಪ್ಪಾ ಪರಶಿವನಪಾದಸಾಕ್ಷೀ |

ಸುಳ್ಳನಾನೂ ಹೇಳಲಾರೆ | ನೂಕಬೇಡಿರಿ | ಕೈಕಾಲಕಡಿಯಬೇಡಿರೀ

**|| ತೋಡಿ ರಾಗ || ಭಾಮಿನಿ || ವಿಕ್ರಮ ||**

ಪರಶಿವನೇಕಾಯೋಯೆನ್ನನು | ತಾಳಲಾರೆನು ನೋವನ | ಹೇಗೆ ವಡಲುರಿಯನ್ನು ಸಹಿಸಲೆಂತೂ | ಅಯ್ಯೋ ಅಯ್ಯೋ ದೇವಾ | ಕಡೆಗಾಣಿಸೆನ್ನನೂ ಹರನೇಶಂಕರನೇ || ಶಿವನೇ || ದೇವಾ || ಹೇ ದೇವಾ |

**|| ತೋಡಿರಾಗ || ಅಟ್ಟತಾಳ |**

ಸಹಿಸಲೆಂತೂ ನಾನೂ ನೋವಾ | ಅತ್ಯಧಿಕಾದ | ಭಾಧೆಯಹಿಂಸೆಯನ್ನೂ | ತಾಳಲಾರೆನೂ ಚಳಿಯಾ | ಬಿಸಲೀನತಾಪವನ | ದೇವಾ ಕಡೆಗಾಣಿಸೆನ್ನನೂ | ದೇವಾ ಹೇದೇವಾ ಮಹದೇವ ತದಿಗಿಣ || ಮುಕ್ತಾಯಕ್ಕೆ



**|| ತೋಡಿರಾಗ ||**

ಹರಹರಶನೀದೇವನೇ | ಸಹಿಸಲಿಎಂತೂ ಕೈಕಾಲಭಾಧೆಯನು | ಹೊಟ್ಟೆಗನ್ನವು ಇಲ್ಲಾ | ಹೂದಿಯಾಲುಗತಿ ಇಲ್ಲಾ ! ತೊರೆಸೂ ನೀಪ್ರಾಣವನ್ನೂ | ದೇವಾ ||

**|| ದೇಶ್ ತೋಡಿರಾಗ | ರೂಪಕತಾಳ || ಅಲೋಲಿಕೆ-ವಿಕ್ರಮನನ್ನು ||**

1) ಬನ್ನಿರಿನ್ನು ಯಮ್ಮ ಮನೆಗೆ | ನಾನು ಹೊರೆವೆದೊರೆಯೆನಿಮ್ಮಾ || ನಿಮ್ಮ ವ್ಯಥೆಯಾಸಹಿಸಲಾರೆ । ನಾನು ನೋಡಿಮನದೊಳು || ಬನ್ನಿರಿನ್ನುಯನ್ನಮನೆಗೆ ನಾನು ಮೊರೆವೆ ದೊರೆಯೆ ನಿಮ್ಮಾ |

**|| ಅಟ್ಟತಾಳ ||**

ಇಂತೇಕೆ ಕಷ್ಟಾವು ಬಂದೀತು ನಿಮಗೇ | ಎಂತು ಕಡಿದರು ನಿಮ್ಮಾ ಕೈಕಾಲುಗಳನೂ ಎಂತು ಸಹಿಸುತ್ತಲಿಹಿರಿ | ಈ ಬಂಧನವನ್ನೂ ಶನಿದೇವನಿನಗಿನ್ನೂ ದಯಬಾರಲಿಲ್ಲವೇ | ಇಂತೇಕೆ ಕಷ್ಟಾವು ಬಂದೀತು ನಿಮಗೇ | ಎಂತು ಕಡಿದರು ನಿಮ್ಮಕೈಕಾಲುಗಳನೂ | ಮುಕ್ತಾಯ || ತದಿಗಿಣತೋಂ | ತದಿಗಿಣತೈ | ತದಿಗಿಣತಾ |

**|| ತೋಡಿರಾಗ || ಅಟ್ಟತಾಳ ||**

ಶನಿದೇವಾನೀಯ ನಗೆ ಬಹುಕಷ್ಟಕೊಟ್ಟೂ | ಅತಿಕಷ್ಟಪಡಿಸಿದೆ | ನಿನ್ನ ನಿಂದಿಸಿದುದಕ್ಕೆ ! ಕೈಕಾಲಕಡಿಸಿದೇ | ಮನ್ನಿಸಿಕಾಪಾಡೋನೀ | ದೇವಾ || ಶನಿದೇವನೀನೆನಗೆ | ಬಹುಕಷ್ಟಕೊಟ್ಟೂ ॥ ಅತಿಕಷ್ಟಪಡಿಸಿದೆ | ದೇವಾ || ಕೂಚು ಮುಕ್ತಾಯ |

**|| ದೇಶ್ ತೋಡಿರಾಗ || ಅಟ್ಟತಾಳ || ತ್ರಿಪುರ ಸಂಹಾಸುರ | ರಂಬೆ ಊರ್ವಶಿ ||**

ಪರಶಿನಕರುಣಾದಿ | ಉಳಿಯಬೇಕಲ್ಲಾದೆ ಬೇರೆಗತಿಯುಂಟೇನೆ | ಕೇಳಮ್ಮ ತಂಗೀ || ರಕ್ಕಸರುಪಠಳಕೆ | ಸಿಕ್ಕಿಪಡುವೆವು ಕಷ್ಟಾದ್ರಿಷ್ಟಿಮೂರುಳ್ಳಶಿವನೇ || ಕಷ್ಟಾಪರಿಹರಿಸೋ | ದೇವಾ || ಮುಕ್ತಾಯ || ತದಿಗಿಣತೋಂ ತದಿಗಿಣತ್ತೈ | ತದಿಗಿಣತಾ |

**|| ದೇಶ್ ತೋಡಿರಾಗ || ಅಟ್ಟತಾಳ || ಊರ್ವಷಿ ||**

ಗಿರಿಜಾಧೀಶಾ | ಸುಪ್ರಕಾಶ | ಕರುಣಿಸಯ್ಯಾ ಹೇದೇವೇಶಾ || ಗಿರಿಜಾದೀಶಾ ಸುಪ್ರಕಾಶಾ || ವರಗಜೇಂದ್ರನಾ | ಮೊರೆಯಾನುಕೇಳೀ ಮಕರೀಯ ಕೊಂದೇ ನಿನ್ನ ಚಕ್ರದಲಿ | ಗಿರಿಜಾಧೀಶ |

**|| ತೋಡಿರಾಗ | ಅಟ್ಟತಾಳ || ತ್ರಿಪುರಧಾನವರ ಕಥೆ || ಬ್ರಹ್ಮ- ಶ್ರೀವಿಷ್ಣುವಿಗೆ||**

ಏನಾ ಹೇಳಲಿ ನಾನೂ ಹರಿಯೇ | ಕೇಳಿಸಿರಿಯೇ | ಖಳಾತ್ರಿಪುರಾರಿಂದಾ ಹಾನಿಬಂದುದನೂ | ಏನಾಹೇಳಲೀ ನಾನು ದೊರೆಯೇ ಕೇಳಸಿರಿಯೇ |



ದುಷ್ಟದಾನವರೀಗ ಸೇರಿ | ಮಿತಿಮೀರೀ | ಕಷ್ಟಾಪಡಿಸುತಲಿಹರೂ | ಸುರದಿಕ್ಪಾಲಕರಾ | ಏನಾ ಹೇಳಲಿ ನಾನು ಹರಿಯೇ | ಕೇಳಿಸಿರಿಯೇ |

**|| ತೋಡಿ ರಾಗ || ಅಟ್ಟತಾಳ || ಕನಕಾಂಗಿ ಕಲ್ಯಾಣ || ಸುಭದ್ರೆ ಮಗ- ಅಭಿಮನ್ಯವಿಗೆ ||**

ಏನಾ ಹೇಳಲೋ ಬಾಲಾ | ಅಭಿಮಾನ್ಯುವೆ || ಹಗರಣಗೈದಾನಲ್ಲೊ | ನೆರೆದ ಬಹುಸಭೆಯೋಳು | ಶಶಿರೇಖೆ ಸುತೆಯನ್ನೂ ನಿನಗೆ | ಪರಿಣಯವನ್ನೂ | ನಡೆಸುವೆನೆಂದು || ಭಾಷೆಯನಿತ್ತ ಬಲರಾಮನೂ ಹಗರಣ ಗೈದನಲ್ಲೋ ಕಂದಾ ಕಂದಮ್ಮಾ ಮುಕ್ತಾಯ

**|| ತೋಡಿರಾಗ || ಅಟ್ಟತಾಳ || ಸುಭದ್ರೆ ಮಗ ಅಭಿಮನ್ಯುವಿಗೆ||**

ಸತಿಯ ಮಾತನ್ನೂ ಕೇಳೀ | ನುಡಿದನು ಬಲಾ | ಮಾತಿಗೆ ತಪ್ಪಿದನು || ಸುತೆಯನ್ನೂ ಕೊಡಲಾರೆ | ವನವಾಸಿಗಳು ನೀವೂ ! ಎಂದು ಜರಿದಾಡಿದನೂ | ಕಂದಾ | ಮಗನೇ || ಮುಕ್ತಾಯ |

**|| ಅಟ್ಟತಾಳ || ಶ್ರೀದೇವೀ ಮಹಾತ್ಮ | ದೇವೇಂದ್ರ-ವಿಷ್ಣುವಿನಲ್ಲಿ ||**

1) ಏನಾ ಹೇಳಲಿ ನಾನ ದೊರೆಯೇ ಕೇಳ್ ಸಿರಿಯೇ ಹೀನಾಧನುಜನಿಂದಾ | ಹಾನಿಬಂದದುದನೂ | ಏನಾಹೇಳಲಿ ನಾನು ದೊರೆಯೇ ಕೇಳ್ ಸಿರಿಯೇ ॥ ದೇವಾ || ಕೂಚು ಬಿಡುತಿ ಮುಕ್ತಾಯ | ಹೇದೇವಾ ಶ್ರೀ ಹರಿಯೇ ಹೇಗೆ ಮಾಳ್ಪುದು |

**|| ತೋಡಿರಾಗ ||**

2) ಕಾಲಾಭೈರವನಂತೇ ಇಹನು || ಕೇಳ್ ಇಹನು | ಖೂಳದೈತ್ಯನ ಬೇಗಾ | ಹಾಳೂ ಮಾಡದಿರೇ || ಬಾಳಲಾರೆವು ನಾವು ದೇವಾ || ಕೇಳ್ ದೇವಾ (ಕೇಳ್ ದೇವಾ ಕೂಚು) ತಾಳಲಾರೆವು ನಮ್ಮ ರಕ್ಷಿಸು ದೇವ ದೇವನೇ (ಬಿಡತಿಗೆ ಮುಕ್ತಾಯ) ||

**|| ಮುಖಾರಿ ರಾಗ || ಅಟ್ಟತಾಳ || ದೇವೇಂದ್ರ-ಆದಿಶಕ್ತಿಯಲ್ಲಿ ||**

1) ಅಮರಾಲೋಕದವಾರ್ಥ | ತಾಯೇನಿವೆಲಾಲಿಸೀ ತರಳಾರ ವಾಖ್ಯವನೂ | ಕೇಳಮ್ಮಾ ತಾಯೇ || ತರುಳಾರ ವಾಖ್ಯವನೂ || ತಾಯೇ || ಮುಕ್ತಾಯ |

2) ತಾಯೇ ನಿಮ್ಮಯ ಸತ್ವಸಾಹಸದಿಂದಲೀ | ಅಜರುದ್ರರಿರುತಿರ್ಪೆವು ಕೇಳಮ್ಮ ತಾಯೇ | ಅಜರುದ್ರರಿರುತಿರ್ಪೆವೂ | ಮಾಯೇಯಂದದಿತೋರ್ಪ ದುಷ್ಟಾನಿಗ್ರಹದೊಳು ದೇವಿ ಕಾಯ್ದದು ನಮ್ಮನೂ | ತಾಯೇ ಕೂಚು | ಕೇಳ್ತಾಯೆ ಜಗಜ್ಜನನೀ ನೀರಕ್ಷಿಸೂ || (ಬಿಡತಿ ಮುಕ್ತಾಯ) |

**|| ಅಟ್ಟತಾಳ ಸತ್ಯಚಿತ್ರಕೇತು ಕಥೆ | ಚಾರುಮತಿ | ಆಂಗೀರಸ-ಋಷಿಗಳಿಗೆ||**

ಬಯಾಬಿಡುವಾಕುಸಿಗೇ | ತೋಯವಕೊಟ್ಟು ಮುಂದೆ ಬರುವೆ ಜನಕಾ | ಬಹು ಬಳಲಿದಕೂಸುಬಾಯಿರಿ ಅತಿದೆ | ಭಾರಿಬಿಸಲಿನತಾಪದೀ | ಹೇ ಜನಕಾ || (ಬಿಡತಿ ಮುಕ್ತಾಯ) |



**|| ಅಟ್ಟತಾಳ || ಅಂದಕಾಸುರವಧೆ || ಕಾಂಚನಾದೇವೀ ಅಂದಕಾಸುರನಿಗೆ||**

ಬೇಡ ಬೇಡವೋ ಮಗನೇ || ನಡೆಯದು ಸಮರ | ಮೃಢಗಂಗಾಧರ ನೊಳ್ ಅಡವಿಪಾಲಾಗುವೇ | ಕಡುವೈರದೊಳು ನೀನೂ ದುಡುಕಬೇಡವೋಮಗನೆ ಅಯ್ಯೋ ಮಗನೇ ||

**|| ಅಟ್ಟತಾಳ | ವಿಷ್ಣು- ಶಿವನಿಗೆ || ಈ ಧಾರಿ | ಪುತ್ರಾಪದವಿಗಿಂತಲೂ**

ಬಾಳಲೋಚನ ಶಂಕರ | ಪಾಲಿಸುನಮ್ಮಾ | ಬಾಳಾ ಲೋಚನ ಶಂಕರಾ | ಖಳಧನುಜನರಬಾಧೆ ತಾಳಲಾರೆವು ನಾವು | ಕಾಲಕಂದರನೇ ದೇವಾ | ಬೇಡುವೆನಿಮ್ಮಾ| ಕಾಪಾಡಿಮೊರೇ ಶಂಕರಾ || ಕೂಚು | ಹೇದೇವಾ | ಬಿಡತಿ ||

**|| ಅಟ್ಟತಾಳ ||**

ದುಷ್ಟಧಾನವನಮ್ಮಾ | ಬಹುಕಷ್ಟಾಪಡಿಸುತ್ತಲಿಹನೂ ಸೃಷ್ಟಿಗೊಡೆಯನೆಂದು! ಅಟ್ಟಟ್ಟಿ ಹೊಡೆಯುವ | ನಷ್ಟಾಪಡಿಸುದುಷ್ಟನಾ | ದೇವಾ ಆ ಆ ಆ | ಮಹದೇವಾ ಮುಕ್ತಾಯ

**|| ಅಟ್ಟತಾಳ || ಅಂದಕಾಸುರ-ಗುರುಶುಕ್ರಾಚಾರ್ಯರಿಗೆ ||**

ಸರ್ವಾಯನ್ನಯ ಬಂದೂ | ನಾಶಾವಾದಾರೂ | ಉದ್ವಿವಿಯೊಳನಾನೆಂತೂ ಜೀವಿಸಲಿ ಗುರುವೇ | ಸಮರದೀಯನಗಿನ್ನೂ ಅಪಜಯವಾಯ್ತು | ಏನಾ ಮಾಡಲಿ ಮುಂದೇ | ಗುರುವರ್ಯನೇ || ಕೂಚು || ಮುಕ್ತಾಯ ||

**|| ದೇಶ್ ತೋಡಿರಾಗ || ಅಟ್ಟತಾಳ || ಮಾರ್ಕಾಂಡೇಯ ಚರಿತ್ರೆ | ಮೃಕಂಡಮುನಿ - ಮರುದ್ವತಿಗೆ**

(ಈ ಧಾರಿ) ಬಾರೇಸತಿಯೇ | ಎಂತೂ ಮಾಳ್ಪುದು ಮುಂದೆ | ಗತಿಯಾರು ಎಮಗೇ | ಸಂತಸದಿ ನಲಿದೇವೂ || ಇಂದೀನವರೆಗೇ || ಅಂತಕನ ಭಾಧೆಯು | ಕಂದಮಾರ್ಕಾಂಡರೇ | ಮುಂದೆವದಗಿಹುದಿನ್ನೂ| ಗತಿಯಾರು ನಮಗೇ || ಶಿವಶಿವನೇ ಶಂಕರನೇ | ಕೂಚು | ಮುಕ್ತಾಯ |

**|| ಭಾಮಿನಿ ||**

ಈ ಪರಿಯೊಳು ದಂಢಧರನು | ಮರಣವಾಗಲು ಯಮನ ಸತಿಶ್ಯಾಮಲೆಯ ಗೌರೀಪೂಜೆಯಂಮಾಡುತ್ತಿರಲು | ಕರದೊಳಿರ್ದಮಂಗಳಾರತಿತಟ್ಟೆಯು ಕೈಜಾರಿಧರಣಿಗೆ ಬಿದ್ದುದಲ್ಲದೆ | ಕೊರಳಿನ ಮಾಂಗಲ್ಯವು ಹರಿದು ಧರಣಿಗೆ ಬೀಳೆ | ಹರಹರಾಶಿವಾ | ಶಿವಾ ಗತಿಯೇ ನಾದೊದೋ | ಪತಿಗೆನುತ್ತಾ | ಚಿತ್ರಗುಪ್ತರೊಡಗೂಡಿ ಬಂದು ನೋಡಿದಳು | ಮರಣವಾಗಿ | ಧರೆಗೆ ಬಿದ್ದಿಹ ಪತಿ | ಯಮನಾ ||



**|| ಅಟ್ಟತಾಳ || ಮಾರ್ಕಾಂಡೇಯ ಚರಿತ್ರೆ | ಶ್ಯಾಮಲೆ ||**

ಪುತ್ರಾಪದವಿಗಿಂತಲು ಅತ್ಯಧಿಕಾವು ಅಯ್ಯಯ್ಯೋ ಪ್ರಾಣಾದರಸೇ | ನೀ ಮಯ್ಯಾ ಚಾಚಿದೆ ಯಾಧರೆಗೆ | ಶಿವಭಕ್ತರಗೊಡವೆಯು | ಬಂಡಾವೆಂದೇಳಿದೇ | ಕೇಳದೇಯನ್ನಮಾತಾ || ದೇವಾ | ಶಿವನೇ | ಕೂಚು | ಮುಕ್ತಾಯ |

**|| ದೇಶ್ ತೋಡಿರಾಗ || ಅಟ್ಟತಾಳ ||**

**|| (ಈಧಾರಿ) ಭಾರೇ ಸತಿಯೇ ಚಾರುಮತಿಯೇ || ಕುಕ್ಷೇತ್ರ || ಸುಭದ್ರೆ**

**ಅಭಿಮನ್ಯುವಿಗೆ ||**

ಅಯ್ಯೋಕುವರ | ಅಯ್ಯೋಕೂಸೇ | ಮೈಯ್ಯಾಮರೆತೆಯಾ | ಈಧರೆಗೇ ಕೂಸೇ || ಅಯ್ಯೋ ಕುವರ ಅಯ್ಯೋ ಕೂಸೇ || ಮಗನೇ ನಿನ್ನಾರಣಕ್ಕೆ ಕಳುಹಿ || ಮಂದಾಭಾಷ್ಯರಾದೇವುನಾವೂ || ಅಯ್ಯೋಕುವರ ಅಯ್ಯೋ ಕೂಸೇ |

**|| ಅಟ್ಟತಾಳ || ಕುರುಕ್ಷೇತ್ರದಲ್ಲಿ 1 ಸುಭದ್ರೆ ||**

ಏನೆಂದು ಹೇಳಲ | ಕಾಂತರಿಗೀಗಮಗ ಮಡಿದಾನು ಎಂದೂ ಅಭಿಮನ್ಯುವೆಲ್ಲೆಂದೂ ಅನುವಿನಿಂಕೇಳಿದರೇ | ಯಾತೋರಿಸೊಲೊಕಂದಾ | ಕಂದಮ್ಮಾ

**|| ದೇಶ್ ತೋಡಿದಾಗ ಆದಿತಾಳ || ಉತ್ತರೆ-ಅಭಿಮನ್ಯು ಮರಣದಲ್ಲಿ**

ಕೆಟ್ಟನಯ್ಯೋ ಕೆಟ್ಟೆನಕಟ | ಭ್ರಷ್ಟಳಾಗಿ ಬಾಳಲಾರೆ | ಈ ಸೃಷ್ಟಿಯೊಳಗೇ ಪುಟ್ಟೇನಾನೂ ಕಷ್ಟಾವನ್ನೂ ತಾಳಲಾರೇ | ಕೆಟ್ಟನಯ್ಯ ಕೆಟ್ಟನಕಟ | ಭ್ರಷ್ಟಳಾಗಿಬಾಳಲಾರೆ

**ಅಟ್ಟತಾಳ | ಉತ್ತರ | ಧಾರಿ | ಪುತ್ರಾಪದವಿಗಿಂತಳೂ ||**

ಕಾಂತರಿಲ್ಲದಾ | ಧರೆಯೂ | ಕಾಂತೆಯರಿಗೇ | ಕಾಂತಾರವಾಗಿಹುದೂ ಕಾಂತನಿನ್ನೊಳುನಾನೂ | ಸಹಗಮನವಾಗುವೆನೂ | ಚಿಂತೇ ಬಿಡಿಸೂ ಶಿವನೇ | ದೇವಾ || ಎಂತೂ ಬಾಳಲೀ ನಾನೂ || ಹೇಗೆ ಜೀವಿಸ || ಮುಕ್ತಾಯ |

**|| ತೋಡಿರಾಗ || ಅಟ್ಟತಾಳ || ರಜಕೀ ತಂದೆಗೆ || ಧಾರಿ**

(ಈ ಧಾರಿ ಏನಾ ಹೇಳಲೇ ಮಾನುನೀ ಏನಾಹೇಳಲೋ ಜನಕಾ || ಯನ್ನ ಯಗಂಡ | ಹೀನಾಮಾಡಿದ ಪರಿಯಾ | ಸರಿಜನರುಗಳೊಳು ಬಾಳಲಾರೆನುನಾನೂ ತಾಳಲಾರೆನೂ | ನೋವನೂ | ಹೇ ಜನಕಾ ॥

**|| ತೋಡಿರಾಗ || ಅಟ್ಟತಾಳ || ರಾಮನಪದ || ಧಾರಿ | ಕೆಟ್ಟಿತೆನ್ನಾಲೋಕವಿನ್ನೊ**

ರಜಕನಿಂದ್ಯವ ಮಾಡೀದನೆನಗೇ ! ಮುಸುಕೀತಪಕೀರ್ತಿ 1 ಮೂಜಗದೊಳಗೇ ಶಶಿಮುಖಿಸೀತೆಯ | ಕಳೂಹೂವೆವನಕೆ | ಭಸಿತಧರ ಚಿಂತೇ | ಪರಿಹರಿಸೋಯನಗೆ

ರಜಕನಿಂದ್ಯಾವಮಾಡೀದನೆನಗೇ ಮುಸುಕಿತಪಕೀರ್ತಿಮೂಜಗದೊಳಗೇ ! ಶಂಕರನೇ॥ ಕೂಚು | ಮುಕ್ತಾಯ |

ಏನಾ ಹೇಳಿ

**|| ಅಟ್ಟತಾಳ || ರಾಮ ಭರತನಿಗೆ |**

ಏನಾ ಹೇಳಿಲೋ ತಮ್ಮ ನಿನ್ನೊಳು ನಾನೂ ಹೇಗೆ ಹೇಳಿ ಅನುಜ | ಧಾನವಕದ್ದೊಯ್ದುಸತಿಯ ಕೂಡಿನೆಂದು | ಹೀನರಜಕನುಡಿದಾ | ಅನುಜಾ || ಕೂಚು ಮುಕ್ತಾಯ |

**|| ತೋಡಿರಾಗ || ಭಾಮಿನಿ || ಸೀತಾಪರಿತ್ಯಾಗ ||**

ನುಡಿಯ ಕೇಳುತ ಭೂಸುತೆಯೂ ಥಡಥಡನೆನುಡುಗಿ ಮೂರ್ಚಿತಳಾಗಿ | ಸಿಡಿಲೊಡೆದತೆರನಂತೆ ಭೂಮಿಗುರುಳುತೇ | ಲಕ್ಷ್ಮಣನು ಸಂತೈಸುತಿರೆ | ಭೂಸುತೆಯು ಕಣ್ಣೆರೆದು ನೋಡುತ | ಶಿವಶಿವಾಶ್ರೀರಾಮಚಂದ್ರಾ ಎಂದಲು ಬದಳು ಸೀತೆ |

**|| ತೋಡಿರಾಗ || ಅಟ್ಟತಾಳ || ಸೀತೆ ಲಕ್ಷ್ಮಣನಿಗೆ ||**

**|| ಧಾರಿ ಪುತ್ರಪದವಿಗಿಂತಲು ||**

2) ಬಿಟ್ಟೆಯಾ ಪ್ರಾಣೇಶನೇ | ಲಕ್ಷ್ಮಣದೇವಾ | ಕೆಟ್ಟೆನಲ್ಲಯ್ಯಾ ನಾನೂ ರಾಮಕೊಟ್ಟನೇನೇಮ | ಕರುಣವಿಲ್ಲದೆವನಕೆ | ಬಿಟ್ಟುಬಾರೆಂದೆನುತಾ | ಲಕ್ಷ್ಮಣನೇ \\ ಕೂಚು ಮುಕ್ತಾಯ

**|| ಅಟ್ಟತಾಳ | ಸೀತಾಪರಿತ್ಯಾಗ | ಕುಶಲವರ ಕಥೆ ||**

3) ಕಯ್ಯಾಖಡ್ಗದೊಳೆನ್ನಾಯ | ಕೊರಳನುಕಾಂಥಾ | ಕೊಯ್ಯಾದೆ ನಿನ್ನೊಡನೇ | ಕಡುಕಾನನ ಕೆನ್ನಾ | ಬಿಟ್ಟು ಬಾರೆಂದೆನುತ | ಕೊಟ್ಟಾನೆ ನೇಮವನೂ || ದೇವಾ ॥ ಮುಕ್ತಾಯ |

**|| ಅಟ್ಟತಾಳ ||**

4) ಅಕಟಕಟವಿಧಿಯೇ | ಗತಿಯೇನು ಮುಂದೇ | ಪತಿಯ ತೊರೆದ ಬಳಿಕಾ || ಘೋರಕಾನನದೋಳು || ದಿಕ್ಕ್ಯಾರು ಹರನೇ || ಅಕಟಕಟವಿಧಿಯೇ ॥ ದೇವಾ|

**|| ಅಟ್ಟತಾಳ || ಕುಶಲವರಕಥೆ || ಸೀತಾಪರಿತ್ಯಾಗ | ರಾಮಲಕ್ಷ್ಮನಲ್ಲಿ ॥**

5) ಏನಾಪೇಳ್ದಳೋನದೀ | ಲಕ್ಷ್ಮಣದೇವಾ | ನಿನ್ನೊಳೂನಾಗವೇಣಿ | ಮಾನಸಾದೋಳ್ ಚಿಂತೆಗೈದಾಳೂ ಸೀತೆಯು | ಬಿಸಿಸುಯ್ದುಳೊವನದೀ ಲಕ್ಷಣನೇ || ಅನುಜಾತನೇ || ಕೂಚು

**|| ಅಟ್ಟತಾಳ ||**

6) ಲೋಕಾಪವಾದಕ್ಕಿನ್ನೂ ಕಾನನಕ್ಕೆ ಆ ಕಮಲಾಕ್ಷಿಯನ್ನೂ ನೂಕಬೇಕಾಯಿತು ಕೀಕಾರಣ್ಯದೊಳು | ಎಷ್ಟು ಶೋಕಿಪಳೋಸೀತೇ | ಲಕ್ಷ್ಮಣನೇ || ಕೂಚು

**|| ಅಟ್ಟತಾಳ ||**

**|| ಸೀತೆ ದುಃಖದಿಂದ ಲವನನ್ನು ನೆನೆದು | ಕುಶಲವರಕಥೆ ||**

7) ಹಗೆಯಾಕೈವಷವಾದೆಯಾ || ಕಂದಮ್ಮ ನಿನ್ನಾಮರೆತುನಾನೇಗಿರಲೀ | ಮನಿಸುತರಮಾತಾನೀಕೇಳಾದ ಹಠದಿಂದ | ಏಕೆಕಟ್ಟಿದೆ ಹಯವಾ | ಕಂದಮ್ಮಾ ॥ ಮುಕ್ತಾಯ ||

**|| ಅಟ್ಟತಾಳ || ಗಜಾಸುರನ ವಧೆ | ದೇವೇಂದ್ರ ಬ್ರಹ್ಮನಲ್ಲಿ ||**

**|| ಬಾರೆ ಸತಿಯೇ ಚಾರುಮತಿಯೇ ಈಧಾರಿ ||**

1) ಕೆಟ್ಟಿತೆನ್ನಾ ಲೋಕವಿನ್ನೂ ಹೇಳಲಿನ್ನೂ ಕರ್ಮವನ್ನೂ | ದೇವ ದಾನವನೂ ಭಾಧೆಗೈವದನೂ 1 ಕೆಟ್ಟಿತೆನ್ನಾ ಲೋಕವಿನ್ನೂ ದೇವಸುರರನ್ನು ಕುಟ್ಟಿ ತಿನ್ನುವನೂ ॥ ದೇವಾ ॥

**|| ಅಟ್ಟತಾಳ ||**

2) ಭಾರಿಕೋಪದಿಂಬಂದಾದೈತ್ಯಾ || ದೇವನಾರಿಯರ ಹಿಡಿದು ಕೈಸೆರೆಯಾ | ಕಾರಣಾತ್ಮಕ ಧೈತ್ಯ ಸಂಹಾರ | ಧೀರವಾಣಿಯ ಪ್ರಾಣಾಪ್ರಿಯಾ | ಭೂರಿ ಕೋಪದಿಂಬಂದಾನಯ್ಯಾ || ದೇವಾನಾರಿಯರ ಹಿಡಿದು | ಕೈಸೆರೆಯಾ || ದೇವಾ |

**|| ಅಟ್ಟತಾಳ ||**

3) ಯೇನುಘರ್ಭನೀನೆದಯಮಾಡೊ | ಯಮ್ಮ | ಪ್ರೇಮಭಾವದೀನೀ ನೋಡೋ || ಧಾಮ ಕಂಠಕರ | ಕೊಂದು ಕಾಪಾಡೋ | ನೀನು ಯಮ್ಮನು ದ್ವಾರಮಾಡೋ || ದೇವಾ | | ಕೂಚು |

**|| ಶಂಕರಾಭರಣ ರಾಗ || ಭಾಮಿನಿ |**

1) || ದೇವೀಮಹಾತ್ಮ | ದೇವೀಸ್ತೋತ್ರ || ದೇವೇಂದ್ರ |

ದೇವೇಂದ್ರ | ವಿಶ್ವಚೈತನ್ಯಾತಮೂರ್ತಿಯೇ | ವಿಶ್ವನಾಟಕಸೂತ್ರಧಾರಿಯೇ || ವಿಶ್ವತೋಮಯಚಿತ್ರಭಾಸುರೆ ವಿಶ್ವನಿರ್ಮತೆ | ವಿಶ್ವಕೀರ್ತಿಯೇ | ತಾಯೇಜಗಜ್ಜನನೀ | ರಕ್ಷಿಸು ನಮ್ಮಮಾಜನನಿಯೇ ॥

**2) || ಆನಂದ ಭೈರವಿ ರಾಗ || ಶ್ರೀಮಹಾವಿಷ್ಣು ||**

ವೇದಮಾತೆ | ವಿಶ್ವಮೂರ್ತಿಯ ಕಾಮಾರಿ ವೈಷ್ಣವೀ ಮಹೇಶ್ವರೀ | ಕಪಾಲಿನಿಮಾಯಾಮೂರ್ತಿಯೇ ಮೋಹಿನಿ ವಿಷ್ಣುಪೂಜಿತೆ | ಸಲಹು ಸಲಹಮ್ಮಾ | ಜಗಜ್ಜನನೀ ॥

**॥ ಭೈರವಿ ರಾಗ || ಬ್ರಹ್ಮ |**

ಪರಮ ಸತಿಪರಶಕ್ತಿ | ಮಾಯಾತರುಣಿ | ಮಂಗಳ ಗೌರಿ | ಸರ್ವ ಚೈತನ್ಯ ಬಿಂದುವಿಳಾಸಿನಿ | ಪಾರ್ವತೀ ಶಂಕರೀ | ವಿಶ್ವದ್ದಾರಿ ಎನುತ | ವಾರಿಜೋದ್ಭವನು ಸ್ತುತಿಗೈದಾ

**|| ತೋಡಿರಾಗ || ಭಾಮಿನಿ || ದೇವೇಂದ್ರ ||**

ಪರಮಮಂಗಳಮೂರ್ತಿ | ಪಾವನಚರಿತೆ | ತ್ರಿಭುವನಸೂತ್ರಧಾರಿಣಿಯೇ | ಮಾಯಾಶಕ್ತಿ ವಿಶ್ವಾಂಬರೀ ವೇದಮಾತೆಯೇ ಪಾಪವರ್ಜಿತೇ | ರಕ್ಷಿಸು ರಕ್ಷಿಸು ನಮ್ಮಮ್ಮಾ ಮಾತೆ ಜನನೀ ||

**|| ಅಟ್ಟತಾಳ || ಶಶಿರೇಖಾಪರಿಣಯ || ಕನಕಾಂಗಿ ಕಲ್ಯಾಣ | ಸುಭದ್ರೆ ಅಭಿಮನ್ಯುವಿಗೆ||**

1) ಏನಾಹೇಳಲೊಬಾಲಾ | ಅಭಿಮನ್ಯುವೇ | ಹೀನ ಮಾನದ ಬಾಳನೂ | ನೆರೆದ ಸಭೆಯೊಳಗೆ ಯನ್ನಣ್ಣ ಬಲರಾಮಾ ಬಗುಳೀದ ದುರ್‌ನುಡಿಯಾ | ಕಂದಾ ಮಗನೇ ಅಭಿಮನ್ಯುವೇ |

**|| ಅಟ್ಟತಾಳ ||**

ಕಂದಾ ಕೌರವಾಸುತಗೆ| ಬಲರಾಮನೂ | ಚಂದಾದಿಂಕನ ಕಾಂಗಿಯ ।ಮುಂದೆ ಲಗ್ನವ ಮಾಳ್ಪೇ | ನಿಮ್ಮ ಬಾಳಿದೇ ಸಾಕು ತೊರೆದು ಹೋಗಿರಿಮನೆಯಾ ಕಂದಾ || ಕೂಚು ||

**|| ಭಾಮಿನಿ || ಭೀಷ್ಮಾಚಾರ್ಯ ಶರಮಂಚದಲ್ಲಿ ||**

ರಾಯಕೇಳ್ಯೆಭೀಷ್ಟ ! ಶರಮಂಚದಲಿ ಮಲಗಲಿತ್ತ ಓರ್ವಚಾರಕನು | ಕೌರವನಿಗೆ ಪೇಳನಿತರೊಳು | ರಣರಂಗದೋಳ್ | ಸಕಲಕುರುಸೇನೆ | ಸರ್ವರಂ ನೋಡಿ | ಶ್ರೀಹರಿಯು / ಪಾರ್ಥಂಗೆ ಪೇಳಿದನು | ಸರ್ವರವಿವರವನೂ |

**|| ಭಾಮಿನಿ ||**

ನೋಡಲಸಧಳದೇವಾ | ಮಾಡಲಾರೆನು ರಣವನು ನೋಡು ನೋಡಿದರೆಲ್ಲ | ಎತ್ತತ್ತಲೂ ಬಂದು ಬಳಗವು | ನಡುಗುತಿದೆಯನ್ನ ದೇಹವೂ ಜಾರುತಿದೆಕರದಧನುವು ಮತ್ಸರ ಧಾಸೆಯಿಂ | ಮಹಿಪರಕೊಲ್ವುದು | ಪಾಪವಲ್ಲವೇ | ತಾಪಸದೂರಾ |

**|| ಭಾಮಿನಿ | ಸುಭದ್ರೆ ಅಭಿಮನ್ಯುವಿಗೆ||**

ಮಗನೆ ನಿನ್ನನು ಕಳುಹಲಾರೆನು | ಅಘಟಿತದ ಧಾನವರು | ಮಡಿದರು ರಣದೋಳ್ | ಹೋಗಲಾಗದು ಮಗುವೇ | ಸಣ್ಣ ಬಾಲನು ನೀನು | ವೈರಿಗಳು ಘಾಸಿಮಾಳ್ಪರು ನಿನ್ನ ನೆನುತಲಿ | ಮಗನನುಬಿಗಿಯಪ್ಪ | ಹಲುಬಿದಳು | ಮಾತೆಸುಭದ್ರೇ

**|| ತೋಡಿರಾಗ || ಭಾಮಿನಿ ||**

**|| ಕುರುಕ್ಷೇತ್ರ || ಸುಭದ್ರೆ ಅಭಿಮನ್ಯು ಮಡಿದಾಗ ||**

**ಅರಸ ಕೇಳೀ ಪರಿಯೊಳು ಅಭಿಮನ್ಯು ಮಡಿದ ವಾರ್ತೆಯಂ | ಚಾರಕನೋರ್ವ**

ಧರ್ಮಜಗೆ ಬಿನ್ನವಿಸಲು | ಯುದಿಷ್ಠಿರನು | ಅಯ್ಯೋ ಕಂದಮಡಿದೆಯಾನಾನು ಬೇಡವೆಂದೇಳಿದರು ಕೇಳದೆ ರಣಕ್ಕೊದೆ | ಪಾರ್ಥರಿಗೇನಹೇಳಲೀ | ಎಂದು ದುಃಖಿಸುತಿರಲು | ತಾಯಿ ಸುಭದ್ರೆ | ಸತಿ ಉತ್ತರೆಯು ವಿವರವನ್ನು ಕೇಳಿ | ಅಯ್ಯೋ ಅಯ್ಯೋ ಹರಹರಾ ಎಂದೆನುತ | ದುಃಖಿಸುತಿರ್ದರೂ

**|| ಆದಿತಾಳ || ಧರ್ಮರಾಯ ||**

ಅಯ್ಯೋ ಕುವರಾ ಅಯ್ಯೋ ಕೂಸೇ | ಮಯ್ಯಾಮರೆತೇ | ಧರೆಗೇ ನೀನೂ ಮಗನೇ ನಿನ್ನರಣಕೇ ಕಳುಹಿ | ಮಂದಾಭಾಗ್ಯರಾದೇವುನಾವೂ || ಅಯ್ಯೋ ಕುವಾರಾ ಅಯ್ಯೋ ಕೂಸೇ | ಮಯ್ಯಮರೆತೇ ಧರೆಗೇ ಕಂದಾ |

**|| ತೋಡಿರಾಗ || ಅಟ್ಟತಾಳ || ಸುಭದ್ರೆ (ಈ ಧಾರಿ ಹಾಡು)**

ಏನೆಂದು ಹೇಳಲಯ್ಯೋ | ಕಾಂತರಿಗೀಗಾ | ಮಗನು ಮಡಿದಾನೆಂದೂ | ಮಗ ಅಭಿಮನ್ಯುವೂ | ಎಲ್ಲೆಂದು ಕೇಳೀದರೇ || ಆರತೋರಲೋ ಕಂದಾ | (ಕಂದಾ ಕೂಚು) |

**|| ಆದಿತಾಳ || ಉತ್ತರ ||**

ಕೆಟ್ಟೆನಯ್ಯೋ ಕೆಟ್ಟೆನಕಟ | ಕಷ್ಟವನ್ನು ತಾಳಲಾರೆ | ಭ್ರಷ್ಟಳಾಗಿ ಬಾಳಲಾರೆ | ಕೆಟ್ಟೆನಯ್ಯೋ ಕೆಟ್ಟೆನಕಟ | ಕಷ್ಟವನ್ನೂ ತಾಳಲಾರೇ |

**|| ಅಟ್ಟತಾಳ || ಉತ್ತರೆ ||**

ಕಾಂತಾರಿಲ್ಲದಾಧರೆಯೂ | ಕಾಂತೇಯರಿಗೆ | ಕಾಂತಾಂರವಾಗಿಹುದೂ ಇಂತೂ ನಿನ್ನೊಳು ನಾನೂ ಸಹಗಮನವಾಗುವೇ | ಚಿಂತೆಯ ಬಿಡಿಸೋಕಾಂತಾ | ಅಯ್ಯೋ ರಮಣಾ | ಕೂಚು | ಮುಕ್ತಾಯ |

**|| ಭಾಮಿನಿ || ಧರ್ಮರಾಯ || ಸುಭದ್ರೆ ಉತ್ತರೆಗೆ||**

ಅಯ್ಯೋ ತರಳಾಕ್ಷಿಯರೇ | ಏತಕೆ ಬರಿದೆದುಃಖಿಪಿರಿ | ಸಾಕುಬಿಡಿಬಿಡೀ | ಧರೆಯೋಳ್ ಹುಟ್ಟದಮೇಲೆ | ಮರಣತಪ್ಪದು | ವಿಧಿಲಿಖಿತಮೀರಿ ಬಾಳುವರಾರು | ಸರ್ವರಿಗೂ ಮರಣತಪ್ಪದು ದುಃಖಿಸದಿರಿ ನೀವುಗಳೂ |

**|| ದೇಶ್ ತೋಡಿರಾಗ || ಬಾರೇ ಸತಿಯೇ ಧಾರಿ |**

**|| ಅಟ್ಟತಾಳ || ಅರ್ಜುನ-ಅಭಿಮನ್ಯುವನು ನೆನೆನೆನೆದೂ ||**

ಎದ್ದೂ ಬಾರೋ | ಮುದ್ದೂ ಕಂದ | ನಿನ್ನ ತೊರೆಸಿದಾ ಯನ್ನಾಮುಕುಂದ |

ಎದ್ದೂ ಬಾರೋ ಮುದ್ದೂ ಕಂದ | ಪಾಪಿಯಾದೇ | ಮಡಿದ ಕಂದಾ || ಅವಿವೇಕಿಯಾದೇ । ಇಲ್ಲೆನಾನುಳಿದೂ | ಎದ್ದೂ ಬಾರೋ ಮುದ್ದು ಕಂದ | ಮುಕ್ತಾಯ ||

**|| ತೋಡಿ ರಾಗ || ಅಟ್ಟತಾಳ || ಕೌರವನಿಗೆ - ಸೈಂದವ ||**

ಏನೆಂದು ಹೇಳಲಯ್ಯೋ | ಕೌರವರಾಯ | ಕೇಡುಬಂದಿಹುದಯ್ಯೋ | ಇಂದೀನ ದಿನದೊಳು | ಸೂರ್ಯಸ್ತಮಯದೊಳು | ಯನ್ನಮರ್ಧೀಪಾನಂತೇ | ಪಲ್ಗುಣನಿನ್ನೂ ಯನ್ನಮರ್ಧೀಪಾನಂತೇ | ಏನೆಂದು ಹೇಳಲಯ್ಯೋ | ಕೌರವರಾಯಾ। ಕೇಡು ಬಂದೊದಗಿಹುದೂ | ದೇವಾ ||

|| ತೋಡಿ ರಾಗ || ಅಟ್ಟತಾಳ ||

|| ಈ ಧಾರಿ ಪುತ್ರಪದವಿಗಿಂತಲೂ | ಕೌರವ ||

ಬಲರಾಮನಿಹನೂ ಎಂದೂ | ಬಹಳ ಧೈರ್ಯದೊಳಿರ್ದ್ದನು || ಬಲರಾಮ ದೇವರಿಗೆ || ಭೂಪ್ರದಕ್ಷಿಣೆ ವದಗಿದೆ | ಈ ಕಾಲದಿ || ಬಲರಾಮನಿಹನೆಂದೂ || ಬಹಳ ಧೈರ್ಯದೊಳಿರ್ದ್ದೇನು ದೇವಾ || ದೇವಾ|| || ಮುಕ್ತಾಯ

**|| ಭಾಮಿನಿ || ಕುಕ್ಷೇತ್ರ || ಅರ್ಜುನ ಕೃಷ್ಣನಲ್ಲಿ |**

ದೇವಾ ಲಾಲಿಸಿಕೇಳೂ || ಅಣ್ಣನಲ್ಲ ಇವ | ತ್ರಿಪುರಹರ | ಮಾತಾಡಿಕೆಟ್ಟೆನು | ಎಂದು ಪ್ರಾಣರಕ್ಷಕಗೆ ನಮಿಸುತ | ಜಯಕೃಪಾಕರ ಮೂರ್ತಿ ಶಂಕರ | ತನಯನಪರಾಧಗಳನು ಮನ್ನಿಸಿ | ಇಂದ್ರಕೀಲದಿ | ಯನಗಭಯವಿತ್ತಂತೆ ಶತೃಗಳ ನಿಗ್ರಹಕೆ | ತಂದೆ ಪಾಲಿಸುವರವಾ

**|| ಭಾಮಿನಿ | ಕರ್ಣ ಪಾರ್ಥನಿಗೆ ||**

ಪಾರ್ಥನೆ ಸೈರಿಸು | ರಥವೂ | ಕುರುಕುಲದ ರಕ್ತಧಾರೆಯಲಿ ಉತಿಹುದೂ ಸಾರಥಿಯು ಅಗಲಿದನೂ ಎಂದೆನುತ । ದುಃಖಿಸುತ | ಬಲುರೋಷದಲಿಬೊಬ್ಬಿರಿದಕರ್ಣಾ | ಪಂಚಶರಗಳಂ | ಖಂಡ್ರಿಸಲು | ಇವನಂ

ಗೆಲಿಯಲು | ಅಸಧಳವೆನುತಾ | ದಿಕ್ಕು ತೋಚದೆ ಇರಲು ವಾಸುದೇವ ವಿಪ್ರನತೆರದಿ। ಬೇಡಿದನುದಾನವನೂ ||

**|| ದೇಶ್ ತೋಡಿರಾಗ || ಅಟ್ಟತಾಳ || ಶನಿಮಹಾತ್ಮ | ವಿಕ್ರಮ||**

ಯಾರಿವಳೂ ತರುಣಿಯು | ಮಗ್ಗುಲೊಳುಮಲಗಿಹ | ಪರಿಯೇನುಶನಿ ನಿನ್ನ ಮಾಯಾವುಯನರೇ | ಏನೂಮಾಯವೂ ನಿನ್ನ ಮಹಿಮೆಯು ಧರೆಯೊಳು ಕಾಪಾಡಿಮೊರೆಯನ್ನಾ ಶನಿದೇವನೀನೂ || ಹರಹರಶನಿದೇವಾ || ತಾಳಲಾರೆನೂ ವ್ಯಥೆಯಾ ನನ್ನಲ್ಲಿಲ್ಲಾದ ಸರವನಾನೆಲ್ಲಿ ತರಲೀ ದೇವಾ | ಹರಹರಶನಿದೇವ ತಾಳಲಾರೆನು ವ್ಯಥೆಯಾ ||

**|| ತೋಡಿ ರಾಗ || ಅಟ್ಟತಾಳ ||**

ಗತಿಯೇನು ಮುಂದೆ ಹಾವಿಧಿಯೇ | ದುಃಖಾಂಬುದಿಯೇ | ಕ್ಷಿತೆಯೋಳೀ ಪರಿಕ ಷ್ಟಾಕ್ಕೊಳಗಾದೆ (ಹರಿಯೇ) ದೇವಾ || ಗತಿಯೇನು ಮುಂದೆ ಹಾವಿಧಿಯೇದುಃಖಾಂಬುಧಿಯೇ | ಶನಿದೇವನೇ ||

**|| ಅಟ್ಟತಾಳ || ವಿಕ್ರಮ ||**

ನೂಕಬೇಡಿರಿಯನ್ನಾ | ಕಾಪಾಡಿ ಪೊರೆಯಿರಿ | ಚೋರತನವನಾನೂ | ಮಾಡಿಲ್ಲವಿನ್ನೂ ನೂಕಬೇಡಿರಿಯನ್ನಾ ಕಾಪಾಡಿಪೊರೆಯಿರಿ |

**|| ಭಾಮಿನಿ ||**

ಕಾಯೋ ಶಂಕರಪರಶಿವನೆಯನ್ನನೂ | ತಾಳಲಾಲರೆನೂ ನೋವನೂ | ಅಯ್ಯೋ ವಡಲುರಿಯನ್ನು ಸಹಿಸಲೆಂತು | ಕಡೆಗಾಣಿಸೆನ್ನನು ದೇವಾ || ಯನ್ನ ಪ್ರಾಣವಾ || ಶಂಕರಾ ತೊರೆಸು ಕಷ್ಟವಪರಿಹರಿಸೂ

**|| ಅಟ್ಟತಾಳ ||**

ಸಹೀಸಲೆಂತೂ ನಾನೂ | ನೋವಾ | ಅತ್ಯಧಿಕವಾದ ಭಾಧೆಯ ಹಿಂಸೆಯನ್ನೂ ತಾಳಲಾರೆನೂ ಚಳಿಯ | ಬಿಸಿಲೀನತಾಪವಾ | ಕಡೆಗಾಣಿಸೆನ್ನಾದೇವಾ || (ದೇವಾ ಶನಿದೇವನೇ || ಮುಕ್ತಾಯ) |

**|| ಅಟ್ಟತಾಳ ||**

ಶನಿದೇವಾನೀಯನಗೇ | ಬಹುಕಷ್ಟಕೊಟ್ಟೂ | ಅತಿವ್ಯಥೆಪಡಿಸದೆ | ನಿನ್ನನಿಂದಿಸುದುದಕೇ ! ಕೈಕಾಲಕಡಿಸಿದೆ ಮನ್ನೀಸಿಕಾಪಾಡುನೀ || ದೇವಾ ||

**|| ಅಟ್ಟತಾಳ || ಪುಷ್ಪಮಾಲಿನಿ || ರಕ್ತಬೀಜಾಸುರ |**

ಏನಾಹೇಳಲೇ ಮಾನುನೀ | ಧಾನವರೀಗೆ | ಮಾನಹಾನಿಯು ಬಂದುದಾ | ಮಾನುನೀ ಪೇಳ್ ಮಾತಾ ಕೇಳದೆ ನಾನು | ಹಾನಿತಂದೆನು ವಂಶಕೇ | ಅಯ್ಯೋರಮಣೀ ||

**|| ಅಟ್ಟತಾಳ || ಕುರುಕ್ಷೇತ್ರ || ಕರ್ಣಪರ್ವದಲ್ಲಿ ಕರ್ಣ |**

ಕುಲಹೀನಾ ನಾನೆಂದೂ ಧಾರುಣೀಜನಾ | ಹೀನಾಮಾಡಿದ ಕಾಲದೀ | ರಾಜಾಕೌರವಯನ್ನ | ಸಾಕೀಸಲಹಿದ ದೇವನೂ ಅಂತಾ ತಂದೆಯಾ ನಾ ಮರೆಯಬಹುದೇ ದೇವನೇ ದೇವನೇ ||

ಭಾಮಿನಿ || ಅರಸಕೇ ಕರ್ಣನು ಮೋಸದಲಿ ವೀರಾಭಿಮನ್ಯುವಿನ | ನಿಲ್ಲದೆದುರಿನಲಿ ಹಿಂದಿನಿಂದಲೆ ಬಂದು | ಎರಡು ಕರಹಸ್ತಗಳ ಹರಿಯಲೂ ಅತಿಕ್ಷದೊಳು ಬಾಲನು | ಹರಹರಾ ಎಂದೆನುತ | ಕಡುಕೋಪದಲಿ ಮೊಂಡಕೈಯೊಳುರಥಗಾಲಿಗಳನ್ನು ಕಿತ್ತು ವೀರಾವೇಶದಿಂಶತೃಗಳ ಮೇಲೆಸೆದನೂ

**|| ದೇಶ್ ತೋಡಿರಾಗ ||**

**|| ಕಂದಭಾಮಿನಿ | ಸತ್ಯಚಿತ್ರಕೇತುರಾಜನ ಕಥೆ ||**

ಏನಂಬೆ ಈಮಹಾಸ್ತಲಂ ಮನಕಾನಂದವಾಗಿತೋರ್ಪುದ ಶುಕಪಿಕಕೋಗಿಲಂಗಳು ಗಾನಮಾಳ್ಪವೂ ಎಂತು ಶೋಭಿಸುದು ಈವನಂ ||

**|| ಕಂದಭಾಮಿನಿ || ದೇವೀಮಹಾತ್ಮ್ಯಯಲ್ಲಿ**

ಪರಮ ಸತಿಪರಮಗುಣಸಾವಿತ್ರಿ | ಮಹಾ ತರುಣಿ ಮಂಗಳ ಗೌರೀ | ಸಕಲಚೈತನ್ಯ ಬಿಂದು ವಿಲಾಸಿನಿ | ಪಾರ್ವತಿ ಶಂಕರಿ ವಿದ್ದಾರಿ ಎಂದೆನುತ ವಾರಿಜೋದ್ದನು ಸ್ತುತಿ ಗೈದಾ |

**|| ದೇಶ್ ತೋಡಿರಾಗ | ರೂಪಕ ತಾಳ || ಭಜನೆಪದ ||**

1) ಸ್ಮರಣೆ ಮಾಡಲೊ ನಾಮಾ ಭಜನೇ ಸ್ಮರಣೆಮಾಡಲೋ ಸ್ಮರಣಿ ಮಾಡು ಭವದ ಭಲೆಯ | ಹರಿಸೊ ಶಿವನೆ | ಶಿವನೆ ಎನುತೇ | ಸ್ಮರಣೆ ಮಾಡೆಲೋ | ನಾಮಾಸ್ಮರಣೆ ಮಾಡಲೋ

2) ಮನದಿರಾಗ ದೇಶಗೈಯ್ಯ | ದನೃತಾವಚಾನನುಡಿಯಾ || ದಿನಿತುತನುವಿನಂಶವಾಗಿ ದಿನವು ಕರಣ ಸಿದ್ಧಿಯಿಂದ || ಸ್ಮರಣೆಮಾಡೆಲೊನಾಮಾಸ್ಮರಣೆ ಮಾಡೆಲೊ

3) ಭಕ್ತಪಾಲಕನೆಂಬೊಬಿರಿದು | ಹೊತ್ತು ಇಹನ | ನಂಬಿ ನಿತ್ಯ | ಮುಕ್ತಿಭಾಗ್ಯಸೂರೆಗೊಂಬ | ಯುಕ್ತಿ ಇದನು ತಿಳಿದು (ಅರಿತು) ಮನದಿ | ಸ್ಮರಣೆ ಮಾಡಲೋನಾಮಾಸ್ಮರಣೆ ಮಾಡೆಲೋ

4) ಇಳೆಯ ಭೋಗಕ್ಕೆಳವಮನವ | ಸೆಳೆದು ಆತ್ಮನಲ್ಲಿನಿಲಿಸಿ | ಕಲಿಯ ಕಲುಮಶ ಅಳಿವುದಿದನೂ ತಿಳಿದು ಮನದೀಭಕ್ತಿಯಿಂದ || ಸ್ಮರಣೆ ಮಾಡೆಲೋ | ನಾಮಸ್ಮರಣೆ ಮಾಡೆಲೊ

5) ಬೃಂಗಸಂಘದಿಂದ ಕೀಟ | ಅಂಗಭಾವವಳಿದ ಅಂತ | ರಂಗದಲ್ಲಿ ನೆನೆದು ಸಾಕ್ಷಾ | ಬೃಂಗವಾದಪರಿಯಮನದಿ | ಸ್ಮರಣೆ ಮಾಡೆಲೋ ನಾಮಾಸ್ಮರಣೆ ಮಾಡೆಲೋ |

6) ಕಂಗಳೂರಿನಲ್ಲಿ ಪೊರೆವ || ಮಂಗಳಾ ಪ್ರಭಾವನಾದ | ತುಂಗಶ್ರೀಗುರು ರಂಗಾಲಿಂಗಿಗೆ ! ಅಂಗಮೂರ | ನಿತ್ತು ನಿತ್ಯ | ಸ್ಮರಣೆ ಮಾಡಲೋ ನಾಮಸ್ಮರಣೆ

ಮಾಡೆಲ್ | ಸ್ಮರಣೆ ಮಾಡು | ಭವದಬಲೆಯ | ಹರಿಸೊಶಿವನೆ | ಶಿವನೆ ಎನುತೇ ಸ್ಮರಣೆ ಮಾಡೆಲೋ ನಾಮಸ್ಮರಣೆ ಮಾಡೆಲೋ |

**||ಭಜನೆ | ರೂಪಕತಾಳ ||**

1) ಮಾಡಬೇಕೆಲೋ ಭಜನೇ ಮಾಡಬೇಕೆಲೋ ಮಾಡಬೇಕು ಭಜನೆ ಮನದಿ | ಕೂಡಬೇಕು ಘನದೀ ಪ್ರಣವ || ನಾಡೆಪಿಂಗಳ ಮಧ್ಯದೊಳಿರುವ ಭೇರಿನಾದಗಳನು ತಿಳಿದು || ಮಾಡಬೇಕೆಲೋ | ಭಜನೇ ಮಾಡಬೇಕೆಲೋ ಮಾಡಬೇಕು ಭಜನೆ ಮನದಿ || ಕೂಡಬೇಕು ಘನದಿ ಪ್ರಣವ ಮಾಡಬೇಕೆಲೋ ಭಜನೇ ಮಾಡಬೇಕೆಲೋ |

2) ಆರು ಮೂರು ಎಂಬೋದಾರಿ | ತೋರುತಿಹುದು ಒಂದು ಶಿಖರ ದೂರಿಯಾಡುವಂತ ಘಂಟೆ | ಭೇರಿನಾದಗಳನು ತಿಳಿದು ಮಾಡಬೇಕೆಲೋ ಭಜನೆ ಮಾಡಬೇಕೆಲೊ | ಮಾಡಬೇಕು ಭಜನೆ ಮನದಿ | ಕೂಡಬೇಕು ಘನದಿ ಪ್ರಣವ ॥ ಮಾಡ |

3) ಗುರುವು ತುಲಸಿರಾಮದಾಸ | ಚರಣ ಭಜನೆ ಮಾಡಬೇಕು | ಧರಣಿ ಕನಕ ಪುರಿಯ ಕೋಟೆ | ಪುರಂಧರಾ ವಿಠಲನ ಭಜನೆ || ಮಾಡಬೇಕೆಲೊ | ಭಜನೇ ಮಾಡಬೇಕೆಲೋ ಮಾಡಬೇಕು ಭಜನೆ ಮನದಿ ಕೂಡಬೇಕು ಪ್ರಣವ ಘನದಿ | ನಾಡೆಪಿಂಗಳಮಧ್ಯದೊಳಿರುವ || ಭೇರಿನಾದಗಳನು ತಿಳಿದು ಮಾಡಬೇಕೆಲೊ ಭಜನೆ ಮಾಡಬೇಕೆಲೋ ||

**|| ರೂಪಕ ತಾಳ ||**

1) ತಿಳಿಯ ಬಾರದೇ ಹೀಗೇ ತಿಳಿಯಬಾರದೇ | ಅಳಿವುದೆಲ್ಲ ಜಗವುತಾನೆ | ಉಳಿಮೆಯಾದ ಬ್ರಹ್ಮವೆಂದು || ತಿಳಿಯಬಾರದೇ | ಹೀಗೆ ತಿಳಿಯಬಾರದೇ ||

2) ನೂರು ವರುಷದೊಳಗೆ ಮಡಿದು | ಬಾರಿ ಬಾರಿಭವಕ್ಕೆ ಬರುವ | ತೋರದೇಹಮಯಕೆ ದೂರ | ಸಾರಸಾಕ್ಷಿ ಬ್ರಹ್ಮವೆಂದು || ತಿಳೀಯಬಾರದೇ ಹೀಗೇ ತಿಳೀಯಬಾರದೇ || ಅಳಿವುದೆಲ್ಲ ಜಗಕೆ ತಾನೇ ಉಳುಮೆಯಾದ ಬ್ರಹ್ಮವೆಂದು || ತಿಳಿಯಬಾರದೆ ಹೀಗೆ ತಿಳೀಯಬಾರದೆ |

3) ಪ್ರಳಯವಾಗುವ ಮುನ್ನ ಇರುತ | ಬಳಲಿ ಮೋಹಾರಾಗದಲ್ಲಿ | ಅಳಿವ ಸಾರ ಲಿಂಗದೇಹ ನೋಡ್ತ | ಉಳಿವೆ ಬ್ರಹ್ಮತಾನೇ ಎಂದು || ತಿಳಿಯಬಾರದೇ | ನಾ ಹೀಗೆ ತಿಳೀಯಬಾರದೇ ॥

4) ನೂರು ಜನ್ಮ ಸುಕೃತ ಫಲದಿ | ಚಾರುಜ್ಞಾನ ಉಳಿಸಲಳಿವ | ಕಾರಣಾಂಗ ಸಾಕ್ಷಿಯಾದ | ಪೂರ್ಣಬ್ರಹ್ಮ ತಾನೇ ಎಂದು || ತಿಳಿಯಬಾರದೇ ಹೀಗೆ ತಿಳಿಯಬಾರದೇ |

5) ಮೂರು ತನವು | ಮೂರು ಶಕ್ತಿ | ಮೂರವಸ್ತೇ ಮೂರು ಜೀವ | ಮೂರು ಗುಣಗಳಂಟದಿರುವ | ಸಾರಾ ಚಿನ್ಮಯ ಬ್ರಹ್ಮವೆಂದೂ | ತಿಳಿಯಬಾರದೇ |



ಹೀಗೆ ತಿಳಿಯಬಾರದೇ || ಅಳಿವುದೆಲ್ಲ ಜಗವು ತಾನೇ | ಉಳುಮೆಯಾ ಬ್ರಹ್ಮವೆಂದು | ತಿಳಿಯಬಾರದೇ ಹೀಗೆ ತಿಳಿಯಬಾರದೇ ||

6) ಕರುಣೆಶ್ರೀ ಗುರು ಲಿಂಗವರದ | ತತ್ವಸಾರತಿಳೀಯೆ ನಿರಘ | ನಿತ್ಯ ಮುಕ್ತಿತಾನೆ ನಿರುಪ | ಮದ್ವಯಾತಾ ಬ್ರಹ್ಮವೆಂದು ತಿಳಿಯಬಾರದೇ ಹೀಗೇ ತಿಳಿಯಬಾರದೇ ಹೀಗೇ ತಿಳಿಯಬಾರದೆ | ಅಳಿವುದೆಲ್ಲ ಜಗವು ತಾನೆ | ಉಳಿಮೆಯಾದ ಬ್ರಹ್ಮವೆಂದು ತಿಳಿಯಬಾರದೆ ಹೀಗೇ ತಿಳಿಯಬಾರದೇ || ಮುಕ್ತಾಯ |

**|| ರೂಪಕ ತಾಳ || ಭಜನೆ ||**

1) ಹಂಸನಾಗೆ ಲೋ | ಪರಮ ಹಂಸನಾಗೆ| ಹಂಸ ಹಂಸ | ಹಂಸ ಎನುತ | ದ್ವಂಸಗೈದು ಅದ್ವೈತ ಭಾವ || ಹಂಸನಾಗೆಲೋ ಪರಮಾಹಂಸನಾಗೆಲೋ ||

2) ಮಾಯೆ ಮೂಲವನ್ನೂ ತಿಳಿದು || ಮಾಯೆ ಮೂಲಗಳನ್ನು ಅಳಿದು | ಮಾಯೆ ಕಳೆಯೆ ಸೆಳೆದು ಮನದಿ | ಮಾಯೆಕಳೆಗತೀತನಾಗಿ | ಹಂಸನಾಗಿ ಪರಮ ಹಂಸನಾಗೆಲೋ || ಹಂಸ ಹಂಸ ಹಂಸ | ಎನುತ | ದ್ವಂಸಗೈದ ದ್ವೈತ ಭಾವ | ಹಂಸನಾಗೆ | ಪರಮಹಂಸನಾಗೆಲೋ |

3) ನೀರನುಳಿಸಿ | ರಾಜಹಂಸ ಕ್ಷೀರಸವಿಯುವಂತೆ ಜಗದಿ ಮೂರು ದೇಹವುಳಿದ ಮೇಲೆ | ಸಾರಸತ್ವ ಸವೀವ ಹಂಸನಾಗೆಲೋ ಪರಮಹಂಸನಾಗೆಲೋ | ಹಂಸ ಹಂಸ ಹಂಸ ಎನುತೆ | ದ್ವಂಸ ಗೈದು ಅದ್ವೈತ ಭಾವ || ಹಂಸನಾಗೆ ಲೋಪರಮಹಂಸನಾಗೆಲೋ

4) ನಿರುತ ಬ್ರಹ್ಮಚರ್ಯಶಾಂತಿ ಕರವೆಪ್ಪ ಬ್ರಹ್ಮಾ ಪುರದೊಳಿರುವ ಅಮೃತಕೊಳದಿ ಮುಳುಗಿ | ಪರಮ ಅಮೃತರಸವವೀವ | ಹಂಸನಾಗೆ | ಪರಮ ಹಂಸನಾಗೆಲೋ || ಹಂಸ ಹಂಸ ಹಂಸ ಎನುತ ದ್ವಂಸ ಗೈದು ಅದ್ವೈತ ಭಾವ ಹಂಸನಾಗೆಲೋ ಪರಮ ಹಂಸನಾಗಲೋ ||

5) ನಿರುತ ಪಾಪಪುಣ್ಯವೆಂದು | ಮೆರೆವ ಕಮಲವದನು ಮೆಲುತ | ಸ್ವರಿಪಜ್ಞಾನವೆಂಬರಸದಿ | ಪರಮ ಸುಖದಿ | ಚರಿಸುವಂಥ | ಹಂಸನಾಗೆಲೊ ಪರಮ ಹಂಸನಾಗೆಲೋ

6) ಪುಣ್ಯಬ್ರಹ್ಮ ದಲ್ಲಿ ಆಡಿ ಪೂರ್ಣಭೋಧೆಗಾಗಿ ಉಂಡು | ಅನ್ನಾಂಮೃತ ಮಾಡಿಸವಿದು || ಚೆನ್ನಶ್ರೀ ಗುರುರಂಗಾನೆಂಬ ಹಂಸನಾಗೆಲೋ ಪರಮಾ ಹಂಸನಾಗೆಲೋ ! ಹಂಸ ಹಂಸ ಹಂಸ ಎನುತೆ ದ್ವಂಸ ಗೈದು ದ್ವೈತ ಭಾವ ಪರಮ ಹಂಸನಾಗೆಲೋ | ಹಂಸನಾಗೆಲೋ||

**|| ದೇಶ್ ತೋಡಿ ರಾಗ | ರೂಪಕ ತಾಳ ಅಥವಾ ಝುಂಪೆತಾಳದಲ್ಲಿ ||**

ಶಂಭೋಮಹಾದೇವ | ಶಂಕರಾಗಿರಿಜಾ ರಮಣ | ಅಂಬೋರು ಹಲೋಚನಾ ಪಾದಾಂಬೋರುಹದೇಹಿಮೇ || ಶಂಬೂ ಮಹಾದೇವಾ || 1 ||



ಪರಮದಯಾಕರ ಮೃಘಧರ | ವರಗಂಗಾಧರ ಹರನೇ || ಶ್ರೀಪಾದಾರ್ಚಿತದೇಹಿಮೇ || ಶಂಭೋಮಹಾದೇವಾ | ಶಂಕರಾಗಿರಿಜಾರಮಣ ಅಂಬೋರು ಹಲೋಚನ | ಪಾದಾಂಬೋರುಹದೇಹಿಮೇ || ಶಂಭೋಮಹಾದೇವ

**|| ತ್ರಿಪುಟ ತಾಳ || ರಕ್ತಬೀಜಾಸುರನ ಕಥೆ || ತಾಯಿ ನಿಕಶಾದೇವಿಗೆ ||**

ಬಿಡುಬಿಡೂ ಕನಸೀನ ಫಲಗಳನೂ | ಹಡೆದಮ್ಮ ಕೇಳೂ | ಬಿಡುಬಿಡೂ ಕನಸೀನ ಫಲಗಳನೂ || ಜಡಜಲೋಚನೆ | ಹಿಡಿಯೊ ಎನುತಲಿ ಸಡಗರದಿನೇಮವನು ಪಾಲಿಸು || ಬಿಡುಬಿಡು ಕನಸಿನ ಫಲಗಳನೂ ಹಡೆದಮ್ಮತಾಯೇ ಬಿಡುಬಿಡೂಕನಸೀನಫಲಗಳನೂ || ಬಿಡತಿ | ಮುಕ್ತಾಯಕ್ಕೆ ಕೇಳ್ ಜನನೀ ಅಮ್ಮಯ್ಯಾ ಹಡೆದಮ್ಮಾ ಕೂಚು ತದಿತೋಜಣ ತದಿತೋಂ ತದಿತೋಂ || ತದಿತ್ತೈ ||

**|| ರೂಪಕತಾಳ | ದಕ್ಷಯಜ್ಞದಲ್ಲಿ | ದಕ್ಷನಿಗೆ-ದಾಕ್ಷಾಯಿಣಿ ||**

1. ತಂದೆ ಕರೆಯೊದೇವರೂಢಿಯ | ನಿನ್ನ ಮಗಳ ಪ್ರೇಮದಿಂದ 1 ಪತಿಯ ಬಿಟ್ಟು ಹಿತದಿ ಬಂದೆ | ತಂದೆ ಎಂಬ ಮೋಹದಿಂದ | ತಂದೆ ಕರೆಯೊ ದೇವರೊಡೆಯ ನಿನ್ನಮಗಳ ಪ್ರೇಮದಿಂದಾ || ತಾಯಿ ಮಡಿಲು | ಭೂಮಿಯೊಂದೆ | ತೌರುಮನೆಯು ಜೀವವೆನುತೇ || ಹಸುವಿನೆಡೆಗೆ ಕರುವು ಬಂದ ತೆರದಿ ಬಂದಿಹೇ | ತಂದೆ ಕರೆಯೊದೇವ ರೂಢಿಯ | ನಿನ್ನ ಮಗಳ ಪ್ರೇಮದಿಂದಾ||
2. ಕಂದ ನೀನು ಮೊದಲು ಪೋಗಿ | ತಂದೆಗೆ ನೀ ವಂದಿಸುತ್ತಾ| ಚಂದದಾಸುತೆ। ಪಾರ್ವತೀಯ ಬಂದಿಹಾಳು | ಎಂದು ತಿಳಿಸು || ಚಂದದಿಂದ ತಂದೆ ಕರೆದರೆ ಆನಂದವೆನಗೆ ಚಂದಾಕಂದಾ || ಕಂದ ನೀನೂ ಮೊದಲು ಹೋಗಿ ತಂದೆಗೇನೀ ವಂದಿಸುತ್ತಾ ||

**|| ಅಟ್ಟತಾಳ ||**

ಹಡೆದ ಜನಕನನ್ನೂ ಮಾತನಾಡಿಸುವೆನೂ || ಮೃಢನ ಧಯವು ಇನ್ನೂ | ಎಂತಿಹುದೋ ಕಾಣೆ || ಹಡೆದ ಜನಕನನ್ನೂ ಮಾತನಾಡಿಸುವೇ ||

**ದಕ್ಷಯಜ್ಞ ರೂಪಕ ತಾಳ || ಆದಿತಾಳ+ ಯಕ್ಷಗಾನ ಅಟ್ಟತಾಳ || ದಕ್ಷನಿಗೆ ಗೌರಿ**

ಪತಿಯ ಮಾತಮೀರಿ ಬಂದೆ | ಹಿತದಿ ಶಿವನ ದ್ಯಾನಿಸಯ್ಯಾ || ಪಿತನೆಯನ್ನಾದೂಡಬೇಡಾ | ಶಿವನೆ ಸಖಲಕರ್ಥಾನಯ್ಯಾ | ಪತಿಯ ಮಾತಮೀರಿ ಬಂದೆ | ಹಿತದಿ ಶಿವನ ದ್ಯಾನಿಸಯ್ಯಾ || ಮುಕ್ತಾಯ |

**|| ರೂಪಕತಾಳ | ಶನಿದೇವರ ಕಥೆ || ವಿಕ್ರಮ ಕಾಡಿನಲ್ಲಿ ||**

ಮರದ ಬುಡಕೆ ತಲೆಯನಾಕಿ ಮಲಗುವೇನು | ದೇವನೇ ! ನಿದ್ರೆಬಾರದೆ ಎದ್ದು ನೋಡೆ | ಅಂದಕಾರ ಹರಿಯಿತಾಗ | ಮರದ ಬುಡಕೆ ತಲೆಯನಾಕಿ ಮಲಗುವೇನು ದೇವಾನೇ | ಮರದ ಬುಡಕೆ ತಲೆಯನಾಕಿ ಮಲಗುವೆನೂ ದೇವಾ



**|| ಆದಿತಾಳ || ರೂಪಕ ತಾಳ || ಕರಿಭಂಠನ ಚರಿತ್ರೆ ||**

ಪುರವತೋರಿಸಿದೇ ದೇವಾ || ಮಾರ್ಬಲವಬಿಡಿಸಿದೇ | ಹಸುವಿನಿಂದ ಬಳಲುವಂತ ಪರಿಯಮಾಡಿದೇ || ಶೇಷಶಯನನನೇ ದೇವಾ ದುರಿತದೂರನೇ || ಪುರವ ತೊರೆಸಿದೆ ಮಾರ್ಬಲವ ಬಿಡಿಸಿದೆ || ಮುಕ್ತಾಯ ||

**|| ರೂಪಕ ತಾಳ ಅಥವಾ ಆದಿತಾಳ || ತ್ರಿಪುರದಾನವರ ಕಥೆ || ನಾರದ-ಗಂಗೆಯಲ್ಲಿ**

1) ಮಾತೆ ಗಂಗಾಶಿವನು ನಿನ್ನ ತೊಡೆಯೊಳಿಡದೆ ಜಡೆಯೊಳಿಟ್ಟು || ಪರಮ ಪದವಿ ಕೊಟ್ಟು ಇರುವ || ಜಗದೋಳ್ || ಅಧಿಕತಾಯೇ ನೀನು | ಮಾತೆ ಗಂಗಾ ಶಿವನು ನಿನ್ನಾ ||

2) ನಿನಗೆ ಸರಿಯುಜಗದೀಯಾರು | ನಿನ್ನ ತೊರೆದು ಬಾಳ್ವಾರಾರು | ಅನುದಿನವೂ ಸಕಲ ಕಾರ್ಯಕು | ನೀನೆ ಬೇಕುಜಗದಿತಾಯೇ || ಮಾತೆ ಗಂಗಾ | ಶಿವನು ನಿನ್ನಾ |

**|| ರೂಪಕ ತಾಳ | ಗಂಗೆ ಗೌರಿವಾದ | ತ್ರಿಪುರ ಸಂಹಾರ ||**

ಏನೆಸವತಿಗೌರಿನೀನೂ | ಹೀನಮಾತನು | ಮುನಿಪನಾರದ ನುಡಿದ ವಚನದಿ। ಹೀನವೇನಿದೇ | ಏನೆಸವತಿ ಗೌರಿ ನೀನು ಹೀನಮಾತಾನು ||

**|| ದೇಶ್ ತೋಡಿರಾಗ || ಆದಿತಾಳ+ ಅಟ್ಟತಾಳ ||**

ಬಲ್ಲೆನೇಳೆ ಬಲ್ಲಿದತನವ | ಎಲ್ಲರ ಮನೆಯು ಕೊಚ್ಚುವ ತೆರದಿ | ಎಲ್ಲರ ಪ್ರಾಣ ಸೆಳೆವೆಯಲ್ಲೆ 1 ಸೊಲ್ಲಪೆಳಾಬೇಡಾಗಂಗೆ | ಬಲ್ಲೆ ನೇಳೆ ಬಲ್ಲಿದತನವಾ

**|| ಅಟ್ಟತಾಳ || ಮಾರ್ಕಾಂಡೇಯ ಚರಿತ್ರೆ || ಮೃಕಂಡಮುನಿ ||**

ಅರಿಯಾದೇ ಬಂದೇನೂ | ಸ್ವರ್ಗಾಲೋಕಕೆನಾನೂ | ಹರಿಹರಬ್ರಹ್ಮರ | ಅಮೃತೋತ್ಸವಕೇ || ಸರ್ವಋಷಿಗಣವೆಲ್ಲಾ | ಜರಿದು ಹಾಡಿದರೂ | ಪುತ್ರಾಹೀನನು ನಾನು 1 ಧರೆಯೊಳೂ ಇನ್ನೂ

**|| ಕಂದ ಭಾಮಿನಿ || ದೇವಸ್ತುತಿಯಲ್ಲಿ | ಆದಿಶಕ್ತಿ**

ಪರಮಮಂಗಳ ಮೂರ್ತಿ | ಪಾವನಚರಿತೇ | ಮಾಯಾ ಶಕ್ತಿಯೇ | ವಿಶ್ವಾಂಭರಿಸದಾಶಿವೆ ತ್ರಿಭುವನ ಸೂತ್ರದಾಯಕಿಯೇ । ವೇದಮಾತೆಯೇ ಪಾಪವರ್ಜಿತೆ ಕರುಣಿಸೌಕ್ಯಪಾಕರಿಯೇ

**|| ಭಾಮಿನಿ || ಚಿತ್ರಕೇತು ಮಹಾರಾಜನ ಕಥೆ || ಸುಮತಿ ||**

ಎನುತ ಪಂಥವನು ಮಾಡಿಸುಮತಿಯು | ನಯನದಿ ನೀರಸುರಿಸುತೇ || ಯೋಗದೊಳು ತಂದೆ ಅಂಗೀರ ಸರುಕುಳಿತಿರೆ | ಯನ್ನ ಪಂಥವ ಬಿಡುವಳಲ್ಲವೆನುತ ಅಂಗೀರಸರ ಬಳಿಗೆ ಬಂದು ದುಃಖಿಸುತಿರ್ದಳಾಸುಮತಿ || ಸುಮತೀ



**|| ಅಟ್ಟತಾಳ || ಚಿತ್ರಕೇತು ಕಥೆ ||**

ಸನುಮಥವೇ ಮುನಿಪಾತನಾಯಾಳ ಘನದುಃಖಲಾಲಿಸದೇ || ಮೌನದೀ ಕಣ್ಮುಚ್ಚಿ | ಜಪಿಸೂವಜಪಮಣೀ | ವಿಪರೀತಯೋಗಾದಲಿ ಹೇ ಜನಕಾ || ಕೂಚು | ಹೇ ಜನಕಾ ನೀನು ಲಾಲಿಸು ಯನ್ನ ಮಾತನೂ ॥ ಮುಕ್ತಾಯ

**॥ ರೂಪಕ ತಾಳ || ಸುಮತಿ ||**

ತಾತಮುನಿಪತೀ ॥ ಆಹಾದುಃಖದಾ ರೀತೀ | ಮಾತಾಡಲಾರೆನೂ | ನಡೆದ ಸಂಗತಿ | ತಾತಮುನಿಪತೀ ಆಹಾ ದುಃಖದಾರೀತೀ || ಎಷ್ಟು ಹೇಳಲೋ | ಪರಾಮೇಷ್ಠಿಜಾತನೇ / ಕೆಟ್ಟ ಚಾರುಮತಿಯು ಎನಗೆ ಭ್ರಷ್ಠೆ ಮಾಡಿದ ವಿವರಣೆಯನೂ ತಾತಮುನಿಪತಿ | ಆಹಾ ದುಃಖದಾರೀತೀ ॥

**|| ರೂಪಕತಾಳ || ಭಕ್ತಮಾರ್ಕಾಂಡೇಯ ಚರಿತ್ರೆ | ಮೋಹಿನಿ- ಮಾರ್ಕಾಂಡೇಯಗೆ ||**

ಬೇಗ ಬನ್ನಿ ಪ್ರಾಣಕಾಂತೆ | ತಂದೆಯಿಂದ ಪ್ರಾಣ ಪಡೆವೇ ಅಮೃತಸಂಜೀವಿನಿಯೊಳು | ನೀಗುವೇನಾಮರಣದವದಿ ಯಾ | ಬೇಗಾ ಬನ್ನಿ ಪ್ರಾಣಕಾಂತ | ತಂದೆಯಿಂದ ಪ್ರಾಣಪಡೆವೆ |

**|| ಅಟ್ಟತಾಳ ಮಾರ್ಕಾಂಡೇಯಚರಿತ್ರೆ | ಮೃಕಂಡಮುನಿ - ಮರುದ್ವತಿ ||**

ಕಂಡೇವು ದೇವ ದೇವನ | ಮಂಡಲದೋಳು | ಕೈಲಾಸಕಧಿಪತಿಯಾ | ಚಂಡಾಮಹಿಷನ ಕೊಂದು | ಬ್ರಹ್ಮಾಂಡ ರಕ್ಷಿಸಿದ | ಕಂಡೇವು ಮಹಾದೇವಿಯ | ಕಂಡೇವು ಕಂಡೇ | ಹರಗೌರಿಯನು ಕಂಡೆವು || ಪೊರೆ ಈಶಾಗೌರೀಶಾ | ಸುತಮಾರ್ಕಾಂಡೇಯನ | ರಕ್ಷಿಸಿತೊರೆದೇವನೇ | ದೇವರದೇವ | ಸಂರಕ್ಷಿಸೂ ಮಹಾದೇವನೇ ॥ ಮುಕ್ತಾಯ |

**|| ರೂಪಕತಾಳ || ಶನಿಮಹಾತ್ಮ | ವಿಕ್ರಮನಪದ ||**

ಗತಿಯನ್ನೇನು ಮುಂದೆ ಎನಗೆ | ಅಶ್ವಮಾಯವಾಗಿದೇ ಪುರದಿ ಪ್ರಜೆಯು | ಮರುಗುತಿಹರೆ | ಎಂತು ಮಾಡಲಿ ದೇವಾನೇ ಗತಿಯನ್ನೇನು ಮುಂದೆಯನಗೆ ಅಶ್ವಮಾಯವಾಗೀದೇ ॥ ಮುಕ್ತಾಯ |

**|| ವಿಕ್ರಮ ಆದಿತಾಳ ||**

ಮರದ ಬುಡಕೆತಲೆಯನಾಕಿ ಮಲಗುವೇನು ದೇವನೇ || ನಿದ್ರೆ | ಬಾರದು ಎದ್ದು ನೋಡೆ ಅಂಧಕಾರ ಅರಿಯಿತಾಗ | ಗತಿಯಿನ್ನೇನು | ಮುಂದೆ ಎನಗೆ ಅಶ್ವಮಾಯವಾಗಿದೇ



**|| ರೂಪಕತಾಳ || ಅಲೋಲಿಕ ವಿಕ್ರಮನಿಗೆ || ಯಕ್ಷಗಾನ ಅಟ್ಟತಾಳ ||**

ಮಧನಬಾಧೆ ಹೃದಯವನ್ನು ನಡುಗಿಸುತ್ತಲಿಹುದುರ ಮಣ | ಸುಧತಿಯೊಳು ಇಚ್ಛೆಯನ್ನು ನಡೆಸೋ ನೀನು | ಪ್ರಾಣಕಾಂತ | ಮಧನಬಾಧೆ ಹೃದಯವನ್ನು ನಡುಗಿಸುತ್ತಲಿಹುದು ರಮಣಾ ।

**|| ದೇಶ್ ತೋಡಿ ರಾಗ || ಕಂದ || ವಿಕ್ರಮ ||**

ಯೋಚಿಸುತ ಕುಳಿತಿರೆ ವಿಕ್ರಮನೂ ತರುಣಿಯು ಬಿಸಾಟಹ | ಮುತ್ತಿನ ಸರವನೆಲ್ಲವನೂ | ಕಂಬದ ಹಂಸ ಪಕ್ಷಿಯು ಬಂದು | ಸರವನೆಲ್ಲಾ | ನುಂಗಿ ಸೇರಿತು ತಿರುಗಿ ಕಂಬವನೂ | ಇದನೆಲ್ಲ ನೋಡಿದನು ವಿಕ್ರಮನು | ಅಯ್ಯೋ ಅಯ್ಯೋ ಇದೆಲ್ಲವು ಶನಿಯ ಮಾಯೆ ಎಂದೆನುತಾ || ಶಿವಶಿವಾ ಮುಂದೇ ನುಗತಿ | ಬಹುಚೋದ್ಯವೆನುತಾ | ಪುನಃ ದುಃಖದಿಂದ ಮಲಗಿದನೂ

**|| ರೂಪಕತಾಳ || ವಿಕ್ರಮ-ಅಲೋಲಿಕೆಗೆ ||**

ಅಮ್ಮಾ ನಿನ್ನಾ ಸರವ ಹಂಸ ಪಕ್ಷಿನುಂಗಿ | ಮಾಯವಾಯಿತಮ್ಮಾ ಯುವತಿಯೇ ಸುಮ್ಮನೇಕೆಯನ್ನ ಹಿಂಸೆ ಪಡಿಸುವೇನೀಯುವತಿಯೇ | ಅಮ್ಮ ನಿನ್ನ ಸರವ ಹಂಸಪಕ್ಷಿ ನುಂಗಿ | ಮಾಯವಾಯಿತಮ್ಮಾ ಯುವತಿಯೇ

**|| ರೂಪಕತಾಳ || ವಿಕ್ರಮರಾಜ -ಲಕ್ಷ್ಮೀದೇವಿಗೆ ||**

ಕೇಳಿ ತಾಯಿ ಯನ್ನ ಕುರುಹ | ಪರರಿಗೆ ನೀವೆ ತಿಳೀಸಬೇಡಿ || ಹಾಳು ಬಾಳಿನ ಪಾಪಿಯನ್ನೂ ಕರುಣದಿಂದ ಸೊರೆಯಿರಿ | ಕೇಳಿತಾಯೆಯನ್ನ ಕುರುಹ | ಪರರಿಗೇ ನೀವ್ ತಿಳಿಸಬೇಡೀ ||

**|| ರೂಪಕ ತಾಳ || ಶನಿಮಹಾತ್ಮ | ಪದ್ಮಾವತಿ ಸಖಿಗೆ ||**

ಯಾರೆ ಆಗಲಿ ಎಂತೆ ಆಗಲಿ | ಕರೆದು ತಾರೆ ಆತನನ್ನೂ ! ಮರೆಯಲಾರೆ ರಾಗಾ ಹಾಡಿದ | ಪ್ರಾಣಾಕಾಂತನನ್ನು ನಾನೂ | ಯಾರೆ ಆಗಲಿ ಎಂತೆ ಆಗಲಿ | ಕರೆದು ತಾರೆ ಆತನನ್ನೂ

**|| ಅಟ್ಟತಾಳ || ವಿಕ್ರಮ- ಪದ್ಮಾವತಿಗೆ |**

ಕಂಡೇನು ದೇವ ದೇವನಾ || ಶನೇಶ್ವರನಾ | ಕಂಡೇನು ದೇವದೇವನ | ಮಂಡಲದೋಳಧಿಕ | ಗ್ರಹಗಳೊಳ್ ಶ್ರೇಷ್ಟನೆನಿಪ | ಶನಿದೇವನನು ಕಂಡೆನು | ಕಂಡೆನು ಕಂಡೆ | ಶನಿದೇವರನು | ಕಂಡೆನೂ



**|| ರೂಪಕತಾಳ | ವಿಕ್ರಮ - ಪದ್ಮಾವತಿಗೆ ||**

ಸತಿಯು ಇಹಳು ಸುತರು ಇಹರು | ಉಜ್ಜೈನಿಗೆ ದೊರೆಯು ನಾನು || ಎಂಥುವರಿಸಲಮ್ಮಾ ನಿನ್ನಾ | ಯನ್ನಮನವುಒಪ್ಪದೂ | ಸತಿಯು ಇಹಳು / ಸುತರು ಇಹರು | ಉಜ್ಜೈನಿಗೆ ದೊರೆಯುನಾನೂ ||

**|| ದೇವೇಂದ್ರ ಅಮೃತೋಸವ ಕಥೆ |**

**| ಅಟ್ಟತಾಳ || ಮಾರ್ಕಾಂಡೇಯ ಚರಿತ್ರೆ | ಬೃಕಂಡಮುನಿ- ನಾರದರಿಗೆ ||**

ಅರಿಯಾದೆ ಬಂದೇನೂ | ಸ್ವರ್ಗಲೋಕಕೆ ನಾನು | ಹರಹರಿಬ್ರಹ್ಮರಾ ಅಮೃತೋತ್ಸವಕೇ | ಸರ್ವಋಷಿಗಣವೆಲ್ಲಾ ಜರಿದು ಹಾಡಿದರೂ | ಪುತ್ರಾಹೀನನು ನಾನೂ | ಧರೆಯೋಳು ಇನ್ನೂ | ಅರಿಯದೆ ಬಂದೇನು ಸ್ವರ್ಗಲೋಕಕೆ ನಾನೂ |

**|| ರೂಪಕತಾಳ ||**

ಕಾಂತ ಮುಂದೆ ಬಾಳ್ವುದೆಂತು | ಸುತನ ಅಗಲಿ ಧರೆಯೊಳಿಂತೂ | ಸುತಗೆ ವರುಷದಿ ನಾಲ್ಕು ಆಯ್ತು ಮೃತಿಗತಿಯ ಕಾಲ ಬಂತು || ಕಾಂತ ಮುಂದೆ ಬಾಳ್ವುದೆಂತು ಸುತನ ಅಗಲಿಧರೆಯೊಳೆಂತೂ

**|| ಭಾಮಿನಿ | ಕಂದ**

ಏನೆಂಬೆ ನೀಮಹಾಸ್ತಲಂಮನಕಾನಂದವಾಗಿ || (ಈಧಾರಿ) ಏನ ಪೇಳಲಿಮಗನೆ ನಾವು | ಮನದ ದುಗುಡವು ಯಮಗೆ | ಹೀನ ಭಾಗ್ಯರು ನಾವು ನಿನಗೆ ಹೇಳಲನುಮಾನ | ತೋರುದು | ಮುಂದೆ ಗತಿಯಾರು ಕಂದಾ

**|| ದೇತೋಡಿರಾಗ ||**

**|| ರೂಪಕತಾಳ || ಮಾರ್ಕಾಂಡ-ಮೃಕಂಡವರುದ್ವತಿಗೆ ||**

ಜನಕಮಾತೆಯೇ | ಆಹಾದುಃಖದಾರೀತಿ | ಅದುವೆ ತೀರದು | ಯನಗೆ ತಿಳಿಸದಿರ್ದೊಡೇ | ನಿಮ್ಮ ಮನದಬಯಕೆ ಹರಿಸಲೂ || ಜನಕ ಮಾತೆಯೇ । ಆಹಾ ದುಃಖದಾರೀತಿ !

**|| ಅಟ್ಟತಾಳ || ಮೃಕಂಡ ಮರುದ್ವತಿ- ಮಾರ್ಕಾಂಡನಿಗೆ||**

ಜಯಹೊಂದಿಬಾಕಂದನೇ | ವಿಜಯ್ ಸುವೀರ | ಜಗದೀಶನನುವಲಿಸೀ || ಅಜಹರಿಗಳಿಘಧಿಕ | ಹರನನ್ನು ನೀವಲಿಸಿ | ಮೃತ್ಯುವ ಗೆಲಿದುನೀಬಾ | ಕಂದಮ್ಮ ಕೇಳೂ ಮೃತ್ಯುವಗೆಲಿದು ಬಾ ||



**|| ಅಟ್ಟತಾಳ || ಮಾರ್ಕಾಂಡ ಶಿವನಲ್ಲಿ ॥**

ಪ್ರೀತಿ ಇಲ್ಲವೆ ನಿನಗೇ ! ನಾಮಾತಪವೂ | ಪಾರ್ವತಿವಲ್ಲಭನೇ | ಅನ್ನಪಾನವ ತೊರೆದೆ | ಜಲವನ್ನು ಸೇವಿಸೆನೂ | ಕೃಪೆಯಿಟ್ಟು ಪೊರೆಯೋ ನೀ | ಪಾರ್ವತಿ ಪತಿ ದಯವಿಟ್ಟು ವಲಿದುಬಾ ಬಾ | ಬಾ ಬಾ | ಶಂಕರಾ ॥

**|| ಆದಿತಾಳ ||**

ತಂದೆ ತಾಯಿ ನರಳುತಿಹರು | ಯನ್ನಮರಣದವದಿಯಿಂದ | ಕರುಣಿಸೆನಗೆ ವರವಕೊಟ್ಟು | ಭಕ್ತಿಬಂಧವೆ | ದೇವಾ ದೇವಾ ಪಾಲಿಸೆನ್ನ | ಕರುಣದಿಂದ ಕೃಪೆಯನಿಟ್ಟು ಭಕ್ತ ಬಂಧುವೇ ||

**|| ರೂಪಕತಾಳ || ಮಾರ್ಕಾಂಡೇಯ-ಯಮನಿಗೆ ||**

ಹರನ ಪೂಜೆ ಮುಗಿದ ಬಳಿಕ ಬರುವೆ ನಿನ್ನ | ಪುರಕೆ ನಾನೂ | ಮೂರು ಘಳಿಗೆ ಅವಧಿಯನ್ನು 1 ಕೊಟ್ಟು ರಕ್ಷಿಸೊದಂಡಧರನೇ || ಹರನ ಪೂಜೆ ಮುಗಿದ ಬಳಿಕ | ಬರುವೆ ನಿನ್ನ ಪುರಕೆ ನಾನು ||

**|| ಯಕ್ಷಗಾನ ಅಟ್ಟತಾಳ || ||**

**|| ಆದಿತಾಳ + ರೂಪಕತಾಳ || ಅಂಧಕಾಸುರನ ವಧೆ ಪ್ರಹ್ಲಾದ ಧಾಶಿ ||**

**ಮಾಡಬೇಕೆಲೋ||**

ಗುರುಶುಕ್ರರಿಂದ | ಹರನ | ಮಹಿಮೆಯನ್ನೂ ತಿಳಿಯೋ ನೀನೂ ಹರಿವಿಧಿಗಳು ಶಿರವಪಾದವ | ಅರಿಯದೇತಾಬಳಲಿದಾರು | ಬೇಡ ಬೇಡವೋ | ರಾಜಾಮೂಢ ಬುದ್ದಿಯೂ

**|| ರೂಪಕತಾಳ + ಆದಿತಾಳ + ಅಟ್ಟತಾಳ || ಯಕ್ಷಗಾನಕ್ಕೆ||**

ದುಷ್ಟನಿಗ್ರಹ ಸೃಷ್ಟಿ ಪಾಲ | ಅಷ್ಟಮೂರ್ತಿ ಗೌರೀಪತಿಯೊಳು | ದುಷ್ಠಭಾವವೇಕೆ ನಿನಗೆ 1 ನಷ್ಟಪಟ್ಟು ಹೋಗುವೆಯೋ | ಬೇಡ ಬೇಡವೋ | ರಾಜಾಮೂಢಬುದ್ಧಿಯೂ

**|| ರೂಪಕತಾಳ | ಅಂದಕಾಸುರ ವಧೆ||**

ನಾರದ ಶಿವನಿಗೆ 1 ಈ ಧಾರಿ ತಾತಮುನಿಪತಿ || ಯಕ್ಷಗಾನ ಅಟ್ಟತಾಳ | ದುರುಳನವನು ನಾಳೆ ದಿನವೇ | ಸಖಲಖಳರ ಕೂಡಿಕೊಂಡು || ಬಾಳಲೋಚನ ನಿಮ್ಮ ಶರೆಯ || ಹಿಡಿಯಲೆಂದು ಬರುತಲಿಹನೂ ! ಏನ ಹೇಳಲಿ ಖಳನಾದುಷ್ಠಮಾರ್ಗವಾ



**| ರೂಪಕತಾಳ + ಆದಿತಾಳ || ಶುಕ್ರಾಚಾರಿ | ಅಂದಕಾಸುರನಿಗೆ || ಯಕ್ಷಗಾನ ಅಟ್ಟತಾಳ ||**

|| ಅಟ್ಟತಾಳ || ಮಾರ್ಕಾಂಡ ಶಿವನಲ್ಲಿ

ಈಗ ಕ್ಷೇಮವಾಗಲೀ | ಈಗಾ ಧೀರಸಮರದೀ | ತಾಮಸೇಂದ್ರ ಲಾಲಿಸ್ಸೈಯ್ಯಾ ಪ್ರೇಮದಿಂದ ವೃರಿಗಳನು | ಮರ್ಮದಿಂದಾ ಕೊಂದು ಬಾರೈ | ಧರ್ಮದಿಂದ ಪೇಳ್ವೆ ನೀಗಾ | ಕ್ಷೇಮವಾಗಲೀ | ಈಗಾಧೀರಸಮರದಿ |

**|| ರೂಪಕತಾಳ || ಶಿವನಿಗೆ- ಭೂದೇವಿ||**

1) ತಾಳಲಾರೆ | ತಾಳಲಾರೆ | ಭೂಭಾರವನ್ನೂ ಶಂಕರಾ | ಭೂಲೋಕದೊಳಗೆ । ಕರ್ಮಿಗಳ ಬಹಳವಾಗಿ ಬೆಳೆಯುತಿಹರೂ || ತಾಳಲಾರೆ ತಾಳಲಾರೆ | ಬಾಳ ಲೋಚನಾ |

**|| ರೂಪಕ ತಾಳ || ಭೂದೇವಿ- ಶಿವನಲ್ಲಿ ||**

1) ಯಮನ ಕಾರ್ಯ ಮಾಳ್ಪರಾರು | ಧಂಡ ಧರನ ಪ್ರಾಣ ಉಳಿಸು | ಮುಂದೆ ಧರ್ಮ, ಕರ್ಮಗಳನೂ | ಪರುಕಿಪಾರು ಯಾರೂ ದೇವಾ || ತಾಳಲಾರೆ, ತಾಳಲಾರೆ ಭೂಭಾರವನ್ನು ಬಾಳಲೋಚನಾ |

**|| ಆದಿತಾಳ || ಗಿರಿಜಾ ಕಲ್ಯಾಣ || ದೇವೆಂದ್ರ- ಮನ್ಮಥನಿಗೆ||**

ರತಿಯಾ ಕಾಂತಾನೆ ನೀನೀ ಪರಿಯ ಪೇಳ್ವರೇ । ಅಸುರಬಾಧೆಯ ಸಹಿಸಲಾರೆವು ಪಿತನವಚನ ಪಾಲಿಸಿನ್ನೂ || (ಪುನಃ) || ರತಿಯ ಕಾಂತನೇ ನೀನೀ || ಪಥಗೆಟ್ಟು ಬಾಳುತಿಹೆವು ನಾವು | ಹತವಮಾಡಲು ಅಸುರರ || ಶಿವನಿಗರ್ಪಿಸು ನಿನ್ನ ಬಾಣವ || ರತಿಯ ಕಾಂತಾನೇ | ನೀ ನೀ ಪರಿಯ ಪೇಳ್ವರೇ |

**|| ರೂಪಕತಾಳ || ಸೀತಾಪರಿತ್ಯಾಗ | ಲವಕುಶರ ಕಥೆ | ಸೀತೆಗೆ ಲಕ್ಷ್ಮಣ ||**

1) ಹಿಂದೆ ಖಳನು ಕದ್ದೊಯ್ದ ಸೀತೆಯ | ಶ್ರೀರಾಮಚಂದ್ರ ಕರೆದು ತಂದು || ಮರಳಿ ಸಂಸಾರವನ್ನು | ನಡೆಸುತಾಲಿ ಇಹನು ಎಂದೂ | ಹಿಂದೆ ಖಳನು | ಕದ್ದೊಯ್ದ ಸೀತೆಯ ಶ್ರೀರಾಮಚಂದ್ರ ಮರಳಿತಂದೂ

2) ರಜಕ ನುಡಿದ ಮಾತಿಗೀಗ | ಜನರ ನಿಂದ್ಯವಕಳೆಯಲೋಸುಕ | ಮನೆಯ ತೊರೆಸಿದ | ರಾಮಚಂದ್ರನೂ || ಕೇಳಿತಾಯೆ ವಿವರವನ್ನೂ | ಹಿಂದೆ ಖಳ ಕದ್ದೊಯ್ದ ಸೀತೆಯ ಮರಳಿ ತಂದು | ಸಂಸಾರವನ್ನೂ | ನಡೆಸಿದನೆಂದೂ |

**|| ದೇಶ್ ತೋಡಿರಾಗ ||**

**|| ಆದಿತಾಳ || ತ್ರಿಪುರಧಾನವರ ಕಥೆ || ದೇವೇಂದ್ರ- ನಾರದನಿಗೆ ||**

ಪಾಲಿಸೆಮ್ಮನೂ ದೇವಾ ಪಾಲಿಸೆಮ್ಮನೂ | ದೇವ ಸತಿಯರನ್ನೂ ಇನ್ನೂ || ಸಾವಧಾನ ಮಾಡದಂತೆ | ಸೇವ ಕರತೆರದಿಅವರು || ಮಾನಹೀನಾ ಮಾಡೂತಿಹರೂ ಪಾಲಿಸೆಮ್ಮನೂ || ದೇವಾ ಪಾಲಿಸೆಮ್ಮನೂ ||

**|| ರೂಪಕತಾಳ || ಸುಮಾಲಿನಿ (ಈಧಾರಿ || ತಾತಮುನಿಪತಿ ಆಹಾ ದುಃ ||)**

ಯಾರು ಪೇಳ್ವರೂ | ಯಮ್ಮಾ ಪ್ರಿಯರ ವಾರ್ತೆಯಾ | ಪುರಪ್ರವೇಶ ಮಾಡಲಸದಳ|| ದ್ವಾರದೊಳು ಭರದಿ ಚಕ್ರಾ | ತಿರುಗುತಿಹುದು ನಿಲ್ಲದಂತೆ ! ಅರುಹಲ್ಯಾರು ಬರುವರಿನ್ನೂ ಯಾರು ಪೇಳ್ವರೂ | ಯಮ್ಮಪ್ರಿಯರಾವಾರ್ಥೆಯ |

**|| ರೂಪಕತಾಳ || ತ್ರಿಪುರಾಸುರರ ಕಥೆ || ಮಾಲಿನೀ ಪದ ||**

ಎಂತು ಮೋಸವಾಯಿತೀಗ ಬಂತು ಕೇಡು ನಮಗೆ, ಬೇಗ || ಕಾಂತರೆಂತು ಬದುಕುವಾರು | ನಾವೆಂತು ಬಾಳ್ವುದಿನ್ನು ಜಗದಿ|| ಎಂತು ಮೋಸವಾಯಿತೀಗ ಬಂತು ಕೇಡು ನಮಗೆ ಬೇಗ

**|| ರೂಪಕತಾಳ || ಸತ್ಯಚಿತ್ರಕೇತು ||**

ಏನು ಮೋಸವಾಯಿತೀಗ ಕೆಟ್ಟೆನಕಟ ಕೆಟ್ಟೆನೂ 1 ಹಾನಿಯಾಯ್ತು ರಾಜ್ಯಸುತೆಗೆ ಧಾನವಾಂತಕ || ಏನೋ ಮೋಸ | ತರಳ ನಿನ್ನ ಮರೆತು ನಾನು ಧರೆಯೊಳೆಂತು ಬಾಳಲಾರೆ || ಇಳೆಯೊಳ್ ಮೆರೆವ ಅಳಿಪೂರೀಶ ಪೊರೆಯೊ ಎಮ್ಮನು || ಏನು ಮೋಸವಾಯಿತೀಗ ಕೆಟ್ಟೆನಕಟ ಕೆಟ್ಟೆನು ||

**|| ಅಟ್ಟತಾಳ || ಚಿತ್ರಕೇತು- ಅಂಗೀರಸರಿಗೆ ||**

ಸಿದ್ಧವಾಗಿರುವೆನಯ್ಯಾ ಮೌನೀದ್ರನೆ | ಸಿದ್ಧವಾಗಿರುವೆನಯ್ಯಾ | ಸಿದ್ಧವಾಗಿಹ ಎನ್ನದೇಹವ | ಶುದ್ಧಭಾವದಿ ಕೊಟ್ಟ ಮೇಲೆ ನನ್ನ ದೇನಿದೆ ನಿಮ್ಮದಲ್ಲವೇ | ಸಿದ್ಧವಾಗಿರುವೆನಯ್ಯಾ || ಮೌನೀಂದ್ರನೆ ಸಿದ್ಧವಾಗಿರುವೆನಯ್ಯಾ

**|| ರೂಪಕತಾಳ || ಚಿತ್ರಕೇತು || ಚಾರುಮತಿಗೆ**

ನಾಗರಾಜನೇ ಆಹಾ ಬಾಗಿ ಬೇಡುವೆ ತ್ಯಾಗ ಮಾಡೊ ಎನ್ನ ಜನ್ಮವ ನೀಗುತೀಕ್ಷಣಾ॥ ನಾಗರಾಜನೇ ಆಹಾ ಬಾಗಿಬೇಡುವೆ ||

**|| ರೂಪಕತಾಳ || ಚಿತ್ರಕೇತುಕಥೆ || ಚಾರುಮತಿ ನಿಧಿಪತಿಗೆ |**

ಮುಟ್ಟಬೇಡ ಮುಟ್ಟಬೇಡ ಮುಟ್ಟಬೇಡ ಬ್ರಷ್ಟನೆ | ಕಂದಾ || ಭ್ರಷ್ಟಪುರುಪುರುಷ ಎನ್ನಾ ನಿವನು ಸೆರಗಪಿಡಿದು ಎಳೆಯುವಾ | ಮುಟ್ಟಬೇಡ ಮುಟ್ಟಬೇಡ ಮುಟ್ಟಬೇಡ ಬ್ರಷ್ಟನೆ ||

**| ರೂಪಕ ಆದಿತಾಳ + ಅಟ್ಟತಾಳ || ಮುನಿಕುಮಾರರು ಸೀತಾದೇವಿಗೆ |**

ಬಂದುಸೇನೆ ಕವಿದು ಕೋಪ | ದಿಂದರಣದಿಲವನಜೈಸಿ | ಕುದುರೆ ಸಹಿತ | ಲವನ ಮೂರ್ಚೆ ಪಡಿಸಿ | ಪೋದರಮ್ಮ ಜನನಿ || ಬಂದು ಸೇನೆ ಕವಿದು ಕೋಪ | ದಿಂದರಣದಿಲವನ ಜೈಸಿ |

**|| ರೂಪಕತಾಳ + ಆದಿತಾಳ + ಅಟ್ಟತಾಳ || ಮುನಿಕುಮಾರರು ಸೀತಾದೇವಿಗೆ ||**

ವಸುಧೆ ಘಧಿಕ ತುಮಕಿಪುರವ ಕುಶಲದಿಂದ ಪಾಲಿಸೂವ | ಅಸಮನಯನನಾಣೆ ಲವನು | ಮೂರ್ಚೆಯಿಂದ ಮಲಗಿದಾನು ವನಜಾನೇತ್ರೆ ನಿಜವ ನುಡಿವೆವೂ ||

**|| ರೂಪಕತಾಳ | ಶನಿಮಾಹಾತ್ಮ || ಆಲೋಲಿಕೆ ||**

ಗೆಲುವ ಕಾಣದ ಯುವತಿ ಎದ್ದು | ಮುತ್ತಿನಾ ಸರವನ್ನೂ ನೋಡೆ | ಕಾಣದಿರಲು ಸರವು ಇನ್ನೂ | ಘಾಢದಿಂದ ಕೋಪಗೊಳುತ ಸರವ ಕೇಳಳೂ

**|| ರೂಪಕತಾಳ + ಆದಿತಾಳ || ವಿಕ್ರಮ ||**

ಅಮ್ಮ ನಿನ್ನ ಸರವ ಹಂಸ ಪಕ್ಷಿ ನುಂಗಿತಮ್ಮಾ ಯುವತಿ | ಸುಮ್ಮನೇಕೆಯನಗೆ ಹಿಂಸೆ | ಪಡಿಸುವೇ ನೀಯುವತಿಯೇ | ಅಮ್ಮ ನಿನ್ನ ಸರವ ಹಂಸ ಪಕ್ಷಿ ನುಂಗಿತಮ್ಮಾ ಯುವತಿ ||

**|| ರೂಪಕತಾಳ || ಲವಕುಶರ ಕಥೆ || ಅಶ್ವಮೇಧಯಾಗ ಸೀತೆ ಪದ || +ಆದಿತಾಳಕ್ಕೂ**

ಧರಣಿಪಾಲರೂ ಆಹಾ | ಕರುಣೆ ಹೀನರೂ | ತರಳನೆನ್ನದೆ ಲವನಿಗೆಂತು | ಸರಳ ಸುರಿದರೂ || ಧರಣಿಪಾಲರೂ | ಆಹಾ || ಕರುಣೆ ಹೀನರೂ || ಗಿರಿಜೆ ಅರಸನೇ ದೇವಾ ದುರಿತದೂರನೇ | ಹರನೆ ರಕ್ಷಿಸೋ | ಯನ್ನ ಕುವರಲವನದೇವನೇ | ಧರಣಿಪಾಲರೂ ಆಹಾ | ಕರುಣೆಹೀನರೂ

**| ರೂಪಕತಾಳ + ಆದಿತಾಳ || ಸೀತೆ ಪದ (ಆದಿತಾಳಕ್ಕೂ ಹೇಳಬಹುದು)**

ಯಾರ ಬಳಿಯ ಸೇರಲಪ್ಪಾ ಧೀರ ಲಕ್ಷ್ಮಣಾ || ವಾರಿಜಾಕ್ಷ ರಾಮಚಂದ್ರಾ ತೊರೆದನೇನಪ್ಪಾ | ಹೆರಿಗೆ ಸಮಯವದಗಿ ಬಂದಿದೆ 1 ಬಾರಿವನದೊಳು || ಮೊರೆವರಾರು! ಕರುಣೆ ಇಲ್ಲದೆ | ಅಡವಿಗೀಡು ಮಾಡಿದೆಯಾ | ಯಾರ ಬಳಿಯ ಸೇರಲಪ್ಪಾ ಧೀರ ಲಕ್ಷಣ ||

**|| ಅಟ್ಟತಾಳ || ಸೀತೆ-ವಾಲ್ಮೀಕಿಯವರಲ್ಲಿ**

ಪರಮ ಗುರುವೇ | ಕರುಣಿಸೆನ್ನಾ | ಪರಿಯಾನೆಲ್ಲಾ| ವರೆವೇನು ಇನ್ನೂ || ಪುರವು ಅಯೋಧ್ಯಾ ನಗರವಪಾಲಿಪಾ | ರಾಮನರಸೀ || ದುರ್ಭಾಗ್ಯಸೀತೆ | ಪರಮ ಗುರುವೆ ಕರುಣಿಸೆನ್ನಾ ||

**|| ಅಟ್ಟತಾಳ || ದೇಶ್ ತೋಡಿ | ಶುದ್ಧ ದಕ್ಷಿಣಾದಿ | ಅಶ್ವಮೇಧ ಯಾಗ ||**

**|| 1) ಕುಶಲವರ ಕಥೆ || ಸೀತೆಪದ || ವಾಲ್ಮೀಕಿಗೆ ||**

ದಶಶಿರ ಕದ್ದೊಯ್ದ್ ಸೀತೆಯ ಕರೆತಂದೂ | ಮರಳಿ ಸಂಸಾರ | ಸುಖ ಪಡುತಿಹನೆಂದೂ | ರಾಮಾರ ಜರಿದಾ | ದುರುಳ ರಜ ಕಾನು | ಕಾರಣದಿಂ ರಾಮ। ತ್ಯಜಿಸಿದರುಯನ್ನಾ||

**|| ರೂಪಕತಾಳ + ಆದಿತಾಳ + ಅಟ್ಟತಾಳ | ವಿಕ್ರಮ || ಗಾಣಿಗ ಶೆಟ್ಟಿ ಸೊಸೆಯಲ್ಲಿ**

ಕೇಳಿತಾಯೆ ನಮ್ಮ ಕುರುಹ | ಪರರಿಗೇ ನೀವ್ ತಿಳಿಸಬೇಡಿ | ಹಾಳು ಬಾಳಿನ ಪಾಪಿಯನ್ನು ಕರುಣದಿಂದ ಪೊರೆಯಿರಿ | ಕೇಳಿತಾಯೆ ನಮ್ಮ ಕುರುಹ || ಪರರಿಗೇ ನೀವ್ ತಿಳಸಬೇಡಿ ||

**|| ರೂಪಕತಾಳ + ಆದಿತಾಳ + ಅಟ್ಟತಾಳ | ಪದ್ಮಾವತಿ ಸಖಿಯರಲ್ಲಿ || ಯಕ್ಷಗಾನ ಅಟ್ಟತಾಳ**

ಯಾರೆ ಆಗಲಿ ಏನೇ ಅಗಲಿ ಕರೆದು ತಾರೆ | ಆತನನ್ನೂ ಮರೆಯಲಾರೆ | ರಾಗ ಹಾಡಿದ ಪ್ರಾಣಾಕಾಂತನ್ನೂ ನಾನು | ಯಾರೆ ಆಗಲಿ (ಎಂತೆ ಆಗಲಿ) ಏನೇ ಆಗಲಿ | ಮರೆಯಲಾರೆ ಆತನ್ನೂ

**|| ಅಟ್ಟತಾಳ || ವಿಕ್ರಮ ||**

ಕಂಡೇ ದೇವಾದೇವನಾ | ಶನೇಶ್ವರನಾ | ಕಂಡೇ ಸೂರ್ಯಸುತನ | ಮಂಡಲದೋಳ್ ಅಧಿಕ | ಗ್ರಹಗಳೊಳ್ ಶ್ರೇಷ್ಠನ | ಶನಿದೇವನನು ಕಂಡೆನು | ಕಂಡೆನು ಕಂಡೆ | ರವಿ ಸುತನನು ಕಂಡೆನೂ

**|| ರೂಪಕತಾಳ || ಶಶಿರೇಖಾ ಪರಿಣಯ || ಕನಕಾಂಗಿ ಕಲ್ಯಾಣ | ಸುಭದ್ರೆ ||**

ಏನ ಮಾಡಲೀ | ನಾನೆಲ್ಲಿ ಹೋಗಲಿ | ಅಗ್ರಜನೂ ಭಾಷೆಗೈದನೂ | ಏನ ಮಾಡಲಿ | ನಾನೆಲ್ಲಿ ಹೋಗಲಿ || ಅನುಜೆಯಂದು ಭಾವಿಸದೆ | ಅಣ್ಣ ಇನ್ನು | ಯನ್ನನೀಗ | ಗೃಹವ ಬಿಟ್ಟು ದೂಡಿಸುವನೂ || ಏನ ಮಾಡಲಿ ನಾನೆಲ್ಲೀ ಪೋಗಲಿ ||

**| ರೂಪಕತಾಳ || ಶ್ರೀ ಹರಿಯ ಧ್ಯಾನ || ಸುಭದ್ರೆ**

ಕರುಣೆ ಇಲ್ಲವೇ | ದೇವಾ ಈ ತರುಣಿ ಮಣಿಯೊಳು | ಧರಣಿಯೊಳಗೆ | ಯನ್ನೀ ಛಲವತೀರ್ಪ ಬಗೆಯು ಹೇಗೆ ದೇವಾ | ಏನಮಾಡಲಿ ನಾನೆಲ್ಲಿ ಹೋಗಲೀ

**|| ದೇಶ್ ತೋಡಿ || ಭಾಮಿನಿ || ಕುರುಕ್ಷೇತ್ರದ ಕಥೆ | ಕರ್ಣನಲ್ಲಿಗೆ ಕುಂತಿದೇವಿ ||**

ಅರಸ ಲಾಲಿಸು ಕಥೆಯನು | ಕರ್ಣನು ನಿರ್ಭಾಗ್ಯನು ನಾನಹುದೆಂದೆನುತ | ದುಃಖಿಸುತಿರಲು | ಶ್ರೀ ಹರಿಯಿಂದ ಕರ್ಣನೂ ಮಗನೆಂಬುದ ತಿಳಿದು | ತಾನರಿಯದೆ ಮಾಡಿದ ಅಪರಾಧವನು ನೆನೆದು ಕುಂತಿಯು 1 ಹರಹರಾ ಎಂದೆನುತ | ರಕ್ತ ಬಂದರಲೆ ಜನಿಸಿದ ಕುವರರ | ರಣರಂಗವ ನೋಡುವ ತೆರನಾಯಿತೆಂದೆನುತ | ಪುತ್ರಕರ್ಣನ ಬಳಿಗೆ ತಂದಳು ಕುಂತೀದೇವಿ |

**|| ಅಟ್ಟತಾಳ || ಕುರುಕ್ಷೇತ್ರ | ಅರ್ಜುನ ಭೀಷ್ಮನ್ನು ಗೆದ್ದ ಸಮಯದಿ**

**|| ಬಾರೇ ಸತಿಯೇ ಈ ಧಾರಿ ||**

ತಾತನೇ ಅಯ್ಯೋಯಸ್ನಾನಗಲಿದೆಯಾ | ದುರಕೇ ನೀ ಬಂದೂ ಅಳಿದೇ ನೀನಿಂದೂ || ಶೂರಾರಾಗಲಿದೇ | ಸಮರಾದಿ ಮಡಿದೇ | ತಾತನೇ ಅಯ್ಯೋಯನ್ನ ಅಗಲಿದೆಯಾ ॥

**|| ಭಜನೆ || ರೂಪಕತಾಳ ||**

ಸ್ಮರಣೆ ಮಾಡೆಲೊ ನಾಮಸ್ಮರಣೆ ಮಾಡೆಲೊ | ನಾಮಸ್ಮರಣೆ ಮಾಡೆಲೋ ಸ್ಮರಣೆ ಮಾಡು ಭವದ ಬಲೆಯ | ಹರಿಸೋ ಶಿವನೆ ಶಿವನೆ ಎನುತೆ | | | ಸ್ಮರಣೆ | ಮನದಿರಾಗ ದ್ವೇಷ ಗೈಯ್ಯಾ | ದನೃತವಚನಾ ನುಡಿಯ || ದಿನಿತು ತನುವಿನಂಶನಾಗಿ ದಿನವುಕರಣಶುದ್ಧಿಯಿಂದ 1 ಸ್ಮರಣೆ ಮಾಡೆಲೋ ನಾಮಾ |

**|| ಆನಂದ ಭೈರವಿ ರಾಗ || ಭಾಮಿನಿ ||**

ವೇದಮಾತೆ ವಿಶ್ವಮೂರ್ತಿಯೇ || ಕಾಮಾರಿ ವೈಷ್ಣವಿ ಮಹೇಶ್ವರೀ | ಕಪಾಲಿನಿ। ಮಾಯಾ ಮೂರ್ತಿ ಮೋಹಿನಿ ವಿಷ್ಣುಪೂಜಿತೆ | ಸಲಹು ಸಲಹು ಎಂದೆನುತಾ ನಾರಾಯಣನು ಸ್ತುತಿಗೈದಾ ||

**|| ಅಟ್ಟತಾಳ || ಸಾರಥಿಗೆ || ನಂತರ ಯಕ್ಷಗಾನ ಅಟ್ಟತಾಳನು ಹಾಕಬಹುದು ||**

ಬಂದ ಕಣಣ್ಣ ಬಂದ ಕಣಣ್ಣ | ನನು ಬಣ್ಣ ನಿನು ಬಣ್ಣ 1 ಒಂದೇ ಕಣಣ್ಣ ನಿನು ಬಣ್ಣ ನನುಬಣ್ಣ | ಒಂದೆ ಕಣಣ್ಣ | ಬಾಗೂರು ಬಣ್ಣ ಸೂಗೂರು ಬಣ್ಣ ನನುಬಣ್ಣ ನಿನುಬಣ್ಣ ಒಂದೇ | 2ನೇ ಕಾಲ 3ನೇ ಕಾಲ ಮುಕ್ತಾಯ+ ಯಕ್ಷಗಾನ ಅಟ್ಟತಾಳ

**|| ಅಟ್ಟತಾಳ || ಕುಶಲವರ ಕಥೆ || ರಾಮ ||**

ಜನಕ ಸಂಭವೆ ಸೀತೆ ಕೇಳೇ || ರಮಣಿ ಕೇಳೆಯನ್ನಾ ಮನಕೊಂದು | ಚಿಂತೆ ಸಂಗ್ರಹಿಸಿದ ವೇಳೆ || ಸಂತಾನ ಅಭಿವೃದ್ಧಿ ಇಲ್ಲ | ಯಮಗಿಲ್ಲಾ | ಬಹುಚಿಂತೆಗೀಡಾಗಿ ದುಃಖಿಸುವಂತಾಯ್ತು ಸಂತೋಷವನು ಕಾಣಲಿಲ್ಲಾ || ಕಾಣಲಿಲ್ಲಾ ಬಾಗ್ಯವಂತರಾಗಿ ಸುತರೆಮಗೆ ಇಲ್ಲಾ || ಜನಕ ಸಂಭವೆ ಸೀತೆ ಕೇಳೇ || ರಮಣಿ ಕೇಳೇ ||

**|| ಅಟ್ಟತಾಳ || ದೇವಿ ಮಹಾತ್ಮ | ಕೃಷ್ಣನಿಗೆ- ಲಕ್ಷ್ಮಿ ||**

ಪ್ರಿಯಾರೆ ಇದು ಏನು ನಡೆತೇ | ಇಂಥಾ ನಡತೇ | ತೋಯಜಾಕ್ಷನೆ ನಿಮಗೆ ಸರಿಯಾರೋ ಜಗದೀ | ಪ್ರಿಯಾರೆ ಇದು ಏನು ನಡತೆ ಇಂಥಾ ನಡತೆ || 2ನೇ ಕಾಲಕ್ಕೆ ಪ್ರಿಯರೆ ಇದು ನಡತೆ ಇಂಥಾ ನಡತೆ |

**|| ಆನಂದ ಭೈರವಿ ರಾಗ ||**

**|| ಅಟ್ಟತಾಳ | ಸೀತಾಪರಿತ್ಯಾಗ || ರಾಮ ||**

ಮಕ್ಕಳಿಲ್ಲದೆ ನಮಗೆ ಬಾಲೆ | ಕೇಳೆ ಬಾಲೇ ವ್ಯರ್ಥವಾಯಿತು ಬಾಳೂ ಜಗದೊಳಗೇ 1 ಮುಂದೆ ದಿಖ್ಯಾರು ವಂಶಕ್ಕೆ ಬಾಳಿಫಲವೇನೂ ಮಕ್ಕಳಿಲ್ಲದೆ ನಮಗೆ ಬಾಲೇ ಕೇಳೆ ಬಾಲೆ |

**|| ಅಟ್ಟತಾಳ || ಮಾರ್ಕಾಂಡೇಯ ಚರಿತ್ರೆ || ಮೃಕಂಡಮುನಿ- ಮರುದ್ವತಿಗೆ ||**

ಬಂದೀತೆ ಮಗೆ | ಅಪಕೀರ್ತಿ ಅಪಕೀರ್ತಿ | ಏಕಕಾಲದಿ ವಂದೇ ರೀತಿಯಲೀ ಬಾಲೆ | ಸ್ವರ್ಗಲೋಕದಿ ಯಮ ಗಪಕೀರ್ತಿ ಅಪಕೀರ್ತಿ |

**|| ಅಟ್ಟತಾಳ || ಮರುದ್ವತಿಗೆ - ಮೃಕಂಡಮುನಿ ||**

ಇಹಲೋಕದಲ್ಲಿ ಕೆಟ್ಟ ಬಾಳೂ | ಕೆಟ್ಟ ಬಾಳೂ | ಪರ ಲೋಕದಲಿ ಸದ್ಧತಿಯು ದೊರಕುವುದೇ | ಕಂದಾನಿಲ್ಲದೆ ನಮಗೆ ರಮಣಿ | ಅಯ್ಯೋ ರಮಣಿ | ಇಹಲೋಕದಲ್ಲಿ ಕೆಟ್ಟ ಬಾಳೂ ಕೆಟ್ಟಬಾಳೂ |

**|| ಆದಿತಾಳ || ದಕ್ಷಬ್ರಹ್ಮ - ಬೃಗುಋಷಿಗೆ |**

ಧಾರಮಾತಾ ಕೇಳವನಲ್ಲಾ ಮುನಿರಾಯಾ ಕೇಳು ಮಾರಾಹರ ನಾ ಕರೆವನಲ್ಲಾ ಯತಿರಾಯ - ಮೊದಲು ಭಾಗ | ಹರಿಗೆಕೊಡುವೆ | ಮುನಿರಾಯ | ಮುದದಿ

ನಡೆಸೋಯಜ್ಞವನ್ನು ಯತಿರಾಯ || ಕೇಳ್ ಮುನಿಯೆ | ಯತಿವರನೆ | ಗುರುವರನೇ ಗುರುರಾಯಾ | ತದಿತೋಜಣಾ ತದಿತೋಂ ತದಿಂ ತದಿತ್ತೈ

**|| ಆದಿತಾಳ || ಈಶ್ವರ - ಪಾರ್ವತಿಗೆ |**

**ಯಕ್ಷಗಾನ ಅಟ್ಟತಾಳ ದಕ್ಷಿಣಾದಿ 3ನೇ ಕಾಲ**

ಪೋಪೆ ಯೇನೆಯನ್ನ ನಗಲಿ ಪ್ರಾಣಕಾಂತೆ ಕಾಂತೆ | ಯನ್ನ ಮೋರೆಯರವಾಯ್ತಿ ಪ್ರಾಣಕಾಂತೆ | ಬೇಡ ಬೇಡ ತರವಲ್ಲಾ ದ್ವೇಷವಿನ್ನೂ ಕಾಂತೆ ನಮ್ಮ ಮೇಲೆ | ನಿನ್ನಪ್ಪಗೆ ಪ್ರಾಣಕಾಂತೆ ॥

**|| ಆದಿತಾಳ ||**

**|| ಕುಶಲವರ ಕಥೆ ಲಕ್ಷ್ಮಣಾ ||**

ನವಮಾಸ ತುಂಬಿದಾ ಮಾತೆಯ ಕಾನನಕೆ | ನಾನೆಂತು ಬಿಡಲೀಗಾ ಶಿವನೇ। ಕಳುಹಾದೋದರೆ | ರಾಮ | ದೂಷಿಪಯನ್ನನೂ | ಯಿನ್ನೇನ ಮಾಡಲಿ ಮುಂದೇನಾ ಶಿವನೇ | ಹೇ ದೇವಾ ಹೇಗೆ ಮಾಡಲಿ ಶಂಕರನೇ ತದಿತೋಜಣ | ತದಿತೋಂ ತದಿತೋಂ ತದಿತ್ತೈ |

**| ರೂಪಕತಾಳ || ದೇವೀ ಮಹಾತ್ಮ ಕಥೆ ||**

**|| ರಕ್ತಬೀಜಾಸುರನಿಗೆ ಗುರುಗಳು ಶುಕ್ರಾಚಾರ್ಯ |**

ರಾಜಾದಿ ರಾಜ ಲಾಲಿಸೆನ್ನ ರಾಜಕಾರ್ಯವಾ ನೈಜಗುಣನೇ ನಾನು ಪೇಳ್ವೆ ಕೇಳೋ ವಿಶಯವಾ | ಅಜನ ಪಿತನು ಸುರರಿಗೀಗ ಇತ್ತನ ಮೃತವಾ | ತ್ರಿಜಗದೊಳಗೆ ನಡೆಸೋ ನೀನು | ಭೂಪ ಕಾರ್ಯವಾ ॥ 3ನೇ ಕಾಲ ಮುಕ್ತಾಯ |



**|| ಅಟ್ಟತಾಳ || ಸುರಪತಿ- ನಾರದನಲ್ಲಿ || ರಕ್ತಬೀಜಾಸುರನ ಕಥೆ ||**

ಏನಾ ಮಾಡಲಿ ನಾನು | ಯತಿಯೇ ಮುನಿಪತಿಯೇ | ಹೀನ ಧನುಜನಿಂದಾ ಹಾನಿ ಬರುವುದಿನ್ನೂ | ಏನಾ ಮಾಡಲಿ | ಕೆಟ್ಟ ತೆನ್ನಯ ಲೋಕವಿನ್ನೂ | ಕೇಳ್ ಇನ್ನೂ ದೇವಸುರರನ್ನೂ ಕುಟ್ಟಿ ತಿನ್ನುವನೂ ಏನಾ ಮಾಡಲಿ ನಾನು ಯತಿಯೆ ಮುನಿಪತಿಯೇ ॥ ಕಡ್ಗೆ ಕಡ್ಗತ್ಕೆ ಕಡ್ಗುತಾ | ಕಡ್ಕ್ ಕ ಡ್ಕ್ ತೋಂ

**॥ ಅಟ್ಟತಾಳ || ಸಾರಥಿ ||**

ಈಚಲ ಮರದವ್ವ ಈ ಚಾಲ ಮರದವ್ವ | ಈ ಚಾಲ ಮರದವ್ವ | ಅವ್ವವ್ವ ಈ ಕಾಸುಕೊಟ್ಟರಿಗೆಲ್ಲಾ ಕೈಲಾಸ ತೋರುತಾಳೆ | ಈ ಚಾಲ ಮರದವ್ವಾ | ದುಡ್ಡು ಕೊಟ್ಟರಿಗೆಲ್ಲಗು ದ್ಯಾಟ ತೋರುತಾಳೆ | ಈ ಚಾಲ ಮರದವ್ವಾ ಅವ್ವವ್ವಾ ಈ ಚಾಲ ಮರದವ್ವಾ | 2ನೇ ಕಾಲ 3ನೇ ಕಾಲ ಮುಕ್ತಾಯ || ಯಕ್ಷಗಾನದ ಅಟ್ಟತಾಳ

**| ಅಟ್ಟತಾಳ || ಸಾರಥಿ |**

ಸಾರುವೆ ಡಂಗೂರ | ಊರೆಲ್ಲ ಕೇಳಿರಿ ಸಾರುವೇ ಡಂಗೂರವ | ರಾಜರು ಬೇಕಾದ ಧಾನವ ಕೊಡುತಾರೆ ಕೇಳಿರಿ ಡಂಗೂರವ || 2ನೇ ಕಾಲ | ಅಜ್ಜಾರು ಬನ್ನಿರಿ ಅಜೇರು ಬನ್ನಿರಿ ಎಲ್ಲಾರು ಬನ್ನಿರಿ | ಬೇಡಿದ ದಾನವರ ತಪ್ಪದೆ ಕೊಡುತಾರೆ ಧಾನವಾ

**|| ಆನಂದ ಭೈರವಿ ರಾಗ ||**

**|| ರೂಪಕತಾಳ || ಚಿತ್ರಕೇತುವಿಗೆ | ಅಂಗೀರಸರು |**

ಧಾನಶೀಲ ಸುಜನ ಪಾಲಾ ಭೂರಿಬಾಸುರಾ ಸ್ವರ್ಣಯಾಗ ಮಾಡಬೇಕೊ ಬೀಷ್ಟದಾಯಕಾ || ಮೂರನೇ ಕಾಲಕ್ಕೆ | ದಾನಶೀಲ ಸುಜನಪಾಲ ಭೂರಿಬಾಸುರಾ | ಸ್ವರ್ಣಯಾಗ ಮಾಡಬೇಕು | ಭೀಷ್ಟದಾಯಕೆ

**|| ಅಟ್ಟತಾಳ || ಸತ್ಯಚಿತ್ರಕೇತು ಕಥೆ | ಮುತ್ರ ಚಿತ್ರಾಂಗದ - ತಾಯಿ ಚಾರುಮತಿಗೆ ||**

ನೀರಾ ತರುವೆನು ತಾಯೇ | ಮೋರೆ ನೋಡಮ್ಮಾ | ಯಾರು ದಿಕ್ಕಿಲ್ಲ | ಶ್ರೀಹರಿಯು ಕಾಯುವನೂ || 2ನೇ ಕಾಲ ನೀರಾತರುವೆನುತಾಯೆ |

**| ಅಟ್ಟತಾಳ || ಪುತ್ರ ಚಿತ್ರಾಂಗದ |**

ಕೃಷ್ಣಾಸರ್ಪವು ಕಚ್ಚಿತೆನ್ನ ಪಾದವನ್ನೂ ಸೃಷ್ಟಿ ಪಾಲಕ ಹರಿಯೇ ಕಾಯೋ ನೀ ಮುನ್ನಾ | ಕೃಷ್ಣ ಸರ್ಪವು ಕಚ್ಚಿತೆನ್ನಾ ಪಾದವನ್ನಾ | ಯನ್ನ ಮಾತೆಗೆ ವಿವರ ತಿಳಿಸುವರಾರೂ । ಗತಿಯೇನು ಮುಂದೆ ಹಾವಿಧಿಯೇ ದುಃಖಾಂಬುದಿಯೇ (ಕಡ್ಕಡೆ ತೋಂಕಡ್ಕಡ್‌ತೋಂ ಕಡ್ಕಡೆತೈ)



**|| ಅಟ್ಟತಾಳ || ಮಾರ್ಕಾಂಡ ಚರಿತ್ರೆ || ಮರುದ್ವತಿ ಪದ ||**

ಸುತಹೀನಳಾದೇನು ದೇವಾ ಆಹಾ ದೇವಾ ಕ್ಷಿತೆಯೋಳಂತು ನಾನು ಬಾಳಲೀ ದೇವಾ | ತೊರೆದು ಹೊದರು ದಾನವನ್ನೂ ಯತಿಯು ಇನ್ನೂ ಸುತಹೀನಳಾದೆನು ದೇವಾ ಆಹಾ ಇನ್ನೂ ! ಬಂಜೆಯೆಂಬರು ಜಗದಿಯನ್ನಾ ಆಹಾ ಎನ್ನಾ | ದೇವ ಇನ್ನೂ ಕಂದಾ ನೋರ್ವನ ಎನಗೆ ಕರುಣಿಸದೆ ಮುನ್ನ | ಕುಂದು ಮಾಡಿದೆಯನ್ನ ದೇವಾ ಮಹಾದೇವಾ || ದೇವಾ

**|| ಭಾಮಿನಿ | ಶನಿಮಹಾತ್ಮ||**

ಈ ಪರಿಯೊಳು ತೇಲಿಯೂ ಹೇಳಿದ ಮಾತಿಗೇ ವಿಕ್ರಮನೂ ಪೂರ್ವದಾ| ವಿಧಿ ಬರಹವೆಂದೆನುತ | ನಡೆಸುತೆ ಗಾಣವನೂ || ಒಂದು ದಿನ ರಾತ್ರಿಯೊಳು ಮನಕರುಷವಾಗೆ | ದೀಪಕ ಮಾಲರಾಗವಹಾಡಿದನು | ಪುರದಿ ಜ್ಯೋತಿಗಳು ಹಚ್ಚಿದ ತೆರದಿ | ರವಿಪ್ರಕಾಶದಂತೆ | ಬೆಳಕು ಪ್ರಜ್ವಲಿಸೇ | ಘಾಢನಿದ್ರೆಯೊಳಿದ್ದ | ಪದ್ಮಾವತಿಗೆ | ಬೆಚ್ಚಿದ ತೆರದಿ | ಎಚ್ಚರವಾಗೇ | ಪದ್ಮಾವತಿಯು ಸಖಿಯೊಡನೆ | ಏನೆನುತಿರ್ದಳೂ ||

**|| ಚಾಲುತರ | (ಈಧಾರಿ) ಪದ್ಮಾವತಿಯು ತನ್ನ ಸಖಿಯೊಡನೆ ||**

**|| ಆದಿತಾಳ ||**

ಏಳು ಎದ್ದೇಳು ಸಖಿಯೇ | ಏನೂಚೋದ್ಯವು ರಾತ್ರಿ | ಏನೂ ರಾಗದ ಹಾಡು | ಅತಿಶಯವು ಇನ್ನೂ || ಏನು ಆಶ್ಚರ್ಯವಿದೂ ರವಿಯ ಪ್ರಕಾಶದಂತೇ ॥ ಬೀದಿಯ ಜ್ಯೋತಿಗಳ ಬೆಳಕೂಪಸರಿಸಿಹುದು ! ಕೇಳಸಖಿಯೇ | ನೀನು ಲಾಲಿಸು! ಯನ್ನೊಚನ | ತದಿತೋಜಣ | ತದಿತೋಂ ತದಿತೋಂ ತದಿತೈ |

**|| ಅಟ್ಟತಾಳ || (ಧಾಠಿ) ಜನಕ ಸಂಭವೆ ಕೇಳೆ ಸೀತೆ || ಶನಿಕಥೆ || ಸಖಿಪದ್ಮಾವತಿಗೆ||**

ಮಾತೆಯೆ ಇದು ಏನು ನಡತೇ | ಇಂಥಾ ನಡತೆ | ಪ್ರೀತಿಯ ಸುತೆಯಾಗಿ | ತಾತಗೆ ಕುಂದಾ | ತರಬಡನೀಯಿನ್ನೂ ! ತಾಯೇ ಕೇಳ್‌ತಾಯೇ | 2ನೇ ಕಾಲ ಯಕ್ಷಗಾನ ಅಟ್ಟತಾಳ ||

**|| ಭಾಮಿನಿ||**

**|| ಶನಿದೇವರ ಕಥೆ ||**

ಈಪರಿಯೊಳು ಪದ್ಮಾವತಿಯು | ಹೇಳಿದ ಮಾತಿಗೆ | ವಿಕ್ರಮ ರಾಯನು ವಿಚಿತ್ರ ಗತಿಯಲೀ ರಾಗವನ್ನಾಡಲೂ | ಶಚಿದೇವಿಯ ಮಂದಿರದಂತೆ ಪುರದ ಜ್ಯೋತಿಯ ಬೆಳಕು | ಪ್ರಜ್ವಲಿಸೇ | ಅದನೋಡಿ ಪದ್ಮಾವತಿಗೆ ಘಾಢನಿದ್ರೆಯು ಕವಿದುದೂ ॥



**|| ಅಟ್ಟತಾಳ ||**

ಸತಿಯು ಏನಾದಳೋ | ದೇವಾ ಮಹಾದೇವಾ | ಸುತರೆಂತೂ ಇಹರೋಗತಿಯೇನು ಮುಂದೇ | ಮಂತ್ರಿ ಪ್ರಜೆಗಳು ಪುರದಿ | ಕೊರಗುತ್ತಲಿಹರೇ | ಸತಿಯು ಏನಾದಳೋ ದೇವಾ | ಮಹಾದೇವಾ ॥

**|| ಅಟ್ಟತಾಳ || ತ್ರಿಪುರಸಂಹಾರ | ಬ್ರಹ್ಮ- ಹರಿಯಲಿ ||**

ಸುರರ ಕಷ್ಟವನೀಗ ಹರಿಯೇ | ಕೇಳ್ ಸಿರಿಯೇ | ಮಾರಿದನು ಜರಿಂದಾಹಾನಿ ಬಂದುದನೂ ಯಾರಿಗೇಳಲಿ | ನಾನು ಇನ್ನೂ ವಿಷ್ಣ ದೇವಾ | ದುಷ್ಟ ದಾನವರೀಗ ಸೇರಿ 1 ಮಿತಿಮೀರೀ | ಕಷ್ಟಪಡಿಸುತಲಿಹರೂ | ಸುರದಿಕ್ಪಾಲಕರಾ || ಸುರರಾಕಷ್ಟವ ನೀಗಾಹರಿಸೋ | ದೇವಾ ಹರಿಸೋ || ಕೂಚುದೇವಾ

**|| ಅಟ್ಟತಾಳ || ಕುರುಕ್ಷೇತ್ರ ಕಥೆ | ಕೌರುವಶಲ್ಯನಿಗೆ ||**

ಕೋಪ ಮಾಡುವರೇನೋ ಭಾವಾ | ಕೇಳೂ ಭಾವ | ಕಾಪಾಡುದಯದಿಂದ ಬೇಡುವೆ ದೇವಾ || ಕೋಪಮಾಡುವರೇ ನೋಬಾವಾ | ಕೇಳ್ ಭಾವಾ | ಮೊದಲೊಪ್ಪಿಭಾಷೆಯ ಕೊಟ್ಟು | ಕೇಳದೇವಾ | ಈಗ ಪರಿಪರಿವಿಧದಿಂದ 1 ಕೊರಳ ಕೊಯ್ಯುವೆಯಾ | ಕೋಪ ಮಾಡುವರೇನೊ | ಭಾವಾ ಕೇಳ್ ಭಾವಾ ||

**|| ಅಟ್ಟತಾಳ | ಕೌರವಶಲ್ಯನಿಗೆ ||**

ಹಿಂದೆ ಮಾತುಳಿಯಿಂದ | ರಾಮಾಕೇಳ್ ರಾಮಾ | ಕೊಂದ ದೈತ್ಯರನ್ನೆಲ್ಲಾ ಮಾಡಿಸಂಗ್ರಾಮ | ಹಿಂದೇ ತ್ರಿಪುರ ದಹನಕಾಲದಲ್ಲಿ | ಕಾಲದಲ್ಲಿ | ಬ್ರಹ್ಮಸಾರಥಿಯಾದ ಬಾಳಲೋಚನಗೇ | ಈಗ ಹರಿಯು ಸಾರಥಿಯಿನ್ನೂ ದುರದೋಳ್ ಪಾರ್ಥನಿಗೇ || ಪಾರ್ಥನಿಗೇ ||

**|| ಅಟ್ಟತಾಳ | ತ್ರಿಪುರ ಸಂಹಾರ | ಬ್ರಹ್ಮ ಈಶ್ವರನಿಗೆ ||**

ತಳಮಳಗೊಂಡಿದೆ ಲೋಕ | ಸುರಲೋಕ | ಬಹುಭಾಧೆಪಡುತಿಹರೂ | ತಾಳಾದೆಶೋಕಾ || ಹೇಳಲಿನ್ನಳವಲ್ಲಾ ದೇವಾಮಹಾದೇವಾ ||

**|| ಆದಿತಾಳ || ಶನಿಮಹಾತ್ಮ | ಪಂಡಿತರು || ಯಕ್ಷಗಾನ ಅಟ್ಟತಾಳ ||**

1. ಕರೆಸಿದಂತೆ ವಿವರವೇನು | ವಿಕ್ರಮಾರ್ಕ | ಅರುಹು ನಮಗೇ | ಕಾರ್ಯವೇನು ಮಹಾರಾಜ 13ನೇ ಕಾ || ರಾಜನೀನೂ ಲಾಲಿಸಿನ್ನೂ ವಿಕ್ರಮಾರ್ಕಾ | ತದಿತೋಜಣ | ತದಿತೋಂ ತದಿತೋಂ ತದಿತ್ತೈ ||



.

**|| ಅಟ್ಟತಾಳ || ಸಖಿಪದ್ಮಾವತಿಗೆ||**

2. ಮಾತೆಯೆ ಇದು ಏನು ನಡತೇ ಇಂಥಾ ನಡತೆ | ಪ್ರೀತಿಯಸುತೆಯಾಗಿ | ತಾತಗೆ ಕುಂದ | ತರಬೇಡಿ ನೀವಿನ್ನೂ ತಾಯೇ ಪದ್ಮಾವತಿಯೇ | ಕೇಳ್‌ತಾಯೇ||

**|| ಅಟ್ಟತಾಳ || ವಿಕ್ರಮ ||**

ಸತಿಯು ಏನಾದಳೂ ದೇವಾ | ಮಹಾದೇವಾ || ಸುತರೆಂತು ಇರುವರೋ ಗತಿಯೇನು ಮುಂದೇ || ಮಂತ್ರಿ ಪ್ರಜೆಗಳು ಪುರದಿಕೊರಗುತ್ತಲಿಹರೋ | ಅಯ್ಯೋ ಇಹರೋ ||

**|| ಅಟ್ಟತಾಳ || ಶಶಿರೇಖಾ ಪರಿಣಯ ಕನಕಾಂಗಿ ಕಲ್ಯಾಣ | ಸುಭದ್ರೆ ||**

1. ಅಣ್ಣಯ್ಯಾ ಇದು ಏನು ನಡೆತೆ ಇಂಥಾ ನಡತೆ | ಇಂಥಾ ಸಣ್ಣಮಾತಾಡುವರೆ | ಇದು ರಾಜನೀತೆ || ಅಣ್ಣಯ್ಯ ಇದು ಏನು ನಡೆತೆ || ಇಂಥಾ ನಡತೆ ಸುತೆಯಾ ಕೊಡುವೆನೆಂದು ಮೊದಲು ನೀ ಹೇಳಿ | ಈಗ ಪೊಡವಿಯೊಳ್ ನೀನೀಗ ಹುಸಿಮಾತಾಡುವೆಯಾ || ಅಣ್ಣಯ್ಯಾ ಇದು ಏನುನಡೆತೆ | ಇಂಥಾ ನಡೆತೇ || 2ನೇ ಕಾಲ

**ಜನಕ ಸಂಭವ ಸೀತೆ ಕೇಳೆ || ಈ ಧಾರಿ**

**| ಅಟ್ಟತಾಳ || ಶಶಿರೇಖಾ ಪರಿಣಯ || ಕನಕಾಂಗಿ ಕಲ್ಯಾಣ | ಬಲನಿಗೆ ಸುಭದ್ರೆ**

2. ಪಾಂಡವ ಪಾರ್ಥನಂದನಗೇ 1 ಕಂದನಿಗೇ 1 ಜಡಜಾಕ್ಷಿ ಕನಕಾಂಗಿಯನ್ನೂ | ಕೇಳೀನ್ನೂ ಮೊದಲು ಕೊಡುವೆನೆಂದು | ಭಾಷೆಯ ತೆರದೀ | ಅಣ್ಣಯ್ಯಾ ಇದು ಯಾವ ನಡತೆ | ಇಂಥಾ ನಡತೇ ||

**|| ಅಟ್ಟತಾಳ ||**

3. ಬಡತನಸ್ತಿರವಲ್ಲಾ | ತಂದೇ ನಾನೊಂದೇ || ಈಗ ಇಡು ಕರುಣ ಬಿಡುಶೌರ ನಾ ಬೇಡಿಕೊಂಬೆ || ಅಣ್ಣಯ್ಯಾ ಇದು ಏನು ನಡತೆ || ಇಂಥಾ ನಡತೇ ||

**|| ಅಟ್ಟತಾಳ || ದೃತರಾಷ್ಟ್ರ- ಮಗ ಕೌರವಗೆ ||**

ಕೆಡಬೇಡಾ ಕಂದಾ | ನೀನೂ | ಕೇಳ್ ನೀನೂ | ಪಡಬೇಡ ಕಷ್ಟವ ಪೊಡವಿಯೊಳ್ ಬಾಳೂ | ಪಾಂಡವರ ರಾಜ್ಯವ ನೀನೂ ಕೇಳ್ ನೀನೂ | ಕೊಟ್ಟು ಸುಖದಿಂದ | ಬಾಳು ನೀಮಗನೇ | ಬಾಳೂ ಮಗನೇ



**|| ಅಟ್ಟತಾಳ || ಕುರುಕ್ಷೇತ್ರದಲ್ಲಿ | ಕೃಷ್ಣನಿಗೆ ಕರ್ಣ ||**

ಇಂದೂ ಪಾಂಡವರೊಳು ಸೇರಿ | ನಾನೂ ಸೇರಿ | ಈಗ ಕೂಡಿಬಾಳವುದುಂಟೆ ದೇವಾ | ಕೃಷ್ಣದೇವಾ || ಜಾತಿಬೇಧದಿ ನಾನು ದೇವಾ | ಕೇಳ್ ದೇವಾ || ಸೂತಕುಲದವನೆಂದೂ | ಪಾರ್ಥ ನುಡಿದಾ ದೇವಾ || ಕೃಷ್ಣದೇವಾ

**|| ಅಟ್ಟತಾಳ || ಶಿವಜಲಂಧರನ ಕಥೆ || ಸಮುದ್ರರಾಜ – ಭೂಕರ್ಣಿಕೆಗೆ ||**

ಏನಾ ಹೇಳಲಿಯನ್ನ ರಮಣೀ | ಆಹಾರಮಣೀ || ಧರೆಯೋಳ್ ಹೀನರಾದೆವು ನಾವೂ | ಸುತರಿಲ್ಲದಿನ್ನೂ | ಇಂದು ಬಾಳಿದಕೆ ಫಲವೇನೇ | ಫಲವೇನೂ ಧರೆಯೋಳ್ ಅಪಕೀರ್ತಿಬಂತೆಲ್ಲರಮಣೀ ಕೇಳ್‌ರಮಣೀ ||

**|| ಆದಿತಾಳ || ಗಣಪತಿ - ಶಿವನಲ್ಲಿ || ಯಕ್ಷಗಾನ ಅಟ್ಟತಾಳ ||**

ಮರೆತೆ ಯಾಕೆಯನ್ನ ನೀನು | ಶಂಭುದೇವಾ | ಹಿಂದೆ ಇತ್ತವರವ ನೀನು | ಮರೆತೆಯಾ ಶಂಭುದೇವ || ಮುಂದೆ ನೀನು ರಣವನಡೆಸೋ ಶಂಭುದೇವ || ಯನ್ನ ಪೂಜೇ ಮರೆತು ಈಗ ನೀನು ಶಂಭುದೇವ || ಧನುಜರನ್ನು ಗೆಲಿಯೋನೀನು ಶಂಭುದೇವಾ || ನಿಮ್ಮ ಸಾಹಸಕ್ಕೆ ಮೆಚ್ಚುವೇನು ಶಂಭುದೇವಾ || ಯಕ್ಷಗಾನ ಅಟ್ಟತಾಳ

**|| ಆದಿತಾಳ || ಶಿವಹರಿಬ್ರಹ್ಮಾದಿ ದಿಕ್ಷಾಲಕರು ||**

ನಮ್ಮಿಂದ ಪರಾಧವಾಯ್ತು ನಿರ್ವಿಘ್ನಧಾತಾ ನಿನ್ನ | ಮನಮುಟ್ಟಿ ಪೂಜಿಪೇವು ನಿರ್ವಿಘ್ನಧಾತಾ || ಮೊದಲ ಪೂಜೆ ಬಿಟ್ಟು ನಾವು ಕೆಟ್ಟೆವೆಯ್ಯಾ | ನಮ್ಮ ಅಪರಾಧವನ್ನು ಕ್ಷಮಿಸೂ ನೀನೂ ಗಣನಾಥ || ಯಕ್ಷಗಾನ ಅಟ್ಟತಾಳ

### ‖ ಭೈರವಿರಾಗ ‖

### ‖ ಭಾಮಿನಿ | ಸತ್ಯಚಿತ್ರಕೇತುರಾಜನ ಕಥೆ ‖ ಚಾರುಮತಿ ‖

ಹತ್ತೊಂದು ದಿನದೊಳಗೆ ಕೂಸಿಗೆ | ಹೆತ್ತವಳಿಗೆ ಮುತ್ತೈದೆಯರೂ ಬಿಸಿನೀರೆರೆದು ಪೃಥ್ವಿಪಾಲನ ಸುತಗೆ ಭೂಸುರರು | ಚಿತ್ರಾಂಗದನೆಂಬ | ನಾಮಕರಣಮಾಡಿ | ಸರ್ವರೂ ತೆರಳಲು | ಅಂದು ರಾತ್ರಿಯೊಳು ಇತ್ತ ಚಾರುಮತಿಯು ಸುತನೊಡನೆ ಸುಖನಿದ್ರೆಯೊಳು ಮಲಗಿರಲು ಘೋರಸ್ವಪ್ನವ ಕಂಡು | ಹೆದರುತ್ತ ಚೀರುತ್ತ | ಪತಿಯೊಡನೆ ಸತಿ ಏನೆನುತ್ತಿರ್ದಳ್ |

### ‖ ಅಟ್ಟತಾಳ ‖ ಚಾರುಮತಿ ‖ ಗಂಡಚಿತ್ರಕೇತುವಿಗೆ ‖

ಕನಸಾನ ಕಂಡೇ | ಮನಸಿಜಾರೂಪಾ | ಕನಸಾನ ಕಂಡೇನು ‖ ಕನಸಾನು ಕಂಡೇನು ಮನದೊಳು ನೊಂದೇನು | ಕನಸಾನ ಕಂಡೇನು ಮನಸಿಜ ರೂಪಾ | ಕನಸಾನಕಂಡೇ ಬಾಲಾನುಮಲಗಿರೇ | ವ್ಯಳಾನು ಬಂದೆನ್ನ ಬಾಲಾನಕಾಲಾನುಕಚ್ಚಿದ ತೆರನಾಯ್ತು | ಕನಸಾನ ಕಂಡೇ ಮನಸಿಜರೂಪಕನಸಾನಕಂಡೇ ‖

### ‖ ಭಜನೆ ಪದಗಳು ‖

### | ರೂಪಕತಾಳ ‖ ಇದೇ ರಾಗದಲ್ಲಿ‖

1. ನಡುನೀರೊಳು ಕೈಯ್ಯಾಬಿಡುವರೇ | ಕಡೆಗಾಯಿಸೊಹೇಮುರಾರಿ | ನಡುನೀರೊಳು ಕೈಯ್ಯಾ ಬಿಡುವರೇ ತಡವೇತಕೊಕಂಸಾರಿ | ಓಡಿಬಾರೊ ಶೌರೀ ‖ ನಡುನೀರೊಳು ಕೈಯ್ಯಾ ಬಿಡಿವರೇ |
2. ಸಾಗರಾದೊಳೀ ಸಂಸಾರ | ಕಡಲಿನೊಳಗೆ ನ ಕೀದೂರ | ನೋಡಿನಗುವವ್ಯಾಪಾರ | ಓಡಿಬಾರೋ ರಘುವೀರ | ನಡುನೀರೊಳೂ ಕೈಯ್ಯಾಬಿಡುವರೇ | ಕಡೆಗಾಯಿಸೂಹೇಮುರಾರಿ ನಡುನೀರೊಳು ಕಯ್ಯಾಬಿಡುವರೇ ‖
3. ಅಡಿಗಡಿಗಾಧಾರವಿಲ್ಲ | ಪಿಡಿಯಲೆನಗೆತೃಣವು ಇಲ್ಲಾ ನೋಡಿ ನಗುವ ಸಮಯವಲ್ಲಾ | ಓಡಿ ಬಾರೊ ಗೋಪಾಲ | ನಡುನೀರಿನೊಳು ಕೈಯ್ಯಾ

ಬಿಡುವರೇ | ಕಡೆಗಾಯಿಸೊ ಹೇ ಮುರಾರಿ || ನಡುನೀರೊಳು ಕೈಯ್ಯಾ ಬಿಡುವರೇ ||

4. ಯಾರಿಗೇ ಮೊರೆ ಇಡಲೊ ಶ್ರೀ ಹರಿ | ಕೊರಗಿ ಸಾಬಹುದೇನೋ ಈ ಪರಿ। ಕರುಣಿಸು ನಿನ್ನ ಪಾದತೋರಿ || ಶಂಕು ಚಕ್ರಗಧಾಧಾರಿ || ನಡು ನೀರೊಳು ಕೈಯ್ಯಾ ಬಿಡುವರೇ | ಕಡೆಗಾಯಿಸೊ | ಹೇಮುರಾರಿ || ನಡುನೀರೊಳು ಕೈಯ್ಯಾ ಬಿಡುವರೇ

5. ಕರಿದ್ರುವಪ್ರಹ್ಲಾದನಾರದ ಪರಮಭಕ್ತರ ಭೀಷ್ಮಫಲದ | ತರುಣಿ ಅಹಲ್ಯ | ಶಾಪಶಮನ | ಓಡಿ ಬಾರೊ ಗೋವಿಂದ | ನಡುನೀರೊಳು ಕೈಯ್ಯಾ | ಬಿಡುವರೇ ಕಡೆಗಾಯಿಸೋಹೇ ಮುರಾರಿ ನಡುನೀರೊಳು ಕೈಯ್ಯಾ ಬಿಡುವರೇ||

## || ಭೈರವಿ ರಾಗ ||

6. ಪರರಗಬೇಡಲಾರೆ ಪರರ ಬಾಗಿಲ ಕಾಯಲಾರೆ ಪರರಸ್ತುತಿಯ ಮಾಡಲಾರೆ | ಪರರ ಮಾತ ಕೇಳಲಾರೆ || ನಡುನೀರೊಳು ಕೈಯ್ಯಾ ಬಿಡುವರೇ || ಕಡೆಗಾಯಿಸೋಹೇಮುರಾರೆ | ನಡುನೀರೊಳೂ ಕೈಯ್ಯಾ ಬಿಡುವರೇ |

7. ಪರರ ಹಿಂದೆ ಓಡಲಾರೆ | ಪರರಿಗೇನಾ ನಮಿಸಲಾರೆ || ಪರರ ಬೇಡುವಂತೇ ಮಾಳ್ಪರೇ | ನಡುನೀರೊಳು ಕೈಯ್ಯಾ ಬಿಡುವರೇ | ಕಡೆಗಾಯಿಸೊ ಹೇ ಮುರಾರಿ || ನಡು |

8. ವಿಶಯದಾಸೆ ತೀರಲಿಲ್ಲಾ | ವಿಶಯ ಕೇಮನಸೋತೇನಲ್ಲಾ | ವಿಶಯವಾನೀ ಬಲ್ಲೆಯಲ್ಲ | ಪ್ರಾಣೇಶ ವಿಠಾಲಾನೆ || ನಡುನೀರೊಳುಕಯ್ಯಾ ಬಿಡುವರೇ | ಕಡೆಗಾಯಿ ಸೋಹೇ ಮುರಾರೆ | ನಡುನೀರೊಳು ಕೈಯ್ಯಾ ಬಿಡುವರೇ |

9. ವಿಶವವನಾದೊಳಗಿಡದೆ | ಪೋಶಿಶ್ ಗಿರೀಶಾ ನೀನೆ | ನಿನ್ನ ನಂಬಿದೆ ಶ್ರೀನಿವಾಸ | ದಯದಿ ಪೊರೆಯೋಶೇಷಾಶಯನನೇ || ನಡುನೀರೊಳು ಕೈಯ್ಯಾ ಬಿಡುವರೇ ಕಡೆಗಾಯಿಸೊ ಹೇಮುರಾರೆ || ತಡವೇ ತಕೋಕಂಸಾರೇ || ನಡುನೀರೊಳು ಕೈಯ್ಯಾ ಬಿಡುವರೇ |

## || ಭಜನೆಪದ | ಹಿಗ್ಗುವೆಯಾಕೋ ||

## || ಅಟ್ಟತಾಳ ||

ಹಿಗ್ಗುವೆಯಾಕೋ ಈ ದೇಹಕ್ಕೆ ತಗ್ಗುವೆಯಾಕೋ || ಹಿಗ್ಗುವೆಯಾಕೋ ಹಿಗ್ಗುವೆ ತಗ್ಗುವೆ ಮುಗ್ಗವೆ ಮರುಗುವೇ | ಅಗ್ನಿಯೊಳಗೆ ಬಿದ್ದು ದಗ್ಧವಾಗುವ ದೇಹಕ್ಕೆ ಹಿಗ್ಗುವೆಯಾಕೋ ಈ ದೇಹಕ್ಕೆ ತಗ್ಗವೆ ಯಾಕೋ ||

1. ಸತಿಪತಿಗಳು ಕೂಡಿ | ರತಿಕ್ರೀಡೆಗಳ ಮಾಡಿ 1 ಪಥನಾದ ಇಂದ್ರೀಯ ಪ್ರತುಮೆಯ ದೇಹಕ್ಕೆ ಹಿಗ್ಗುವೆಯಾಕೋ | ಈ ದೇಹಕ್ಕೆ ತಗ್ಗವೆಯಾಕೋ | ಹಿಗ್ಗುವೆ



ತಗ್ಗುವೆ ಮಗ್ಗವೆಮರುಗುವೆ ಅಗ್ನಿಯೊಳಗೆ ಬಿದ್ದು ದಗ್ಧವಾಗುವ ದೇಹಕ್ಕೆ ಹಿಗ್ಗುವೆಯಾಕೋ | ಈ ದೇಹಕ್ಕೆ ತಗ್ಗುವೆಯಾಕೋ ||

2. ಆಗ ಭೋಗಗಳನ್ನು ಆಗೂ ಮಾಡುತಲಿದ್ದೇ || ರೋಗಬಂದರೆ ಬಿದ್ದೂ ಹೋಗುವ ದೇಹಕ್ಕೆ ಹಿಗ್ಗುವೆಯಾಕೋ ಈ ದೇಹಕ್ಕೆ ತಗ್ಗುವೆಯಾಕೋ | ಹಿಗ್ಗುವೆ ತಗ್ಗವೆ ಮಗ್ಗವೆ ಮರುಗುವೆ ಅಗ್ನಿಯೊಳಗೆ ಬಿದ್ದೂ ದದ್ದವಾಗುವದೇಹಕೇ ಹಿಗ್ಗುವೆಯಾಕೋ ಈ ದೇಹಕ್ಕೆ ತಗ್ಗವೆಯಾಕೋ ||

3. ಪರರ ಸೇವೆಯ ಮಾಡಿ ನರಕ ಬಾಜನನಾಗಿ | ಮರಳಿಮರಳಿ ಬಿದ್ದು ಉರುಳೂವ ದೇಹಕ್ಕೆ | ಹಿಗ್ಗುವೆಯಾಕೋ ಈ ದೇಹಕ್ಕೆ ತಗ್ಗುವೆಯಾಕೋ | ಹಿಗ್ಗುವೆ ತಗ್ಗವೆ ಮಗ್ಗವೆ ಮರುಗುವೆ | ಅಗ್ನಿಯೊಳಗೆ ಬಿದ್ದು | ದಗ್ಧವಾಗುವ ದೇಹಕೆ ಹಿಗ್ಗುವೆಯಾಕೋ ಈ ದೇಹಕ್ಕೆ ತಗ್ಗುವೆ ಯಾಕೋ ॥

4. ಸೋರುವದೊಂಬತ್ತು ದ್ವಾರದಿಂದ ಲಿಮಲ | ನೀರಿಲ್ಲದಿದ್ದರೆ | ನಾರೂವ ದೇಹಕ್ಕೆ ಹಿಗ್ಗುವೆಯಾಕೋ ಈ ದೇಹಕ್ಕೆ ತಗ್ಗುವೆಯಾಕೋ | ಹಿಗ್ಗುವೆ ತಗ್ಗವೆ ಮಗ್ಗವೆ ಮರುಗುವೆ | ಅಗ್ನಿಯೊಳಗೆ ಬಿದ್ದು | ದಗ್ಧವಾಗುವ ದೇಹಕೆ ಹಿಗ್ಗುವೆಯಾಕೋ ಈ ದೇಹಕ್ಕೆ ತಗ್ಗುವೆ ಯಾಕೋ |

5. ಪುರಂಧರ ವಿಠಲನ | ಚರಣಕಮಲಕ್ಕೆ | ಎರಗದೆ ಇರುತೀಹ | ಗರ್ವದ ದೇಹಕ್ಕೆ ಹಿಗ್ಗುವೆಯಾಕೋ ಈ ದೇಹಕ್ಕೆ ತಗ್ಗುವೆಯಾಕೋ ॥ ಹಿಗ್ಗುವೆತಗ್ಗುವೆ ಮಗ್ಗವೆ ಮರುಗುವೆ | ಅಗ್ನಿಯೊಳಗೆ ಬಿದ್ದು | ದಗ್ಧವಾಗುವದೇಹಕ್ಕೆ | ಹಿಗ್ಗುವೆಯಾಕೋ ಈ ದೇಹಕ್ಕೆ ತಗ್ಗವೆಯಾಕೋ |

**|| ಭೈರವಿ ರಾಗ | ಕಂದಭಾಮಿನಿ || ದೇವೀ ಮಹಾತ್ಮ | ಬ್ರಹ್ಮನ ಸ್ತೋತ್ರ ||**

ಪರಮ ಸತಿ ಪರಶಕ್ತಿ ಪರಮ ಗುಣಸಾವಿತ್ರಿ | ಮಾಯಾತರುಣಿ ಮಂಗಳ ಗೌರೀ ಸಕಲ ಚೈತನ್ಯ ಬಿಂದುವಿಳಾಸಿನೀ | ವಿಶ್ವದ್ದಾರಿ ತ್ರಿಭುವನ ಸೂತ್ರದಾಯಕಿಯೇ ಎಂದೆನುತ ವಾರಿಜೋದ್ದವನು ಸ್ತುತಿಗೈದಾ |

**|| ಅಟ್ಟತಾಳ || ಚಿತ್ರಕೇತು ಕಥೆ | ಅಂಗೀರಸ ಋಷಿ ಮಗಳು ಸುಮತಿಗೆ ||**

ಬೇಡಮ್ಮ ಕೂಸೇ ಮಾಡುವ ಮೋಸಾ || ಬೇಡಮ್ಮಾ ಕೂಸೇ | ನಡೆಸಲು ಕೃತುಮವ ಪಡುವನು ಕಷ್ಟವ | ಅದರಿಂದ ಪೊಡವಿಪ ಬಹುಕಷ್ಟಪಡುವೋನು || ಬೇಡಮ್ಮಾ ಕೂಸೇ ಮಾಡುವ ಮೋಸಾ || ಬೇಡಮ್ಮಾಕೂಸೇ ||

**|| ಅಟ್ಟತಾಳ || ಶನಿಮಹಾತ್ಮ ಕಥೆ || ಲಕ್ಷ್ಮಿದೇವಿ - ಮಾವನಲ್ಲಿ ||**

ಭಾವಯ್ಯಾ ಕೇಳೀ ಈ ದೊರೆಯ ವಿಷಯ | ಭಾವಯ್ಯಾ ಕೇಳಿ ಈ ದೊರೆಯ ವಿಷಯ | ಭಾವಯ್ಯಾ ಕೇಳೀ || ಉಜ್ಜೈನಿಪುರವನ್ನು ಆಳುವ ವಿಕ್ರಮರಿವರು | ವಿಧಿವಶದಿ ಈ ರೀತಿಯಾಗಿದೆ | ಇವರಿಗೆ | ಭಾವಯ್ಯಾ ಕೇಳೀ ||



**|| ರೂಪಕತಾಳ || ಸತ್ಯಚಿತ್ರಕೇತು ಕಥೆ | ಚಾರುಮತಿ ||**

ಮಗನೆ ಪ್ರಾಣಾವನೀಗೀದಾ | ಅಗಲಿ ದುಃಖವ ತೋರೀದಾ ಮಗನೆ ಪ್ರಾಣವನೀಗಿದಾ | ಎಣ್ಣೆ ನೀರಿನ ಋಣವು ತೀರಿತೇ ನಿನ್ನ ಪ್ರಾಣವು ಮೊದಲೇ ಹಾರಿತೆ ಮಗನೇ ಪ್ರಾಣಾವನೀಗಿದಾ |

**|| ಅಟ್ಟತಾಳ | ದಕ್ಷಯಜ್ಞ || ದಾಕ್ಷಾಯಿಣಿ- ಶಿವನಲ್ಲಿ ||**

ಶಂಕರಪೋಗುವೇ | ಈಗಲೇ ಹೋಗುವೇ ಶಂಕರಾಪೋಗುವೇ || ಬೇಗದಿಂ ಜನಕನ ಯಾಗಕೆ ಈಗಲೆ | ಶಂಕರ ಹೋಗುವೇ || ಈಗಲೇ ಹೋಗುವೆ 1 ಬೇಗದಿಂಜನಕನ ಯಾಗವನೋಡಲು | ಯನ್ನಾ ಮನವು ಬಯಸುತಿದೇ | ಶಂ ||

**|| ಅಟ್ಟತಾಳ ಮಾರ್ಕಾಂಡೇಯ ಚರಿತ್ರೆ || ಮೃಕಂಡ ಮುನಿ ||**

ಏತಕ್ಕೆ ಚಿಂತೇ ಕಾಂತೆಯೇ ನಿನಗೇ || ಏತಕ್ಕೆ ಚಿಂತೆ ಕಾಂತೆಯೇ ನಿನಗೇ ಏತಕ್ಕೆ ಚಿಂತೆ | ಸಂತಸದಿ ಪ್ರತಿದಿನವು ಇರುತಿರ್ದಕಾಂತೆಯೇ || ಚಿಂತೇಯ ವಿವರವ ಸಂತಸದಿ ನೀ ತಿಳಿಸು || ಏತಕ್ಕೆ ಚಿಂತೇ | ಕಾಂತೆಯೇ ನಿನಗೇ ಏತಕ್ಕೆ ಚಿಂತೇ ||

**|| ಅಟ್ಟತಾಳ || ಮಾರ್ಕಾಂಡೇಯ ಚರಿತ್ರೆ || ನಾರದ ಶಿವನಲ್ಲಿ ||**

ವಲಿಯದೆ ನೀವಿರಲು ಜಲವನು ಸೇವಿಸನು | ಲಯವನು ಮಾಡದೇ ಸಲಹು ನೀ ಬಾಲನಾ | ಕೇಳು ಪರಮೇಶನೆ | ಕೇಳು ಗೌರೀಶನೇ ದೇವಾ |

**|| ಆದಿತಾಳ || ದೇವೀ ಮಹಾತ್ಮ | ಲಕ್ಷ್ಮಿ- ಶ್ರೀಹರಿಗೆ ||**

ನ್ಯಾಯವೇನೊದೇವ ದೇವಾ | ತೋಯಿಜಾಕ್ಷಮಾಧವ ರಾಯ | ಕೇಳೊಯನ್ನಾವಾಖ್ಯಾ | ಕಾಯಬೇಕೊ ಕೇಶವಾ | ನ್ಯಾಯವೇನೋದೇವಾ ದೇವಾ || | ರೂಪಕತಾಳ || ಚಿತ್ರಕೇತು ಕಥೆ || ಚಂದ್ರಮಾಲಿನಿ || +ಆದಿತಾಳ +ಯಕ್ಷಗಾನ ಅಟ್ಟತಾಳ

1. ಆರೂಕಾಣೆ ಮಧನ ರೂಪ || ಮಾರಸಮಾರೂಪಾಭೂಪಾ || ಆರೋಕಾಣೆ ಮದನಾ ರೂಪಾ | ಪೂರ್ಣಕಾಂತೀಯ ಚಂದ್ರನಂತೆ | ಪೂರ್ಣಕಾಂತಿಯ ಚಂದ್ರನಂತೆ | ಹೊಳೆವ ನೀತನ್ಯಾರೋ ಕಾಣೇ || ಆರೂ ಕಾಣೆ ಮದನ ರೂಪಾ

**|| ಅಟ್ಟತಾಳ || ಕರಿಭಂಟನ ಚರಿತ್ರೆ | ಬನವಂತೆ- ಕರಿರಾಯನಿಗೆ ||**

ಪೋಗ ಬೇಡಪ್ಪಾ ಕಂದಾ ಬೇಡುವೇ ನಿನ್ನಾ | ಪೋಗಬೇಡಪ್ಪಾ ಕಂದಾ | ಚಂಡಾರಕ್ಕಸಿ ನಿನ್ನ ಗುಂಡಿಗೆಯಾ ಶೀಲ್ದಂಥಾ ಕಸಾನ ಕಂಡೇ ಕಂದಾ || ಬೇಡಪ್ಪಾ ಸರ್ವಥಾ ಬೇಡಪ್ಪಾ | ಕಂದಾ ಬೇಡವೆ ನಿನ್ನಾ || ಪೋಗ ಬೇಡಪ್ಪಾ ಕಂದಾ |



**|| ಭಾಮಿನಿ || ಕರಿಭಂಟನ ಚರಿತ್ರೆ | ಕರಿರಾಯ ||**

ವನಿತೆಯ ನುಡಿಯ ಕೇಳುತಾ | ಕರಿರಾಜನು | ಇದು ಏನು ಕೌತುಕವೋ ವನದೋಳ್ ಸಿಲುಕಿ | ಬಳಲಿಸುವ ಪರಿಯ ಮಾಡಿದೆಯಾ ಅಚ್ಯುತನೇ ಮುರವೈರಿ ಗೋವಿಂದನಾ ರಾಯಣನೇ ಸಲಹು – ಸಲಹೂ ದೇವಾ ||

**|| ಅಟ್ಟತಾಳ ಸತ್ಯಚಿತ್ರಕೇತು ಕಥೆ | ರಾಜನಿಗೆ - ಚಂದ್ರಮಾಲಿನಿ ॥**

ಕಲ್ಲಾದರು ಕರಗುವುದಲ್ಲೂ ಪ್ರಿಯಾ | ಕಲ್ಲಿಗಿಂಥ ಅಧಿಕ | ಕಠಿಣ ನಿನ್ನಯ ಹೃದಯಾ || ಕಲ್ಲಾದರೂ ಕರಗುವುದಲ್ಲೋ ಮುಕ್ತಾಯ || ಯಕ್ಷಗಾನ ಅಟ್ಟತಾಳ ಪ್ರಿಯಾ | 2ನೇ ಕಾಲ 3ನೇ ಕಾಲದಲ್ಲಿ

**|| ಅಟ್ಟತಾಳ || ಚಿತ್ರಕೇತು ಕಥೆ || ಚಂದ್ರಮಾಲಿನಿ ||**

ಏಳೂ ಏಳೆ ಪ್ರಿಯಾ | ಏನಿದು ಮಾಯಾ || ಏಳೂ ಏಳೆಲೊ ಪ್ರಿಯಾ | ಸುಂದರಕಾಯಾ ॥ ಏಳು ಏಳೆ ಪ್ರಿಯಾ | ನಾನೇ ನಿನ್ನಲಿ ಬಂದು | ಧೀನತ್ವದಲಿ ಬೇಡೇ ಮೌನದಿಂದಿರುವುದು ಏಕೇ || ಪರಿಹರಿಸೊಯನ್ನಾ ಮಧನಾ ತಾಪವಪ್ರಿಯಾ। ಏಳೂ | 2ನೇ ಕಾಲ 3ನೇ ಕಾಲ ಯಕ್ಷಗಾನ ಅಟ್ಟತಾಳ

**|| ಭೈರವಿ ರಾಗ ||**

**|| ಅಟ್ಟತಾಳ || ಭಕ್ತಮಾರ್ಕಾಂಡೇಯ ಚರಿತ್ರೆ | ಮರುದ್ವತಿ**

ಯತಿವವರೇಣ್ಯನೇ ತೊರೆಯದೆದಾನವ ಪರಿಗ್ರಹಿಸಿರಿ ನೀವು | ಮನ್ನಿಸಿಯನ್ನನು ಯತಿವರೇಣ್ಯನೇ ॥

**|| ಅಟ್ಟತಾಳ || ನಾರದ ಪಾರ್ವತಿ ಶಿವನಿಗೆ ॥**

ಶಂಕರ ಏನಿದು | ಭಕ್ತನಿಗೊಲಿಯದೆ | ಮೌನದಿ ನೀನಿರೆ | ಮುನಿಸುತ ಮಾರ್ಕಾಂಡನು ॥ ಶಂಕರಾ ಏನಿದು | ಮುನಿಯ ಸಂಚಾರಿಯು 1 ಕರುಣವ ಕೇಳ್ವರು ಕರುಣದಿ ಭಕ್ತನ | ವರವನೂ ಪಾಲಿಸು | ಶಂಕರ ಏನಿದು | ಭಕ್ತನಿಗೊಲಿಯದೆ || ಶಂಕರಾ || ಏನಿದು

**|| ಆದಿತಾಳ || ಪಾರ್ವತಿ ಶಿವನಿಗೆ ॥**

ನ್ಯಾಯವೇನೋ ದೇವಾ ದೇವಾ || ಕಾಯವನ್ನು ನೀಗುವ ಬಾಲಮಾರ್ಕಾಂಡೇಯನ ಛಲವನ್ನು ಪಾಲಿಸೂ ನ್ಯಾವೇನೊ ದೇವ ದೇವಾ || ಶಂಕರಾ॥

**|| ಕಂದಭಾಮಿನಿ || ಮಾರ್ಕಾಂಡೇಯನಿಗೆ- ಕಾಮಿನಿಯರು ||**

ಕಾಮನ ಬಾಣಕೆ ಸಿಲುಕದೆ ಬೆದರದ ಮನಜನೂ | ಕಾಮಿಯರ | ಬಲೆಗೆ ನಿಲುಕುವನೇ | ಸೋಮಮೌಳಿಯಧ್ಯಾನಿಸುತ | ಘನವಿಶಯಾಂಧರನಾಗಿರಲು | ಆ



ಮಹಾ ಯಮನು || ಭೀಮಪಾಶದಿಂದೆಳೆವ ಕಾಲಕೆ | ಪ್ರೇಮದ ಸತಿಯು ಬಿಡಿಸುವಳೇ ಯಮಪಾಶವಾ ಪೋಗಿ ಹೋಗಿ ಶೀಘ್ರದಲ್ಲಿ ನೀವೂ || ನೀವೂ || ನೀವೂ ||

**|| ಕಂದ || ಅಲೋಲಿಕೆ | ಶನಿಮಹಾತ್ಮ ಯಲ್ಲಿ ||**

ಮಲಗಿಹ ಪುರುಷನ | ಮುಸುಕಂತೆಗೆದೂನೋಡಿಯುವತಿಯೂ | ಬಲು ಹರುಷವಂತಾಳೀ | ಮಧನ ತಾಪವನು ಸಹಿಸೆನು | ಸುಂದರನೇ | ಎದ್ದು ನೋಡೆನ್ನ ಮುಖವಾ ಪರಿಹರಿಸೆನ್ನ ಮಧನ ತಾಪವಾ ||

**|| ಅಟ್ಟತಾಳ || ನಂದಯ್ಯ ಶೆಟ್ಟಿಗೆ- ಸೊಸೆ ಲಕ್ಷ್ಮೀದೇವಿ ॥**

ಭಾವಯ್ಯಾ ಕೇಳೀ | ಈ ದೊರೆಯ ವಿಶಯ | ಭಾವಯ್ಯಾ ಕೇಳೀ | ಭಾವಾ ಉಜ್ಜೈನಪುರವನ್ನು | ಆಳ್ವವಿಕ್ರಮರಿವರು | ವಿಧಿವಶದಿ ಈ ರೀತಿಯಾಗಿದೆ | ಇವರಿಗೆ ಭಾವಯ್ಯಾ ಕೇಳೀ ॥

ಭಾವ ಅನುಮಾನವೇಕೇ | ತಸ್ಕರನ ಕರೆತಂದು ಮೊರೆಯುವೆ ಎಂದೂ | ಚಂದ್ರಾಸೇನನ ಕೇಳಿ | ಮನಕೆ ಹರುಷವ ತಾಳಿ || ಭಾವಾ ಸಂದೇಹವಿಲ್ಲಾದೆ ಇಂದೊಕಾಪಾಡಿದರೆ || ಮುಂದೆ ಜಯವಹುದೆ ಮನೇ || ಭಾವಯ್ಯಾ ಕೇಳೀ | ಈ ದೊರೆಯ ವಿಷಯ ಭಾವಯ್ಯಾ ಕೇಳೀ

**|| ಕಂದಭಾಮಿನಿ || ಮಾರ್ಕಾಂಡ ಚರಿತ್ರೆ | ನಾರದನ ಕಂದ ||**

ಜೀವನದೊಳಾವುದಂ | ತನ್ನದೆಂದಾಶಿಸದೇ | ಕಾಯಕವೇ ಕೈಲಾಸವೆಂದರಿತು – ಸಕಲ ಸಂಪದಭೋಗಾದಿಗಳು | ಅಸಾರ್ಥಕವೆಂದರಿತು | ಜೀವೇಶ ಶಂಕರನ ನಿಷ್ಠೆಯಿಂಜಪಿಸೆ | ಶಿವಕರುಣಿಪನು | ನಿನ್ನ ಭೀಷಮಂ ಕಾಲನಂಜೈಸೆಂದೆನುತ | ಮುನಿಕುವರಂಗೇ | ನಾರದರು ಅರಸಿ ಕಳುಹಿದರು ವನಕೇ ॥

**|| ಅಟ್ಟತಾಳ | ಮಾರ್ಕಾಂಡ- ಮೋಹಿನಿ ಕಾಮಿನಿಗೆ ||**

ಕೇಳೀ ಗಂಧರ್ವ | ಕನ್ಯೆಯರೆ ಕೇಳೀ ನಾ | ಪೇಳುವ ಮಾತಕೇಳೀ || ಪರಶಿವ | ಪ್ರಾಣದ ಅವಧಿಯ ಕರುಣಿಸಿ ಹದಿನಾರು ವರುಷವ | ಇತ್ತೀಹ ಎನಗಿನ್ನೂ || ಕೇಳೀ ಗಂಧರ್ವ ಕನ್ಯೆಯರೇ ಕೇಳೀ | ಪೇಳುವ ಮಾತ ಕೇಳಿ | ಪ್ರಾಣದವಧಿಯು ದಿನವೈದು ಉಳಿದಿಹುದು ಎನಗಿನ್ನೂ | ಪ್ರಾಣನೀಗುವಯನ್ನ ವರಿಸೇನು ಫಲವಿನ್ನೂ | ಕೇಳೀ ಗಂಧರ್ವ ಕನ್ಯಯರೆ ಕೇಳೀ | ಪೇಳುವ ಮಾತ ಕೇಳೀ ||

**|| ಅಟ್ಟತಾಳ || ತ್ರಿಪುರ ಸಂಹಾರದಲ್ಲಿ ನಾರದ ವಿಷ್ಣುವಿನಲ್ಲಿ | ಯಕ್ಷಗಾನ ಅಟ್ಟತಾಳ**

ಬೇಡುವೆವರವಾ | ಪಾಲಿಸದೇವಾ || ಬೇಡುವೆ ವರವಾ | ಖಳಾತ್ರಿಪುರಾಸುರರೂ | ಕಾಳಗದೊಳು ಸುರರ | ಬಾಳೂಗೆಡಿಸಿತಾವು | ಮೀರಿ



ನಡೆಯುತಲಿಹರು || ದೇವಾ || ಬೇಡುವೆ ದೇವಾ || ವರವಾ ಪಾಲಿಸು ದೇವಾ || ಬೇಡುವೆ ವರವಾ

**|| ಅಟ್ಟತಾಳ | ತ್ರಿಪುರಸಂಹಾರದಲ್ಲಿ | ಬ್ರಹ್ಮ- ಮಹಾವಿಷ್ಣುವಿಗೆ ||**

ಎಂಥಾ ಅಪ್ಪಣೆ ಮಾಡಿದೇ | ಕಂತೂಪಿತನೇ ನೀನೂ | ಎಂಥಾ ಅಪ್ಪಣೆ ಮಾಡಿದೇ । ನಿಂತು ಆದೈತ್ಯರ ಪಂತಾದಿಂ ಕೊಲ್ಲಾದಿರೇ | ಎಂತೂ ಬಾಳುವುದೂ ಹೇಗೇ ॥ ಎಂಥಾ ಅಪ್ಪಣೆ ಮಾಡಿದೇ ||

**|| ಭಾಮಿನಿ | ಸತ್ಯಚಿತ್ರಕೇತು ಕಥೆ || ಸುಮತಿ ||**

ಎನುತ ಪಂಥವನು ಮಾಡಿಸುಮತಿಯು | ಮನದಿಯೋಚಿಸಿ | ನಯನದಿ ನೀರ ಸುರಿಸುತೇ | ಏನಮಾಡಲಿ ಸವತಿ ಚಾರುಮತಿಯ ಗರ್ಭನಾಶಕೆ | ಎಂದೆನುತ ಚಿಂತಿಸುತಿರಲು | ಹರಿಯ ಭಜಿಸುತ | ಮುನಿಪ ನಾರದರು | ಎದುರ್ಗೊಂಡರೂ ||

**|| ರೂಪಕತಾಳ || ಸುಮತಿ ನಾರದನಲ್ಲಿ ||**

ಎಷ್ಟು ಹೇಳಲೋ ಪರಾಮೇಷ್ಟಿಜಾತನೇ || ಕೆಟ್ಟ ಚಾರುಮತಿಯುಎನಗೆ | ಬ್ರಷ್ಟೆ ಮಾಡಿದ ವಿವರಣೆಯನೂ | ಎಷ್ಟು ಹೇಳಲೋ ಪರಾಮೇಷ್ಠಿಜಾತನೇ ||

**|| ರೂಪಕತಾಳ || ಚಾರುಮತಿ | ಪುತ್ರ ಹುಟ್ಟಿದ ಸಂತೋಷಕ್ಕೆ ಚಿತ್ರಕೇತು || ಆದಿತಾಳ**

**+ ಯಕ್ಷಗಾನ ಅಟ್ಟತಾಳ**

ಬಾಲಚಂದ್ರನಂತೆ ಪೊಳೆವ ಸುತನ ನಾನು ಪಡೆದೆನೂ | ಸುತನ ನಾನು ಪಡೆದೆನೂ | ಕ್ಷಿತೆಯೋಳ್ ಧನ್ಯನಾದೆನೂ || ಬಾಲಚಂದ್ರನಂತೆ ಪೊಳೆವ ಸುತನ ನಾನು ಕಂಡೆನೂ || ಯಕ್ಷಗಾನ ಅಟ್ಟತಾಳದಲ್ಲಿ ಮುಕ್ತಾಯ |

**|| ಆದಿತಾಳ | ಚಿತ್ರಕೇತು ಕಥೆ || ಅಂಗೀರಸ ಋಷಿಗಳು ||**

ಕೊಡು ಈಗ ವರವಾ ಪೊಡವಿಪನೀನೂ | ಕೊಡು ಈಗ ಧನವಾ ಧನವಾ ನುಡಿದವಚನದಂತೆ | ಪೊಡವಿಯ ಬಿಟ್ಟಿಗ | ಹೊರಡೂ ನೀನು ಬೇಗಾ ಈಗಾ | (ಯಕ್ಷಗಾನ ಅಟ್ಟತಾಳದಲ್ಲಿ ಮುಕ್ತಾಯ) |

**|| ಅಟ್ಟತಾಳ | ಚಿತ್ರಕೇತು ಅಂಗೀರಸನಿಗೆ ||**

ಸಿದ್ಧನಾಗಿರುವೆನಯ್ಯಾ | ಮೌನೀಂದ್ರಾನೆ | ಸಿದ್ಧವಾಗಿರುವೆನಯ್ಯಾ | ಸಿದ್ಧವಾಗಿಹ ಎನ್ನ ದೇಹವ || ಶುದ್ಧಭಾವದಿ ಕೊಟ್ಟ ಮೇಲೆ | ನನ್ನದೇನಿದೆ ನಿಮ್ಮದಲ್ಲವೆ | ಸಿದ್ಧವಾಗಿರುವೆನಯ್ಯಾ | ಮೌನೀಂದ್ರಾನೇ ಸಿದ್ಧವಾಗಿರುವೆನಯ್ಯಾ |



---

**|| ಅಟ್ಟತಾಳ || ಸತ್ಯ ಚಿತ್ರಕೇತು ಕಥೆ || ಚಂದ್ರಮಾಲಿನಿ - ಸಖಿಗೆ |**

ಬಾರಮ್ಮಾ ಸಖಿಯೇ | ನೀರಜಮುಖಿಯೇ | ನೀರಜಾ ಮುಖಿಯೇ || ಮಾರಾನಾಭಾದೆಯನಾತಾಳಲಾರೆನೂ ಸಖಿಯೇ ಸಖಿಯೇ || ಕ್ರೂರಾ ಮಾರನುಯನ್ನ ಬಹುಬಾಧೆಪಡಿಸುತ್ತಲಿಹನೂ | ತಾಳಲಾರೆನೂ ನಾನೂ ಮಾರಾನಬಾಧೆಯನೂ ಬಾರಮ್ಮಾ ಸಖಿಯೇ | ನೀರಜಾ ಮುಖಿಯೇ || ಬಾರಮ್ಮಾ ಸಖೀಯೇ ||

**|| ಭಾಮಿನಿ ||**

ಈ ಪರಿಯೊಳು / ಚಂದ್ರಮಾಲಿನಿಯು ಶ್ರೀ ಗೌರಿಯ ಧ್ಯಾನಪಾರಾಯಣಳಾಗಿ ಬೇಡಲು | ಗೌರಿಯು ಕರುಣದೀ || ವಾರುದಿ (ಸಮುದ್ರ) ತೀರದಿ ಮಲಗಿರುವ ಚಿತ್ರಕೇತುವು | ಎಚ್ಚರವಿಲ್ಲದೆ ಬಹುನಿದ್ರೆಯೋಳ್ ಮಲಗಿರಲು ನೋಡಿ | ವಿರಹತಾಪವಂ ಸಹಿಸದೆ 1 ಸಖಿಯೊಡನೆ ಏನೆನುತ್ತಿರ್ದಳೂ ||

**|| ರೂಪಕತಾಳ || ಚಂದ್ರಮಾಲಿನಿ- ಚಿತ್ರಕೇತುವಿಗೆ ||**

1. ಆರೊಕಾಣೆಮದನರೂಪ | ಮಾರಸಮಾರೂಪಾಭೂಪಾ | ಆರೋ ಕಾಣೆ ಮದನರೂಪಾ | ಕಮಲದಂತೆ ಹೊಳೆವ ನೇತ್ರಾ ಕೋಮಲವಿದು ದೇಹಕಾಂತಿ ಆರೋಕಾಣೆ ಮದನರೂಪ ಮಾರಸಮಾರೂಪಭೂಪಾ | ಆರೊ ಕಾಣೆ ಮದನರೂಪಾ | ಆದಿತಾಳ + ಯಕ್ಷಗಾನ ಅಟ್ಟತಾಳದಲ್ಲಿ ಮುಕ್ತಾಯ |

**|| ರೂಪಕತಾಳ || ಆದಿತಾಳ + ಯಕ್ಷಗಾನ ಅಟ್ಟತಾಳ ||**

2. ಮಾರ ಕೇಳಿ ಸವಿಯನರಿತು | ನಾರಿ ಈತನೊಳ ಬೆರೆತು ಮಾರಸುಖವ | ಪಡೆಯದಿರುವ | ನೀರೆ ಯಾರು ಉಂಟೆ ಜಗದಿ | ಮಾರಕೇಳಿ ಸವಿಯನರಿತೂ (ಯಕ್ಷಗಾನ ಅಟ್ಟತಾಳಕ್ಕೂ)

**|| ಕಂದಭಾಮಿನಿ || ಚಂದ್ರಮಾಲಿನಿ ||**

ಪರುಷನೆಯನ್ನಯ ಸಂಘವು | ದೊರೆಯದುರ್ಲಭವೊ ಪ್ರಿಯಾ || ಕರೆಕರೆ ಪಡಿಸದೆಯನ್ನ ೧ ಮದನತಾಪವಪರಿಹರಿಸೋಭೂಪಾ | ಭೂಪಾ ಭೂಪ

**|| ರೂಪಕತಾಳ || ಚಿತ್ರಕೇತುಕಥೆ || ಪುತ್ರ ಚಿತ್ರಾಂಗದ - ಚಾರುಮತಿಯ ನೆನೆದು ||**

ಬರಿಕಾಡೊಳು ತೊರೆದೆನ್ನನೂ ಹೊರಳೂವೆಯಾ ಮಾತೇ ಮಾತೇ ಮಾತೇ॥ ವಿಶವೇರಿತು ತೃಷೆಯಾದೆನು | ಬಿಸುಜಾಕ್ಷನೆಕಾಯೋ | ಬರಿಕಾಡೊಳು ತೊರೆದೆನ್ನನೂ ಹೊರಳೂವೆಯಾ ಮಾತೇ ॥ ಮಾತೇ | ಮಾತೇ ॥



---

**|| ಅಟ್ಟತಾಳ || ಅಂದಕಾಸುರನ ಕಥೆ || ಕನಕಾಕ್ಷ |**

ನಂಬಿದೇ ನಿನ್ನಾ | ಸಾಂಬನೇ ಸಲಹೋ | ನಂಬಿದೆನಿನ್ನಾ || ನಂಬಿದೆ ನಿನ್ನಾ ಪಾದಾಂಬುಜಯುಗಳವಾ | ಅಂಭೂಜಾಕ್ಷನಸಖ || ಕುಂಬೀಣಪಾಲಕ | ನಂಬಿದೆ ನಿನ್ನಾ || ನೀಲಾಕಂಠನೆ ನಿನ್ನಾ | ನಿಜದಿಂದಾ ಭಜಿಸುವೆ | ಪಾಲಿಸೆಂದನು ತಾಲಿಭೂ ಲೋಕದೊಳು ನಾನೂ ನಂಬಿದೆನಿನ್ನಾ ಅಜಹರಿವಂದ್ಯಾನೇ || ಅಮರಾರಪೂಜ್ಯನೇ ತ್ರಿಜಗಪಾಲಿಪನಿನ್ನಾ | ಭಜನೆಯಮಾಡುವೇ || ಕುವರನಪಾಲಿಸೂ || ನಂಬಿದೆ ನಿನ್ನಾ ಸಾಂಭನೇ ನಿನ್ನಾ ನಂಬಿದೆ ನಿನ್ನಾ

**|| ರೂಪಕತಾಳ || ಕಾಂಚನಾ ತಾಯಿ ಕನಕಾಕ್ಷ- ಅಂದಕಾಸುರನಿಗೆ ||**

ಮಗನೆ ತರವೆ ಹರಗೋಳವೈರವು | ಸರಸವಲ್ಲ ಶಿವನೋಳ್ ಸಮರವು || ಮಗನೆ ತರವೆಹರನೋಳ್ ವೈರವೂ ಮಗನೆ || ಕರವ ಮುಗಿವೇ ತರಳ ನಿನಗೆ ಸಮರ ತೊರೆದು ಹರುಷದಿಂದಿರೋ || ಮಗನೆ ತರವೇ ಹರನೋಳ್ || ವೈರವೂ ಸರಸವಲ್ಲ ಸಮರವೂ + ಆದಿತಾಳ + ಯಕ್ಷಗಾನ ಅಟ್ಟತಾಳ

**|| ಅಟ್ಟತಾಳ || ಭಕ್ತ ಮಾರ್ಕಂಡಚರಿತ್ರೆ- ಮರುದ್ವತಿ- ಭೂಸುರರಿಗೆ ||**

ಯತಿವವರೇಣ್ಯನೇ | ತಿರಸ್ಕರಿಸದೆ ಧಾನ | ಪರಿಗ್ರಹಿಸಿರಿ ನೀವೂ | ಮನ್ನಿಸಿಯೆನ್ನನು ಯತಿವವರೇಣ್ಯನೆ | ತಿರಸ್ಕರಿಸದೆ ಧಾನ | ಪರಿಗ್ರಹಿಸಿರಿ ನೀವೂ | ಯತಿವವರೇಣ್ಯನೇ ||

**|| ಭಾಮಿನಿ || ಭಕ್ತ ಮಾರ್ಕಾಂಡ ಚರಿತ್ರೆ || ಮೃಕಂಡಮುನಿ ||**

ಈಪರಿಯೊಳು ಭೂಸುರರು || ಮರುದ್ವತಿಯ ಧಾನವಂತಿರಸ್ಕರಿಸಿ ಸೋಗಲು! ಇತ್ತ ಸ್ವರ್ಗ ಲೋಕದೊಳ್ || ಅಪಮಾನಮಂಹೊಂದಿ | ಮೃಕಂಡ ಮುನಿವರನುತಾ। ಭಾರಿ ದುಃಖದಿಂದಾ ಶ್ರಮಕೆ ಮರಳಿ ಬರಲೂ | ಮೂರ್ಛಯೋಳಿರುವ | ಸತಿಯ ಕಂಡು | ಹರಹರಾ | ಇದೇನು ಚೋದ್ಯವೆಂದೆನುತಾ ದುಃಖಿಸುತಿರ್ದನೂ ||

**|| ಅಟ್ಟತಾಳ ||**

ಏತಕ್ಕೆ ಚಿಂತೇ | ಕಾಂತೆಯೇ ನಿನಗೇ | ಏತಕ್ಕೆ ಚಿಂತೆ | ಸಂತಸದಿ ಪ್ರತಿದಿನವು ಇರುತಿರ್ದಾಕಾಂತೇಯೇ || ಚಿಂತೆಯವಿವರವ | ಸಂತಸದೀ ನೀ ತಿಳಿಸು || ಏತಕ್ಕೆ ಚಿಂತೇಕಾಂತೆಯೇ ನಿನಗೆ || ಏತಕ್ಕೆ ಚಿಂತೆ ||

**|| ಅಟ್ಟತಾಳ || ಪಾರ್ವತಿ – ಶಿವನಿಗೆ ||**

ಭಕ್ತರ ಭೀಷ್ಮವ | ನಡೆಸದೆ ಈ ಪರಿ ಕಷ್ಟವ ಪಡಿಸಲು | ಕಾರಣವೇನಿದೂ | ಭಕ್ತರ ಭೀಷ್ಮವಾ || ಬೇಗನೇ ಹೋಗುತೇ | ಪತ್ರಗೆ ಕರುಣಿಸಿ | ದುಃಖದಿ ಬಳಲುವ ಪರಿಯನು | ಹರಿಸಿನೀ || ಭಕ್ತರ ಭೀಷ್ಠವ ನಡೆಸದೆ ಈಪರೀ | ಕಷ್ಟವ ಪಡಿಸಲು | ಕಾರಣವೇನಿದೂ

**|| ಅಟ್ಟತಾಳ || ಮೃಖಂಡ ಮರುದ್ವತಿ- ಮಾರ್ಕಾಂಡನಿಗೆ ||**

ಬಾಲಾ ಸದ್ಗುಣ ಶೀಲಾ ಬಾಲಾ | ಅಗಣಿತಮ ಹಿಮನೂ || ಸುಗುಣ ವಿಶಾಲನೂ | ತಾಕೊಟ್ಟವರನ್ನು ಫಲಿಸದೆ ಬಿಡುವಾನೇ || ಬಾಲಾಸದ್ಗುಣ ಶೀಲಾ |

**|| ಅಟ್ಟತಾಳ || ಮಾರ್ಕಾಂಡಚರಿತ್ರೆ (ನಾರದ) ಶಿವನಿಗೆ ಪಾರ್ವತಿ ||**

ಶಂಕರಾ ವಲಿಯದೆ ನೀನಿರಲು | ಜಲವನು ಸೇವಿಸನು ಲಯವನು ಮಾಡದೆ ಸಲಹು ನೀ ಬಾಲನ | ಕೇಳುಪ ರಮೇಶನೆ | ಕೇಳು ಗೌರೀಷನೆ ಕೇಳುಪರಮೇಶನೇ ||

**|| ಅಟ್ಟತಾಳ | ಪಾರ್ವತಿ ಶಿವನಿಗೆ ||**

ಶಂಕರ ಏನಿದು | ಭಕ್ತನಿಗೊಲಿಯದೇ || ಮೌನದಿನೀನಿರೆ | ಮುನಿಸುತ ಮಾರ್ಕಾಂಡನು | ಶಂಕರ ಏನಿದೂ || ಮುನಿಯು ಸಂಚಾರಿಯು | ಕರುಣವ ಕೇಳ್ವರು ಕರುಣದಿ ಭಕ್ತರ | ವರವನು ಪಾಲಿಸು ಶಂಕರ ಏನಿದು | ಭಕ್ತನಿಗೊಲಿಯದೆ ಶಂಕರ ಏನಿದು

**|| ಅಟ್ಟತಾಳ || ಕುರುಕ್ಷೇತ್ರ || ದ್ರೌಪದಿ ಭೀಮನಲ್ಲಿ ||**

ದುಷ್ಟ ಕೌರವನೆನ್ನಾ ಮುಷ್ಠಿಯಿಂ ಎಳೆತಂದು ಮಾಡಿದ ಅಘಮಾನವಾ ಕೇಳೆನ್ನಾ ಕಾಂತಾ | ಮಹಾಸಭೆಯೊಳು ಅಪಮಾನವಾ || ತಟ್ಟಿತೊಡೆಯಮೇಲೆ ಕೂರೆಂದು ಯಾನು | ಕಟ್ಟಾಜ್ಞೆ ಮಾಡಿದನೂ || ಪ್ರಿಯಗಟ್ಟಗರೋ ನೀವು ಮೂಢರೊ | ಕಾಂತ ಕಾಂತ ಪ್ರಾಣಕಾಂತ |

**|| ಕಂದಭಾಮಿನಿ || ಅರ್ಜುನ - ಕೃಷ್ಣನಿಗೆ |**

ಜಯಜಯಜಗದಾದಿಕೇಶವ | ಜಗದಕ್ಷಕಾ | ಜಗತ್ ಪಾಲನೆ | ಜಗದಾ ನಂದದಾಯಕಾ | ಜಗದ್ದೊದ್ಧಾರಕಾ ಜನಾರ್ಧನ | ನೀಯನ್ನಾ ಪೊರೆಯೆ | ನಾರಾಯಣನೇ

**|| ಅಟ್ಟತಾಳ || ಕೌರವನು - ಶ್ರೀಹರಿಯಲ್ಲಿ ||**

ಹರಿಯೇ ಹರಿಯೇ | ಶ್ರೀಹರಿಯೇ | ಲಾಲಿಸಿ ಕೇಳು ನಮ್ಮ ಕಷ್ಟದ ಪರಿಯಾ | ಹರಿಯೇ ಹರಿಯೇ ಶ್ರೀಹರಿಯೇ ನೀನರಿಯಾದಪರಿಯೋಳು ನೀ ಕೇಳುವುದು ಸರಿಯೇ || ಹರಿಯೇ ಹರಿಯೇ ಶ್ರೀಹರಿಯೇ ||

**|| ಕಂದಭಾಮಿನಿ ||**

ಮಲಗಿಹ ಪುರುಷನ | ಮುಸುಕಂ ತೆಗೆದು | ನೋಡಿ ಯುವತಿಯು | ಹರುಷ ಮಂತಾಳಿ | ಮಧನತಾಪವನು ಸಹಿಸೆನು ಸುಂದರನೇ ! ಎದ್ದು ನೋಡೆನ್ನಾ ಮುಖವಾ ||

**|| ಅಟ್ಟತಾಳ || ಅಲೋಲಿಕೆ - ವಿಕ್ರಮನಲ್ಲಿ | 2ನೇ ಕಾಲ 3ನೇ ಕಾಲ**

ಏಳು ಏಳ ಪ್ರಿಯಾ | ಸುಂದರ ಕಾಯಾ | ಎದ್ದೇಳು ಮದನರೂಪಾ | ಏಳುಯನ್ನಯ (ಪ್ರಿಯಾ) ರಮಣ ಏಳು ಎನ್ನಯ ಪ್ರಾಣ ಪ್ರಿಯಾನೇನಿನ್ನೆನ್ನ ಮದನ ತಾಪವ ಹರಿಸೋ ಪ್ರಿಯಾ || 2ನೇ ಕಾಲದಲ್ಲಿ ||

**|| ಅಟ್ಟತಾಳ ||**

ಮಾತಾಡಬಾರದೇನೋ ಮಾರಮಣಾನೇ | ಮಾತಾಡಬಾರದೇನೋ || ಮಾತಾಡದಿದ್ರ್ದಾರೆನಾ ತಾಳಲಾರೆನು ಪ್ರೀತಿಗೊಲಿದ ಪ್ರಾಣಾ | ಮಾತಾಡಬಾರದೇನೋ ರಮಣಾ ॥ 2ನೇ ಕಾಲ

**|| ರೂಪಕತಾಳ | ಶನಿಮಹಾತ್ಮ ॥**

ಮದನಬಾಧೆ ಹೃದಯವನ್ನೂ ನಡುಗಿಸುತ್ತಾಲಿಹುದು ರಮಣಾ || ಮಧನ ಬಾಧೆ ಹೃದಯವನ್ನು ನಡುಗಿಸುತ್ತಲಿಹುದುರಮಣ || ಸುಧತಿಯಾಳ ಇಚ್ಚೆಯನ್ನೂ ಪೂರ್ತಿಗೊಳಿಸೋ ಪ್ರಾಣಕಾಂತ | ಮಧನಭಾಧೆ ಹೃದಯವನ್ನೂ | ಆದಿತಾಳ +ಯಕ್ಷಗಾನ ಅಟ್ಟತಾಳ

**|| ಅಟ್ಟತಾಳ || ನಾರದ || ವಿಷ್ಣುವಿನಲ್ಲಿ ॥**

ಬೇಡುವೆ ವರವ ಪಾಲಿಸುದೇವಾ ಬೇಡುವೆವರವಾ | ಋತ್ರಿಪುರಾಸುರರು! ಕಾಳಾಗದೊಳುಸುರರ | ಬಾಳುಗೆಡಿಸಿ ತಾವೂ | ಮೀರಿ ನಡೆಯುತಲಿಹರೂ || ಬೇಡುವೆ ವರವಾ | ಪಾಲಿಸುದೇವಾ | ಬೇಡೂವೆ ವರವಾ ॥

**|| ಅಟ್ಟತಾಳ || ಸುಭದ್ರೆ- ಕೃಷ್ಣನಿಗೆ||**

ಅಣ್ಣಾ ಲಾಲಿಸಿ ಕೇಳು || ಭಿನ್ನಹ ಪೇಳುವೆ | ಮನ್ನಣೆ ಇಂದಲಿ | ಮನಸಿಟ್ಟು ನೀಕೇಳೋ ಅಣ್ಣಾ || ನಿನ್ನಣ್ಣಾ ಬಲರಾಮ || ಅಭಿಮನ್ಯುಯನ್ನಸುತಗೆ | ಬಾಲೆಕನಕಾಂಗಿಯನು | ಕೊಡುವೇನೂ ಸತ್ಯವೆಂದು ತಾನುಡಿದೂ ಅಣ್ಣಾ | ಅಣ್ಣಾ ಕೃಷ್ಣ ದೇವ ದೇವಾ ||

**|| ಅಟ್ಟತಾಳ ||**

ಮಡದಿ ಮಾತನು ಕೇಳಿ | ನಿಮ್ಮಣ್ಣ ಬಲರಾಮ | ಕಾಡಿನೋಳ್ ಅಲೆಯುವ ಕಡುದರಿದ್ರರು ಎಂದು | ಕೇಡಿನ ಮಾತಾಡಿದ ಅಣ್ಣಾ ಅಣ್ಣಾ || ಕೌರವ ಸುತನಾದ | ಲಕ್ಷಣಗೆ ಮಗಳ ಮದುವೆ ಮಾಡುವೆನೆಂದು | ಹೀನಮಾತುಗಳಿಂದ | ಎಮ್ಮನ್ನೂ ಅಡವಿಗೆ ನೂಕೆಂದನೂ | ಅಣ್ಣಾ ಅಣ್ಣಾ ಕೃಷ್ಣದೇವಾ |

**|| ಭಾಮಿನಿ || ಕುರುಕ್ಷೇತ್ರ ||**

ಈ ಪರಿಯೊಳು ಧರ್ಮಜನು ಸುಭದ್ರೆಗೆ ದುಃಖಿಸದಂತೆ ದೈರ್ರವಂಹೇಳಿ ಸಂತೈಸುತ್ತಿರಲು | ಇತ್ತರಣದೊಲೂ ಸಮಸಪ್ತಕರಂ | ಗೆಲಿದ ಪಾರ್ಥವಡಲ ಉರಿ ಇದೇನೆನುತ | ಶ್ರೀಹರಿಯೊಡನೆ ಪ್ರಲಾಪಿಸುತಿರ್ದನೂ

**|| ಅಟ್ಟತಾಳ || ಅರ್ಜನ ಕೃಷ್ಣನಿಗೆ ||**

ವಡಲೋಳು ಉರಿತಾಪ | ಕಡುಬೇಗೆಯಾಗಿಹುದು ದೇವಾ ವಡನೇಯನ್ನೊಳು ನೀನೂ | ಈ ಪರಿತಾಪದ ವಿವರವ ತಿಳಿ ದೇವಾ | ದೇವಾ ಕೃಷ್ಣಾ || ಭಾವಾ || ಸಡಗರದಿ ನೀ ಹೇಳು | ಸಂಗರದ ವೃತ್ತಾಂತ ಜಡಜಾಕ್ಷಾನೇ | ತಡಮಾಡದೀಗಾ | ಜಡಜಾಯತಾಕ್ಷನೇದೇವಾ || ದೇವಾಶ್ರೀಹರಿಯೇ ||

**|| ಕಂದಭಾಮಿನಿ || ಕುರುಕ್ಷೇತ್ರ- ಶಿವಸ್ತುತಿ ಭೀಮ ||**

ಜಯಜಯಕೃಪಾಕರಶಂಕರಾ | ಕರುಣಾಕರ | ತ್ರಿಪುರ ಸಂಹರ ಜಯಜಯ ಕಾಲಸಂಹರನೇ | ಶತೃನಿಗ್ರಹಕ್ಕೆ | ಶಿವನೆ ಶಂಕರನೆ | ನಿನ್ನಯ ರುದ್ರರೂಪವನು ಯನಗೆ ಕರುಣಿಸಿ | ಕೃಪೆಯಿಟ್ಟು ಸಲಹೋ ಶಂಕರನೇ

**|| ರೇಗುಪ್ತಿ ರಾಗ ||**

**|| ಭಾಮಿನಿ || ಮೋಹನ || ಭೀಮಪಾರ್ಥನಾ ಕಡೆ ತಿರುಗಿ ||**

**|| ಕುರುಕ್ಷೇತ್ರದ ಕಥೆ ||**

ಮೂರುಲೋಕದ ವೀರ | ಗಂಡನೆಂದುಬ್ಬೇರಿ ಮೆರೆಯುವ ವೀರಪಾರ್ಥನೇ ಇವನಿನ್ನ ಸಹೋದರನಲ್ಲವೆ | ನೀವೀರನಾದೊಡೆ ಬಂದಿವನ ಬಿಡಿಸಿಕೋ | ಶಿಖಂಡಿ ಹೇಡಿನೀಯೆಂದು | ಘರ್ಜಿಸಿದ ನಾಕಲಿಭೀಮಾ ॥

**|| ಅಟ್ಟತಾಳ || ಗಜಾಸುರನವಧೆ | ಲಕ್ಷ್ಮಿ ಸರಸ್ವತಿವಾದ | ಲಕ್ಷ್ಮಿ ವಿಷ್ಣುವಿಗೆ ||**

ಸೊಸೆ ಎಂದ ನುಡಿ ಕೇಳಿ ಮುಸುಕಿನ ಮೊರೆಯಲ್ಲಿ ಬಿಸುಜಾಕ್ಷ ನಗುವೆಯಲ್ಲೋ | ಹೇನಲ್ಲಾ ಬಿಸುಜಾಕ್ಷನಗುವೆಯಲ್ಲೋ | ಸರಿಯೇನೊ | ಪೇಳೀನ್ನು ಹೆಸರೆತ್ತಿ ಬೈವಳು | ವುಸುರಾಲು ಫಲವು ಏನೋ | ಕೇಳೆನ್ನಾ ಕಾಂತಾ | ವುಸುರಾಲುನಿಜವಿಲ್ಲವೇ| 2ನೇ ಕಾಲ

**|| ಅಟ್ಟತಾಳ || ಸರಸ್ವತಿ || ಗಜಾಸುರನ ವಧೆ ||**

**ಲಕ್ಷ್ಮಿ ಸರಸ್ವತಿವಾದ | ಬೇಡಮ್ಮ ಕೂಸೇ | ಮಾಡವಾಮೋಸಾ | ಈ ಧಾರಿ**

ಮುನಿಯಾವೈಕುಂಠಾನ | ಚಿನ್ಮಯನಾ ಭಾಗ್ಯವೂ | ನನ್ನದಲ್ಲೆ | ಹೇ ನಲ್ಲಿ ಕೇಳೇ ಈ ಭಾಗ್ಯವು ನಿನ್ನದಲ್ಲೇ | (ಮೋಹನಾ ರಾಗದಲ್ಲಿಯೂ ಹೇಳಬಹುದು )+ ಯಕ್ಷಗಾನ ಅಟ್ಟತಾಳ

**|| ಮೋಹನರಾಗ ॥**

**|| ಭಾಮಿನಿ || ತ್ರಿಪುರ ಸಂಹಾರ | ನಾರದ ||**

ಸಿದ್ಧರಾಮ ಕೇಳುತ್ತಾ | ತ್ರಿಪುರನಾರಿಯರಾ | ಬೌದ್ಧವತಾರದೊಳು | ಶ್ರೀಹರಿಯು ವೈಕುಂಠಪುರಕ್ಕೆ ಕರೆದೊಯ್ಯಲು | ಇತ್ತಸ್ವರ್ಗದರಸನ ದುರದಿಗೆದ್ದು ಬರುತಿರ್ದ | ಅಸುರರಂಕಂಡು | ಮುನಿಪ ನಾರದರು | ಎದುರ್ಗೊಂಡು ಅಸುರರ ಮುದ್ದು ನಾರಿಯರ ವಿವರವ ಅರುಹಿದನು ಅಸುರರಿಗಾಕ್ಷಣಾ

**|| ಭಾಮಿನಿ || ಶುದ್ಧಯಕ್ಷಗಾನಕ್ಕೆ ||**

**|| ಅಹಿರಾವಣ ಮಹಿರಾವಣ ಕಥೆ || ಲಕ್ಷ್ಮಣ ಐ- ವಿಭೀಷಣನಿಗೆ ||**

ಇಂತು ಚಿಂತಿಸುತಿರುವ | ವಿಭೀಷಣನ ಕಂಡಾಗ | ಸೌಮಿತ್ರಿನಂದನನೂ | ಈ ಮಂದತನನಿನಗೇಕೆ | ಹಿಂದೆ ಪೇಳ್ವನುಡಿಯ ಕೇಳದೆ | ಕೆಟ್ಟ ದುರುಳ ದಶಕಂಠ | ಚಿಂತಿಸಬೇಡೆಂದೆನುತ | ನುಡಿದನಾಗ ಊರ್ಮಿಳೆಯ ರಮಣ

**|| ಭೈರವಿರಾಗ ||**

**|| ಅಟ್ಟತಾಳ || ಅಂದಕಾಸುರನ ವಧೆ || ಪಾರ್ವತಿ ಶಿವನಿಗೆ ||**

ಲಾಲಿಸು ಶಂಕರಾ | ಪಾಲನೇತ್ರಾನೆ ಈಗ | ಲಾಲಿಸು ಶಂಕರಾ | ಲೀಲೆಯೊಳ್ ಪೇಳುವೇ | ಕಾಲನಾ ವೈರಿಯೆ | ಲಾಲಿಸು ಶಂಕರಾ ||

**|| ಭಾಮಿನಿ || ರತೀಕಲ್ಯಾಣ | ದೌಪದಿ - ಪಾರ್ವತಿಶಂಕರನ್ನು ಧ್ಯಾನಿಸುವುದು ||**

ಶಂಕರ ಗತಿಯೇನೆನುತಾ | ಪಾರ್ವತಿ ಶಕ್ತಿ ಈ ದುರುಳದೈತ್ಯನ ವಧೆಗೆ | ನಿನ್ನ ದುರ್ಗಿರೂಪವನು ಎನಗಿತ್ತು ರಕ್ಷಿಸು ರಕ್ಷಿಸುತಾಯೇ ತಾಯೇ ತಾಯೇ

**|| ಭೈರವಿರಾಗ ||**

**|| ಅಟ್ಟತಾಳ || ಶಿವಜಲಂಧರನ ಕಥೆ || ನಾರದ - ದೇವೇಂದ್ರನಿಗೆ ||**

ರಾಜನೆ ದೇವೇಂದ್ರನೆ | ಸದ್ಗುಣ ಸಾಂದ್ರನೇ | ಯಾವ ಲೋಕಾದೋಳಿಂತಾ ಆಶ್ಚರ್ಯನೋಡಾಲಿಲ್ಲಾ | ರಾಜನೆ ದೇವೆಂದ್ರನೇ | ಪರತರಸಾಂಭನ | ಚರಣವ ಪಿಡಿದು ನೀ | ದುರಕೆ ಸರಿವೈರಿಯ ಭರದಿಂದ ಕೇಳಯ್ಯಾ | ರಾಜನೆ ದೇವೇಂದ್ರನೇ || ಸದ್ಗುಣಸಾಂದ್ರನೇ ||

**|| ಜಂಪ್ಯೂಟರಾಗ ||**

**|| ಅಟ್ಟತಾಳ || ನಾಟಕದ ಹಾಡು | ರಾಮಾಯಣದಲ್ಲಿ ||**

ಎಲ್ಲಿ ನೋಡಲು ಶೋಭಿಪ್ ಅಲ್ಲಲ್ಲೀಗಾ | ಎಲ್ಲಿ ನೋಡಲು ಶೋಭಿಪ್ | ಮಲ್ಲೇ ಮಲ್ಲಿಗೆ ಜಾಜಿ ಕೆಂಪು ಗುಲಾಬಿಯು ಮತ್ತೆ ಮಲ್ಲಿಗೆ ಜಾಜಿ ಕೆಂಪೂ ಗುಲಾಬಿಯು ಎಲ್ಲಿ ನೋಡಲು ಪುಲ್ಲಾಪುಶ್ರವ ಚೆಲ್ಲಿರೋ ಅಲ್ಲಲ್ಲೀಗಾ ಎಲ್ಲೀ ನೋಡಲು ಶೋಬಿಪ||

**|| ರೂಪಕತಾಳ || ನಾಟಕದ ಹಾಡು ರಾಮಾಯಣ || ರಾಮ ದಶರಥನಿಗೆ ||**

ತಂದೆಯೇ ತಮ್ಮಪಾದಗ | ವಂದಿಸೂವೆನೂ | ತಂದೆಯೇ | ತಂದೆಯೇ || ಇಂದು ಯನ್ನನೂ ಕರೆಸಿದ ಪರಿ | ಇಂದೂ ಯನ್ನನು ಕರೆಸೀದಾ ಪರಿ | ಇಂದು ಯನ್ನನು ಕರೆಸೀದಾ ಪರಿ | ಚಂದದಿಂದರುಹೈಜನಕನೇ || ತಂದೆಯೇ ತಮ್ಮಪಾದಕ್ಕೀಗ ವಂದಿಸೂವೆನೂ | ತಂದೆಯೇ ||

**|| ರೂಪಕತಾಳ || ಗಣಪತಿಸ್ತೋತ್ರ ||**

1. ಅಟ್ಟಹಾಸದಿ ಮೊಟ್ಟಮೊದಲು ಮುಟ್ಟಿ ಪೂಜಿಪೇ | ಸೃಷ್ಟಿಗಧಿಕ / ಇಳೆಪುರೀಯ ಶ್ರೇಷ್ಠಿಗಣಪನೇ | ಅಟ್ಟಹಾಸದಿ ಮೊಟ್ಟಮೊದಲು ಮುಟ್ಟಿಪೂಜಿಪೆ || 3ನೇ ಕಾಲ | ಅಟ್ಟಹಾಸದಿ || ದಕ್ಷಿಣಾದಿ ಮುಕ್ತಾಯ |
2. ಜಯಜಯಗಣನಾಥ ದುರಿತ | ಭಯನಿವಾರಣ | ಜಯವಿಸುಮಮಾ ಮೂಜಗದೊಡೆಯನೆ | ಜಗದ ಪಾಲಕ | 3ನೇ ಕಾಲ
3. ಕರಿಯ ಮುಖನೆ ಪಾರ್ವತಿಗೆ | ಪರಮ ಪುತ್ರನೇ | ವರವಕೊಡುವ | ವರದ ದೇವನೆ ಪರಮ ಗಣಪನೇ || (3ನೇ ಕಾಲ) ಕರಿಯ ಮುಖನೆ | ಪಾರ್ವತಿಗೆ ಪರಮ ಪುತ್ರನೇ || ಕೂಚು
4. ಗಿರಿಜಸುತನೆ ವರದನುತನೆ | ಗುರುವೆ ಮಂಗಳಂ | ವರವ ಕೊಡುವ ಪ್ರಥಮ ಪೂಜಿತ | ಧರೆಗೆ ಮಂಗಳಂ || (3ನೇ ಕಾಲಕ್ಕೂ ಹೇಳಬಹುದು)
5. ವಿದ್ಯೆಕೆಲ್ಲ ಅಧಿಕಗುರು ಪ್ರಸಿದ್ಧದೇವನೇ || ವಿದ್ಯೆಗಳನ್ನು | ಕರುಣಿಸೆಮಗೆ | ಸಿದ್ಧಿವಿನಾಯಕನೇ | ವಿದ್ಯೆಕೆಲ್ಲ ಅಧಿಕ ಗುರುಪ್ರಸಿದ್ಧ ದೇವನೇ || 3ನೇ ಕಾಲಕ್ಕೂ ಹೇಳಬಹುದು |

**|| ರೂಪಕತಾಳ || ಕರಿಭಂಟನ ಚರಿತ್ರೆ | ಕರಿರಾಜ ಬನವಂತೆಗೆ ||**

ಕರಗಳೆತ್ತಿಕೈಯ್ಯಾ ಮುಗಿವೆ | ಶರಣು ತಾಯಮ್ಮಾ | ಹರಸಿ ಕಳುಹೆ ಬೆದರಬೇಡ ಹರಸೀ ಕಳುಹೇ ಬೆದರಬೇಡ | ಸರಸದಿದಂದಾಲಿ | 3ನೇ ಕಾಲಕ್ಕೆ || ಹರಸಿಕಳುಹೆಬೆದರಬೇಡ | ಶರಣು ತಾಯಮ್ಮಾ || (ಅಟ್ಟತಾಳ) ಹರಸಿ ಕಳುಹ ಬೆದರಬೇಡ | ಶರಣು ತಾಯಮ್ಮಾ

**|| ಅಟ್ಟತಾಳ || ಸತ್ಯಚಿತ್ರಕೇತು ಕಥೆ || ಸುಮತಿ ಚಾರುಮತಿಗೆ ||**

ದುರುಳಳೆ ಛೀ ಛೀ | ಸರಿಮಾತುಗಳೂ ಏಕೇ | ಹುರುಳಳೇ ಛೇ ಛೇ (2ನೇ ಕಾಲಕ್ಕೆ) ದುರುಳಳೆ ಛೀ ಛೀ

**|| ರೂಪಕತಾಳ || ಸತ್ಯಚಿತ್ರಕೇತು ಕಥೆ || ಚಾರುಮತಿ - ಸುಮತಿಗೆ ||**

ಏನೆ ಸುಮತಿ ಸವತಿಮತ್ಸರ | ಕ್ಷಿತಿಪನೋಳೇಕೆ | ಧೀರಹರಿಯುಮಾನನಿಧಿಯು ಕೊಟ್ಟವರವಿದೇ | ಏನೆ ಸುಮತಿ ಸವತಿ ಮತ್ಸರ ಕ್ಷಿತಿಪನೋಳೇಕೆ

**|| ಆದಿತಾಳ || ಜಂಜುಊಟಿ ರಾಗ | ಚಿತ್ರಕೇತು ಕಥೆ || ಚಾರುಮತಿ ಪುತ್ರ ಚಿತ್ರಾಂಗದನಿಗೆ ||**

**ಭಾರಿ ವಿಳಂಬ ಕಾಲದಲ್ಲಿ**

ಕಂದ ಬಾರೆಲೋ | ಮುದ್ದೂಸುಂದರಾಂಗನೇ ಬಾರೋ | ತಂದೆಯನ್ನು ಕಾಣದೇ | ಮಂದ್ಯಭಾಗ್ಯನಾದೆಯಾ | ಕಂದ ಬಾರೆಲೋ | ಮುದ್ದೂ ಸುಂದರಾಂಗನೇ ಬಾರೆಲೋ ||

**|| ರೂಪಕತಾಳ ಚಿತ್ರಕೇತು ಕಥೆ || ಚಾರುಮತಿ -ನಿಧಿಪತಿರಾಜನಿಗೆ ||**

ಮುಟ್ಟಬೇಡ ಮುಟ್ಟಬೇಡ | ಮುಟ್ಟಬೇಡ ಭ್ರಷ್ಟನೇ || ಕಂದಾ || ಭ್ರಷ್ಟಾಪುರುಷಯನ್ನಾನಿವನೂ ಭ್ರಷ್ಟಾಪುರುಷಯನ್ನಾನಿವನು ಶರಗಪಿಡಿದು ಎಳೆಯುವಾಗ ಮುಟ್ಟಿ || ಮುಟ್ಟಾಬೇಡ ಭ್ರಷ್ಟನೇ ||

**|| ರೂಪಕತಾಳ || ಜಂಪ್ಯೂಟಿ ರಾಗ ||**

**|| ಶಿವಜಲಂಧರನ ಕಥೆ | ಇದೆ ಪುತ್ರ ಜಲಂಧರ- ಶುಕ್ರಾಚಾರಿಗೆ ||**

ಶಸ್ತ್ರವಿದ್ಯೆಯೊಳಗೆ ನಾನು ಶತ್ರುರಾಯರಾ | ಕೊಚ್ಚುವಂತ ಶೌರ್ಯಬಲದಿ | ಹೆಚ್ಚು ಮೆರೆಯುವೆ || ಯಕ್ಷಗಾನ ಅಟ್ಟತಾಳ || 3ನೇ ಕಾಲ ||

**|| ಕಂದ ||**

ಏನೆಂಬೆ ನೀ ಮಾಹಾಸ್ತಲಂ ಮನಕಾನಂದವಾಗಿ ತೋರುದೂ

**|| ದೇಶ್ ತೋಡಿರಾಗ || ರೂಪಕತಾಳ || ವೃಂದೆ ಜಲಂಧರನಿಗೆ ||**

ಪತಿಯ ದೇವಾ ಪಾಲಿಸೆನ್ನ ಶತಾಪರಾದ | ಕ್ಷಮಿಸು ನೀನು | ಮುನ್ನ ಮಾಡಿದ ತಪ್ಪುಗಳನ್ನು | ಮನ್ನಿಸೆನ್ನ ಕಾಂತನೇ || ಪತಿಯೇ ದೇವ ಪಾಲಿಸೆನ್ನ ಕೃತಾಪರಾಧವ ಕ್ಷಮಿಸು ನೀನೂ

**|| ರೂಪಕತಾಳ || ದೇಶ್‌ತೋಡಿರಾಗ || ಕರಿಭಂಟನಕಾಳಗ || ಪಂಡರೀಕಾಕ್ಷಿ-**

**ಕರಿರಾಜನಿಗೆ ||**

ಸುಂದರಾಂಗವದಗಿ ಬಂದ || ಕಪ್ಪುಕಂದರ | ಇಂದಿನಿಂದ ಯನ್ನ ಕೂಡಿ || ಸಂಘ ಸುಖಿಸಯ್ಯಾ || ಸುಂದರಾಂಗವದಗಿಬಂದ | ಕಪ್ಪು ಕಂದರ

**|| ರೂಪಕತಾಳ || ದೇಶ್ ತೋಡಿರಾಗ || ಗಿರಿಜಾ ಕಲ್ಯಾಣ || ಮನ್ಮಥ ||**

ಸರಸಾಕ್ಷಿ ಕೇಳೆ ಸೌಖ್ಯ ಸಾರವತಿಯೆರತಿಯೇ ನೀನೂ ನೀರೆ ವಿಧಿಯ ಶಾಪ ಧಾವಿಗ್ಯಾರು ನಿಲುವರೇ | ನೀರೇ ವಿಧಿಯ ಶಾಪಧಾವಿಗ್ಯಾರು ನಿಲುವರೇ

**|| ರೂಪಕ ತಾಳ || ದೇಶ್‌ತೋಡಿರಾಗ || ರತಿ- ಮನ್ಮಥನಿಗೆ ||**

ಸುಂದರಾಂಗ ಸುಂದರೊದ ನ 1 ಹೋಗಲಾಗದೆ ಶಾಪಕವಧಿಯುಂಟುರಮಣ ಶಿವನ ಕೋಪಕವದಿ ಯುಂಟೇ ಕಾಂತಾ ||

**|| ರೂಪಕ ತಾಳ || ದೇಶ್ ತೋಡಿರಾಗ || ಮಾರ್ಕಾಂಡ ಚರಿತ್ರೆ || ಮರುದ್ವತಿ-**

**ಮೃಕಂಡಮುನಿಗೆ ||**

ಬಂದರೋರ್ವ್ವ ಚಂದ್ರಾಕಾರ | ನಿಂದುಧಾನಕೇಳರೂ || ಬಂಜೆಯೆಂದು ನಿಂದಿಸೆನ್ನ ಭಂಜೆಯೆಂದು || ಕುಂದುಗೈದು ಪೋದರು ಬಂದ ರೋಗ್ಯ ಚಂದ್ರಕಾರನಿಂದು ಧಾನಕೇಳರು

**|| ರೂಪಕ ತಾಳ || ದೇಶ್‌ಡಿರಾಗ 1 ಗಂಗೆಗೌರಿ ವಾದದಲ್ಲಿ | ತ್ರಿಪುರ ಸಂಹಾರ ||**

ಏನೆ ಸವತಿ | ಗೌರಿ ನೀನು | ಗೌರಿ ನೀನು ಹೀನಮಾತನೂ | ಮುನಿಪ ನಾರದ ನುಡಿದ ವಚನದಿ | ಹೀನವೇನಿದೇ || ಏನೆ ಸವತಿ ಗೌರಿ ನೀನೂ ಹೀನ ಮಾತನೂ 1 (ಯಕ್ಷಗಾನ ಅಟ್ಟತಾಳ) |

**|| ರೂಪಕ ತಾಳ || ದೇಶ್ ತೋಡಿರಾಗ || ಚಿತ್ರಕೇತು ಕಥೆ || ಚಾರುಮತಿ ಸುಮತಿಗೆ ||**

ಕರುಣವನ್ನು ತೊರೆದು ತಂಗೀ | ಕರುಣವನ್ನೂ ತೊರೆದು ತಂಗಿ ದುರುಳತನದೊಳ್ | ದೊರೆತಗರ್ಭವನ್ನು ನೋಡಿ | ಮರುಕಬಾರದೇ || ಕರುಣವನ್ನು

**|| ರೂಪಕ ತಾಳ || ದೇಶ್ ತೋಡಿರಾಗ | ಚಿತ್ರಕೇತು ಕಥೆ || ಚಾರುಮತಿ ಸುಮತಿಗೆ ||**

ಏನೆ ಸುಮತಿ | ಸವತಿ ಮತ್ಸರ | ಕ್ಷಿತಿಪನೋಳೇಕೆ | ಧೀರ ಹರಿಯು | ದೇವಋಷಿಯು ಕೊಟ್ಟವರವಿದೇ | ಏನೇ ಸುಮತಿ ಸವತಿ ಮತ್ಸರ | ಕ್ಷಿತಿಪನೊಳೇಕೇ

**|| ರೂಪಕ ತಾಳ || ಜಂಪ್ಯೂಟಿ ರಾಗ ||**

ಎತ್ತ ಪೋಟೊ ಎನ್ನ ಕಂದ ಉತ್ತಮಾ ಮಣಿ ಇತ್ತ ಬಾರೋ ಮುಖವ ತೋರೋ ‖ ರತ್ನದಾಮಣಿ 3ನೇ ಕಾಲದಲ್ಲಿ ಎತ್ತಹೋದೆಯನ್ನ ಕಂದ ಉತ್ತುಮಾಮಣಿ ಇತ್ತ ಬಾರೋ ಮುಖವ ತೋರೋ || ರತ್ನ |

**|| ರೂಪಕತಾಳ || ತ್ರಿಪುರ ದಾನವರ ಕಥೆ || ನಾರದ - ದೇವೇಂದ್ರನಿಗೆ ||**

ಇಂದಿನಾದಿನ | ಮುದ್ದುಮುಖವು | ಕಂದಿಹೂದೇಕೆ ! ಚಂದದಿಂದ ನಿಂದು ಪೇಳು | ಚಂದದಿಂದ ನಿಂದು ಪೇಳು | ಬಂದ ಕಷ್ಟವನೂ | ಇಂದಿನಾ ದಿನ | ಮುದ್ದು ಮುಖವು | ಕಂದಿಹುದೇಕೆ

**|| ರೂಪಕತಾಳ || ದೇಶ್ ತೋಡಿರಾಗ || ತ್ರಿಪುರಾಸಂಹಾರ ಕಥೆ || ಸುಮಾಲಿನಿ-ವಿಷ್ಣವಿಗೆ ||**

ಮದನತಾಪ ಹೃದಯವನ್ನು ಮುದದಿಬಾಧೆ ಪಡಿಸುತಿಹುದು | ಕದಲಿಸಾದೆ ನಿನ್ನ ಮನವ || ಕದಲಿಸಾದೆ ನಿನ್ನಾ ಮನವ ಮುದದಿಯನ್ನ ಕೂಡೋರಮಣಾ || ಮದನಬಾಧೆ ಹೃದಯವನ್ನು ಮುದದಿ ಬಾಧೆ ಪಡಿಸುತಿಹುದು |

**|| ರೂಪಕತಾಳ || ಜಂಟಿ ರಾಗ || ತ್ರಿಪುರ ಸಂಹಾರ ಕಥೆ || ನಾರದ - ತ್ರಿದಾನವರಿಗೆ ||**

ಸೈರಿಸಯ್ಯ | ಸೈರಿಸಯ್ಯಾ | ಧಾನವೇಂದ್ರರೇ | ಸರಸವಲ್ಲ | ಹರಿಯ ಕೂಡೆ ಸಮರಸಾಹಸ | ಸೈರಿಸಯ್ಯಾ | ವಿವರಪೇಳ್ವೆ | ನಿಮ್ಮ ಕುಲದ ಕುಂಬಳೀಯನೂ || ನಂಬಿ ಭಜಿಸಿ ! ತಪವಗೈದು | ವರ ಪಡೆಯಿರಿ | ಸೈರಿಸಯ್ಯ ಸೈರಿಸಯ್ಯ | ಧಾನವೇಂದ್ರನೆ ‖

**|| ರೂಪಕತಾಳ || ದೇಶ್‌ಡಿರಾಗ || ಸತ್ಯಚಿತ್ರಕೇತುವಿಗೆ- ಚಾರುಮತಿ ||**

ನಾಥರಾಯಾ | ನಾಥರಾಯ | ನೀತವೇನೋ | ಯೋಚಿಸೂವದೂ | ಪೂರ್ವಜನ್ಮ ಸುಕೃತವಿರಲೂ ಮಾಡುವಾದೇನೋ || ನಾಥರಾಯಾ || ನೀತವೇನೋ |

ಯೋಚಿಸುವುದೂ

**|| ರೂಪಕ ತಾಳ || ದೇಶ್‌ಡಿರಾಗ || ಸತ್ಯಚಿತ್ರಕೇತುಕಥೆ || ಚಾರುಮತಿ**

**ಸುಮತಿಯಲ್ಲಿ ||**

ಬೇಡಿಕೊಂಬೆನವ್ವ ತಂಗಿ || ಅವ್ವಾ ತಂಗಿ | ಮಂಗಳಾಗಿಯೇ | ಹಡೆದ ಮಗನಾ ನಿನ್ನಾ ಉಡಿಗೆ | ಹಾಕುವೆನಮ್ಮಾ | ಬೇಡಿಕೊಂಬೆನವ್ವ ತಂಗಿ ಮಂಗಳಾಂಗಿಯೇ

**|| ರೂಪಕ ತಾಳ || ದೇಶ್ ತೋಡಿರಾಗ || ಚಿತ್ರಕೇತುಕಥೆ || ಚಾರುಮತಿ ಸುಮತಿಗೆ ||**

ಉದುರ ಭಿನ್ನ ಬೇಧವಿಲ್ಲಾ ಹೃದಯದೋಳ್ ಅನುಮಾನವಿಲ್ಲಾ | ಪುಧುಭನಾಭನಪಾದದಾಣೆ | ಬೇಡಿಕೊಂಬೆನೂ || ಉದುರ ಭಿನ್ನಾ ಬೇಧವಿಲ್ಲಾ | ಬೇಧವಿಲ್ಲ | ಹೃದಯದೋಳ್ ಅನುಮಾನವಿಲ್ಲಾ |

**|| ರೂಪಕತಾಳ | ಜಂಪ್ಯೂಟರಾಗ | ಅಂದಕಾಸುರನಥೆ || ಶಿವ- ಪಾರ್ವತಿಗೆ ||**

**ಧಾರಿ || ಶಸ್ತ್ರ ವಿದ್ಯೆಯೊಳಗೆ ನಾನು ||**

ವನವಿಹಾರವ ನೋಡಲೆನಗೆ ಮನಸು ಆಯಿತೇ | ಅಸುರರನ್ನುಕೊಂದು ನಾನು! ಘಾಸಿಗೊಂಡೆನೇ || ವನವಿಹಾರವ ನೋಡಲೆನಗೆ ಮನಸು ಆಯಿತೇ || ಆದಿತಾಳ + ಯಕ್ಷಗಾನ ಅಟ್ಟತಾಳ

**| ರೂಪಕತಾಳ || ಜಂಪ್ಯೂಟರಾಗ | ಪಾರ್ವತಿ ಶಿವನಿಗೆ |**

ಎತ್ತಹೋದೆ ಎನ್ನಾ ಕಾಂತಾ | ಮಲ್ಲಿಕಾರ್ಜುನ | ಇತ್ತ ಬಾರೋ ಮುಖವ ತೋರೋ ತತ್ತರಿಸುವೇನು | ಎತ್ತ ಪೋದೆ

**|| ರೂಪಕತಾಳ | ಜಂಪ್ಯೂಟರಾಗ | ಅಂದಕಾಸುರನ ಕಥೆ || ವಿಷ್ಣು- ನಾರದನಿಗೆ ||**

ಏನು ಮುನಿಪ | ನಾರದಾನೇ | ನಿನಗೆ ತಿಳೀಯದೇ | ನೀನು ಸಕಲ ಲೋಕ ಚಲಿಪೆ | ಅರಿಯದೇನಲ್ಲಾ | ಏನು ಮುನಿಪ | ನಾರದನೇ | ನಿನಗೆ ತಿಳಿಯದೆ ||

**| ರೂಪಕ ತಾಳ | ಜಂಪ್ಯೂಟಿ ರಾಗ || ಕುರುಕ್ಷೇತ್ರ || ವಿರಾಟರಾಯನು ಪಾಂಡವರಿಗೆ ||**

ದುಡುಕಿನಿಂದ | ಕಷ್ಟಪಡದೆ | ರಾಜ್ಯಪಡೆಯಿರಿ | ನಿಮ್ಮ ಇಷ್ಟದೇವ | ಹರಿಯ। ಕೂಡೆ | ವಿವರ ಪಡೆಯಿರಿ | ದುಡುಕಿನಿಂದ ಕಷ್ಟಪಡದೆ ರಾಜ್ಯಪಡೆಯಿರಿ |



**|| ರೂಪಕ ತಾಳ || ಜಂಪ್ಯೂಟಿ ರಾಗ | ಕೃಷ್ಣ – ದ್ರೌಪದಿಗೆ ||**

ಏನಮಾಡಲಿ ತಂಗಿ ದೌಪದ | ಕಾಂತೆ ರುಕ್ಕಿಣಿ | ನುಡಿದ ವಿವರವೂ || ನಿನ್ನ ಪತಿಗಳೂ ಈ ಒಪ್ಪಲದಕೇ ಸಂದಿಕಾರ್ಯಕೆ ಒಪ್ಪಿದೇನು || ಏನ ಮಾಡಲಿ ತಂಗೀ ದೌಪದ | ಕಾಂತೆ ರುಕ್ಕಿಣಿ ನುಡಿದ ವಿವರವೂ

**|| ರೂಪಕ ತಾಳ || ಜಂಬ್ಯೂಟಿ ರಾಗ ||**

ಶಪತವನ್ನ ಮರೆತು ಇರುವ | ನಿನ್ನ ಪತಿಗಳೂ | ಮತಿಯ (ಬಲವು ಮರೆತು ಇರುವುದಕ್ಕೆ 1 ನಾ ಏನಹೇಳಲೇ || 3ನೇ ಕಾಲ || ಶಪಥವನ್ನು ಮರೆತು ಇರುವ ನಿನ್ನ ಪತಿಗಳೂ

**|| ಅಟ್ಟತಾಳ || ಜಂಟಿ ರಾಗ | ವಿಧುರ ಕೃಷ್ಣನಿಗೆ ||**

ಕೃಷ್ಣನೀದಯತೋರಿಸೋ || ವಾಸುದೇವಾ || ಕೃಷ್ಣಾನೀದಯತೋರಿಸೊ || ದಯದಿ ನಿನ್ನಯ ನೆನವರಿಕೆ ಮಾಡಿದೆನೀಗಾ | ಕೃಷ್ಣ ನೀದಯತೋರಿಸೋ ವಾಸುದೇವಾ || ಕೃಷ್ಣ ನೀದಯತೋರಿಸೋ

ರಾಜ

**|| ಜಂಟಿ ರಾಗ ||**

**|| ರೂಪಕತಾಳ || ಕೃಷ್ಣ- ದುರ್ಯೋಧನನಿಗೆ ||**

ರಾಜ ನೀನೂ | ಲಾಲಿಸಯ್ಯಾ | ಪೇಳ್ವ ಮಾತನೂ 1 ಮೂಜಗದೊಳುಖ್ಯಾತಿಯನ್ನು | ಮೂಜಗದೊಳುಖ್ಯಾತಿಯನ್ನು ಪಡೆದು ಬಾಳೀಗ ರಾಜಾ ಕಲಹಬೇಡ ಇಳೆಯೊಳಿನ್ನೂ ! ಅಳಿವರೆಲ್ಲರೂ | ಸುಲಲಿತಾದಿ | (ಕುಂತೀ) ಪಾಂಡೂಸುತರಿಗೇ ಅರ್ಧ ರಾಜ್ಯವಾ || ಕೌರವೇಂದ್ರಲಾಲಿಸೀಗ ಪೇಳ್ವಮಾತನೂ ||

**|| ರೂಪಕತಾಳ || ಕುರುಕ್ಷೇತ್ರ || ಕೃಷ್ಣ ದುರ್ಯೋಧನನಿಗೆ||**

ಕ್ಷೇಮವೇನ್ನೈ ಕುರುಕುಲಾದಿಪ | ಸಕಲರೆಲ್ಲರೂ | ಕ್ಷೇಮದಿಂದಾ ಸುಖದಿ ಇರುವರೆ / ಮಂದಿಮಾರ್ಬಲಸಕಲರೆಲ್ಲರೂ | ಕ್ಷೇಮವೇನ್ನೈ ಕುರುಕುಲಾದಿಪಸಕಲರೆಲ್ಲರೂ||

**|| ಜಂಪ್ಯೂಟಿ ರಾಗ ||**

**|| ಅಟ್ಟತಾಳ || ಅರ್ಜುನ ಕೃಷ್ಣನಿಗೆ ||**

ಹರಿಯೆನೀದಯ ತೋರಿಸೋ | ಕರುಣಾಕರನೇ ಹರಿಯೆ ನೀದಯತೋರಿಸೋ ದೇವಾ | ಮುದ್ದು ಪಾದವ ತೋರಿ | ಯುದ್ಧದೋಳ್ ಯಮನಿಗಿನ್ನೂ 1 ಸಿದ್ಧಿಸು ಘನಪದವಿ | ರಕ್ಷಿಸು ಶ್ರೀಹರಿಯೇ | ಹರಿಯೇ ನೀದಯತೋರಿಸೋ | ಕರುಣಾಕರನೇ। ಶ್ರೀಕೃಷ್ಣನೀದಯತೋರಿಸೋ |



**|| ರೂಪಕತಾಳ || ಆನಂದಭೈರವಿರಾಗ | ಸತ್ಯಚಿತ್ರಕೇತು || ಅಂಗೀರಸರು ||**

ಧಾರಣೀಂದ್ರವಂದ್ಯ | ರಾಜಸುಗುಣ ಭೂರಿಬಾಸುರಾ || ಸ್ವರ್ಣಯಾಗಮಾಡಬೇಕೋ | ಭೀಷ್ಮದಾಯಕಾ || 3ನೇ ಕಾಲದಲ್ಲಿ | ರೂಪಕ + ಧರಣೀಂದ್ರ ವಂದ್ಯ | ರಾಜಸುಗುಣ ಭೂರಿಬಾಸುರ |

**|| ಜಂಪೆತಾಳ || ಜಂಪ್ಯೂಟರಾಗ || ಲವಕುಶರ ಕಾಳಗ || ಭರತ ರಾಮನಿಗೆ ||**

ಜ್ಞಾನಿ ಎನಿಸಿ ಅರಿಯದಾ | ಅಜ್ಞಾನಿಯಂದದೀ | ಜಾನಕಿಯನು | ಅಡವಿಪಾಲ ಭ್ರಾಂತಿತನದಲೀ ಜ್ಞಾನಿ ಎನಿಸಿ ಅರಿಯದ ಅಜ್ಞಾನ ತನದಲೀ | ಬೇಡ ಬೇಡ ಕರವ ಮುಗಿವೆ ತರವೆ ನಿನಗಿದೂ 11

**|| ಜಂಟಿ ರಾಗ ||**

**|| ರೂಪಕತಾಳ || ರಾಮ- ವಶಿಷ್ಟರಿಗೆ||**

ಗುರುವರೇಣ್ಯ | ಲಾಲಿಸೀಗ | ಪರಿಯನೆಲ್ಲಾವ | ಮಾಜದ ಕರುಣಿಸೊ ಬೇಗ ಗುರುಕೃಪೆಯನೂ | ರಾವಣಾನ ಕೊಲ್ಲಲೆನಗೆ | ಬ್ರಹ್ಮಹತ್ಯಾವೂ || ಆವರಿಸಿ ಕಾಡ್ತಿಹೂದು | ಯನ್ನ ಹೃದಯದೀ | ಗುರುವರೇಣ್ಯ ಲಾಲಿಸಿಗ ಪರಿಯನೆಲ್ಲವ

**|| ರೂಪಕತಾಳ + ಜಂಪೆತಾಳ || ವಶಿಷ್ಟರು - ರಾಮನಿಗೆ ||**

ಬ್ರಹ್ಮಹತ್ಯೆ ರಾಮಚಂದ್ರ | ಹರಿದು ಪೋಪುದು ಮನದವ್ಯಸನಕೀಗ ನೀವು | ಏನ ಪೇಳ್ವದೂ | 3ನೇ ಕಾಲ || ಬ್ರಹ್ಮಹತ್ಯೆ ರಾಮಚಂದ್ರ | ಹರಿದು ಪೋಪುದು ಮನದವ್ಯಸನಕೀಗ ನೀವು | ಏನ ಮಾಳ್ಪುದೂ |

**|| ರೂಪಕತಾಳ + ಜಂಪೆತಾಳ || ರಾಮ – ವಸಿಷ್ಠರಿಗೆ ||**

ಹೇಮದಲ್ಲಿ ನಿರ್ಮಿಸಿದೊಡೆ | ಭೂಮಿಜಾತೆಯಾ ತಾಮಸಾವಿದೇಕೆ ಮುನಿಪ। ಕೃತುವ ಕೃಪೆಯೊಳೂ 3ನೇ ಕಾಲ || ಹೇಮದಲ್ಲಿ ನಿರ್ಮಿಸಿದೊಡೆ | ಭೂಮಿಜಾತೆಯಾ ತಾಮಸಾಏದೇಕೆ ಮುನಿಪ | ಕೃತುವ ಕೃಪೆಯೊಳೂ |

**ರೂಪಕ + ಜಂಪೆತಾಳ || ಲವಕುಮಾರ | ರಾಮ- ಭರರಿಗೆ||**

**ಈ ಧಾರಿ ಅಧಮ ಬ್ರಹ್ಮನಹಿಡಿದು ಈಗ ಮಡದಿಯಾ ||**

ಆರುಆದೋಡೇನು | ಬಿಡೆನೂ 1 ವಾರಿಗೋಗೆಲೋ | ದಾರಿಗಡ್ಡಲಾಗಬೇಡ॥ ದೂರಸಾರೆಲೋ | (3ನೇ ಕಾಲ ಜಂಪೆ) | ಆರು ಆದೋಡೇನು ಬಿಡೆನೂ | ವಾರಿಗೋಗೆಲಾ ದಾರಿಗಡ್ಡಲಾಗಬೇಡ | ದೂಸಾರೆ || ಕೂಚು |



**|| ರೂಪಕ + ಜಂಪೆತಾಳ || ಶತೃಜ್ಞ ಲವನಿಗೆ || ಅಶ್ವಮೇಧಯಾಗ ||**

ತಡೆದೆಕಯ್ಯಾ || ತರಳನೆನುತ | ಶರವಬಿಡದಲೇ | ಬಿಡುವೆ ಶರವ ಶಿರಕೆ ಈಗ ಗುರಿಯ ನೋಡಲಾ | ಜಂಪೆ 3ನೇ ಕಾಲ || ತಡೆದೇಕಯ್ಯಾ ತರಳನೆನುತ | ಶರವಬಿಡದೆಲೇ | ಬಿಡುವೆ ಶರವಶಿರಕೆ ಈಗ | ಗುರಿಯನೋಡಲಾ || ಕೂಚು || ಮುಕ್ತಾಯ ||

**|| ಜಂಪೆತಾಳ || ಶತೃಜ್ಞ - ಲವಕುಮಾರನಿಗೆ || ಅಶ್ವಮೇಧಯಾಗ ||**

ಬಂಡಹುಡುಗ ! ಬಿಡುಬಿಡಲವೊ | ಪುಂಡುತನವನೂ | ಲಂಡನಿನ್ನ | ಖುಲ್ಲಶರವ ಕಂಡಿಸುವೆನೆಲ್ಲೋ ಕೂಚು || ಕೇಳ್ ಹುಡುಗ ನೀನು ಲಾಲಿಸೊ || ಮುಕ್ತಾಯ ||

**|| ರೂಪಕತಾಳ || ಶತೃಜ್ಞಸೋತ ವಿಷಯ | ಚಾರಕ- ರಾಮನಿಗೆ ||**

ಮಹಿಪರಾಮಚಂದ್ರ ಮೂರ್ತಿ || ನಮಿಸಿ ಪೇಳ್ವೆನೂ | ಗುರುಗಳ ವನದಿ | ನಡೆದ ಕದನ ವಿವರ ಪೇಳ್ವೆನೂ || ದೇವಾ ನೀನುಬೀಳುಕೊಟ್ಟ | ಯಜ್ಞದತ್ವವೂ ಲೋಕದಲ್ಲಿ ತಿರುಗಲದನೂ | ತಡೆದರಿಲ್ಲವೂ | ಭರದೋಳ್ ಓತ್ವ | ವನದಿತರಳ ಕುದುರೆ ಕಟ್ಟಿದಾ | ರಣದಿ ಶತೃಜ್ಞರನ್ನೂ ತರಳ | ಮೂರ್ಚೆಗೊಳಿಸಿದಾ | ಮಹಿಪರಾಮ ಚಂದ್ರಮೂರ್ತಿ | ನಮಿಸಿಪೇಳೂವೇ

**|| ರೂಪಕತಾಳ || ದೇಶ್‌ತೋಡಿರಾಗ || ಶನಿಮಹಾತ್ಮ | ವಿಕ್ರಮಾದಿತ್ಯ ||**

ದೇವದೇವ ನಾನು ಕೇಳ್ | ವರವಕೊಟ್ಟು ಪೊರೆಯೆ ದೇವನೇ ॥ ಲೋಕದೊಳಗೆ ಮಾನವರನು | ಕಾಡದಂತೆ ಅಭಯವಾ || ದೇವದೇವ ನಾನು ಕೇಳೋವರವ ಕೊಟ್ಟು ಪೊರೆಯೋದೇವನೇ ॥

**|| ರೂಪಕತಾಳ | ದೇಶ್ ತೋಡಿರಾಗ || ವಿಕ್ರಮ | ಪದ್ಮಾವತಿಗೆ**

**ಈ ಧಾರಿ ಏನೆಂಬೆ ನೀಮಾಹಾಸ್ತ್ರಲ ||**

ಸತಿಯು ಇಹ ಸುತರು ಇಹರೂ || ಉಜ್ಜೈಯನೀಗ ದೊರೆಯು ನಾನೂ ಎಂತು ವರಿಸಲಮ್ಮಾ ನಿನ್ನ | ಎನ್ನಮನವು ಒಪ್ಪುದು | ಸತಿಯು ಇಹಳು ಸುತನು ಇಹನು ಎನ್ನ ಮನವು || ನಾವು ಒಪ್ಪುದು

**|| ರೂಪಕತಾಳ || ಕೃಷ್ಣ- ವಿಧುರನಿಗೆ ||**

ಪರಮಭಕ್ತ ವಿಧುರ ಕೇಳು | ಪರಿಯ ಪೇಳುವೆ || ಪಾಂಡವರಿಗೆ 1 ಬರುವ ಅರ್ಧ | ಪಾಂಡವರಿಗೆ ಬರುವ ಅರ್ಧ ॥ ರಾಜ್ಯ ಕೇಳ | ಬಂದಿಹೇನೂ | ಪರಮಭಕ್ತ ವಿಧುರ ಕೇಳು ಪೇಳುವೆ |



**|| ರೂಪಕತಾಳ || ಭೀಷ್ಮಾಚಾರ್ಯ ||**

ಏತಕ್ಕೆ ನಿನಗಿಷ್ಟು ದುರಿತ ಕೌರವೇಂದ್ರನೇ | ಮಾತಿನಂತೆ ವನವಾಸಮುಗಿಸಿದ (ಕುಂತೀಸುತರೊಳು) ಪಾಂಡುಸುತರೊಳು || ಏತಕ್ಕೆ ನಿನಗಿಷ್ಟು ದುರಿತ ಕೌರವೇಂದ್ರನೇ॥

**||ರೂಪಕತಾಳ | ದ್ರುತರಾಷ್ಟ್ರ - ಕೃಷ್ಣನಿಗೆ ||**

ಕರವಮುಗಿವೆ | ಹರಿಯೆ | ನಿನ್ನ | ಚರಣ ಕಮಲಕೇ || ಕರುಣದಿಂದ ಕೌರವನನು || ಕರುಣದಿಂದ ಕೌರವನನು ಹರಿಯೆ ರಕ್ಷಿಸೋ ದೇವ || ಕರವ ಮುಗಿವೆ ಹರಿಯೆ ರಕ್ಷಿಸೋದೇವಾ ॥

**|| ರೂಪಕತಾಳ || ಕರ್ಣ- ತಾಯಿ ಕುಂತಿದೇವಿಗೆ ||**

ಕರಗಳೆತ್ತಿ ಕೈಯ್ಯ ಮುಗಿವೆ | ಶರಣು ತಾಯಮ್ಮಾ | ಕರುಣದಿಂದಲಿ | ಹರಸುಯನ್ನನು | ಬೇಗಬಾರಮ್ಮಾ | ಕರಗಳೆಕೈಯ್ಯಾ ಮುಗಿವೆ | ಶರಣು ಶರಣಮ್ಮಾ

**॥ ರೂಪಕತಾಳ + ಜಂಪೆತಾಳ || 3ನೇಕಾಲ || ಭೀಮ ಕೌರವನಿಗೆ ॥**

ಕಡೆಯ ಕಾಲ ವದಗಿತಿನ್ನೂ ಬಿಡದೆ ನಿನ್ನನೂ | ಕಡಿದು ಬಿಡುವೆ | ರಣದೊಳಿನ್ನು ಮಧವಪಡದಿರೋ ॥ ಕಡೆಯ ಕಾಲವದಗಿದನ್ನೂ ಬಿಡದೆ ನಿನ್ನನೂ | (3ನೇ ಕಾಲ ಜಂಪೆ) | ಕಡೆಯ ಕಾಲವದಗಿದಿನ್ನೂ || ಬಿಡದೆ ನಿನ್ನನೂ || ಕಡಿದು ಬಿಡುವೆನೂ |

**|| ರೂಪಕತಾಳ || ಆನಂದ ಭೈರವಿ ರಾಗ || ಗಜಾಸುರವಧೆ | ವಿಷ್ಣು - ಲಕ್ಷ್ಮಿ ಸರಸ್ವತಿಗೆ | + ಯಕ್ಷಗಾನ ಅಟ್ಟತಾಳ ||**

ವಾದ ಮಾಡಬೇಡ ನಡಿಯೆ | ಪ್ರಾಣಾ ನಾಯಕೀ || ಸೊಸೆಯ ಬೇಧ | ತಿಳೀದು ನೀನೂ | ಸೌಖ್ಯದಾಯಕೀ || ಸುಮ್ಮನಿರೇ ಶಾರದಾಂಬ | ಕೋಪವೇತಕೆ ಕಮ್ಮಿನವಳ ಕೂಡೆ ನಿನಗೆ ಜಗಳವೇತಕೆ ॥ 3ನೇ ಕಾಲ ಜಂಪೆತಾಳ || ವಾದ ಮಾಡಬೇಡ ನಡಿಯ ಪ್ರಾಣನಾಯಕೀ | ಸೊಸೆಯ ಬೇಧ ತಿಳಿದು ನೀನೂ | ಸೌಖ್ಯದಾಯಕೀ ॥

**|| ಜಂಟಿ ರಾಗ ||**

**|| ರೂಪಕತಾಳ | ವಿಷ್ಣು ಇವು ಬೇರೆ ರಾಗದಲ್ಲಿ ॥**

ಚಿತ್ರವಾಯ್ತು ನಿಮ್ಮ ಕಲಹ (ವಿಚಿತ್ರ ಮಾಡುದೂ) ಕೇಳಲಾರೆನೂ ಮಿತ್ರೆ ಲಕ್ಷ್ಮಿ ವಾಣಿ ನಿಮಗೆ | ಹೇಳಲಾರೆನೇ || 3ನೇ ಕಾಲ ಜಂಪೆತಾಳ || ಚಿತ್ರವಾಯ್ತು ನಿಮ್ಮ ಕಲಹ | ಕೇಳಲಾರೆನು | ಮಿತ್ರೆ ಲಕ್ಷ್ಮಿ ವಾಣಿ ನಿಮಗೆ ಹೇಳಲಾರೆನೂ

**|| 3ನೇ ಕಾಲ ಜಂಪೆತಾಳ || ಅಂದಕಾಸುರನ ಕಥೆ || ಶುಂಭಾಸುರ – ಬ್ರಹ್ಮನಿಗೆ||**

ತುಂಡುಗೈವೆ ನೀ ಬಿಟ್ಟ ಶರವ | ಅಂಡಜಾತ್ಮಜಾ | ನಿನ್ನಾ ಗುಂಡಿಗೇಯ | ಸೀಳಿ ಬಿಡುವೇ ಬಂದ ಬ್ರಹ್ಮನೇ ಕೂಚು || ಕೇಳ್ ಬ್ರಹ್ಮಾ | ಚತುರ್ಮುಖನೇ | ತದಿತೋಂಜಣ ||

**|| ರೂಪಕತಾಳ || ಶ್ರೀಕೃಷ್ಣ ದುರ್ಯೋಧನನಿಗೆ ||**

ಕ್ಷೇಮವೇ | ಕುರುಕುಲಾಧಿಪ | ಕ್ಷೇಮವೇನಯ್ಯಾ | ಸರ್ವರೆಲ್ಲರೂ ಸುಖಿದಿ ಇರುವರೆ ಕ್ಷೇಮವೇನೈಯ್ಯಾ ಮಂದೀಮಾರ್ಬಲ ಸರ್ವರೆಲ್ಲರೂ | ಕ್ಷೇಮವೇನೈಯ್ಯಾ ಕುರುಕುಲಾದಿಪ | ಕ್ಷೇಮವೇ ಸರ್ವರೆಲ್ಲರೂ ||

**|| ರೂಪಕತಾಳ ||**

ಇತ್ತರೀಗ ಪೃಥ್ವಿಯನ್ನು | ಉತ್ತಮವಿನ್ನೂ | ಮತ್ತನಾಗಿ ನುಡಿಯಬೇಡ | ವಿಪ್ಪತ್ತು ಬರುವುದು || ಮತ್ತನಾಗಿ ನಡೆಯಬೇಡ | ಸಂಪತ್ತಿನಿಂದಲೀ | ರಾಜ ನೀನು ಲಾಲಿಸೈಯ್ಯಾ ಪೇಳ್ಾತನೂ |

**|| ಕಾನಡರಾಗ ||**

**|| ಕುಂತಿದೇವಿ ಪ್ರವೇಶ || ಕರ್ಣನಲ್ಲಿ ||**

**|| ಆದಿತಾಳದಲ್ಲಿ ಭೂಪಕೇಳೊ ಪೇಳುವೆ ಮಾತಾಪೇಳುವೆವಿಪರೀತಾ ||**

ಕಂದಾ ಕರ್ಣಾಮನ್ನೀಸಾ || ಇಂದೇ ನಿನ್ನ ಸಂದರ್ಶನಾ || ಮಂದಭಾಗ್ಯಳಾದ ಎನ್ನ | ಮಂದಭಾಗ್ಯಳಾದಾ ಎನ್ನಾ || ಕೋರಿಕೆಯನ್ನು ಕರುಣಿಸೋ ಕಂದಾ | ಕಂದ ಕರ್ಣಾ ಮನ್ನೀಸೆನ್ನಾ | ಇಂದೇ ನಿನ್ನಾ ಸಂದರ್ಶನ | ಕೋಪವಾತ್ಯಜಿಸಿ ತರುಣಿವಲಿಯೇ ಕರುಣೆಯ ಸತ್ಯವಹುದು || ಕಂದ ಕರ್ಣಾ |

**|| ರೂಪಕತಾಳ || ಕುರುಕ್ಷೇತ್ರ || ಶಕುನಿ ಕೌರವನಿಗೆ||**

ರಾಯಕೇಳು ಪಾಯವೆನಗೆ ತೋಚುತಿರುವುದೂ || ದುರದಿಗೆಲಿಯಲು | ಭೀಷ್ಮ ಪಿತಗೇ | ಕಟ್ಟಿಪಟ್ಟವಾ | ರಾಯಕೇಳು ಪಾಯಾವೆನಗೆ ತೋರೂತಿರುವುದೂ

**|| ರೂಪಕತಾಳ || ಭೀಷ್ಮ ಪಾರ್ಥನಿಗೆ ||**

ಮಗುವೆ ನಮ್ಮಯ | ಪೂರ್ವ ಫಲವು | ಇನಿತು ಇರುತಿರೇ || ಮರುಕ ಪಡುವುದೇಕೆ ಸುಮ್ಮನೆ || ಮರುಕಪಡುವುದೇಕೆ ಸುಮ್ಮನೆ | ಮಾಡೊಯುದ್ಧವ ಮಗುವೆ ನಮ್ಮಯ |

**|| ರೂಪಕತಾಳ || ಉತ್ತರ ಪತಿ – ಅಭಿಮನ್ಯುವಿಗೆ ||**

ವನಿತೆಯೆಂದು ಮನಸಿನಲ್ಲಿ | ಅಳೆಯಬೇಡಿರಿ | ಘನತೆಯಿಂದಯನ್ನ ನೀಗ | ಕರೆದು ಪೋಗಿರಿ | ವನಿತೆ |

**|| ಜಂಗ್ಯೂಟಿ ರಾಗ ||**

**|| ರೂಪಕತಾಳ | ಅಭಿಮನ್ಯುವಿಗೆ - ಸೈಂದವ ||**

**ಜಂಪೆ 3ನೇ ಕಾಲ**

ಬೇಗದಿಂದಲೀಗ ನೀನು ಬಾರೆಲೋ ಯುದ್ದಕೇ | ಈಗ ತರಿವೆ ನಿನ್ನ ನೆನುತ | ಶರವ ಬಿಟ್ಟನೂ | ಬೇಗದಿಂದಲೀಗ ನೀನು ಬಾರೊ ಯುದ್ದಕೇ || ಈಗ ತರಿವೆ ನಿನ್ನನೆನುತ | ಶರವ ಬಿಟ್ಟೆನು || ಕೇಳ್ ಅಧಮಾ | ಕೂಚು || ಕೇಳ್ ಅಧಮ ನಿಲ್ಲೊ ಯುದ್ದಕೆ ತದಿತೋಂಜಣ ತದಿತೋಂ ತದಿತೋಂ ||

**|| ಜಂಪೆತಾಳ || 3ನೇಕಾಲ || ಕುರುಕ್ಷೇತ್ರ || ದುಶ್ಯಾಸನ ಅಭಿಮನ್ಯುವಿಗೆ ||**

**||1ನೇ ಕಾಲದಿಂದ ಆಡ್ಡಿರಾಗದಲ್ಲಿ ||**

**(ನೋಡಲೊ ಸಾರಥಿ ಇಂಥಾ ಈ ಧಾರಿ)**

ಎಲವೋ ಬಾಲಕ ನಿನ್ನ ಬಲವ ತೋರೆಲೋ ಮುನ್ನಾ || ಮಧವ ಬಿಡಿಸುವೆ ಬೇಗ ಮುದದಿ ನಾನೀಗಾ | ಕೇಳ್ ಈಗ || ಕೂಚು || ಬಿಡತಿ ||

**||ರೂಪಕತಾಳ + ಜಂಪೆ 3ನೇ ಕಾಲ || ಕರ್ಣ ಅಭಿಮನ್ಯುವಿಗೆ||**

ಸದರವಲ್ಲ ಸಮರವೀಗ | ಇವನ ಸಂಗಡಾ | ಕುವರನೆಂದು | ತಡೆದೆ ಕೈಯ್ಯ ಶಿರವ ಕಡಿಯದೇ || (3ನೇ ಕಾಲಕ್ಕೆ ) ಸದರವಲ್ಲ ಸಮರವೀಗ ಇವನ ಸಂಗಡ | ಕುವರನೆಂದು ತಡೆದೆ ಕೈಯ್ಯ | ಶರವ ಬಿಡದಲೇ || ಕೇಳ ಹುಡುಗಾ || ಕೂಚು | ಮುಕ್ತಾಯ |

**|| ರೂಪಕತಾಳ || ಅರ್ಜುನ :- ದ್ರೋಣಾಚಾರ್ಯ ಕೂಡೆ ||**

ಗುರುವೆ ನೀವು ಕಲಿಸಿದಂತ | ಶಸ್ತ್ರವಿದ್ಯದೀ | ನೀವು ಮೆಚ್ಚುವ | ತೆರದಿ ನಾನು! ಯುದ್ಧ ಮಾಡುವೆ | ಗುರುವೆ ನೀವು ಕಲಿಸಿದಂತ ಶಸ್ತ್ರವಿದ್ಯದೀ ॥ ಮುಕ್ತಾಯಕ್ಕೆ ॥

|| ರೂಪಕಾಳ | ದ್ರೋಣಾಚಾರ್ಯ ||

ಗೆಲಲೋಪಾರ್ಥ | ಯನ್ನಕೂಡೆ | ಛಲವ ಮಾಡುತಾ | ಇಳೆಯೊಳ್ಯಾರು ಸಮರು ನಿನಗೆ | ಯನ್ನಗೆಲಿದೊಡೇ | ಗೆಲೆಲೊ ಪಾರ್ಥಯನ್ನ ಕೂಡೆ | ಛಲವ ಮಾಡುತಾ ॥

**|| ಜಂಪೆತಾಳ 3ನೇ ಕಾಲಕ್ಕೂ || ಕುರುಕ್ಷೇತ್ರ ಕಥೆ || ಸಾರಥಿ- ಕೌರವನಿಗೆ ||**

ತಡವಮಾಡದೀಗ ನಿನ್ನ ಕಡಿದು ಕೆಡುಹುವೇ | ಬಿಡದೆ ನಿನ್ನ ಶಿರವ ಕಡಿದು | ಪೊಡವಿಗಿಡುವೆನೂ | ತಡವ ಮಾಡದೀಗ || ನಿನ್ನ ಧರೆಗೆ ಕೆಡುಹುವೇ ||

||ರೂಪಕತಾಳ || 11 ಜಂಪೆತಾಳ || ಶಲ್ಯ - ಕರ್ಣನಿಗೆ||

ದುಡುಕಬೇಡ ಕರ್ಣ ನೀನು | ಶರದ ಗುರಿಯನೂ | ತೆಗೆದು ಎದೆಗೆ | ಗುರಿಯ ಮಾಡೀ ಹೊಡೆಯೋ ಬಾಣವಾ | (ಮೂರನೇ ಕಾಲಕ್ಕೂ ಮುಕ್ತಾಯ

||ರೂಪಕ + ಜಂಪೆತಾಳ || ಕರ್ಣ - ಶಲ್ಯನಿಗೆ||

ಇಟ್ಟ ಗುರಿಯ 1 ತೆಗೆಯಲಾರೆ | ಭ್ರಷ್ಟಪಾರ್ಥನಾ | ಅಟ್ಟಿಕೊಟ್ಟೆ ಇಟ್ಟ ಶರದೀ ಕುಟ್ಟಿ ಕೆಡಹುವೇ | ಮೂರನೇ ಕಾಲ || ಮುಕ್ತಾಯ |



**|| ಬೇಹಾಗ್ ರಾಗ||**

|| ಕಂದ || ಚಿತ್ರಕೇತು ರಾಜನ ಕಥೆ ||

1. ಸತ್ಯವೇ ನಿತ್ಯವು ಲೋಕದಿ | ಸತ್ಯವೇ ಮೋಕ್ಷಕ್ಕೆ ಸಾಧನ | ಸತ್ಯವನು ತೊರೆದರೆ ಜಗದಿ | ಯತಿವರಾ | ನರಕ ಬಾಜನರ ಹತ್ಯೆ

2. ಕಂದ || ಕನಸೋ ಕಳವಳ | ಮೇಣ್ ಮನಸಿನ ವಿಭ್ರಮೆಯೋ | ನಿದ್ರೆಯ ಭರವೋ | ಮಿರುಗುವ ಕನಕದ ಬೊಂಬೆಯೋ | ಮೇಣ್ ಸತಿಸುತರ ಭಾದೆಯೇ | ಸಹಿಸಲಾರೆನು ಹರಿಯೆ ದೇವಾ ದೇವಾ ||

**|| ಭಜನೆಪದ || ಆದಿತಾಳ || ಆಂಜನೇಯನ ಸ್ಮರಣೆ + ಯಕ್ಷಗಾನ ಅಟ್ಟತಾಳ**

1. ಎಲ್ಲಿರುವೆ ತಂದೆ ಬಾರೊ ಮಾರುತಿ | ಎಲ್ಲಿರುವೆ ತಂದೆ ಬಾರೋ || ಮಾರುತಿ ಎಲ್ಲಿರುವೆ ತಂದೆ ಬಾರೋ || ಎಲ್ಲಿ ಎಲ್ಲಿ ನೋಡಿದರು ಅಲ್ಲಿ ನಿನ್ನ ಕೀರುತಿ | ಎಲ್ಲಿ ನೋಡಿದರು ನಿನ್ನ | ಕೂಡಿರುವ ಶ್ರೀಪತಿ || ಎಲ್ಲಿರುವೆ ತಂದೆ ಬಾರೋ ಮಾರುತಿ || ಎಲ್ಲಿರುವೆ ||

2. ರಂಗಾ ನಾರ್ಥಾಂಗಿಗೆ ಉಂಗುರವನಿತ್ತು ವನಭಂಗವಪಡಿಸಿದಲ್ಲೋ | ಮಾರುತಿ ಎಲ್ಲಿರುವೆ ತಂದೇ ಬಾರೋ ಮಾರುತಿ | ಎಲ್ಲಿರುವೆ ತಂದೆ ಬಾರೋ ಮಾರುತಿ ಎಲ್ಲಿ ಎಲ್ಲಿ ನೋಡಿದರು | ಅಲ್ಲಿ ನಿನ್ನ ಕೀರುತಿ ಎಲ್ಲಿನೋಡಿದರು ನಿನ್ನ ಕೂಡಿರುವ ಶ್ರೀಪತಿ | ಎಲ್ಲಿರುವೆ ತಂದೇ ಬಾರೋ ಮಾರುತಿ || ಎಲ್ಲಿರುವೆ ತಂದೇ ಬಾರೋ ।

3. ರಕ್ಕಸರ ಸೊಕ್ಕ ಮುರಿ ಇಕ್ಕೀ ಲಂಕೆಗೆ ಉರಿ ಸಿಕ್ಕದಂತೆ | ಓಡಾಡಿದೋ । ಮಾರುತಿ | ಎಲ್ಲಿರುವೆ ತಂದೇ ಬಾರೋ ಮಾರುತಿ ಎಲ್ಲಿ ಎಲ್ಲಿ ನೋಡಿದರು! ಅಲ್ಲಿ ನಿನ್ನ ಕೀರುತಿ | ಎಲ್ಲಿನೋಡಿದರು ನಿನ್ನ ಕೂಡಿರುವ ಶ್ರೀಪತಿ | ಎಲ್ಲಿರುವೆ ತಂದೇ ಬಾರೋ ಮಾರುತಿ | ಎಲ್ಲಿ

4. ಅಶೋಕ ವನದಿ ಸುಗ್ರೀವನ ಛಲದಿ | ರಾವಣನ ಶಿರ ಹರಿದೋ ಮಾರುತಿ ॥ ಎಲ್ಲಿರುವೆ ತಂದೆ ಬಾರೋ | ಮಾರುತಿ || ಎಲ್ಲಿರುವೆ ತಂದೆ ಬಾರೋ ಮಾರುತಿ ! ಎಲ್ಲಿ ಎಲ್ಲಿ ನೋಡಿದರು ಅಲ್ಲಿ ನಿನ್ನ ಕೀರುತಿ | ಎಲ್ಲಿ ನೋಡಿದರು ನಿನ್ನ ಕೂಡಿರುವ ಶ್ರೀಪತಿ || ಎಲ್ಲಿರುವೆ ತಂದೆ ಬಾರೋ ॥

**|| ಆದಿತಾಳ || ನಾರದನಿಗೆ ಹಾಡು ||**

ಯಾದವ ಕುಲನಾಥ ಶ್ರೀನಾಥಾ | ಯಾದವ ಕುಲನಾಥ || ಯಾದವನಾಥಾ ವೇದಸುಗೀತ | ಸಾದುಜನಾವಳೀ ಮೊದಸಂಪ್ರೀತ | ಯಾದವ ಕುಲನಾಥಾ |

1. ಮಂಜುಳ ಭಾಸಾ | ರಂಜಿತ ಯೋಷಾ | ಕುಂಜಮಧುರ ಭಾಸಾನಿರಾಕುಲ || ಯಾದವ ಕುಲನಾಥಾ ಶ್ರೀ ನಾಥಾಯಾದವ ಕುಲನಾಥಾ || ಯಾದವನಾಥಾ ವೇದಸುಗೀತ | ಯಾದವ |
2. ಸುಲಲಿತನಾರ್ಧನ ಸುಂದರ ಲೀಲ | ವಿಲಸಿತವನ ಮಾಲಾ ನಿರಾಕುಲ | ಯಾಧವಕುಲನಾಥಾ ಶ್ರೀನಾಥಾ || ಯಾದವ ಕುಲನಾಥಾ | ಯಾದವ ನಾಥಾ ವೇದ ಸುಗೀತ | ಸಾಧುಜನಾವಳೀ ಮೋದ ಸಂಪ್ರೀತ || ಯಾದವ ಕುಲನಾಥಾ||
3. ಮಂಜುಳ ಭಾಸರಂಜಿತ ಯೋಶಾ | ಕುಂಜ ಮಧುರಭಾಸಾ | ನಿರಾಕುಲ | ಯಾದವ ಕುಲನಾಥಾ ಶ್ರೀನಾಥಾ ||

**|| ರೂಪಕತಾಳ | ಚಿತ್ರಕೇತು ಕಥೆ || ಅಂಗೀರಸ ಋಷಿ ||**

ಧಾನಶೀಲ ಸುಜನ ಪಾಲ | ಬೂರಿ ಭಾಸುರ | ಸ್ವರ್ಣಯಾಗ ಮಾಡಬೇಕೊ * ಭೀಷ್ಮಿದಾಯಕ | ದಾನಶೀಲಸು ಜನಪಾಲ ಭೀಷ್ಮದಾಯಕ | ಧಾನಾವಾಂತಕ | ಆದಿತಾಳ + ಯಕ್ಷಗಾನ ಅಟ್ಟತಾಳ

**|| ಬೇಹಾಗ್ ಾಗ | ಆದಿತಳ || ಕರಿಭಂಟನ ಚರಿತ್ರೆ | ಪುಂಡರೀಕಾಕ್ಷ ||**

ಧನ್ಯಳಾದೆನು ಧನ್ಯಳಾದೆನು | ನಿಮ್ಮ ಪಾದಾದರುಷನದೀ | ಬೇಡಿದ ವರಗಳ ನೀಡಿದ | ತಾಯೇ ನಿಮ್ಮಯ ಪಾದಕೆ ವಂದಿಪೆನೂ || ಧನ್ಯಳಾದೆನು ಧನ್ಯಳಾದೆನು | ನಿಮ್ಮ ಪಾದಾದರುಷನದಿ || ಯಕ್ಷಗಾನ ಅಟ್ಟತಾಳ

**|| ಆದಿತಾಳ || ಗಂಗೆಗೌರಿ ವಾದ || ಗೌರಿ ಪದ | ತ್ರಿಪುರ ಸಂಹಾರದಲ್ಲಿ ||**

ಜಗದಿ ಭೇದ ಭಾವದಿಂದ | ನಗೆ ಮುಖವ ಮಾಳ್ಪೆ ಜಗಕೆ | ಬಲುಘನಾದಿ ಬೆಳೆದ ಬೆಳೆಯ ನಾಶಗೈದು | ಗೋಳಾಪಡಿಪೆ || ಬಲ್ಲೆನೇಳೆ ಬಲ್ಲಿದತನವಾ |

**|| ಏಕತಾಳ || ನಾರದನ ಹಾಡು ||**

ಕರುಣಸಾಗರ | ಕರುಣಾ ಸಾಗರ ಕಾಮಜನಕಹರಿ | ಗಾನಲೋಲ ಶ್ರೀಘನಲೀಲಾ ಮಾಯಾಮೋಹಿತ ಸುರಜಾಲ | ವೇದಗೋಚರ ವಸುದೋದ್ಧಾರ | ಕಾಲಾಧರ ಶ್ರೀಯದುನಾಥ || ಕ || ಮದುಸೂಧನ ಶ್ರೀಮಾನಿತ ಲೋಲ ಪೊರೈಯ್ಯೆ ಭಾಸುರವನ ಮಾಲ | ಮಾಯಾಮೋಹಿತ ಮಾಯಾ ಮೋಹಿತ ಸುರಜಾಲ ||

**|| ಆದಿತಾಳ | ಗಂಗೆಗೌರಿವಾದ | ಗಂಗಪದ || ತ್ರಿಪುರ ಸಂಹಾರದಲ್ಲಿ ||**

ನಾರಿಯಾದ ಹೆಣ್ಣು ನೀನು ಮಾರಿಯಂತೆ ರೂಪಧರಿಸಿ ಘೋರ ಮಹಿಷನ ಕೊಂದೆ 1 ದುರ್ಗಿಯಂತೆ ದುಷ್ಟತನದಿ | ಬಲ್ಲೆನೇಳೆ ಬಲ್ಲಿದತನವಾ || (ಯಕ್ಷಗಾನ ಅಟ್ಟತಾಳದಲ್ಲಿ ಮುಕ್ತಾಯ)

**|| ಆದಿತಾಳ || ಗಂಗೆ ಗೌರಿ ವಾದ || ಗೌರಿಪದ || ತ್ರಿಪುರ ಸಂಹಾರದಲ್ಲಿ ||**

ಬಲ್ಲೆನೇಳೆ ಬಲ್ಲಿದತನವ | ಎಲ್ಲರ ಮನೆಯು ಕೊಚ್ಚುವ ತೆರದಿ ಎಲ್ಲರ ಪ್ರಾಣ ಸೆಳೆವೆಯಲ್ಲೆ ಸೊಲ್ಲ ಪೇಳ ಬೇಡ ಗಂಗೆ | ಬಲ್ಲೆನೇಳೆ ಬಲ್ಲಿದ ತನವಾ || (ಯಕ್ಷಗಾನ ಅಟ್ಟತಾಳದಲ್ಲಿ ಮುಕ್ತಾಯ)

**|| ಆದಿತಾಳ || ಭಕ್ತಿಯ ಹಾಡು || ನಾರದ || ಮಾರ್ಕಾಂಡೇಯಚರಿತ್ರೆ ||**

ನಾದಪ್ರಿಯಾ ಶಿವನೆಂಬುವರು | ನಾದಪ್ರಿಯ ಶಿವನಲ್ಲವಯ್ಯಾ | ವೇದಪ್ರಿಯಾ ಶಿವನೆಂಬುವರೂ ॥ ವೇದ ಪ್ರಿಯ ಶಿವನಲ್ಲವಯ್ಯಾ ॥ ವೇದಪ್ರಿಯನೂ ಅಲ್ಲನಾದಪ್ರಿಯನೂ ಅಲ್ಲ | ಭಕುತರ ಪ್ರಿಯ ನಮ್ಮ ಕೂಡಲ ಸಂಗಮ || ನಾದಪ್ರಿಯಾ ಶಿವನೆಂಬುವರೂ

**|| ಆದಿತಾಳ || ಮಾರ್ಕಾಂಡೇಯಚರಿತ್ರೆ ||**

ಏನಿದು ಈವನ ಶೋಭಿಪುದು | ಎಂತೂ ಈ ವನರಂಜಿಪುದು || ಎಲ್ಲೆಲ್ಲಿ ನೋಡಲು | ಹುಲಿಗಳು ಮೃಗಗಳು | ಸರಸವನಾಡುತನಲಿಯುವವೂ || ಎಲ್ಲೆಲ್ಲಿ ನೋಡಿದರು ! ಓಂಕಾರ ಶಬ್ದವು | ನಮ್ಮಯ ಬಯಕೆಯು ನಡೆಯುವುದೇ | ಏನಿದು ಈವನ ಶೋಭಪುದೊ | ಎಂತೂ ಈವನರಂಜಿಪುದೂ | ಯಕ್ಷಗಾನ ಅಟ್ಟತಾಳ

**|| ಆದಿತಾಳ || ರಕ್ತಬೀಜಾಸುರನ ಕಥೆ || ದೇವತಾನರ್ತಕಿಯರು | ನಾಟ್ಯ ||**

ಮಾನಸಖಿಪರೆ | ಮಾನಂದಕರವಿದು | ಮನೋಹರಯರೇ ಕ್ರೀಡೆಯು || ಮನೋಹರಯರೇ ಕ್ರೀಡೆಯೂ | ತೊಳಗಿಬೆಳಗುವ | ಬೆಳದಿಂದಗಳೊಳ್ 1 ನಲಿದು ಪಾಡುವ ವಲಿದು ಹಾಡುವ | ತರತರವಿಧದಲಿ | ಮನೋಹರಯರೇ ಕ್ರೀಡೆಯು ಮಾನಸಖಿಪರೆ | ಮಾನಂದಕರವಿದು ಮನೋಹರಯರೇ ಕ್ರೀಡೆಯು ನಾನನಾನನಾನಾನ

**|| ರೂಪಕತಾಳ || ರಕ್ತಬೀಜಾಸುರನ ಕಥೆ || ದೇವತಾನರ್ತಕಿಯರ ನರ್ತನ ||**

ಮೋರೆಮಕುಟಾಶ್ಯಾಮಹಾಯಿರೇ || ಬಾನ್‌ಸುರೀಭಜಾಯಿರೇ | ಬಾನ್‌ಸುರೀ ಬಜಾಯರೇಶ್ಯಾಮ | ಮೊರಳೀಸುನಾಯಿಗೆ ಮೋರೆಮಕುಟ ಶ್ಯಾಮಹಾಯಿರೇ ಬಾನಸುರೀಬಜಾಯಿರೇ || ಇಂದ್ರಗುಪಸೇಶ್ರೀಷ್ಠಿಭರಸೆ | ಗೋಪಗೋಪಿಯರಕರಸೇ॥ ಮೋರೆಮಕುಟ ಶ್ಯಾಮಹಾಯಿರೇ | ಬಾನಸುರೀಬಜಾಯಿರೇ || ಬಾನಸುರೀಬಜಾಯ್ ರೆಶ್ಯಾಮ್ | ಮೊರಳೀಸುನಾಯಿರೇ || ತಾನಾ ನನ್ನತನನನತನ್ನ || ತಾನನಾನನನ್ನಾ

**|| ಆದಿತಾಳ || ರಕ್ತಬೀಜಾಸುರ ಕಥೆ | ರಾಕ್ಷಸರನರ್ತಕಿಯರ ನಾಟ್ಯಕ್ಕೆ ||**

ತಂಗಾಲಭಂಗತೀ ಲಾಲಪಿಂಜರೀ || ಭೂರಿಬಲ್ಲಾಹಕ್ಕೆ ಹೋ ಹೋ ಹೂಹೋ ತಂಗಾಲಭಂಗತೀಲಾಲಪಿಂಜರಿ || ಭೂರೀಬಲ್ಲಾ ಹಕ್ಕಹೋಹೋಹೋ || ಇತ್ತಪಿಂಜರನ್ನಮ್ಮಿ | ಕ್ಯಾಕರ್ತುನ್ಯೆಬಾ | ಬೂರೀಬಲ್ಲಾಹಕ್ಕಹೋಹೋಹೋ | ತಂಗಾಲಬಂಗತೀಲಾಲಪಿಂಜರಿ | ಭೂರೀ ಬಲ್ಲಾಹಕ್ಕ ಹೋ ಹೋ ಹೋ || 2ನೇ ಕಾಲ | ಯಕ್ಷಗಾನ ಅಟ್ಟತಾಳ

**|| ಆದಿತಾಳ || ರಕ್ತಬೀಜಾಸುರನ ಕಥೆ || ರಾಕ್ಷಸರ ನರ್ತಕಿಯರು ||**

ಭಟುವಾಯಕುಂತಣ ಭೂರಿಬಲ್ಲಾರೆ 1 ಬಟುವಾಯ ಕುಂತಣರೇ || ಬಿಟುವಾಯ್ ಕುಂತಣ ಬೂರೀ ಬಲ್ಲಾರೆ ಬಟುವಾಮ್ ಕುಂತಣರೇ | ಪೆರೆಮಿರೆದಾ ಬಟುವಾಯ್ ಕುಂತಣರೇ ಇತ್ತ ಪಿಂರನ್ನಮ್ಮಿಕ್ಯಾಕರ್ತುನ್ಯೆಬಾ | ಬೂರೀಬಲ್ಲಾಹಕ್ಕಹೋಹೋಹೋ॥ ತಾನ, ನಾನ, ನಾನ, ನನ್ನಾ, ನನ್ನಾ, ನನನಾ ತಾನನನ್ನಾ | ತಾನಾನಾನನಾನ ನನ್ನನನನನಾನಾನನನ್ನ || (ಯಕ್ಷಗಾನ ಅಟ್ಟತಾಳ)

**|| ಆದಿತಾಳ || ಹಾಸ್ಯ ಮಾಡಲು ಸಾರಥಿಗೆ॥**

ಯಾಕ್ಲ ಪುಟ್ಟನಂಜ | ಪುಟ್ಟಂಜಿಗೆ ಹೊಡೆದಂತೆ ಯಕ್ಲಾ ಪುಟ್ಟಂಜಿಗೆ ಹೊಟ್ಟೆಂತೆ ಯಾಕ್ತಾ ಪುಟ್ಟಂಜ |

ಇಳೆಲ್ಲಾ | ಇಳೆಲ್ಲಾ | ರಾತ್ರೆಲ್ಲಾ ಬಿಡದಂತೆ ಎದ್ದು ಎದ್ದು ಹೊಲ್ದಂತೆ | ಯಾಕ್ಲಾ ಪುಟ್ಟಂಜ | ಯಾಕ್ಲಾ ಪುಟ್ಟಂಜಾ || 2ನೇ ಕಾಲಕ್ಕೆ ॥

**|| ಆದಿತಾಳ || ಸಾರಥಿ ಹಾಸ್ಯಕ್ಕೆ॥**

ಹೋಗತೀಂಕಣೆ | ಹೋಗ್ ತಿಂಕಣೆ | ದೊಡ್ಡಬಳ್ಳಾಪುರಕೆ | ಹೋಗ್ ತಿಂಕಣೆ ನಾನ್ ಹೋಗ್ತಿಂಕಣೆ ದೊಡ್ಡಬಳ್ಳಾಪುರಕೆ ತತ್ತೀರಕಣೆ ತತೀಂಕಣೆ | ನೆಲಗಡ್ಡೆಕಾಯ! ಹಸಿಕಡಲೆಕಾಯ | ಹುರಿದ ಕಡಲೆಕಾಯ | ಹೋಗ್ತಿನ್‌ಣೆ ಹೋಗ್ತಿನ್‌ಕಣೆ ದೊಡ್ಡಬಳ್ಳಾಪುರಕೆ || ತತ್ತೀನ್ ಕಣೆ ತತ್ತೀನಿ ಕಣೆ ನೆಲಗಡಲೆಯ ಕಾಯ ಬೇಯಿಸಿದ ಕಡಲೆಕಾ ಹಾಲ ಕಡಲೆಕಾಯ || ತಿನ್ನಬೇಡ ಕಣೆ ತಿನ್ನಬೇಡ ಕಣೆ ನೆಲ್ಲಗಡ್ಡೆಕಾಯಾ ತಿಂತಾ ತಿಮಿರು ಬತ್ತೈತೆ ನೆಲಗಡ್ಡೆಕಾಯಾ

**|| ಆದಿತಾಳ || ಭಕ್ತಮಾರ್ಕಾಂಡೇಯ ಚರಿತ್ರೆ | ಮೃಕಂಡ – ಮರುದ್ವತಿ ಪ್ರವೇಶ ||**

**|| ಭಕ್ತಿಯ ಹಾಡು ||**

ನಿತ್ಯರಂಜನ | ಮೃತ್ಯುವಿಭಂಜನ ಭಕ್ತ ಪ್ರೇಮಾಂಜನ | ಮುಕ್ತಿ ವಿಭಂಜನ ಪಾಹಿ | ಪಾಹಿಮಾಂ ಪರಿಪಾಹಿ || ಉಮಾಧವ ಶಂಕರ | ಕಾಂಬುವೆನೆಂದಿಗೆ ಸಂಭ್ರಮದಿಂದ ಸುಂದರ ಪುತ್ರನಾ | ಶಂಭೋಶಂಕರಪಾಹಿ ಪಾಹೀ ಪಾಹೀ | ಪರಿಪಾಹೀ ||



**|| ಬೇಹಾಗ್ ರಾಗ||**

**|| ಆದಿತಾಳ | ಶನಿಮಹಾತ್ಮ || ಲೋಲಿಕೆ ||**

ಬೇಗದಿಂ ಪೋಗಿ | ವರನನು ನೋಲ್ವೆ ! ಇಂದೂರಾತ್ರಿವೇಳೆಯೊಳು | ಮನಕೆ ಹರುಷವಾದರೆನಗೆ ಸುಂದರನನ್ನೂ ವರಿಸುವೆನೂ | ಬೇಗದಿಂ ಪೋಗಿ || ವರವನು ನೋಳ್ವೆ |

**|| ಆದಿತಾಳ | ಪದ್ಮಾವತಿ | ಸಖಿಯರಲ್ಲಿ||**

ದೀಪಕಮಲ | ರಾಗವನ್ಯಾರು | ಹಾಡಿದರಿನ್ನೂ | ತಿಳಿಯೇ ಸಖಿ ತಾಳದು ಮನವು ನೋಡದೆ ಅವರ | ಕರೆತಾರೇ ಸಖಿಮಣಿಯೇ 2ನೇ ಕಾಲ || ಯಕ್ಷಗಾನ ಅಟ್ಟತಾಳ ಮುಕ್ತಾಯ |

**|| ಆದಿತಾಳ | ಶನಿಮಹಾತ್ಮ||**

ಬೀದಿ ಬೀದಿಗಳನ್ನು ಹುಡುಕುತ ಬಂದಳು | ಹಾಡುವರಾಗುವ ಆಲಿಸುತಾ|| ಮುಂದೆ ಮುಂದೆ ಬಂದು ನೋಡಲು | ತೇಲಿಯ ಮನೆಯಾ ಶೋಧಿಸುತಾ || 2ನೇ ಕಾಲ ||

**|| ಆದಿತಾಳ || ಸತ್ಯಚಿತ್ರಕೇತು ಕಥೆ || ಚಾರುಮತಿ ||**

ಸತಿಯೊಳು ಸೇವಿಸೆ ! ಹರುಷದಲೀ | ಸತಿಪತಿಪಿತನಾಸ್ಮರಿಸುತಲೀ | ಸುತನೆಮಗಿತ್ತರೆ ಸುರಮುನಿನಾಥಗೆ | ಪ್ರತಿಮೆಯ ಮಾಳ್ವೆ ಸುವರ್ಣದಲೀ || 2ನೇ ಕಾಲ || ಸತಿಯೊಳು ಸೇವಿಸೆ | ಯಕ್ಷಗಾನ ಅಟ್ಟತಾಳ ಮುಕ್ತಾಯ |

**|| ಆದಿತಾಳ ಬ್ರಾಹ್ಮಣರು ||**

ರಾಜರ ಮನೆಯಲಿ | ಭೋಜನವೆಂದರೆ | ಯೋಜನವಾದರೂ | ಹೋಗುವೆವು ಅಪ್ಪಳವಾ ಸಂಡಿಗೆಯಾ | ದಪ್ಪದಪ್ಪಲಾಡುಂಡೆಗಳ | ಎಪ್ಪತ್ತಾದರೂ ಹೊಡೆಯುವೆವೂ 2ನೇ ಕಾಲಕ್ಕೂ ರಾಜರ ಮನೆಯಲಿ | ಯಕ್ಷಗಾನ ಅಟ್ಟತಾಳ |

**|| ಆದಿತಾಳ || ಸತ್ಯಚಿತ್ರಕೇತು ಕಥೆ || ಚಂದ್ರಮಾಲಿನಿ ||**

ಶ್ರೀಗೌರಿ ಜಯಜಯ ಶ್ರೀರಮಣೀ ಜಯ ಜಯತು | ಮಾರನ ಬಾದೆಯು ಎನ್ನ ಹೃದಯವ ಬಹುಬಾಧೆ ಪಡಿಸುವಾ | ಎನಗೆ ತಕ್ಕ ಚದುರನನ್ನು ಕರುಣೆ ಸಮಾಜನನಿಯೇ ॥ ಶ್ರೀ ಗೌರಿ ಜಯ ಜಯ ಶ್ರೀ ರಾಮಣೀ ಜಯ ಜಯತೂ ಯಕ್ಷಗಾನದ ಅಟ್ಟತಾಳ ಮುಕ್ತಾಯ ||



**|| ಕಂದ ಚಿತ್ರಕೇತು ಕಥೆ ||**

ಕನಸೋ ಕಳವಳವೋ ಮೇಣ್ ಮನಸಿನ | ವಿಭ್ರಮನೆಯೋ | ನಿದ್ರೆಯ ಭರವೋ | ಮಿರುಗುವ ಕನಕದ ಬೊಂಬೆಯೋ | ಮೇಣ್ ಸತಿಸುತರ ಬಾಧೆಯ ಸಹಿಸಲಾರೆನು ಹರಿಯೇ ॥ ಹರಿಯೇ ॥ ಹರಿಯೇ ॥

**|| ಆದಿತಾಳ || ಅಂದಕಾಸುರನ ವಧೆ || ಪುಷ್ಪದತ್ತ ||**

ಸಲಹೈ ಸ್ವಾಮಿ ಭಕುತರ ಪ್ರೇಮಿ ನಲಿವನು ನೀಡುವ ಶಿವಶಂಕರನೆ ಸಲಹೆ ಸ್ವಾಮಿ | ಭಕುತರ ಪ್ರೇಮಿ ದೀನೋದ್ಧಾರ | ಭಕುತರಕಾಯ್ದನೇ || ಕರುಣದೀ ಪೊರೆಯೋ | ಸುಜನರ ಪಾಲನೆ || ಸಲಹೆ ಸ್ವಾಮಿ ಭಕುತರ ಪ್ರೇಮಿ | ನಲಿವನುನೀಡುವ ಶಿವಶಂಕರನೇ ॥

**|| ಆದಿತಾಳ || ಅಂದಕಾಸುರನ ವಧೆ | ಗಿಳಿಗಳು | ಮದುಮಿತ್ರ – ಮೃದುವಾಣಿಗೆ ||**

ಕಾಂತೇ ಮುಂದೆ ಕಾಂಬುವ | ವನಕೆ ಪೋಗಿ | ಅಂದವಾದ ಹಣ್ಣುತರುವೆ | ಚಂದದಿಂದ ಇರುವಳಾಗೆ | ಮೃದುವಾಣಿಯೇ || ಯಕ್ಷಗಾನ ಅಟ್ಟತಾಳ ಮುಕ್ತಾಯ |

**|| ಆದಿತಾಳ || ಮೃದುವಾಣಿ || ಗಿಳಿಗೆ ||**

ಬೆಕ್ಕುಗಳಿಗೆ ಸಿಕ್ಕಿದಾರೋ | ಬೇಡರಿನ್ನೂ ಹೊಡೆದರೇನೋ | ಹೆಣ್ಣ ಗಿಳಿಯ ವಶದಿ ಪ್ರಿಯನು | ರಮಿಸುತಾಲಿ ಇರುವಾರೇನೋ | ಬೆಕ್ಕುಗಳಿಗೆ ಸಿಕ್ಕಿದಾರೋ | ಬೇಡಿರಿನ್ನೂ ಹೊಡೆದರೇನೋ | ಮುಕ್ತಾಯ |

**|| ಆದಿತಾಳ || ಶುಕ್ರಾಚಾರ್ಯರು || ಕನಕಾಕ್ಷನ ಬಳಿಗೆ ||**

ಸಾಂಬಸದಾಶಿವ | ಸಾಂಬಸದಾಶಿವ | ಸಾಂಬಸದಾಶಿವ ಸಾಂಬಶಿವ | ಸಾಂಬವಿಶುಭ ಕರಸಾಂ ಬಶಿವಾ | ಸಾಂಬಸದಾಶಿವಾ ಸಾಂಬಶಿವ | ಬಾಲಮಾರ್ಕಾಂಡೇಯ | ನಾಲಯದೊಳು ಪೋಗಿ | ಕಾಲನು ಪಾಶವ ನಾಕಿರಲೂ ಸಾಂ || ನೀಲಕಂಠನು ತನ್ನ ಬಾಲನ ಸಲಹಿದ | ಪೇಳುವ ಪರಿಯನೂ ತಿಳಿಮನವೇ ಸಾಂಬಸದಾಶಿವ |

**|| ಆದಿತಾಳ || ಮಾರ್ಕಾಂಡ ಚರಿತ್ರೆ | ವೇದತೀರ್ಥರು ||**

ಶಂಕರ ಗಿರಿಜೇಶಾ | ಸದಾಶಿವ | ಶಂಕರ ಗಿರಿ ಜೇಶಾ | ಲಂಕಾಧೀಶ ಭಿಂಕವಿನಾಶ | ಪಂಕ ಜಾಂಡಪೋಶಾ | ಸದಾಶಿವ ಶಂಕರ ಗಿರಿಜೇ ಶಾ | ಸದಾಶಿವ ಶಂಕರಗಿರಿಜೇಶಾ |

**||ಆದಿತಾಳ || ನಾರದ ||**

ಹರನೆ ಶಿವಶಿವ ಶಂಕರನೇ ಸದಾಶಿವ || ಹರನೆ ಶಿವಶಿವ ಶಂಕರನೆ | ಸದಾಶಿವ ಹರ ನಿನ್ನ ಚರಣ | ಭವಭಯಹರಣ | ಸುರನುತ ಚರಣ | ದಿವ್ಯಭೂಷಣನೇ ॥ ಹರನೆ ಶಿವ ಶಿವ ಶಂಕರನೇ || ಸದಾಶಿವ ಹರನೆ ಶಿವಶಿವಶಂಕರನೇ || ಸದಾಶಿವಾ |

**|| ಆದಿತಾಳ || ಮರುದ್ವತಿ ||**

ಸತಿಪತಿನೋಡುತ ಪುತ್ರನನು ಮನದೊಳು ಹರುಷವ ತಾಳುತಲಿ | ಪತಿತಪಾವನ ಶಿವನನ್ನು ಪರಿ ಪರಿವಿಧದೊಳು ಧ್ಯಾನಿಸುತಾ || ಸತಿಪತಿ ನೋಡುತ ಪುತ್ರನನು | ಮನದೊಳು ಹರುಷವ ತಾಳುತಲೀ ಶಾಂಬವಿ ಶುಭಕರ ಸಾಂಭಶಿವಾ || ಶಂಭೋ ಶಂಕರ ಸಾಂಭಶಿವಾ ||

**|| ಆದಿತಾಳ || ಗಜಶಿರ ಪ್ರಧಾನ ಗಜರಾಕ್ಷಸ ವಧೆ || ಪಾರ್ವತಿ ಪದ ||**

ಸಾಂಬಸದಾಶಿವ ಶಾಂಬವಿಶುಭಕರ ಕುಂಬಿನಿ ಪತಿನುತ ಶಂಕರನೇ || ಇಂದ್ರನ ಲೋಕವ ಭಾದಿಪಧನುಜರ 1 ಕಂದರ ಛೇಜಿಸುಜಗದೀಶಾ | ಕರ್ಪೂರದಾರತಿ ವಪ್ಪದಿ ಬೆಳಗುವೆ | ಮುಪ್ಪುರ ಹರಗೇ ಸಂಹರಗೇ || ಸಾಂಬಸದಾಶಿವ ||

**|| ಆದಿತಾಳ || ಶನಿಮಹಾತ್ಮ | ವರ್ತಕ - ಅಲೋಲಿಕೆಗೆ ||**

ಬೇಗದಿಹೋಗಿ ವರನನು ನೋಳ್ | ಇಂದೂರಾತ್ರಿ ವೇಳೆಯೊಳು | ಮನಕೆ ಹರುಷವಾದರೆ ಯನಗೇ ಸುಂದರನನ್ನು ವರಿಸುವೆನು || ಬೇಗದಿಪೋಗಿ ವರನನುನೋಳ್ 2ನೇ ಕಾಲಕ್ಕೆ | + ಯಕ್ಷಗಾನ ಅಟ್ಟತಾಳ

**|| ಆದಿತಾಳ || ಬ್ರಾಹ್ಮಣರು | ಪಂಡಿತರು || ರಾಜರ ಮನೆಗೆ ||**

ಬನ್ನಿರಯ್ಯಾ ಬನ್ನಿರಿ ರಾಜರ ಮನೆಗೆ ಹೋಗುವ | ರಾಜರ ಮನೆಗೆ ಹೋಗುವ ಭೋಜನವನ್ನು ಮಾಡುವ | ರಾಮಶಾಸ್ತ್ರಿ ಭೀಮಶಾಸ್ತ್ರಿ ಸೋಮಶಾಸ್ತ್ರಿ ಬನ್ನಿರೀ | ಬನ್ನಿರಯ್ಯಾ ಬನ್ನಿರಿ ರಾಜರ ಮನೆಗೆ ಹೋಗುವ | ಅಪ್ಪಯ್ಯ ಶಾಸ್ತ್ರಿ ತಿಪ್ಪಯ್ಯಶಾಸ್ತ್ರಿ | ರುಬ್ಬಾಭಟರೆ ಬನ್ನಿರಿ | ಬನ್ನಿರಯ್ಯ ಬನ್ನಿರಿ ರಾಜರ ಮನೆಗೆ ಹೋಗುವಾ ॥ ॥ 2ನೇ ಕಾಲಕ್ಕೆ | ಯಕ್ಷಗಾನ ಅಟ್ಟತಾಳ

**|| ಆದಿತಾಳ || ಶನಿದೇವರ ಕಥೆ || ಪದ್ಮಾವತಿ ಸಖಿಯರಲ್ಲಿ ||**

ದೀಪಕಮಲ | ರಾಗವನ್ಯಾರು ಹಾಡಿದರಿನ್ನೂ ತಿಳಿಯೆ ಸಖಿ | ತಾಳದು ಮನವು ನೋಡದೆ ಅವರ |

ಕರೆದುತಾರೆಸಖೀಮಣಿಯೇ || ದೀಪ ॥ 2ನೇ ಕಾಲಕ್ಕೆ ಮುಕ್ತಾಯ | ಯಕ್ಷಗಾನ ಅಟ್ಟತಾಳ



**|| ಆದಿತಾಳ + ಯಕ್ಷಗಾನ ಅಟ್ಟತಾಳ ||**

ಬೀದಿಬೀದಿಗಳನ್ನು ಹುಡುಕುತ ಬಂದಳೂ ಹಾಡುವರಾಗುವ ಆಲಿಸುತ್ತಾ | ಮುಂದೆ ಮುಂದೆ ಬಂದು ನೋಡಲು | ತೇಲಿಯ ಮನೆಯ | ಶೋಧಿಸುತಾ || 2ನೇ ಕಾಲ ಮುಕ್ತಾಯ ॥

**|| ಏಕತಾಳ || ಮಾರ್ಕಾಂಡೇಯ ಚರಿತ್ರೆ | ನಾರದನಹಾಡು || + ಯಕ್ಷಗಾನ ಅಟ್ಟತಾಳ ||**

ಸಲಹೈ ಸ್ವಾಮಿ ಭಕುತರ ಪ್ರೇಮಿ | ನಲಿವನ್ನು ನೀಡುವ | ಪಾರ್ವತಿ ಶಿವನೆ | ಧೀನೋದ್ಧಾರನೇ | ಭಕುತರ ಕಾಯ್ದನೆ ಕರುಣದಿ ಪೊರೆಯೋ ಸುಜನರ ಪಾಲನೇ ಸಲಹೆ ಸ್ವಾಮಿ || ಭಕುತರಪ್ರೇಮಿ ನಲಿವನ್ನು ನೀಡುವ ಸಕಲೇಶ್ವರನೆ ||

**|| ಆದಿತಾಳ + ಯಕ್ಷಗಾನ ಅಟ್ಟತಾಳ || ಶಿವಜಲಂಧರನ ಕಥೆ ||**

**|| ಸಮುದ್ರರಾಜ ಹೆಂಡತಿ ಭೂಕರ್ಣಿಕೆಗೆ ||**

ಧನ್ಯರಾದೆವು | ಕೇಳೊ ಕಾಂತನೆ | ಸನ್ನುತಾಂಗನೇ ಜಲನಿಧಿಯೇ | ನೇಮದಂತೆ ಈಗ ತನಯುನ | ಪ್ರೇಮದಿಂದಾ ಪಾಲಿಸುವಾ | ಸೋಮ ಮೌಳಿಯ ಕರುಣದಿ ಪುಟ್ಟಿಹ ಈಶಿಶುವನು ನಾವ್ ಪೋಷಿಸುವಾ || ಧನ್ಯರಾದೆವು ಧನ್ಯರಾದೆವು ಸನ್ನುತಾಂಗನೆ ಜಲನಿಧಿಯೇ ॥

**|| ಅಠಾಣರಾಗ ||**

**|| ಕಂದ ಸತ್ಯಚಿತ್ರಕೇತು ಕಥೆ || ಶ್ರೀಕೃಷ್ಣನ ||**

ಮೆಚ್ಚಿದೇ ನಿನ್ನಯ ಭಕ್ತಿಗೆ | ಮೆಚ್ಚಿದೇ ನಿನ್ನಯ ಭಕ್ತಿಗೆ | ಚಿತ್ರಭೂಪನೆ ನಿನಗೆ ದುಃಖವಿದೇಕೈ | ಹೆಚ್ಚಿನಾವರವನು ಕೊಡುವೆನು || ಹೆಚ್ಚಿನಾವರವವಂಕೊಡುವೆನು | ಚಿತ್ರಭೂಪನೆ ನಿನಗೆ ದುಃಖ ವಿದೇಕೈ | ಸಚ್ಚರಿತ್ರನೆ | ನಿನ್ನಿಚ್ಛಯವರವಂಕೇಳೋ ||

**|| ಕಂದ ಚಿತ್ರಕೇತು ಕಥೆ || ಅಂಗೀರಸ ಋಷಿಗಳ ||**

ಸಿರಿಕುಲಾರಾಜ್ಯವಬಿಡದಿರೇ | ಸಿರಿಕುಲಾರಾಜ್ಯವಬಿಡದಿರೇ | ಹಿಡಿಹಿಡಿ ಶಾಪವ ಕೊಡುವೇ || ಪೊಡವಿಯೊಳಗೆ ನೀಸತ್ಯಸಂದನನೆಂದು || ಬೇಡಿದ ಇಷ್ಟಾರ್ತವಂಕೊಡುವೆನೆಂದು | ನೀ ಹೊಡಿಸಲೇತಕೆ ಬೇರೀ |

**|| ಕಂದ || ಸತ್ಯಚಿತ್ರಕೇತು ಕಥೆ | ಅಂಗೀರಸ ಋಷಿ ||**

ಪರಿಪರೀಕಷ್ಟವನಿತ್ತೊಡಾಂ | ಪರಿಪರಿ ಕಷ್ಟವನಿತ್ತೊಡಾಂ || ಅರಸನೂ ಸತ್ಯಭ್ರಷ್ಠನಾಗನು ಧರೆಯೋಳ್ || ಪುತ್ರಗೇಮೃತ್ಯವುಬಾರದು | ವ್ಯರ್ಥವಾದುದುಯನ್ನಕೃತ್ಯವು ಧರೆಯೋಳ್ ||

**|| ಮುಖಾರಿರಾಗ || ಭಾಮಿನಿ ||**

**||ದಕ್ಷಯಾಗ | ಪಾರ್ವತಿ ನಂದೀಶನಿಗೆ||**

ಇತ್ತಲಾ ಸತಿ ದೇವಿದಕ್ಷ ದ್ವಾರಕೆ ತೆರಳಲೂ | ಪಿತನ ಮನೆಗೆ ತೆರಳುವ ಮಾರ್ಗದೊಳು | ಆಗುವ ಶಕುನವ ನೋಡಿ ! ಪತಿಯೇ ನಿನ್ನ ಮಾತನು | ಮೀರಿ ಬಂದೆನು || ಪುತ್ರಾನಂದೀಶಾ || ಈ ಅಪಶಕುನಗಳ ನೋಡಿದೆಯಾ ಕಂದಾ

**|| ಅಟ್ಟತಾಳ ||**

ಪತಿಯ ಮಾತನು ಮೀರಿ | ಹೀನಾಪಶಕುನವ ಕಾಣಾಲು ನಾ ಬಂದೆನೂ || ಕಂದಾ | ಕಂದಾ || ಬಲಗಣ್ಣು ಬಲಭುಜವು ನಿಲ್ಲಾದೆಹಾರುವವೂ | ವಲವು ತಿಳಿಯದೆ ಹೋಯಿತೇ || ನಂದೀಶಾ ಕಂದಾ | (ಕಂದಮ್ಮಾ ಹೇಗೆ ಮಾಡಲೋ) 1 ಕಡ್‌ಡ್‌ಂ ಕಡ್‌ಡ್ ಕಡ್‌ಕಡ್‌ತಾ |

**|| ಆದಿತಾಳ || ಸೀತಾಪರಿತ್ಯಾಗ | ಸೀತೆ ಲಕ್ಷ್ಮಣನಿಗೆ ||**

ಧೀರಾ ಲಕ್ಷ್ಮಣನೋಡೈ ದಾರಿಯೋಳ್ ಉತ್ಪಾತ | ತೋರುತಲಿದೆ ಎನಗೇ | ಘಠಸರ್ಪ ಅಡ್ಡಾಯ್ತು || ಗೂಬೆಕಾಗೆಗಳೂ | ಬಲುಆರ್ಭಠಿಸುತಲಿಹವೂ || ಮೈದುನನೇ (ಕೂಚು) ಮೈದುನನೇ ಲಕ್ಷ್ಮಣನೇ (ಬಿಡತಿ) ಕಕತೋಂ || ಕಕಡ್ ಕಡ್‌ಕಡ್‌ತಾ

**|| ಅಟ್ಟತಾಳ || ದೇವೀ ಮಹಾತ್ಮ | ದೇವಿಯಲ್ಲಿ | ಹರಿಬ್ರಹ್ಮ ದಿಕ್ಪಾಲಕರು||**

ತಾಯೇ ನಿಮ್ಮಯ ಸತ್ವ ಸಾಹಸದಿಂದಲಿ | ಅಜರುದ್ರರಿರುತಿರ್ಪವೂ ಮಾಯೆಯಂದದಿ ತೋರ್ಪ ದುಷ್ಟನಿಗ್ರಹದೊಳು ದೇವೀಕಾಯ್ದದು ನಮ್ಮನೂ ತಾಯೇ | ಅಮ್ಮಯ್ಯಾ ಜಗಜ್ಜನನಿ | ಕಾಪಾಡು | ತದಿತೋ ಜಣ ತದಿತೋಂ | ತದಿತೈ | ತದಿತೋಂ

**|| ಅಟ್ಟತಾಳ || ಸತ್ಯಚಿತ್ರಕೇತು ಕಥೆ || ಚಾರುಮತಿ ಪತ್ರ ವಿತ್ರಾಂಗದ ಮರಣ ||**

ಅಪ್ಪಾ ಮಗನೇ ನಿನ್ನಾ | ಸರ್ಪವು ಕಡಿದಾಗ | ಅಮ್ಮಾ ಅಮ್ಮಾ ಎಂದು ಅಳುತಿರ್ದೆಯಾ | ಕಂದಾ || ಪತಿಮೋರೆ ಇಲ್ಲದಾಯ್ತು ! ಗತಿಯಾರು ಮುಂದೆನಗೇ ಮಗನೇ ಕಂದಾ | ಸುಮತಿ ಛಲವೇ ಫಲವಾಯಿತೇ ॥



**|| ಅಟ್ಟತಾಳ || ಕರಿಭಂಠನ ಚರಿತ್ರೆ | ಬನವಂತೆ | ಮಗ ಕರಿರಾಯನಿಗೆ ||**

ಬೇಡ ಬೇಡವೋ ಮಗನೇ | ಬೇಡಿಕೊಂಬೆನು ನಿನ್ನಾ | ಕೇಡು ಬರುವುದು ಖಂಡಿತಾ | ಮಗನೇ || ಮಗನೇ | ಮಕ್ಕಳ ಪಡೆದವರ್ಗೆ | ದುಃಖಾತಪ್ಪದು ಕಂದಾ | ಕೊಟ್ಟಂತ ಮಹದೇವ | ಸಿಟ್ಟಾಗಿರ್ಪನೇ | ಕಂದಾ | ಕಂದಾ | ಕಂದಾ |

**|| ಅಟ್ಟತಾಳ | ರಕ್ತಬೀಜಾಸುರನ ಕಥೆ | ನಿಕಾಶದೇವಿ ||**

ತರವೇನೋ ತರಳಾನೆ | ದುರುಳಾರ ತೆರದೋಳು ಈ ಪರಿಯೋಚನೆಯು ರೂಢಿಯೊಳಗೆ ನೀನೂ | ನಾಡಾಪಾಲಿಪಹರಿಯ | ಕೂಡೆವೈರವು ಬೇಡವೋ | ಕಂದಾ ॥ ಮಗನೇ ॥

ಕಂಡಕನಸಿನೊಳು ಕೆಂಡಸಂಪಿಗೆ ಹೂವ | ಮಂಡೇಯೋಳ್ ಮುಡಿದುದನ್ನೂ ಗಂಡಗುದುರೆಯನೇರಿ ದಂಢಧರನಾಲಯಕೇ | ಪೋದಂತಕನಸಾನಕಂಡೇ ಮಗನೇ॥ ಮಗನೇ ॥ ಕೂಚು || ಬಿಡತಿ |

**|| ಅಟ್ಟತಾಳ | ಸತ್ಯಚಿತ್ರಕೇತು ಕಥೆ || ಸುಮತಿಗೆ ಸಖಿ ||**

ಸಾರಸಾಕ್ಷಿಯೆ ಕೇಳೂ | ಸರಿಸವತಿಯರೊಳು ಪ್ರೀತಿಗೆ ದೂರಾದೆಯಾ | ದೊರೆಸಾನೀಪ್ರೀತಿಗೆ ದೂರಾದೆಯಾ | ತರಳೆ ಇಷ್ಟವನೆಡೆಸಿ | ಸರಸಿಜಾಕ್ಷನವಲಿಸಿ ಪರಮಾನ್ನವನ್ನು ಪಡೆದು | ಚಾರುಮತಿಗಿತ್ತ ಪ್ರಿಯಾ | ಸಾರಸಾಕ್ಷಿಯೆಕೇಳೂ | ಸರಿಸವತಿಯರೊಳೂ ಪ್ರೀತಿಗೆ ದೂರಾದೆಯಾ |

**|| ಶನಿಮಾಹತ್ಯೆ || ಭಾಮಿನಿ || ಶನಿ ದೃಷ್ಟಿಯಲಿ ||**

ವಿಕ್ರಮನ ಮುರದ ಸುತೇ | ತೌರುಮನೆಗೆ ತಾಮಲಿಯಪುರಕೆ ಬರುವ ದಾರಿಯಲೀ ಗೋಳಿಡುತಿಹವಿಕ್ರಮನ ಕಂಡೂ | ಬಹು ದುಃಖದಲಿ | ದೊರೆಯೇ ಕಡಿದರಾರು | ಕೈಕಾಲುಗಳ ರಾಜನೇ | ನೋಡಲಾರೆನು | ಎಂದೆನುತ ಗೋಳಿಡುತ ತನ್ನ ಗಾಡಿಯಲಿ | ಕರೆತಂದಳು | ತನ್ನಯ ಮನೆಗೇ ವಿಕ್ರಮನಾ

**|| ಅಟ್ಟತಾಳ || ಶನಿಮಹಾತ್ಮ | ವಿಕ್ರಮ ||**

ಯಾರಿವಳೂ ತರುಣಿಯು ಯನ್ನ ಮಗ್ಗುಲೊಳು ಮಲಗಿರುವ | ಪರಿಯೇನು ಶಿವನೇ | ಶನಿನಿನ್ನಾಮಾಯಾವುಯನಗೇ | ದೇವಾ ದೇವಾ ದೇವಾ |

**|| ಅಟ್ಟತಾಳ || ಶನಿಮಹಾತ್ಮ | ವಿಕ್ರಮರಾಜ || ಗಾಣಿಗಶೆಟ್ಟಿ ಮಗಳು ಲಕ್ಷ್ಮೀದೇವಿ ||**

ಯಾರಾದರೇನಮ್ಮಾ | ಕಡುಪಾಪಿನಾನಮ್ಮಾ | ನೀನ್ಯಾರು ಪೇಳಿನ್ನೂ ತಾಯೇ। ತಾಯೇ ತಾಯೇ || ಕರುಣದಿಂದಲಿಯನ್ನಾ | ರೋಧನವಾ ಮಾಡುತ್ತಾ | ಕರೆವೆ ನಿನ್ನಯ ಮನೆಗೆ | ತಾಯೇ ತಾಯೇ ತಾಯೇ ||



**|| ಅಟ್ಟತಾಳ ||**

ಪುರದೊಳಗೆ ಪ್ರಜೆಪರಿವಾರವೂ ಸಕಲರೂ | ಪುರಹರನ ಕರುಣಾದಿ | ಘನತರದಿ ಇಹರೇ ತಾಯೇ ತಾಯೇ ತಾಯೇ | ಈ ಪರಿಕಷ್ಟಗಳ | ಪಡಲೇಕೆ ತಾಯೆ || ಹರನಾ ಪಾದವಾ ಸೇರಿ ಕೊಳ್ಳುವೆನೂ | ತಾಯೇ ತಾಯೇ ತಾಯೇ |

**|| ಅಟ್ಟತಾಳ || ವಿಕ್ರಮರಾಜನಿಗೆ || ಲಕ್ಷ್ಮಿದೇವಿ ||**

ಇಂತೇಕೆ ಕಷ್ಟವು ಬಂದೀತು ನಿಮಗೇ । ಈ ರೀತಿ ಕೈಕಾಲುಗಳ | ಕಡಿದವರಾರೂ ದೊರೆಯೇ || ಕರುಣೆ ತೋರದೆ ಶಿವನ | ಇಂಥಾ ಕಷ್ಟಕೆ ನಿಮ್ಮಾ ಗುರಿ ಮಾಡಿದನೇ ಹರನೇ ಶಿವನೇ ಶಿವನೇ ||

**|| ಅಟ್ಟತಾಳ | ಶನಿಮಹಾತ್ಮ | ಪದ್ಮಾವತಿ - ಸಖಿಯಲ್ಲಿ||**

ಪೋಗೀನೀವಕರೆತನ್ನಿ | ರಾಗಾ ಹಾಡಿದ ಪ್ರಿಯನ | ಬೇಗಾದೊಳು ಕರೆದು ತನ್ನಿ | ಕೇಳಮ್ಮಾ ಸಖಿಯೇ ಬೇಗಾದೊಳ್ ಕರೆದು ತನ್ನೀ || ರಾಗಹಾಡಿದ ಪ್ರಿಯನಾ | ನೋಡಾದೆ ಸಹಿಸದು | ರಾಜಪುತ್ರಿಯು ನಿಮ್ಮಾ | ಕರೆದಿಹಳು ಎಂದೆನುತ ಬೇಗಾದಿಂಕರೆದೂತ |

**|| ಅಟ್ಟತಾಳ ||**

ಏನಿದೂ ದೊರೆಪತ್ರಿ | ಸರಿರಾತ್ರಿ ವೇಳೆಯೊಳು | ಈ ನಡತೆ ನಿಮಗೆ ಸರಿಯೇ | ಕೇಳಮ್ಮಾ ತಾಯೇ ಈ ನಡತೆ ನಿಮಗೆ ಸರಿಯೇ | ಬೇಡಾ ಬೇಡಾ ಬೇಡಿ ಕೊಂಬೆ ತರವಲ್ಲಾ ತಾಯೇ |

**|| ಅಟ್ಟತಾಳ ||**

ರಾಜಮಾತೆಯೇ ಕೇಳೂ | ರಾಗ ಹಾಡಿದ ಮನುಜರಿವರು || ನಂದಯ್ಯ ಶೆಟ್ಟಿಯ | ಸರವಕದ್ದವರೂ | ಕೈಕಾಲುಗಳಿಲ್ಲಾ | ತಿನ್ನಲು ಕೂಳಿಲ್ಲಾ || ಗಾಣಾವ ನಡೆಸುತ್ತ | ಜೀವಿಸುತ್ತಲಿಹನೂ || ಮಾತೆಯೇ ಬೇಡಾ ಬೇಡಾ ||

**|| ಅಟ್ಟತಾಳ || ಪದ್ಮಾವತಿ | ವಿಕ್ರಮನಲ್ಲಿ ||**

ಮುದದಿನಾನೊಪ್ಪೆನು ! ನಿಜದಸ್ಥಿತಿಯನ್ನು ಪೇಳೀ ಮಧನಭಾಧೆಯುಯನ್ನ | ಭಾಧೆಪಡಿಸುತ್ತಲಿಹುದೂ | ಕೇಳೆನ್ನಾ ಪ್ರಿಯಾ | ಮಧನಬಾಧೆಯು | ಯನ್ನ ಸೂರೆಗೊಂಬುವುದೂ |

**|| ಅಟ್ಟತಾಳ ||**

ವಿವರ ಪೇಳುವೆ ಜನಕ | ಕರೆದೋಯ್ದು | ಇವರನ್ನೂ ವರ್ತಕರ ಮನೆಯೊಳಗೇ॥ ಸರದವಿವರವ ಕೇಳೀ || ವರ್ತಕನ ಮನೆಯೊಳಗೇ ॥ ಜನಕಾ ಜನಕಾ ಜನಕಾ |



---

**|| ಅಟ್ಟತಾಳ ||**

ತಂದೇ ಈ ಮಹಾತ್ಮರು | ದಾರೆಂದು ನೀವ್ ತಿಳಿದು | ಇಂದೆನ್ನಾ ನೀವರ। ಪರಿಣಯವ ನಡೆಸೋ ॥ ತಂದೆಮನವಪ್ಪಿಹುದು ! ಇಂದೇ ಈ ಪ್ರಿಯರು | ಯನ್ನರಮಣಾರು ತಂದೇ ತಂದೇ ತಂದೇ

**|| ಅಟ್ಟತಾಳ || ಶನಿಮಹಾತ್ಮ | ಪದ್ಮಾವತಿ ಚಂದ್ರಸೇನ ರಾಜನಿಗೆ ||**

ತಂದೆ ಭಯ ಪಡಬೇಡ | ಇಂದು ಪುತ್ರಿಯ ಇವಗೆ | ಅಂದ ಚಂದಿದಿ ಇತ್ತು|| ಪರಿಣಯವ ನಡೆಸೋ || ತಂದೇ ತಂದೇ ತಂದೇ ॥

**|| ಅಟ್ಟತಾಳ || ಆದಿಶಕ್ತಿಗೆ | ಹರಿಬ್ರಹ್ಮದೇವೇಂದ್ರ ||**

ಅಮರಲೋಕದ ವಾರ್ತೆ ತಾಯೆ ನೀವೆಲಾಲಿಸಿ ತರಳರವಾಖ್ಯಾವನೂ | ಕೇಳು ತಾಯೇ ತರಳರ ವಾಖ್ಯಾವನೂ || ಮಾಯೇಯಂದದಿತೋರ್ಪಾ | ದುಷ್ಠಾನಿಗ್ರಹದೊಳ್ | ದೇವಿಕಾಯ್ದುದೂ ನಮ್ಮನೂ || ತಾಯೇ ತಾಯೇ ತಾಯೇ॥ ಮಾತೆಯೇ ॥

**|| ಅಟ್ಟತಾಳ || ಶಶಿರೇಖಾ ಪರಿಣಯ || ಕನಕಾಂಗಿ - ಕಲ್ಯಾಣ | ಕನಕಾಂಗಿ ಸಖಿಯಲ್ಲಿ ||**

ಮುದದಿಲಾಲಿಸಿ ಕೇಳ | ಮೊದಲು ಯಮ್ಮಯ ತಂದೆ || ಮಾಧವನೆದುರಿನೋಳು || ಸೋದರಳಿಯಗೆಂದೂ || ಅಂದ ಚಂದದಿ ನುಡಿದು | ಆಡಿದ ವಚನವನೂ ತಪ್ಪಿ ನಡೆಯುತ ಈಗ 1 ಕೌರವನ ಸುತನೇ || ಸುತಗೇ ಸುತಗೇ॥

**|| ಅಟ್ಟತಾಳ || ಕುರುಕ್ಷೇತ್ರ || ಗಾಂಧಾರಿ ಕೌರವನಿಗೆ ||**

ತಾಯಾ ಮಾತನೂ ಮೀರಿ | ತವಕದಿಂ ಪೋದಾರೆ | ತನಗಪವಾಧಾ ಕಂದಾ ಧರೆಯೊಳಗಧರಿತ | ಬಲವಂತನಾಗಿರು || ಕೇಡು ಬರುವುದು ಕಂದನೇ || ಕೇಳೆನ್ನ ಮಗನೇ ಕೇಡು ಬರುವುದು ಮಗನೇ || ಮಗನೇ ಮಗನೇ ॥

**|| ಅಟ್ಟತಾಳ || ಕುಕ್ಷೇತ್ರ || ಕುಂತೀದೇವಿ ಮಗ ಕರ್ಣನಿಗೆ||**

ಮಗನೇ ಲಾಲಿಸು ನೀನೂ ಮನೆಗೆ ಬಾರೈ ಈಗ 1 ಮುದದಿಂದ ಮನೆಯೊಳು ಸುಖದಿಂದ ಬಾಳು ಕಂದಾ || ಅನುಜಾದಿ ಐವರೊಡನೆ | ಅನುವಿಂ ನೀವೆಲ್ಲಾ । ತನುವಾಗಿ ರಾಜ್ಯವನು | ಛಲದಿಂದ ಬಾಳಿರೀ || ಕಂದಾ ಮಗನೇ ||

**|| ಭಾಮಿನಿ | ಕರ್ಣ ತಾಯಿ ಕುಂತಿಗೆ ||**

ಮಾತೇ ಲಾಲಿಸು ಮುಂದೇ | ಈ ರಣದೊಳ್ | ಪಾರ್ಥಾನಿಂದಾ ನಾಮಡಿಯಲೀ ॥ ಈ ಕರ್ಣನಿಂದಾ ಪಾರ್ಥಾನೇ ಮಡಿಯಲೀ || ನಿನಗೈವರು |



ಪುತ್ರರುಳಿಯುವರೂ | ಮಾತೇ ಹಡೆದಮ್ಮ ಚಿಂತೆಯನು ಬಿಡು ಬಿಡೂ ಜನನೀ ಜನನೀ ॥

**|| ಭಾಮಿನಿ || ಕುರುಕ್ಷೇತ್ರ || ಅರ್ಜುನನಿಗೆ ಶ್ರೀಹರಿವಿಶ್ವರೂಪವು ||**

ಇನಿತೀ ಪರಿಯೊಳೂ | ಪಾರ್ಥನ್ | ತನ್ನ ಕೋರಿಕೆಯನು ಪೇಳಲು | ಶ್ರೀಹರಿಯು | ವಿಶ್ವರೂಪನು ತೋರಲು | ನೋಡುತಲಿಪಾರ್ಥ ಭಯಭೀತನಾಗೀ ॥ ರಕ್ಷಿಸೆ ರಕ್ಷಿಸೆ ರಕ್ಷಿಸೈ ಎಂದೆನುತ ಬೇಡಿದನೂ | ಅಂಬಲಿಸುತಾ || ಶ್ರೀ ಹರಿಯ

**|| ಅಟ್ಟತಾಳ || ಕುಕ್ಷೇತ್ರ || ಸುಭದ್ರೆ – ಅಭಿಮನ್ಯುವಿಗೆ ||**

ಮಗನೇ ಲಾಲಿಸು ನೀನೂ । ಸುಗುಣ ಅಭಿಮನ್ಯುವೇ | ಮಮತೆಯಿಂದಲಿ ಪೇಳುವೇ || ಕೇಳೊ ಮಗನೇ ಮಮತೆಯಿಂದಲಿ ಹೇಳುವೇ || ಈಗ ರಣಕೆ ಕಳುಹಲು ನಿನ್ನಾ | ಕಳವಾಳ ಪಡುತಿಹೆನೂ ಮೀರಿಯನ್ನಯ ಮಾತ | ಹೋಗಲಾಗದು ಕಂದಾ ಕಂದಾ | ಕಂದಾ |

**|| ಅಟ್ಟತಾಳ ||**

ಬೇಡಾ ಬೇಡವೋ ಬಾಲಾ | ಚಿಕ್ಕಬಾಲಕನು ನೀನು | ರಣಕೆ ಸಾಹಸಿಯಲ್ಲಾ ಮಗನೇ ಕಂದಾ ಕಂದಾ ಕಡುಕಷ್ಟರಣವಿನ್ನು | ಬಹುಕ್ರೋಧಿಗಳವರಿನ್ನೂ ಬೇಡಾ ಬೇಡ ಹೋಗಬೇಡಾ || ಮಗನೇ ಮಗನೇ ||

**|| ಅಟ್ಟತಾಳ || ಉತ್ತರೆ ಗಂಡ ಅಭಿಮನ್ಯುವಿಗೆ ||**

ರಮಣನೀ ಲಾಲಿಸೋರಣವಮಾಡಲು ನೀವೂ ! ಅಣಿಯಾಗಿ ಹೊರಟಿಹಿರಿ॥ ಹರಿಗಳಗೆಲ್ಲಲೂ ಈ ಜೊತೆ ಗೂಡಿ ನಾಬರುವೆ | ಹಿತವ ಕಾಪಾಡಲೂ || ಕರೆದೊಯ್ಯೋ ಪ್ರಾಣಾಕಾಂತಾ | ಕಾಂತಾ | ಕಾಂತಾ ॥

**|| ಭಾಮಿನಿ || ಕೃಷ್ಣ – ಪಾರ್ಥನಿಗೆ||**

ಪಾರ್ಥ ನೀಸತ್ತವರಿಗಳಲೇಕೆ ಹೆತ್ತವರು ಹೊತ್ತವರು | ಸತ್ತು ಹೋಗುವರಲ್ಲದೆ ಇರುವರೆ | ಸತ್ತ ಮಗತಾನಿತ್ತ ಬರುವನೇ | ಮೃತ್ಯು ಬೆನ್ನಿನೊಳಿರಲು | ತಾವಿನ್ನತ್ತು ಮಾಡುವುದೇನು | ಎಂದೆನುತ ಸಂತೈಸಿದನು | ಮುರಹರನೂ

**|| ಅಟ್ಟತಾಳ || ದ್ರೋಣರು ಮಡಿದರೆಂದು ಕೌರವ ||**

ಗುರುವು ದ್ರೋಣರು ರಣದೀ ಮಡಿದ ಮ್ಯಾಲಿನ್ನಾರು | ವೀರರಾರುಯನಗಿನ್ನೂ ಯನ್ನಮಾರ್ಭಲದೀ || ದೇವಾ ದೇವಾ ಶ್ರೀಹರಿಯೇ ॥



**|| ಅಟ್ಟತಾಳ | ಕೌರವ ಶಲ್ಯನಿಗೆ||**

ಮಾವಾ ನಿಮ್ಮೊಳು ಒಂದು ಕಾರ್ಯ ಭಾವಿಸಿ ಬಂದೆ || ನಡೆಸಿ ಕೊಡುವೆನು ಎಂದು | ಭಾಷೆಯನಿತ್ತಾರೆ ಪೇಳೂವೆ ಭಾವಾ ಭಾವಾ ಭಾವಾ |

**|| ವಿಜಯನಗರಿರಾಗ || ನಾಟಕದಲ್ಲಿ | ರೂಪಕತಾಳ ||**

ವಿಜಯಾಂಬಿಕೆ ವಿಮಲಾಂಬಿಕೇ | ವಿಜಯಾಂಬಿಕೆ ವಿಮಲಾಂಬಿಕೇ | ಅಜಾವಂದಿತೆ ಅಮರೇಂದ್ರನುತೇ | ನಿಜಕಲ್ಪಗೀತೆ | ನಿಜಸ್ತುತಿತಯ ಮಾತೇ ॥ ವಿಜಯಾಂಬಿಕೇ ॥ ಸಂಗೀತಾ ರೂಪಿಣಿ ||

**|| ಭಾಮಿನಿ ||**

**|| ರಕ್ತಬೀಜಾಸುರನ ಕಥೆ || ಪುಷ್ಪಮಾಲಿನಿ ||**

ಕೇಳುತಾ ಕ್ಷಣ ನುಡಿಯ ಯುವತಿಯು ಧಾತ್ರಿಯೊಳರಗೀ | ಚೇತರಿಸುತ್ತಾ| ಹರಹರಾಕಾಲ ಸೂಚನೆಯೂ | ಕವಲುಕಡಿದುದು | ಬುಡವು ಜಾರಲು | ಪೊಡವಿಪಗೆ ಮುಂದೇನು ಗತಿಯೆನುತ | ಧರೆಗೆ ಬಿದ್ದೊರಳಿದಳು ಪುಷ್ಪಮಾಲಿನಿಯೂ

**|| ಭಾಮಿನಿ | ದಕ್ಷಯಜ್ಞ ಯಜ್ಞಕುಂಡದಲ್ಲಿ ದಾಕ್ಷಾಯಿಣಿ ||**

ಪತಿಯೇ ನಿನ್ನ ಮಾತ ಮೀರಿ ಬಂದೆನೂ || ಪಿತನು ಸೇರದೆ ಹೋದಾ | ಶಿವಾ ಪ್ರಥಮ ನಿನ್ನ ಯಜ್ಞದ ಹವಿರ್ಭಾಗವನು ತಾನೇ ತಿಂದು | ಗತಿಗೆಡಿಸಿದಯನ್ನ ಬಾಳನೂ | ತಿರುಗೆಂತು ಬಂದು ತೋರಲಿ ಶಂಕರಾ ನಿನಗೆ ಮುಖವಾ | ಹತಳಾಗುವುದೆ ಲೇಸು ಪಿತಮಾಳ್ವ ಯಜ್ಞಕುಂಡಕೆ ಅರ್ಪಿಸುವೆ | ಯನ್ನಪ್ರಾಣವ | ಯನ್ನ ತಪ್ಪನು ಮನ್ನಿಸು ಮನ್ನಿಸು | ಶಂಕರಾ ಶಂಕರಾ ದೇವಾ ॥

**|| ರೂಪಕತಾಳ ||**

ಪತಿಯೆ ನಿನ್ನ ಮಾತ ಮೀರಿ ಬಂದೆನೂ || ಪಿತನು ಸೇರಿದೋದನೂ | ಶಿವನೇ | ಶಿವನೇ | ಶಿವನೇ | ಶಂಕರನೇ || ಶಿವನೆ ನಿನಗರ್ಪಿತ ಪ್ರಥಮ ಭಾಗವ ತಾನೇ ತಿಂದನೂ || ಎಂತು ತಿರುಗಿ ಬಂದು ನಿನಗೆ || ಮುಖವ ಹೇಗೆ ತೋರಲಿ | ಹತಳಾಗುವುದೆಲೇಸು | ಪಿತನು ಮಾಳ್ವಾ ಯಜ್ಞಕುಂಡಕೇ | ಅರ್ಪಿಸುವೆನು ಯನ್ನ ಪ್ರಾಣವಾ ಯನ್ನಾ ತಪ್ಪ ಮನ್ನಿಸಿನ್ನೂ || ಶಕರಾ ಶಂಕರಾ ಶಂಕರಾ | ರಕ್ಷಿಸು ರಕ್ಷಿಸು ರಕ್ಷಿಸು | ರಕ್ಷಿಸೂ ದೇವಾ |

**ರೂಪಕತಾಳ || ಕರಿಭಂಟನ ಕಥೆ || ಪುಂಡರೀಕಾಕ್ಷಿ ವನದ ದೇವಿಗೆ ||**

ವನದ ದೇವತೆ | ಕರುಣಿಸೆನಗೆ | ತಕ್ಕವರನ ಮಾತೆಯೇ | ಮಾತೆಯೇ | ಮಾತೆಯೇ | ತಾಯೇ ॥ ಯನ್ನ ಮಾತೆಯು ದುರುಳ ರಕ್ಕಸಗೆನ್ನ ಮದುವೆ ಮಾಳ್ವಳೂ



ನಿನ್ನ ಪಾದವ ನಂಬಿ ಬಂದಿಹೆ | ಯನ್ನ ನೀನು ರಕ್ಷಿಸೂ | ತಾಯೇ ಜನನೀ ಮಾತೆಯೇ ಮಾತೆಯೇ ॥

**|| ರೂಪಕತಾಳ || ಅಂದಕಾಸುರನ ಕಥೆ || ಅಂದಕಾಸುರ ॥**

ಅಸುರಧಾನವರೆಲ್ಲಾ | ಅಸದಳದ ಸಾಹಸರೂ ಅಸದಳದ ಶಿವನೋಳ್ | ಅಸುವ ನೀಗಿದರೆಲ್ಲಾ || ಅಸುರಧಾನವರೆಲ್ಲಾ | ಅಸದಳದ ಸಾಹಸರೂ | ಎಂತು ಸಹಿಸಲಿ ನಾನು | ವಡಲ ಉರಿತಾಪವನೂ ಕಂತುಮರ್ಧನಶಿವನೆ | ನೀರಕ್ಷಿಸೆನ್ನನು ದೇವಾ | ದೇವಾ | ದೇವಾ | ಮಹಾದೇವಾ ॥

**|| ಭಾಮಿನಿ | ಸೀತಾಪರಿತ್ಯಾಗ | ಲಕ್ಷ್ಮಣನ ॥**

ನುಡಿಯ ಕೇಳುತ ಭೂಸುತೆಯ | ಘಡಘಡನೆ ನಡುಗುತ್ತ | ಸಿಡಿಲೊಡೆದ ತೆರನಂತೆ || ಧರಣಿಗೊರಗಲು | ಲಕ್ಷ್ಮಣನು ತಿರುಗುತಾ ನೋಡಿ | ಹಾ ರಾಮಾ ರಾಮಾ ಎಂದೂ | ಸಂತೈಸಿದನು | ಭೂಜಾತೆಯು ಕಣಿತೆರೆದು ನೋಡಿ ಇಂತೆಂದಳಾಕ್ಷಣದೀ ||

**|| ರೂಪಕತಾಳ + ಆದಿತಾಳ || ಸೀತಾಪರಿತ್ಯಾಗ || ಲಕ್ಷ್ಮಣನ ಪದ ||**

ಹೇಗೆ ಬಿಟ್ಟು ಹೋಗಲಿನ್ನೂ | ಭೂಮಿಜಾತೆಯಾ | ನಾಗವೇಣೀ ಬಾಲೆಳನೂ ಈಗುಣಾಢ್ಯಳಾ || ಅಡವಿಯೊಳಗೆ ಅಳುತ ಬಾಯ್ ಬಾಯ್ ! ಬಿಡುತಲಿರುವಾರೂ ಮೃಢನೆ ಕಾಯೋ | ಕರುಣದಿಂದ | ಜಾನಕೀಯಳ | ಹೇಗೆ ಬಿಟ್ಟು ಹೋಗಲಿನ್ನೂ ಭೂಮಿಜಾತೆಯಾ | ನಾಗವೇಣಿ ಬಾಲೇಯಳನೂ | ಈ ಗುಣಾಢ್ಯಳಾ ||

**|| ಭಾಮಿನಿ || ಸತ್ಯಚಿತ್ರಕೇತು ಕಥೆ ||**

ನುಡಿಯ ಕೇಳುತರಾಯ ಶಿವಶಿವಾ ಶ್ರೀಹರಿ ಎಂದೆನುತಮೂರ್ಚಿಸಿ | ಕಲ್ಲದ ಕಡಲೊಡೆದ ತೆರನಂತೇ | ದೇವಾ ಮುಂದೇನು ಗತಿ ಎನುತಾ | ಧರೆಗೆ ಬಿದ್ದೊರಳಿದನೂ

**| ರೂಪಕತಾಳ || ಚಿತ್ರಕೇತು ||**

ಏನು ಮೋಸವಾಯಿತೀಗ ಕೆಟ್ಟೆನಕಟಕೆಟ್ಟೆನೂ ಹಾನಿಯಾಯ್ತು ರಾಜ್ಯಸುತಗೇ। ಧಾನವಾಂತಕಾ | ಏನು ಮೋಸವಾಯಿತೀಗಾ | ಕೆಟ್ಟಿನ ಕಟಕೆಟ್ಟೆನೂ | ಮಾನುನಿಯ ವನಕೆ ಕಳುಹಿ | ನಾನೇಗೆ ಬಾಳಲೀ ||

**|| ಭಾಮಿನಿ || ಮಾರ್ಕಾಂಡೇಯ ||**

ಶಿವನೇ ಇನ್ನಾದರು ನೀಯನಗೆ | ನಿನ್ನ ದರುಶನ ವಿತ್ತ | ಈಯಮಾಪಾಶದಿಂದೆಳೆವ | ಯನ್ನನು ರಕ್ಷಿಸುತ | ಯನ್ನಮಾತಾ ಪಿತೃಗಳಿಗೆ



ಸಂತಾನವರವಿತ್ತಂತೆ ! ಈ ಕಡುಪಾಪಿಗೆ ಮೃತ್ಯುವನು ತೊಲಗಿಸಿ | ಯನ್ನತಂದೆತಾಯಿಗಳು ಪ್ರಾಣವ | ರಕ್ಷಿಸೂ ರಕ್ಷಿಸು ಅಮೃತಕಂಠೇಶಾ ||

**|| ಕರ್ಣ ಸಮರದಿ ಮಡಿದಾಗ ||**

ಶಿವಶಿವಾ ದೈವವೇಹಗೆಯ ಸೇರಿದನಾದ ಕಾರಣ | ರಣದಿಕ್ಕೆ ಕುಂದಿದೆನೂ ಮರಣ ನಿಶ್ಚಯ ನಿಶ್ಚಯವೆನುತಾ | ಪದುಮನಾಭನಾದ್ಯಾನಿಸಿದನಾ | ಕಲಿಕರ್ಣ

ಹರನ ಪಾದವ ಸೇರಿದನು |

**॥ ಆದಿತಾಳ || ಶಶಿರೇಖಾ ಪರಿಣಯ ||**

**॥ ಕನಕಾಂಗಿ ಕಲ್ಯಾಣ ಅಭಿಮನ್ಯುವು | ಘಟೋಜನಿಂದ ಮಡಿದಾಗ ಸುಭದ್ರೆ ॥**

ಅಯ್ಯೋ ಕುವರ | ಅಯ್ಯೋ ಕೂಸೇ | ಧರೆಗೇ ಮಯ್ಯಾ | ಚಾಚಿದೆಯಾ | ಪ್ರಿಯರು ಬಂದು ಮಗನೆಲ್ಲಿ ಎಂದು | ಕೇಳಿದಾಗ ಏನ ಹೇಳಲಿ | ನಾ ಹೇಗೆ ಬಾಳಲೀ ಶಂಕರಾ || ಶಂಕರಾ | ಶಂಕರಾ ॥

**|| ಅಟ್ಟತಾಳ || ಚಿತ್ರಕೇತು ಕಥೆ || ಚಾರುಮತಿ ॥**

ಎಂತಾ ಅಪ್ಪಣೆ ಮಾಡಿದೆ | ಪ್ರಾಣೇಶನೇ ಎಂಥಾ ಅಪ್ಪಣೆ ಮಾಡಿದೆ | ಸುಮತಿ ಪಂಥಾವನಡೆಸಿದಳೇ | ರಮಣಾ | ಅಂದು ಹವಿಯನ್ನು ಕೊಡಲು | ಬೇಡಾವೆಂದೇಳಿದೇ ನನ್ನ ಮಾತನು ಕೇಳದೆ | ಚಿಂತೆಗೀಡಾಯುತ್ |ಪ್ರಾಣೇಶಾ, ಪ್ರಾಣೇಶಾ |

**॥ ಭೂಪಳಿರಾಗ ||**

**|| ತ್ರಿಪುಟತಾಳ || ಅಂದಕಾಸುರನ ಕಥೆ || ಶಿವನಿಂದ ॥**

ರುದ್ರರೋಷ ತ್ರಿಶೂಲದಿಂದಲಿ | ಚಿದಗೈಯ್ಯುಲು | ದುರುಳನೆದೆಯನು | ಶುದ್ಧಭಾವದಿ ಬಂದು ಕೊರೆಯಿತು | ಖಳನ ವಧೆಗಾಗಾ

**|| ತ್ರಿಪುಟತಾಳ | ರತೀ ಕಲ್ಯಾಣ | ಹನುಮಂತನಿಗೆ || ದುರ್ಗಿ ದ್ರೌಪದಿಗೆ ||**

**ಕೌಂಡಲೀಕ ||**

ಏನನುಡಿದೆಯೋ ಎಲವೋ ಮಂಗನೆ | ಕರಕರನೆ ಹಲ್ಲನ್ನು ಕಡಿಯುತ | ನಿನ್ನ ನೀ ಕ್ಷಣ ಹಿಡಿದು ತಕ್ಷಣ ಹೃದಿರಭಗೆಯುವೆನೂ |

**|| ತ್ರಿಪುಟ ತಾಳ || ಕುರುಕ್ಷೇತ್ರದಲ್ಲಿ | ಕೌರವ ಭೀಮನಿಗೆ||**

ಅಬ್ಬರಿಸಿ ಆ ಕ್ಷಣದಿ ಕೌರವ || ಅಡಿಗಡಿಗೆ ಘರ್ಜಿಸುತ ಭೀಮನ | ಬಿಡದೆ ಹೊಡೆದನು | ಕೌರವೇಂದ್ರನು | ಬಾಹುಬಲದಿಂದಾ ||

**|| ತ್ರಿಪುಟತಾಳ || ಭೀಮ ಕೌರವನಿಗೆ ||**

ಘುಡಿ ಘುಡಿಸಿ ಆರ್ಭಟಿಸಿ ಕ್ರೋಧದಿ || ವೀರ ವಿಕ್ರಮ ಮಾರುತಾತ್ಮಜ | ತೊಡೆಯ ಮುರಿದಪ್ಪಳಿಸಿದನು | ಕೇಡು ಕೌರವ ಧರೆಗೆವರಗಿದನೂ

**|| ತ್ರಿಪುಟತಾಳ | ರಕ್ತಬೀಜಾಸುರನ ಕಥೆ || ದೇವಿ ಸಮರಕ್ಕೆ ||**

ಕೆದರು ಮಂಡೆಯ | ಗಧೆಯ ಪಾಶದ | ವದರು ಮೀಸೆಯ | ಮಧನ ರೋಷದಿ | ಬಿಗಿದುಕಾಸೆಯ ಘೋರವಿಗ್ರದಂತೆ ಬರುತಿರ್ದಾ |

**|| ತ್ರಿಪುಟತಾಳ || ರಕ್ತಬೀಜಾಸುರನ ಕಥೆ ||**

ಏನ ಹೇಳಲಿ ದೈತ್ಯನಾಕ್ಷಣ | ತ್ರಾಣಗುಂದುತ | ರಕ್ತಬೀಜನು | ಆನನವತೆರದಾದಿಶಕ್ತಿಯ ನುಂಗಲೈತಂದಾ

**|| ತ್ರಿಪುಟತಾಳ || ಆದಿಶಕ್ತಿ || ರಕ್ತಬೀಜಾಸುರನ ಸಂಹಾರಕ್ಕೆ ||**

ಧರಣಿ ನವಖಾಂಡಕ್ಕೆ ಜಿ.ಯ ಚಾಚಿ ಶೂಲದಿ ಹಿರಿದು ದೈತ್ಯನ | ಶಿರವ ಹರಿದಳು ದುರ್ಗಿರೂಪದಿ | ತ್ರಿಪುರ ಸುಂದರಿಯೂ

**|| ತ್ರಿಪುಟತಾಳ ||**

ಘುಡಿಘುಡಿಸಿ | ಆರ್ಭಟಿಸಿ ಶಂಕರ | ಅಡಿಗಡಿಗೆ ಕಡಿಯುತ ಲಿಪಲ್ಗಳ 1 ಶಿಡಿದುರೋಷದಿ | ಹಿಡಿದು ದೈತ್ಯನ | ಧರೆಗೆ ಅಪ್ಪಳಿಸೇ ||

**|| ತ್ರಿಪುಟತಾಳ ||**

ಘುಡಿಘುಡಿಸಿ ಆರ್ಭಟಿಸಿತಾರಕ || ಫಡಫಡನೆ ನಡುಗಿಸಿದ ಧರಣಿಯ | ಅಗಡಗೆಡಿಸುವೆ | ಶಿವನೆ ನಿನ್ನ | ಕಡಿದು ಬಿಡುವೇ ||

**|| ತ್ರಿಪುಟತಾಳ ||**

ಹರನಶೂಲಕ್ಕೆ | ಅಸುರನಡುಗುತೆ | ಧರಣಿಯೊಳು ಬಿದ್ದೊರಗಲಾಕ್ಷಣ | ಸುರರು ಸುಮನಸರೆಲ್ಲ ಹರುಷದಿ || ಶಿವನಕೊಂಡಾಡೇ ||

**|| ತ್ರಿಪುಟತಾಳ || ಕರೀಭಂಟನ ಕಥೆ | ಉದ್ದಂಡೆ ಪ್ರವೇಶಕ್ಕೆ||**

ಘೋರಧಾನ್ನ ವಿಬರುತಲಿರ್ದಳ್ | ಘೋರನಾಧವ ಮಾಡುತ | ಭಾರಿಹೆಣಗಳಕಡಿದು ತಿನ್ನುತ ಗಡಿಗೆ ಹೆಂಡವ ಕುಡಿಯುತ | ಹಲ್ಲನೂ ಖರಖರನೆ ಕಡಿಯುತ | ತಮ್ಮ ಬೊಮ್ಮನ ಸಹಿತಲೀ | ಘೋರಧಾನ್ನ ವಿಬರುತಲಿರ್ದಳು ಘೋರನಾದವಮಾಡುತ |

**|| ಭಾಮಿನಿ || ದೇವೀ ಮಹಾತ್ಮ||**

ಹರಿಅಜಸುರೇಂದ್ರರು | ಬರುವುದಂ ಕಂಡು | ಭರದಿ ಈಶಪೇಳಿದನಾಗ | ಸುರಪತಿ ಅಜಸುರೇಂದ್ರರು | ವನಕೆ ನಡೆತಂದು | ಪರಮಶಕ್ತಿ ಪರಮಪಾರ್ವತಿ ಜಗದೀಶ್ವರಿ | ರಕ್ಷಿಸು ರಕ್ಷಿಸೂ ತಾಳಲಾರೆವು ಅಸುರರ ಭಾಧೆಯನ್ನು ಮಾತೆ | ಮಾತೇ ಎಂದೆನುತ ಗೋಳಾಡಿದರೂ |

**|| ಸಾವೇರಿ ರಾಗ||**

**|| ಆದಿತಾಳ || ಕುಶಲವರ ಕಥೆ || ರಜಕನಿಗೆ ಅವನಮಾವ ||**

ಏನೆ ಅಳಿಯಾನೇ | ಹಿಂಗ್ಯಾಕಾಡ್ತಿರೋ | ಪದೆಪದೆ ಜಗಳಹಾಡ್ಕೊಂಡ್ ಹೆಂಡ್ರ ಬಿಡ್ತೀರಾ | ಮಕ್ಲು ಆಗಿಲ್ಲಾ ಮನೆ ಬೆಳಗಿಲ್ಲಾ | ಸಣ್ಣತನವಬಿಟ್ಟು ನೀವು / ಚೆನ್ನಾಗೋಗಿರೋ ಏನ್ ಅಳಿಯಾನೆ ಹಿಂಗ್ಯಾಕಾಡ್ತೀರೋ | ಪದೆಪದೆ ಜಗಳ

**|| ಅಟ್ಟತಾಳ || ದೇವೀಮಹಾತ್ಮ | ರಕ್ತಬೀಜಾಸುರನಿಗೆ ಪುಷ್ಪಮಾಲಿನಿ ||**

ಲಾಲಿಸು ಲಾಲಿಸು ಪ್ರಾಣಾಕಾಂತಾ | ಪ್ರಾಣಾಕಾಂತ ಪುತ್ರರು ಪುತ್ರರು ಶುಂಬಾಸುರರೂ ಕೇಳ್ ಸುರರು | ಹರನ ಕುರಿತು ತಪವ ಮಾಡಿ | ಮರಣವಿಲ್ಲದವರವಪಡೆದರು | ಲಾಲಿಸು ಲಾಲಿಸುಪ್ರಣಾಕಾಂತಾ ಪ್ರಾನಾಕಾಂತಾ | 2ನೇ ಕಾಲ ಮುಕ್ತಾಯ |

**|| ಅಟ್ಟತಾಳ | ಶನಿಮಹಾತ್ಮ | ನಂದಯ್ಯಶೆಟ್ಟಿ – ಚಂದ್ರಸೇನನಿಗೆ ||**

ದೊರೆರಾಯ ಲಾಲಿಸಯ್ಯಾ | ಈ ದುರುಳಾನು ಸರವ ಕದ್ದಿಹ ಕೇಳಯ್ಯಾ | ಈ ದುರುಳಾನೂ ಸರವಕದ್ದಿ ಕೇಳಯ್ಯಾ || ಕೊಡು ಸರವ ಎಂದರೇ | ಸುಳ್ಳ ಹೇಳುವನೀಗ ಕೊಡಿಸಿರೀ ಸರವಯನಗೇ ॥ 2ನೇ ಕಾಲ | ದೊರೆರಾಯ ಲಾಲಿಸಯ್ಯಾ ಈ ದುರುಳಾನು ಸರವ ಕದ್ದಿಹ ಕೇಳಯ್ಯಾ || 3ನೇ ಕಾಲ |

**|| ಭಾಮಿನಿ || ಸತ್ಯಚಿತ್ರಕೇತು ಕಥೆ ||**

ಕೇಳುತಕ್ಷಣಾ ಧಾತ್ರಿ ಪಾಲಚಿತ್ರಕೇತು ಧರಣಿಗೆ | ಬಿದ್ದೊರಳುತಾ | ಯಾರ ಶಿರವ ಹರಿಯಲಿ ಹರಿ ಹರಿ ಶ್ರೀಹರಿ | ಸತಿಯ ಶಿರವ ಹರಿದೊಡೆಹವು | ಸುತನ ಶಿರಹರಿದೊಡೆ | ಪುತ್ರಹತ್ಯಕ್ಕೊಳಗಾಗುವೆನೂ ಹೇಗೆ ಮಾಡಲಿ ಶಿವ ಶಿವಾ ಎನುತ ಬಿದ್ದೊರಳಿದನು ಧರೆಗೆ | ಚಿತ್ರಕೇತು ||

**|| ರೂಪಕತಾಳ || ಚಾರುಮತಿ | ಚಿತ್ರಕೇತುವಿನಲ್ಲಿ||**

ಏಕೆ ತಡವೋಪ್ರಿಯ | ಹಾಕುಖಡ್ಗವರಾಯ ಬೇಕಿಲ್ಲವೆನ ದೇಹಾ | ಸಾಕುಮಾಡೋಜೀಯಾ ಏಕೆತಡವೊ ಪ್ರಿಯಾ ಹಾಕು ಖಡ್ಗರಾಯ || ಘಾತಿಸಿಯನ್ನ

ಸ್ವಾಮಿ | ಮಾತನಡೆಸಿ ಪ್ರೇಮಿ ಸತ್ಯದಿ ನಡೆ ಸ್ವಾಮಿ | ಪುತ್ರನ ಉಳಿಸು ಪ್ರೇಮಿ | ಘಾತಿಸುಯನ್ನ ಸ್ವಾಮಿ ಮಾತನಡೆಸಿಪ್ರೇಮೀ ||

**|| ಭಾಮಿನಿ | ಸತ್ಯಚಿತ್ರಕೇತು ಕಥೆ ||**

ಸುಡುತಿರ್ಪದುಯನ್ನಯ ದೇಹಂ | ವಡಲೋಳ್ ಕಾನ ತೆರದಿಬೆಯ್ಯುತಲಿರ್ಪುದೂ | ಮೃಥನೆ ಸತ್ಯಕೆ ತಪ್ಪಲಾರೆನೆಂದೆನುತ | ಸತಿಯಳ ರುಂಡಮಂಪಿಡಿದು | ಖಡ್ಗಮಂಜಳಿಸುತ್ತಿರಲು | ಹರಿಬಂದು ಕರವಿಡಿದು ನಿನ್ನ ಸತ್ಯಕ್ಕೆ ಮೆಚ್ಚಿದೆ ಎಂದೆನುತ | ನಿಧಿಪತಿರಾಜನಿಗೆ / ಪ್ರಾಣಧಾನವಂ ನೀಡಿದರೆಂಬಲ್ಲಿ ಗಾಯತು ಸತ್ಯಚಿತ್ರಕೇತುವೆಂಬ ಯಕ್ಷಗಾನ ಕಥೆಯೂ

**|| ಭಾಮಿನಿ || ಗಿರಿಜಾ ಕಲ್ಯಾಣ || ಶಿವ ||**

ಮಡದಿ ಮಡಿದೆಯಾ | ನೀನವತರಿಸು 1 ಗಿರಿರಾಜಮೇನಕಿಯರ | ಗರ್ಭದೊಳೂ ನೀನಡೆಸು ಕೈಲಾಸಭಾರವವೀರೇಶ ನೀನಡೆಸೆಂದೆನುತ | ಸಡಗರದಿ | ಅಭಯವನೀಡುತ ಶಿವತಾದಕ್ಷಿಣ ಮೂರ್ತಿಯಾಗಿ | ಶಕ್ತಿಯಯೋಗದೊಳು ಅಂತರ್ಮುಖನಾಗಿಕುಳಿತರೆ ನಾರದರು ಗಿರಿರಾಜನಿಗೆ ಗಿರಿಜೆಯ ವಿವರವಂ ನರುಹಿ | ಸರ್ವರೂ ಸೇರಿ 1 ಗಿರಿಜಾ ಕಲ್ಯಾಣವಂ | ನಡೆಸಿದರೆಂಬಲ್ಲಿ ಗಾಯಿತೀ ಕಥೆಯೂ ದೇವಾ

**|| ಅಟ್ಟತಾಳ || ಗಣಪತಿ ಮಂಗಳಾರತಿ ||**

ಗಜಮುಖಾದವರೇ ಗಣಪಗೇ | ಚತ್ರಿಜಗ ವಂದಿತಗಾರತಿ ಎತ್ತಿರೇ || ಗಜಮುಖ॥ ಒಳ್ಳೆತದವಗೆ ತೆಂಗಿನಕಾಯಿ ನೆನಗಡಲೆ | ಎಳ್ಳುಂಡೋಳಿಗೆ ಕಬ್ಬುಮೆಲುವಾತನೇ || ಬೆಳ್ಳಿಯ ಉರಿಗೆಜ್ಜೆಗಳ ಕಟ್ಟಿ ಕುಣಿವಂತ | ಡೊಳ್ಳಿನ ಗಣಪಗಾರತಿ ಎತ್ತೀರೇ ಗಜಮುಖದವರೇ ಗಣಪನೇ || 2ನೇ ಕಾಲಕ್ಕೆ + 3ನೇ ಕಾಲಕ್ಕೆ | ಯಕ್ಷಗಾನ ಅಟ್ಟತಾಳ ಮುಕ್ತಾಯ |

**|| ಭಾಮಿನಿ || ತ್ರಿಪುರ ಸಂಹಾರದ ಮುಕ್ತಾಯ ||**

ಇಂತು ತ್ರಿಪುರದ ಸುರರ | ಕಂತು ಹರಪರಶಿವ ಮರ್ಧಿಸೇ ॥ ದೇವದುಂದುಬಿಯೊಳಗೇ |' ಭಕ್ತಿಯಿಂ ದೇವತರು | ಪುಷ್ಪವೃಷ್ಟಿಯಂ ಸುರಿಸಿ ಹರುಷದೋಲಾಡಿ | ತ್ರಿಪುರದಹನದ ಕಥೆಯ | ಸಿದ್ದರಾಮೇಶಂಗೆ ಚನ್ನಬಸವೇಶ್ವರನು ಪೇಳೀ ಕಥೆಯು | ಶಿವನ | ದಯದೊಳ್ ಸಂಪೂರ್ಣ ಮಾಡೆದೂ

**|| ರೂಪಕತಾಳ || ಚಿತ್ರಕೇತು ಕಥೆ || ಚಂದ್ರಮಾಲಿನಿ || + ಯಕ್ಷಗಾನ ಅಟ್ಟತಾಳ ||**

ಕ್ಷೋಣಿಯೊಳಗೆ ಕಾಣೆ | ಈತಾನರೂಪಜಾಣೇ ಪ್ರಾಣನಿಲ್ಲದು ಕಾಣೇ | ನಿನ್ನಾಣೆ ಕೇಳೆ ಜಾಣೇ ಕೋಣಿಯೊಳಗೆ ಕಾಣೇ ಈತಾನ ರೂಪುಜಾಣೇ ||



**|| ರೂಪಕತಾಳ || ಚಂದ್ರಮಾಲಿನಿ || ಆದಿತಾಳ + ಯಕ್ಷಗಾನ ಅಟ್ಟತಾಳ**

ತರವೇನೋ ಸುಂದರ | ಮಾರನರೂಪಿನಧೀರ ತರವೇನೂ ಸುಂದರಾ | ಸ್ಮರನ ಭಾದೆ ತಾಳಲಾರೆನು ಪರಿಹರಿಸೋ ಬೇಗದಿ | ತರವೇನೊ ಸುಂದರ | (ಯಕ್ಷಗಾನ ಅಟ್ಟತಾಳ ಮುಕ್ತಾಯ) ||

**|| ಭಾಮಿನಿ || ಕುರುಕ್ಷೇತ್ರ ||**

ಥಳಥಳಿಪ | ಮುಖಕಾಂತಿಯಿಂದಿಹ | ಎಳೆನಗೆಯ ದಂತಾವಳಿಯ | ಪಂತಿಯಾಗಿ ಸುಲಲಿತಾಮೃತವೆರೆದ | ಕಣ್ಣದೃಷ್ಟಿಯಲೀ | ತರಣಿ ಜನಶಿರವಾಗ | ಧಾರುಣೆಗೆ | ಕುರುಕುಲವು ವೃಕ್ಷಗಳ ಕಡಿದ ತೆರದಿ ಬೀಳಲು ಶ್ರೀಹರಿಯು ತರಣಿಜಗೆ ಮೋಕ್ಷವನೀಡಲೂ ಸಾರಥಿಯು ನಡೆತಂದು ಕೌರವಗೆ ಅರುಹಿದನೂ || ಸಾರಥಿಯು

**|| ಅಟ್ಟತಾಳದಲ್ಲಿ ಕೌರವ ಪದ ||**

ಅಯ್ಯೋ ಹರನೇ ಅಯ್ಯೋ ಕರ್ಣಾ ರಣದೋಳ್ ಮಡಿದಾನೇ ಶಿವನೇ | ಅನುಜಾರು ಅಳಿದಾರು ಪತ್ರಾರು ಮಡಿದಾರು | ಸಖಲ ಮಾರ್ಬಲವೆಲ್ಲಾ | ಹತವಾಯಿತೀಗಾ || ಬಂಧ ಬಾಂಧವರೆಲ್ಲಾ ಅಂದು ಮಡಿದರು ಅವರು | ಇಂದು ಕಡೆಗಾಲ ಬಂದೀತುಯನಗೇ | ದೇವಾ ದೇವಾ ದೇವಾ | ಯಾರಿಗೇಳಲೀಯನ್ನ ದೂರಾಕೇಳುವರಿಲ್ಲಾ ಓರ್ವರೂ ಕುರುಬಲದೀ || ಯಾರಿಲ್ಲದಾಯ್ತಿ ದೇವಾ ಶಿವನೇ ಶಂಕರನೆ ಹರನೇ

**|| ಅಟ್ಟತಾಳ ||**

1. ಎತ್ತಿರಾರತಿ ಗಿರಿಜಾವರಗೆ | ಮತ್ತೆ ಗಜಗಮನೆಯರೆಲ್ಲಾ ಹರಗೇ || ಸಾಂಭಶಿವಗೇ। ಮೃತ್ಯುಂಜಯಗೇ ಮಾರಹರಗೇ || ಎತ್ತಿರಾರತಿ ಗಿರಿಜಾ ವರಗೇ || ಸತ್ಯಸಮರವುಳ್ಳಬಾಲೆಯ ರರ್ಥಿಯಿಂದಲಿಪಾಡುತಾ | ಚಿತ್ರಗೆಲೆಸದೊಳೂಪ್ಪುತಿಹ ನವರತ್ನಧಾರತಿ ಬೇಗನೇ || ಎತ್ತಿರಾರತಿ ಗಿರಿಜಾ ವರಗೇ ||

2. ಶಿವನು ಗಂಗೆಯು ಮಿಂದೊಡಗೂಡಿ ( ಅಮಿತಧುಖಿಲ ನಿರ್ಮಲಮಾಡಿಪಾಡಿ ಪ್ರಮುಖ ದೇವಗನ್ನೆಯರೆಲ್ಲ ಕೂಡಿ ಕ್ರಮದಿಪರಮಚಿದ್ ಭಸಿತವತೀಡೀ | ಕಮಲಬಾಣನಸತಿಯ ರೂಪಿನ | ವಿಮಲಶ್ರೀಶೃಂಗಾರದ | ಗಮಕ ಬ್ರಹ್ಮನ ರಾಣಿಪೊರೆದಳು | ಅಮಿತ ಗಜಾಸುರಶಿಕ್ಷರೇ || ಎತ್ತಿರಾರತಿ ಗಿರಿಜಾವರಗೇ || ಮತ್ತೆ ಗಜಗಾಮನೆಯರೆಲ್ಲಾ ಹರಗೇ ಸಾಂಭಶಿವನೇ || ಎತ್ತಿರಾರತಿ |

3. ಅರ್ಧ ಚಂದ್ರನು ಪೊಣೆಯೋಳೆ ಮುಂಗುರುಳೂ | ಮುದ್ದು ನಗೆಶುಕಪಿಕದಗಾನಗಳೂ | ಭದ್ರೆರಾರತಿ ಪಿಡಿದು ಹಸ್ತದೊಳ್ | ಪದ್ಮಕ್ಕೊದಗೆಸನ್ ಮೋಹನಂಗಗಳೂ | ಎತ್ತಿರಾರತಿ ಗಿರಿಜಾವರರೇ | ಸದ್ಗುಣವೆ ಆಭರಣವಾಗಿಹ ದದ್ಧತೀಮನಭಾವವೂ | ಚಿದಾನಂದ ಸ್ವರೂಪಗೆ | ಶ್ರೀಮದ್



ಗುರುವಿರುಪಾಕ್ಷಗೇ || ಎತ್ತಿರಾರತಿ ಗಿರಿಜಾ ವರಗೇ ಮತ್ತೆ ಗಜಗಮನೆಯರೆಲ್ಲಾ ಹರಗೇ ಸಾಂಭಶಿವಗೇ ಮೃತ್ಯುಂಜಯಗೇ ಮಾರಹರಗೇ || ಎತ್ತಿರಾರತಿ ||

4. ನಾರಿಯರ ತಾಳಿರೆಡೆಯ ನೋಣ್ ಜಡೆಯಾ 1 ಓರೆ ದುರುಬಿನ ಕದಪುಕನ್ನಡಿಯ ಕೊರೆಕಿಡಿಯುಬ್ಬು ತಿಲಕದಕಿಡಿಯಾ | ಸಾರತರದ ಪದ್ಮನಿಯಾರೊಡೆಯಾ | ಕೋರೆ ಕುಚಕಂಠೀರ ಮಧ್ಯದಿ | ಪೂರಿಕದನಳಿತೋಳಿನ ನಾರಿಬೆದರಿದೆ ಎರಳೆ ನೋಟದಿ | ನೀರೆಯರು ನಿಠಿಲಾಕ್ಷಗೆ || ಎತ್ತಿರಾರತಿ ಗಿರಿಜವರಗೇ | ಮತ್ತೆ ಗಜಗಾಮಿನಿಯರೆಲ್ಲಾ ಹರಗೇ ಸಾಂಬಶಿವನೇ ಮೃತ್ಯುಂಜಯಗೇ ಮಾರಹರಗೇ ಎತ್ತಿರಾರತಿ ಗಿರಿಜಾವರಗೆ | ಮತ್ತೆ ಗಜಗಮನೆಯರೆಲ್ಲಾ ಹರಗೆ | ಸಾಂಬ ||

**ಆದಿತಾಳ ||**

**ಮಂಗಳ ರಘುಕುಲ ತಿಲಕನಿಗೇ ಜಯ ಮಂಗಳ ದ್ವಾರಕಿನಿಲಯನಿಗೆ ||**

ಇಂದಿನ ದಿನವೇ ಶುಭದಿನವು | ಇಂದಿನವಾರವೆ ಶುಭವಾರ ಮಂಗಳಯದುಕುಲತಿಲು ಕನಿಗೇ ಜಯ | ಮಂಗಳದ್ವಾರಕಿನಿಲಯನಿಗೆ ಅಜಿಇಂದ್ರಾದಿಗಳಿಂದ ನುತಿಸಿ ಕೊಂಬುವನಿಗೆ | ಅರ್ಜುನಗೊಲಿದು ಸಾರಥಿಯಾದವರೇ|| ಮಂಗಳಯದುಕುಲತಿಲಕನಿಗೇ ಜಯಮಂಗಳ ದ್ವಾರಕಿ ನಿಲಯನಿಗೇ |

ನಾರದ ವಂದ್ಯಗೆ ಪ್ರಹ್ಲಾದನ ಪೊರೆದಗೆ | ನಾರಿಯರಿಗೆ ಮೋಸ ಪಡಿಸಿದರೇ ಮಂಗಳಯದುಕುಲ ತಿಲಕನಿಗೇ ಜಯಮಂಗಳ ದ್ವಾರಕಿ ನಿಲಯನಿಗೆ | ಇಂದಿನದಿನವೇ ಶುಭದಿನವೂ 1 ಇಂದಿನ ವಾರವ ಶುಭವಾರ ( ಮಂಗಳಯದು ಕುಲತಿಲಕನಿಗೇ ಜಯ ಮಂಗಳ ದ್ವಾರಕಿ ನಿಲಯನಿಗೇ ||

ಶೇಷಶಯನನಿಗೆ | ದೋಷವಿದೂರಗೆ | ವಿಷಕಂಠನ ಸರಿಪೋಲುವಗೇ || ಮಂಗಳ ಯದುಕುಲತಿಲಕನಿಗೇ ಜಯ ಮಂಗಳ ದ್ವಾರಕಿ ನಿಲಯನಿಗೇ || ಇಂದಿನ ದಿನವೇ ಶುಭ ದಿನವು ಇಂದಿನ ವಾರವೆ ಶುಭವಾರ ಮಂಗಳ ರಘುಕುಲತಿಲಕನಿಗೇ ಜಯಮಂಗಳ ದ್ವಾರಕಿ ನಿಲಯನಿಗೇ || 2ನೇ ಕಾಲ ಯಕ್ಷಗಾನ ಅಟ್ಟತಾಳ ಮುಕ್ತಾಯ||

ಜೈ ಮಂಗಳ ಗುರು ನಮಃ ಪಾರ್ವತಿಪತಿಯೇ ಹರಹರಮಹಾದೇವ |

**ಮಂಗಳಾರತಿ || ಕುರುಜಂಪೆತಾಳ ||**

1. ಜಯಮಂಗಳಂ ನಿತ್ಯಶುಭಮಂಗಳಂ | ಜಯಜಯತು ಜಗಜ್ಜನನಿ ಭಗಳಾಂಬೆಗೇ॥ ಜಯಮಂಗಳಂ ನಿತ್ಯ ಶುಭಮಂಗಳಂ || ಜಯಜಯತು ಜಗಜ್ಜನನಿಭಗಳಾಂಬೆಗೆ ಜಯ ಮಂಗಳಂ ನಿತ್ಯ ಶುಭಮಂಗಳಂ ||

2. ಕಾಳಿಕೆಯುವನಿಸುತಲಿಕೇಳು ಮದುವೆಂವೆಂಬುವರ | ಕೂಳಕೈರಬರೆಂಬ ಅಸುರರ್ಕಳಾ | ತಾಳಿಪುರುಷತ್ವವನು | ಶೀಳುತಲಿ ಮಸ್ತಕವ | ಹೋಳುಸಹಸ್ತವ ಮಾಡಪಾಲಾಕ್ಷಿಗೆ | ಜಯಮಂಗಳಂ ನಿತ್ಯಶುಭಮಂಗಳಂ |



3. ದುಷ್ಟ ಮಹಿಷಾಸುರನು | ಅಷ್ಟದಿಕ್ಪಾಲಕರ | ಪಟ್ಟಣಕೆ ದೊರೆಯಾಗಿ | ದೇವರ್ಕಳು ನಿಷ್ಠೆಯಲಿ | ರೋದಿಸಲು | ಕಷ್ಟ ಬಿಡಿಸುವೆನೆಂದು | ಕುಟ್ಟಿಮಹಿಷನಕೊಂದ | ಮಹಾಲಕ್ಷ್ಮಿಗೆ || ಜಯ ||

4. ಹಿರಿಯಶುಂಭನು ತಾನು | ಕಿರಿಯವನು ನಿಂಬ | ಸುರರ ಭಾಧಿಸಲವರು ಮೊರೆಯಿಡುತಿರೆ | ದುರುಳದೈತ್ಯರಶಿರವಹರಿದು | ಹರುಷವ ತಾಳ | ಗುರುಚಿದಾನಂದ 1 ಭಾರತಿದೇವಿಗೆ | ಜಯಮಂಗಳಂ | ನಿತ್ಯಶುಭಮಂಗಳಂ ಜಯಾಜಯನಮಃ | ಪಾರ್ವತೀಪತೇ ಹರಹರ ಮಹಾದೇವ | ಶ್ರೀಮದ್ರರಮಣಾ ಗೋವಿಂದಾ || ಗೋವಿಂದಾ

**ಮಂಗಳಾರತಿ || ದೇಶ್ ತೋಡಿರಾಗ || ಆದಿತಾಳ ||**

1. ಎಲ್ಲರಿಗಾಗಲಿ ಮಂಗಳಾ | ತತ್ವ ಬಲ್ಲರಿಗಾಗಲಿ ಮಂಗಳ | ಎಲ್ಲಾ ತತ್ವತೀತಗೇ ಮಂಗಳಾ ಬಲ್ಲಾರೂಢಗೇ ಮಂಗಳಾ || ಎಲ್ಲರಿಗಾಗಲೀ |

2. ವಾದಿಗೆ ಮಂಗಳ | ಬೇಧಿಗೆ ಮಂಗಳ | ಬೇಧರಹಿತಗೇ ಮಂಗಳ ಸಾದುವ ದೂಷಿಪ ಪರಮಾದರದೊಳು | ಕೋದಿಗುಆಗಲಿ || ಮಂಗಳಾ

3. ಕೋಪಿಗೆ ಮಂಗಳ ಪಾಪಿಗೆ ಮಂಗಳಾ | ಪಾಪರಹಿತಗೆ ಮಂಗಳಾ | ಸಾಪಲ

   ತತ್ವ ವಿಚಾರದಿ ದಿನದಿನ | ಸೋಪಾನಕೇರ್ವಗೆ ಮಂಗಳಾ || ಎಲ್ಲರಿಗಾಗಲಿ ಮಂಗಳಾ ತತ್ವ ಬಲ್ಲಿರಿ | ಜಯಜಯಜಜನಮಃ |

ನಮ್ಮೂರು ಅರಳಗುಪ್ಪೆ ಗ್ರಾಮದಲ್ಲಿ ನೆಲೆಸಿರುವ ಶಡ್ಡಿಂಗದೇವರು ಕಲ್ಲೇಶ್ವರಸ್ವಾಮಿ, ದೇವಸ್ಥಾನದ ಅಧಿಪತಿ ಕಲ್ಲೇಶ್ವರ ಸ್ವಾಮಿ ಕುರಿತು ಮಂಗಳಾರತಿ ಬರೆದ ಯಕ್ಷಗಾನ ಭಾಗವತ, ವೇಷಧಾರಿಯೂ ಆದ ಕಲ್ಮನೆ ಭಾಗವತ್ ಎ.ಎಸ್ ನಂಜಪ್ಪ ಬರೆದ ರಚನೆ

**ಆದಿತಾಳ || ಮಧ್ಯಮಾವತಿ ರಾಗ |**

1. ದೇವಾ ಪರಿಪಾಹಿಪರಮೇಶಾ | ಶಂಕರಾ ಗೌರಿಪಾರ್ವತಿರಮಣಾ | ನೀಲಕಂಠಶಿವಶಿವಶಂಭೋ | ಕಲ್ಲೇಶ್ವರನೇ ಹರಹರಶಂಭೋ | ವಿಶ್ಲೇಶ್ವರನೇ ಶಿವಶಿವಶಂಭೋ ಬಸವೇಶ್ವರನೇ ಶಂಕರಶಂಭೋ || ದೇವಾಪರಿಪಾಹಿ |

2. ಧೀನನಾಥನೆ ನೀದಯವನು ತೋರಿ ಕರುಣದಿ ಪೊರೆಯೋ ನೀಲಕಂಠ | ಧೀನರರಕ್ಷಿಪ | ಸುಜನರಪಾಲಿಸಾ ಧರೆಯೊಳು ಅರಳಗುಪ್ಪೆ ಪುರದೊಳು ನೆಲಸಿಹ | ದೇವಾ ಪರಿಪಾಹಿ ಪರಮೇಶಾ || ಶಂಕರಾ ಗೌರಿಪಾರ್ವತಿರಮಣಾ। ನೀಲಕಂಠ ಶಿವ ಶಿವ ಶಂಭೋ | ಕಲ್ಲೇಶ್ವರನೇ ಹರಹರಶಂಭೋ || ವಿಶ್ಲೇಶ್ವರನೇ ಶಿವಶಿವಶಂಭೋ || ಬಸವೇಶ್ವರನೆ ಶಂಕರ ಶಂಭೋ || ದೇವಾ ||

3. ಧರೆಯೂ ಪುರದೊಳು ಅರಳಗುಪ್ಪೆನಗರದಿ | ದೇವದಿಕ್ಕಿನೋಳ್ 1 ಶಡ್‌ಲಿಂಗದ ಮಧ್ಯೆ ನಾಟ್ಯವನಾಡುವ ನಟರಾಜನೆ ನೀಂ ನಾಂಟ್ಯವಾಡುತ ನಲಿಯುತ



ಪೊರೆಯೋ | ದೇವಾ ಪರಿಪಾಹಿಪರಮೆಶಾ || ಶಂಕರ ಗೌರಿ ಪಾರ್ವತಿ ರಮಣ ನೀಲಕಂಠ ಶಿವಶವ ಶಂಭೋ ಸಕಲೇಶ್ವರನೆ ಶಂಕರ ಶಂಭೋ ದೇವಾ ||

4. ಅಷ್ಟದಿಕ್ಷಾಲಕರ ಮಧ್ಯದಿ ಮೆರಸುರ | ದೃಷ್ಟಿಸಿ ನೋಡಲು ಎದುರೊಳು ಬಸವನ ಶ್ರೇಷ್ಟದಿ ಉಮೆಯನು ಕೂಡುತ ನಲಿಯುವ | ಹರಿಯನ ಸೂರ್ಯನ ನೋಡುತ ನಲಿಯುವ | ದೇವಾಪರಿಪಾಹಿಪರಮೇಶಾ | ಶಂಕರಾ ಗೌರಿಪಾರ್ವತಿರಮಣಾ | ನೀಲಕಂಠಾಶಿವಶಿವ ಶಂಭೋ ||

ಕಲ್ಲೇಶ್ವರನೇ ಹರಹರಶಂಭೋ ವಿಶ್ಲೇಶ್ವರನೇ ಶಿವಶಿವ ಶಂಭೋ | ವಿಶ್ಲೇಶ್ವರನೇ ಶಿವಶಿವಶಂಭೋ | ಬಸವೇಶ್ವರನೇ ಶಂಕರ ಶಂಭೋ ಸಕಲೇಶ್ವರನೆ ಪರಶಿವಶಂಭೋ। ದೇವಾಪರಿಪಾಹಿ ಪರಮೇಶ |

ಜಯಾಜಯನಃ ಪಾರ್ವತಿಪತಿಯೇ ಹರಾಹರ ಮಹಾದೇವಾ ||

**4ನೇ ಪ್ರತಿ**

**|| ಬಭ್ರುವಾಹನ ಕಾಳಗ ||**

**|| ಮಧ್ಯಮಾವತಿ ರಾಗ |**

**|| ಅಟ್ಟತಾಳ ||**

1) ತಾಯೇ ಲಾಲಿಸಿಕೇ | ಶೂರಾಪಾರ್ಥನ ಅಶ್ವವ | ಮಾತೆಯೇ ಛಲದಿಂದ | ಹಿಡಿದು ಕಟ್ಟಿದನೂ ಬಂಧಿಸಿದ ಅವನು ನಿನ್ನಯ ಸುತನೂ

2) ಮೂರೂ ಲೋಕದ ಗಂಡ | ವೀರಾರ್ಜುನನೆಂಬುವ ಅಶ್ವದಿಂದೊಡಗೂಡಿ | ಬಂದೀಹನಂತೇ ||

**| ರಾಗ ರೇಗುಪ್ತಿ || ಭಾಮಿನಿ || ಕರ್ಣಪರ್ವ ಕುರುಕ್ಷೇತ್ರ ಅಭಿಮನ್ಯು |**

ಅರಸ ಕೇಳೀ ಪರಿಯೊಳೊ | ವೀರ ಅಭಿಮನ್ಯುವಿನ ಘೋರ ಆರ್ಭಟಕೆ | ದ್ರೋಣ ಸರ್ವರೆಲ್ಲರೂ ಹೆದರಿ ಓಡೋಡಿ | ಚಕ್ರವ್ಯೂಹದ ಕೋಟೆಯೊಳಗೆ ಸೇರಲು ಪ್ರಾರ್ಥನ ಸುತಬಲು ರೋಷದಲಿ | ಕಿಡಿಗದರುತ | ಚಕ್ರವ್ಯೂಹವ ಭೇಧಿಸಿದಾ |

**|| ಮೋಹನರಾಗ||**

**ಭಾಮಿನಿ || ಕುರುಕ್ಷೇತ್ರ (ಕರ್ಣಪರ್ವ) ಗಧಾಪರ್ವ | ಭೀಮದ್ರೌಪದಿಗೆ ||**

ಬಾರೆ ದ್ರೌಪದಿ |ಮೋಹನಾಂಗಿಯೇ 1 ನೆರವೇರಿಸುವೆ | ನಿನ್ನ ಬಹು ದಿನದ ಪಂಥವನ | ಬಾಬಾಬಾ ಈ ದುರುಳ ದುಷ್ಕಾಶನನ | ಉದುರವಂ ಬಗೆದು | ನಿನ್ನ ಶಪಥವಂ ಈಡೇರಿಸುವೆ | ನಿನ್ನ ಕೆದರಿದ ತುರುಬಂ | ಇಂದು ಕಟ್ಟಿಸುವೆ | ಕರುಳಂ ತೆಗೆದು | ಧರಿಸುವವನಮಾಲೆಯಂ | ಬಾ ಬಾ ಬಾ ಬಾರೆ ಬಲು ಹರುಷದಿಂದ ಬಾರೇ ದ್ರೌಪದಿಯ ಬಹುಸಡಗರದಿಂದಾ ||

**|| ರೇಗುಪ್ತಿ ರಾಗ ||**

**|| ಭಾಮಿನಿ || ಅಹಿರಾವಣ ಮಹಿರಾವಣನ ಕಥೆ | ರಾವಣಮಂಡೋದರಿಗೆ |**

ಬಾಲೆ ಕೇಳು ಎರಡನೆಯ ಜನ್ಮದಲಿ ಹುಟ್ಟಿದನು ದಶಶಿರನು | ಅತಿಧಿಟ್ಟ ತಮ್ಮನು | ಕುಂಭ ಕರ್ಣನು | ಹಟ್ಟಹಾಸದಿ ಸಿರಿ ಸೀತೆ ರೂಪಾಂಗಿ ಜನಿಸಿದಳು | ಮತ್ತೊಂದು ಜನ್ಮವ ಕಳೆದು | ಸಂತುಷ್ಟರಾಗಿ | ವೈಕುಂಠ ದ್ವಾರವನು ಸೇರುವೆವು ಕೇಳೆ ರಮಣೀ

**|| ರೇಗುಪ್ತಿ ಅಟ್ಟತಾಳ || ಶಾರದಾ ಸ್ತುತಿ ||**

ನಂಬಿದೆ ನಿಮ್ಮ ಪದಾಂಬುಜಯುಗಳವಾ | ಶಾರದಾಂಬ | ಅಂಬಾ ತಾಯೆ ಶಾರದಾಂಬಾ | ತಾಯೆ ಬೆಂಬಿಡದನು ದಿನ ನಮ್ಮೆಲ್ಲರ ಸಲಹಮ್ಮಾ ಶಾರದಾಂಬ ||

**|| ಆದಿತಾಳ + ಅಟ್ಟತಾಳ || ರತೀ ಕಲ್ಯಾಣ | ರುಕ್ಮಿಣಿ ರಾಧೆಗೆ ||**

1. ಅಕ್ಕ ಕೇಳೆ ಚಿಕ್ಕ ಮಗನ – ಗಕ್ಕನೇ ಲಗ್ನವ ನೆಸಗಲ್ | ತಕ್ಕ ಕನ್ಯ ಸಿಕ್ಕಲಿಲ್ಲ | ಅಕ್ಕಯ್ಯಾ ಕೇಳೆ ? (ಅಟ್ಟತಾಳದಲ್ಲಿ) ತಕ್ಕಕನ್ಯ 1 ಸಿಕ್ಕಾಲಿಲ್ಲಾ ಅಕ್ಕಯ್ಯಾ ಕೇಳೇ॥
2. ಸುತಗೆ ಲಗ್ನವ ಮಾಡುದರಿಂದ ಮನಕೆ ವ್ಯಸನ ಹುಟ್ಟದ ಬಳಿಕಾ | ಚಿಂತೆಯಿದು ಸುಡುತಲಿಹುದು | ಎನ್ನ ಯಮನದೀ (ಅಟ್ಟತಾಳ)) ಚಿಂತೆಯಿದು ಚಿಂತೆಯಿದು ಸುಡುತಲಿಹುದೂ ಎನ್ನ ಯಮನದೀ ||

**|| ಆದಿತಾಳ + ಅಟ್ಟತಾಳ || ಅಹಿರಾವಣ ಮಹಿರಾವಣನ ಕಥೆ ||**

**|| ದೌರದುಂಡಿ ನಿಕುಂಬಿಣಾದೇವಿಗೆ ||**

ಲಾಲಿಸಿ ಕೇಳಮ್ಮಾ ತಾಯೇ | ಎನ್ನಾ ಮಗನನ್ನು ನಿನಗೆ ನಾಳೆಯ ದಿವಸವೇ॥ ಯಮಗ್ರಜನು ನಿಮಗೆ ! ಬಲಿಕೊಡುವಾನಂತೇ (ಅಟ್ಟತಾಳ) ಯಮಗ್ರಜನು ನಿಮಗೇ। ಬಲಿಕೊಡುವಾನಂತೇ ॥

**|| ರೇಗುಪ್ತಿ ರೇಗುಪ್ತಿ ಅಟ್ಟತಾಳ || ರಾವಣ ಮಹಿರಾವಣ || ಸೂಜಮುಖಿ | ಮಹಿರಾವಣಗೆ ||**

ಇದಕೆ ಯೋಚನೆ ಯಾತಕಾಗ್ರಜ | (ಚಂದದಿ) ಶೀಘ್ರದಿ ಕೊಡುಯನಗಪ್ಪಣೆಯಾ (ಚಂದದಿ) ಶೀಘ್ರದಿ ಕೊಡುಯನಗಪ್ಪಣೆಯಾ || ರಾಮಲಕ್ಷ್ಮಣರನ್ನು ಹಿಂಡಿತಂದು ಕೊಡುವೇನು | ಶೀಘ್ರದಿ ಪಾಲಿಸು ನೇಮವನೂ

**|| ಮಟ್ಟತಾಳ || ಮಹಿರಾವಣ | ಆಂಜನೇಯನಿಗೆ ||**

ಎನಲು ಕೋಪಾದಿಂದಖಳನು || ಒಂದು ಗತಿ || ಎನಲು ಕೋಪದಿಂದ ಖಳನು ಖಡ್ಗವನ್ನು ಜಳಿಸುತ್ತಾ | ಶರವಬಿಡಲು | ತರಿದು ಬಿಸುಟ | ವಾಯುಜಾತನೂ (ಕಿರುಹೆಜ್ಜೆ) ಶರವಾಬಿಡಲು ತರಿದೂ ಬಿಸುಟವಾಯುಜಾತನೂ



**|| ರೇಗುತ್ತಿರಾಗ ಮಟ್ಟತಾಳ || ರತೀ ಕಲ್ಯಾಣ | ಆಂಜನೇಯ | ಕೌಂಡ್ಲಿಕನಿಗೆ||**

ಅಧಮದುರುಳ ಬಗಗೆವೇ ಕರುಳ || ಒಂದು ಗತಿ ಮುಕ್ತಾಯ || ಅಧಮದುರುಳಭಗೆವ ಕರುಳ | ಸದರವಲ್ಲ ಸಮರವಿನ್ನೂ ! ಹಿಂದಕ್ಕೋಗಿ ನಿನ್ನ ಪ್ರಾಣ ಉಳಿಸಿಕೊಳ್ಳಲಾ | ಕಿರುಹೆಜ್ಜೆ || ಹಿಂದಕ್ಕೋಗಿ | ನಿನ್ನಾ ಪ್ರಾಣಾ | ಉಳಿಸಿಕೊಳ್ಳಲಾ

**|| ರೇಗುಪ್ತಿ ರಾಗ (ಅಷ್ಟತಾಳ) || ರತೀ ಕಲ್ಯಾಣ ಕೃಷ್ಣನ ಪದ ||**

ಅಂಗಕಳಿಂಗ ಕಾಂಬೋಜ | ಒಂದು ಗತಿಬಿಡತಿ | ಅಂಗ ಕಳಿಂಗ ಕಾಂಭೋಜವು ಮೊದಲಾಗಿ ತುಂಗ ಬಂಗಾಳವನೂ || ಕೇಳ್ಳೆಸೂತ ಸಂಗಾತ ಸೌರಾಷ್ಟ್ರ | ಮಲೆಯಾಳ ಮೊದಲಾಗಿ | ರಂಗನಾಥ ತಿರುಗೇ ॥

**|| ರೇಗುಪ್ತಿ ಅಷ್ಟತಾಳ || ಬೈಸಿಗೆ || ಅಹಿರಾವಣ ||**

ಮಕರಾಕ್ಷ ಮಡಿದ ವಾರ್ತೆಯ ಕೇಳಿ (ಬೈಸಿಗೆ ಗತಿಃ) ಮಕರಾಕ್ಷ ಮಡಿದವಾರ್ತೆಯ ಕೇಳಿ : ದಶಮುಖ ಮನದೊಳು ಚಿಂತಿಸಿದಾ | ದಶಮುಖಮನದೊಳು ಚಿಂತಿಸಿದಾ ಕಳವಳಿಸುತ ಮಂಚಕ್ಕೊರಗಿದ | ದಿಟ್ಟ ಖಳಹೋದನೆನುತಲಿ ಮರುಗಿದಾ |

**|| ರೇಗುಪ್ತಿ ಅಷ್ಟತಾಳ || ಮಹಿರಾವಣನ ಕಥೆ | ಆಂಜನೇಯ ||**

ಜಯಜಯತ್ರೈಲೋಕಮಾತೆ ವಿಖ್ಯಾತೆ | ಜಯಜಯ ಸೀತಾಮಾತೇ (ಜಯಸೀತಾಮಾತೇ॥) ಜಯಜಯತ್ರೈಲೋಕ ಮಾತೆ | ಜಯಜಯ ಸೀತಾಮಾತೇ॥

**|| ರೇಗುಪ್ತಿ ಅಷ್ಟತಾಳ || ರತೀ ಕಲ್ಯಾಣ | ಕಮಲರಾಜ ||**

ಅಂಗ ಕಳಿಂಗ ಕಾಂಬೋಜ || ಭೂಪಾಲರೂ ಬಂದಿರೇ ಕೇಳ್ | ದೇವಾ ಬಂದಿರೇ ಸಂಗಾತ ಸೌರಾಷ್ಟ್ರ | ಮಲೆಯಾಳ ದರಸಾರು ಬಂದಿರೇನ್ನೈ |

ಬಂದೀರೇ

**|| ರೇಗುಪ್ತಿ ಅಷ್ಟತಾಳ || ರತೀ ಕಲ್ಯಾಣ | ಕಮಲರಾಜ ಕೃಷ್ಣರಲ್ಲಿ ||**

ಮಾಳವ ಮಗದ ಭೂಪಾಲಕರೆಲ್ಲಾರು ಬಂದಿರೇನ್ನೈ || ಕೇಳ್ಳೈ ದೇವ | ಬಂದಿರೇನ್ನೈ ||ಕೇರಳ ಕುಂತಳ ಮಹರಾಷ್ಟ್ರದರಸರು ಬಂದಿರೇನ್ನೈ ||

**|| ರೇಗುಪ್ತಿ ಅಷ್ಟತಾಳ | ರತೀ ಕಲ್ಯಾಣ | ಕಮಲರಾಜ ದ್ರೌಪದಿಗೆ ||**

ಏನಾ ಹೇಳುವಳೆಂದು | ((ನಡೆಯಜ್ಜೆ ಒಂದು ಗತಿ)) ! ಏನ ಹೇಳುವಳೆಂದು ಭಾಷೆಯ ಕೊಟ್ಟರೆ | ಈ ಪರಿ ನುಡಿಯುವುದೇ || ಕೇಳೆಲೊಬಾಲೆ || ಈ ಪರಿನುಡಿಯುವುದೇ | ನಡೆನಡೆ ಹಿಂದಕ್ಕೆ ಹೆಚ್ಚು ಮಾತಾಡದೆ | ಕೊಚ್ಚಿ ಬಿಡುವೆ ನಿನ್ನನೂ |



**|| ಝಂಪೆತಾಳ | ರತೀಕಲ್ಯಾಣ || ಕಮಲಾಜ | ದೌಪದಿಗೆ ||**

ಏನಾ ನುಡಿದೆಲೆನಾರೀ | (ಒಂದು ಗತಿ ಮುಕ್ತಾಯ)) | ಎನಾ ನುಡಿದೆ ನಾರೀ | ಕಳ್ಳಾ ಕೃಷ್ಣನಸುತೆಗೇಯೆನ್ನಾ ಸುತೆರತಿಯಳನೂ | ದಾರೇಯನೆರೆ ಎಂದೂ

**|| ಏಕತಾಳ (ಯಕ್ಷತಾಳ) || ಮಹಿರಾವಣ | ಆಂಜನೇಯನಿಗೆ ||**

ಆರೆಲೋ ವಾನರ ನೀನೂ | (ಒಂದು ಗತಿ ಮುಕ್ತಾಯ)) | ಆರೆಲೊ ವಾವಾನರ ನೀನೂ ಸಾರಿ ಬಂದಾ ಕಾರ್ಯಗಳೇನೂ | ಯಾರು ಬಿಟ್ಟರು ನಿನ್ನ | ಎಂದೆನುತಲಿ ಬೋರಿಟ್ಟೋದನು ಮುನ್ನಾ ||

**|| ಏಕತಾಳ || ಯಕ್ಕತಾಳ | ಇಂದ್ರಜಿತ್ ಕಾಳಗ | ಇಂದ್ರಜಿತ್ ರಾವಣನಿಗೆ ||**

ತಂದೆ ಕೇಳೆನ್ನ (ಒಂದು ಗತಿ ಮುಕ್ತಾಯ ತಂದೆ ಕೇಳೆನ್ನಾ | ಕುಂದೂ ಮಾಡದೆ ಇಂದೂ ಕಳುಹಿಸೋ | ರಣಕೆ ಬೇಗಾನೇ ||

**|| ಮಟ್ಟತಾಳ || ಇಂದ್ರಜಿತು ಆಂಜನೇಯನಿಗೆ ||**

ಎಲವೊ ಮಂಗಗಳಿರಾ ಕೇಳಿ | ((ಒಂದು ಗತಿ ಮುಕ್ತಾಯ)) | ಎಲೆವೂ ಮಂಗಗಳಿರ ಕೇಳಿ | ಕೊಲುವೆ ನಿಮ್ಮ ಹಸುವ ನೀಗ ತಲೆಯ ಕಾಯ್ದ ರಾಮನನ್ನು ತೋರಿಸೆಂದನೂ ((ಸುತ್ತ ತಿರುಗುತ)) ತಲೆಯಾ ಕಾಯ್ದ ರಾಮನ್ನೂ ತೋರಿಸೆಂದನೂ

**|| ಝುಂಪೆತಾಳ | ಮಹಿರಾವಣ | ರಾಣಿಗೆ ||**

ಕ್ಷೇಮದಿಂದಿರುವರೇ ಒಂದು ಗತಿ | ಮಂದೀಮಾರ್ಭಲವೆಲ್ಲಾ ! ಪ್ರಜ್ಞೆಯೂ ಪರಿವಾರವೂ | ಆನಂದದಿಂದಿಹರೇ ॥ ಸಕಲಾಪರಿವಾರ

**|| ಕುರುಂಝುಸೆ || ಮಹಿರಾವಣನ ಕಥೆ || ಇಂದ್ರಜಿತು ಕಾಳಗ ||**

ಒಂಟೆಯಾ ತಲೆಗಳನು | ಎಂಟು ಸಾವಿರ ತಂದೂ | ಮಂಟಪದ ಬಾಗಿಲಿಗೆ ತೋರಣವ ಕಟ್ಟಿ | ಕಂಠಕವು ಪರಿಹರಿದು ಹೋಗುವುದು | ದಶಕಂಠಸುತ ನೀನು ಕೇಳು |

**|| ಆದಿತಾಳ + ಅಟ್ಟತಾಳ || ಕರ್ಣಪರ್ವ ಕೃಷ್ಣ - ಧರ್ಮರಾಯರಿಗೆ ||**

ತಂದೆ ನಿಮಗೆ ಇಂಥ ಬವಣೆ | ತಂದ ಪಾಪಿ ಇನ್ನೂ ನಾನೂ || ಕೊಂದಲ್ಲಾದೆ ಬಿಡೆನೂ ನಾನೂ | ಎಂದಾಗೋವಿಂದಾ || (ಅಟ್ಟತಾಳ) | ಕೊಂದಲ್ಲಾದೆಬಿಡೆನೂ ನಾನೂ 1 ಎಂದಾ ಗೋವಿಂದಾ |



---

**|| ರೇಗುಪ್ತಿ ಅಷ್ಟತಾಳ || ಕರ್ಣಾ (ಧರ್ಮರಾಯನನ್ನು ಕೃಷ್ಣ ಅರ್ಜುನನಿಗೆ ||**

ಎಡಗಾಲ ತುದಿಯಿಂದ ಒದೆದು ಮೂದಲಿಸಿದ | ಸವ್ಯಸಾಚಿ ಕೇಳ್ಳೆ ಪಾರ್ಥಾ ಸವ್ಯಸಾಚಿ | ಕೊರಳಿಗೊಡ್ಡಿದೆ ಖಡ್ಗ | ಶಿರವನರಿಯುವೆನೆಂದಾಸವ್ಯಸಾಚಿ ॥

**|| ಮಟ್ಟತಾಳ || ಗಜಗೌರಿ ವಥ | ಐರಾವತ ಯಕ್ಷಗಾನದಲ್ಲಿ ಕೌರವ ಭೀಮನಿಗೆ||**

ಕರೆಯಲಿಲ್ಲಾ ನಾವಗಳೆನುತ | (ಒಂದು ಗತಿ ಮುಕ್ತಾಯ)) | ಕರೆಯಲಿಲ್ಲ. ನಾನವ್‌ಗಳೆನುತ | ಸ್ವರ್ಗದಿಂದ ಕರಿಯತರೆಸಿ 1 ತೋರಬಂದೆ ನಮ್ಮ ಮುಂದೆ ನಿಮ್ಮ ಗರ್ವವಾ | (ಸುತ್ತೆಜ್ಜೆ) – ತೋರಬಂದೇ ನಮ್ಮಾ ಮುಂದೆ ನಿಮ್ಮ ಗರ್ವವಾ ||

**|| ಝುಂಪೆತಾಳ | ಇಂದ್ರಜಿತು ಕಾಳಗ || ಇಂದ್ರಜಿತು ಪದ ||**

ಹಗೆಗೇ ದೋಷಗಳಾಯ್ತಾ || (ಒಂದು ಗತಿ) | ಹಗೆಗೇದೋಷಗಳಾಯ್ತು || ಬಗೆಬಗೆಯ ಮಾಯಗಳನೂ 1 ಹಗರರಾಣಗೊಳುತೀದೆ | ಜಗದೊಳಗಪಜಯವೂ

**|| ರೇಗುಪ್ತಿ ರಾಗ ||**

**|| ಅಷ್ಟತಾಳ || ಹನುಮಂತ ಮತ್ ಹನುಮನಿಗೆ ||**

ತಂದೆ ಹೋಗುವುದೆಲ್ಲಿಗೆಂದು ಕೇಳಿದನಾಗ | ಬಂದಿಹ ಕಾರ್ಯವೇನೂ | ಇಂದು ಯನ್ನಿಂದಾಲ್ವ ಕಾರ್ಯವೇನುಂಟು | ತಂದಿಹ ದೊರೆಗಳ್ಯಾರು!

**|| ರಾಗ ರೇಗುಪ್ತಿ ಭಾಮಿನಿ || ಇಂದ್ರಜಿತು ವಿಭೀಷಣನಿಗೆ||**

ದೀಕ್ಷೆಯನ್ನು ಬಿಸುಟೆದ್ದು | ಕಿರುಗಣ್ಣಿನಿಂದೀಕ್ಷಿಸುವ ಕಿರಿದಯ್ಯನನು ನೋಡಿ | ಕುಲಕಂಟಕ ಹೇಡಿ – ಕುಲಕೆ ಕಂಟಕ ಪ್ರಾಯನಾದೆಯಾ | ಎಂದೆನುತ ಘರ್ಜಿಸಿದ ಇಂದ್ರಜಿತುವೂ

**|| ಝಂಪೆತಾಳ || ಅಹಿರಾವಣ ಮಹಿರಾವಣನ ಕಥೆ | ರಾಮಲಕ್ಷ್ಮಣನಿಗೆ ||**

ಅನುಜಾ ಲಾಲಿಸಿ ಕೇಳ್ | ಧನುಜಾ ಮಕರಾಕ್ಷಸನಾ ಗೆಲಿದೇವೈತಮ್ಮಾ | ನೀನಿರಲು ಬಲಸಹಿತ

**|| ಏಕತಾಳ | ಯಕ್ಕತಾಳ || ಅಹಿರಾವಣನಿಗೆ ಮಹಿರಾವಣ ||**

ಇದಕ್ಯಾತಕೆ ಚಿಂತೆ ಧನುಜಾಧಿಪನೆ ॥ (ಒಂದು ಗತಿ) ಮನದೊಳು ಮರುಗದಿರೂ ಹುಲುಕಪಿನಾಯ್ಸಳ | ಕೊಲ್ಲುದಕೆ ಕೊಡುಯನಗಪ್ಪಣೆ ದಶಶಿರನೇ

**|| ಅಷ್ಟತಾಳ || ಮಹಿರಾವಣ ಕಥೆ | ಆಂಜನೇಯ | ಇಂದ್ರಜಿತುವಿಗೆ ||**

ಓದಿ ನೋಡಿಕೋ ಶಾಸ್ತ್ರವಾ | ಓದಿ ನೋಡಕೊ ಶಾಸ್ತ್ರವಾ | ಬ್ರಹ್ಮನ ಚತುರ್ವೇದ ಪೌರಾಣದ ಸೂತ್ರವಾ | ಮೇದಿನಿಯೊಳು ನೀನು ಲಂಕೆಯ ಸುತನಾಗಿ ಬೃಹತ್ಯಕೆ ಗುರಿಯಾಗಬೇಡ || ಮತಿವಂತ ಖಳನೆ ಕೇಳೋ



**|| ರಾಗ ರೇಗುಪ್ತಿ | ಮಟ್ಟತಾಳ ||**

ಖಳರೊಳ ಧಮಬಗುಳ ಬೇಡ ಗತಿ | ಮಧದಗರ್ವದೀ | ತಲೆಗೆ ಪಿತ್ತವೇರಿತೆಲವೊ (ಸುತ್ತಾರ್ಕೆ) | ತಲೆಗೇ

ಅಧಮ ಕೇಳೆಲೊ ಕೇಳೆಲೊ ಪಿತ್ತವೇರಿ ಕೇಳೆಲೋ ಅಧಮ

**|| ರಾಗ ರೇಗುಪ್ತಿ || ಕುರುಝುಂಪೆ || ಆಂಜನೇಯ ||**

ಧರಣಿ ನಂದನೆಶಿರವು ಧರೆಗೆ ಬೀಳಲು ಮುನ್ನಾ | ಎರಗಿದನು ಹನುಮಂತ ಕಾಳಗಕೆ ಬೇಗಾ | ದುರಕೆ ತಪ್ಪಿಸಿಕೊಳ್ಳಲು | ಖಳಹೋಗಲು ಆಗ ಮರುಗಿದನು ಮನದೊಳಗೆ ಹನುಮಾ |

**|| ಆದಿತಾಳ + ಅಟ್ಟತಾಳ || ಹನುಮಂತ | ಜಾಂಬವರಿಗೆ||**

ಮಾರಿತಿ ಸಲಹೆಂದೆನಲೂ | ಕೆಟ್ಟ ಚೋರಗೆ ಪೇಳೆ ನೀತಿಯ ನಾನೂ ರಾಮನರಸಿಯ ತರಿದು ಪೋದನಾ ಖಳನೂ || (ರಾಮನರಸಿಯ ತರಿದು | ಪೋದನಾ ಖಳನೂ )

**|| ಝುಂಪೆತಾಳ || ಧರ್ಮರಾಯ ಕೃಷ್ಣನಿಗೆ || ಕರ್ಣಪರ್ವ||**

ಜಲಾಜಕ್ಷ ತವಚರಣಾ || (ಒಂದು ಗತಿ ಮುಕ್ತಾಯ) || ಜಲಾಜಕ್ಷತವಚರಣಾ। ಸಲಿ ರಾಜನ ಕೃಪೆಯಿರಲೂ ಕಲಶಾದಿ ಸುಭರರನೂ | ಗೆಲಿದೇವೆ ಇಂದಿನಲೀ

**|| ರಾಗ ರೇಗುಪ್ತಿ | ಏಕತಾಳ(ಯಕ್ಕತಾಳ) ಕೌರವ ಸಾರಥಿಗೆ ||**

1. ಸೂತನೆ ಕೇಳಿ ಬರಿರಥವನು (ಒಂದು ಗತಿ) | ತಿರುಗಿಸಿ | ಯಾತಕಿಲ್ಲಿಗೆ ಬಂದೇ || ಯಾತಕಿಲ್ಲಿನ ಬಂದೇ | ಭೀತಿಗಳೇನಿದು ನಿತಿಳುಹು | ವೃತ್ತಾಂತಗಳ ಎನಗೆಂದಾ ॥
2. ಇತ್ತ ಭಾಷೆಯಾಯೇನಾದುದು ದ್ರೋಣರು | ಮತ್ತೆಲ್ಲಿಗೆ ಸರಿದಾ | ವಿಸ್ತಾರದಿ ಪೇಳೆನುತ | ದುಗುಡದಿ | ಪೃಥ್ವೀಶನು ನುಡಿದಾ |

**|| ಜಂಪೆತಾಳ || ಕೌರವ ||**

ಏನಾ ಮಾಡಲಿ ನಾನೂ (ಒಂದು ಗತಿ) ಏನಾ ಮಾಡಲಿ ನಾನೂ | ಪಾಂಡುವರ ಸೋಲಿಪಡೇ | ಧಾನಾವಾಂತಕನವರ್ಗ 1 ಸಾರಥಿಯಾಗಿಹನೂ ||

**|| ಅಟ್ಟತಾಳಕ್ಕೂ | ಅಶ್ವತ್ಥಾಮ ಕೌರವರಿಗೆ ||**

ಅವನೀಶ ಕೇಳ್ ಭೀಷ್ಮಾ ದ್ರೋಣರಿಬ್ಬಾಮರಣೀ | ಅವರಳಿದ ಭರರೊಳಗೇ ದುರದೀರಕರ್ಣಾ



**|| ಏಕತಾಳ ಯಕ್ಕಾಳ || ಕರ್ಣಪದ ||**

ತಂದೆಯ ಭರವ ನಿರೀಕ್ಷಿಸಿ ಕರ್ಣನು || (ಒಂದುಗತಿ) | ತಂದೆಯ ಭರವ ನಿರೀಕ್ಷಿಸಿ ಕರ್ಣನು | ಸ್ನಾನಣಂಗಳವಿ ರಚಿಸಿದಾ | ತಂದೆಗೆ ಅರ್ತ್ಯವನಿತ್ತಾಕ್ಷಣದೊಳು ಬಂದೇರಿದ ಹೊಸರಥವಾ

**|| ಏಕತಾಳ ಯಕ್ಕತಾಳ ||**

ಕರೆಯಿರೊ ಪಾಂಡುಕುಮಾರರನೀಕ್ಷಣ || (ಒಂದುಗತಿ) | ಕರೆಯಿರೊ ಪಾಂಡುಕುಮಾರರ ವೀಕ್ಷಣ ಬರಲಿಂದಿನಹವರೇ | ಗುರುಗಳ ದ್ರೋಣರ | ಗೆಲಿದಿಹಗರ್ವವ ಮುರಿಯುವೆಕ್ಷಣಕೆ |

**|| ಕುರುಜಂಪೆ ||**

ದುರಕೆಳಪತಿಯಾದ – ತರಣಿ ಜನುಎಂತೆಂಬ | ಬಿರುನುಡಿಯ ವಾಖ್ಯವನು ಕೇಳೀ | ಸರಿದು ಹೋದರು ಕಳ್ಳ | ಭೀಮಪಾರ್ಥರನೀಗ | ಹಿಡಿತರುವರಿಲ್ಲರಣಕೇ |

**|| ಮಟ್ಟತಾಳ | ಕರ್ಣಪರ್ವ ಅರ್ಜುನ | ಕರ್ಣನಿಗೆ||**

ಏನೋ ಎಲವೋ ಸೂತತನಯ || ಬಂದು ಗತಿ | ಎನೊ ಎಲವೊ ಸೂತತನಯ ನೀನೆ ಬಂದೆ ಸಮರಕೀಗ ಏನ ಹೇಳಲೆನ್ನ ಪುಣ್ಯನೀನೆದೊರತೆಯಾ || (ಸುತ್ತ ತಿರುಗು) | ಏನ ಹೇಳಾ, ಲೆನ್ನಾಮುಣ್ಯ ನೀನೇದೊರೆತೆಯಾ |

**|| ಮಟ್ಟತಾಳ ||**

ಬಂದೊಡೇನೋ ಇಂದ್ರಾತನಯ || ಬಂದುಗತಿ | ಒಂದೊಡೇನೊ ಇಂದ್ರತನಯ ಕೊಂದೆ ಭೀಷ್ಮದ್ರೋಣರನ್ನೂ || ಎಂಬುವರ್ಗವನ್ನು ! ಎನ್ನ ಮುಂದೆ ತೋರೆಲೋ ಎಂಬಾ ಗರ್ವಾವನ್ನು ಎನ್ನಾ ಮುಂದೆ ತೋರೆಲೋ

**|| ಕರ್ಣಪರ್ವ || ರೇಗುಪ್ತಿ ಅಷ್ಟತಾಳ || ಶಲ್ಯ ಕೌರವನಿಗೆ||**

ಶಲ್ಯ ನೃಪಾಲನು ಸಾರಥಿ ತನದೊಳು | ಬಲುಪರಾಕ್ರಮನೂ ಕೇಳೊ ಭಾವಾ ಬಲು ಪರಾಕ್ರಮನೂ | ನಿಲ್ಲಾದೆ ಆತನ ಕರೆತಂದು ಕೊಟ್ಟರೆ 1 ರಿಪುಮಲ್ಲರ ಗೆಲಿವೆತಾಂನೆಂದಾ

**||ರೇಗುಪ್ತಿ ಅಷ್ಟತಾಳ || ಕೌರವ ಕರ್ಣನಿಗೆ ||**

ಇದಕೆ ಯೋಚನೆಯಾಕೆ | ಕರೆತಂದು ಕೊಡುವೆನು ಮುದದಿಂದ ಮಾವನನ್ ಮುದದಿಂದ ಮಾವನನೂ || ಕದನ ಗೆಲುವ ಭಾರ | ನಿನ್ನದೆಂದೆನುತಾಲಿ | ಮಧದಿ ಪೌರುಷ ನುಡಿದಾ |

**|| ರೇಗುಪ್ತಿ ಅಷ್ಟತಾಳ | ಕೌರವಶಲ್ಯನಿಗೆ ||**

ಮಾವನಿಮ್ಮೊಡನೊಂದು ಕಾರ್ಯ ಭಾವಿಸಿ ಬಂದೆ ನಿಮ್ಮೆಡೆಗೇ ॥ ಕೇಳೊ ಭಾವ ನಿಮ್ಮೆಡೆಗೇ ನೀವನು ಗ್ರಹವಾದರೆಯನಗೆ | ಯಾವ ದೊಡ್ಡದು ಭಾನುಸುತಗೇ ॥

**|| ರೇಗುಪ್ತಿ ಅಷ್ಟತಾಳ ಕೌರವ ಶಲ್ಯನಿಗೆ||**

ಕರ್ಣನಿಗೆ ನೀವು ಸಾರಥಿಯಾಗಿ | ರಣದೊಳು ವರ್ಣಿಸಬೇಕೋ ವಿಕ್ರಮ ಕೇಳೋ ಭಾವಾ | ಕೊರಳಿಗೊಡ್ಡಿದ ಖಡ್ಗ ತೆಗೆಸಿದಿರೆನ್ನುವ | ಬಿರಿದು ಬರ್ಪುದು ಭಾವ ನಿಮಗೇ ॥

**|| ರಾಗ ರೇಗುಪ್ತಿ | ಭಾಮಿನಿ ||**

ನುಡಿಯ ಕೇಳು ತಶಲ್ಯ | ಕಲ್ಪದ ಕಡಲೊಡೆದ ತೆರನಂತೆ ಘರ್ಜಿಸಿ | ನುಡಿ ನುಡಿ ಇನ್ನೊಮ್ಮೆ ನುಡಿದರೆ | ಕಡಿದು ನಿನ್ನನು | ಭೂತಳ ಕೆಬಲಿಯ ಕೊಡುವೆನು ಎಂದಾ ನಾಮಾದ್ವೇಷಾ |

**|| ರೇಗುಪ್ತಿ ಅಷ್ಟತಾಳ ॥ ಶಲ್ಯ ಕೌರವನಿಗೆ ||**

ಬರುವೆ ನಿಮ್ಮಯ ಕಾರ್ಯಕ್ಕಾಗಿ | (ಒಂದು ಗತಿ ಸುತ್ತಾರ್ಕೆ)) | ಬರುವೆ ನಿಮ್ಮಯ ಕಾರ್ಯಕ್ಕಾಗಿ 1 ಕರ್ಣಗೆ ನಾನು ದುರಕೆ ಸಾರಥಿಯಾಗುವೇ || ಇರುವದಂದು ಸುರುನಾಪೇಳಿದಿಂದಳವನ್ನು | ತಿರುಗುವೆ ಕೇಳದೊಡೇ ||

**|| ಕುರುಜಂಪೆ | ಕರ್ಣ (ಕೌರವ) ಶಲ್ಯನಿಗೆ ||**

ಪಾಕಶಾಸನ ಸುತನ ಹಿಡಿದು ಕರುಳನಬಗೆದು | ಭೀಮನಕಪಾಲದಲಿ ಮುಗಿದು ಮಗೆದೂ ಶಾಕಿನಿಯ ಬಳಗಕ್ಕೆ | ಔತಣವ ಮಾಡದಿರೆ | ಕುರುರಾಯ ಸಾಕಿದಕೆ | ಫಲವು ಏನೆಂದಾ ||

**|| ಏಕತಾಳ || ಯಕ್ಕತಾಳ || ಶಲ್ಯ ಕರ್ಣನಿಗೆ ||**

ಕೂಗುವೆ ಯಾತಕೊ ಕುನ್ನೀ || (ಒಂದುಗತಿ ಮುಕ್ತಾಯ) || ಕೂಗುವೆ ಯಾತಕೋ ಕುನ್ನಿ | ನಿನ್ನ ತಲೆಗೇರಿತು ಬಲು ಸನ್ನಿ | ಕೊಳಗುಳವನೂ ನೀ ಬಲ್ಯಾ ಎಲೆ ಗೂಬೆ ಹೋಗೆಂದನು ಶಲ್ಯಾ

**|| ಏಕತಾಳ | ಕರ್ಣ ಶಲ್ಯನಿಗೆ ||**

ಕಾಲಕೆಳಗೆ ನೀ ಕುಳಿತು || ಯನ್ನ ಸೇವೆಯ ಮಾಳ್ವದಮರೆತೂ ! ವೀರನೊಳಿಂಥಾ ಮಾತೇ | ನಿನ್ನ ತಲೆಯನು ಉಳಿಸಿಕೊ ಭ್ರಾಂತೇ |



**|| ಏಕತಾಳ || ಯಕ್ಕತಾಳ || ಶಲ್ಯ ಕರ್ಣನಿಗೆ ||**

ಕುರುಪತಿಗೋಸ್ಕರ ಬಂದೆ | (ಒಂದು ಗತಿ ಮುಕ್ತಾಯ) | ಕುರುಪತಿಗೋಸ್ಕರ ಬಂದೆ | ಕಿರಿಕುಲದವನೀ ಕೇಳೋ ಮರೆಹೋಗು ತ್ರಿಪುರಾಂತಕನ ತರಿದು ಬಿಸುಡುವೆ ಅಂತಕಗೇ ||

**|| ಏಕತಾಳ || ಯಕ್ಕತಾಳ || ಕರ್ಣ ಶಲ್ಯ ||**

ಯನಲಾರ್ಭಟ ಸುತರ ವಿಜ || ಶರಮಳೆಯನು ಕರೆದಾ ಬಹಳಾ | ದೊರಕಿತು ಈಶ್ವರರೊಳ್ ಕದನ | ಕುರುಪತಿ ಕಂಡಾಹದನಾ |

**|| ಝಂಪೆತಾಳ || ಕೌರವ | ಸಮಸಪ್ತಕರ ನೆನೆದ ||**

ಇತ್ತಾ ಕೌರವ ಸ್ಮರಿಸೇ || (ಒಂದುಗತಿ ಮುಕ್ತಾಯ) | ಇತ್ತಾ ಕೌರವ ಸ್ಮರಿಸೇ ಮತ್ತೇ ಸಮಸಪ್ತಕರೂ | ದೈತ್ಯಾರಾಕ್ಷಣ | ಪೃಥ್ವಿಶ ನಡಿಗೆರಗೇ ||

**ಜಂಪೆತಾಳ || ಸಮಸಪ್ತಕರು ಕೌರವನಲ್ಲಿ**

ಏನು ಕಾರಣ ನೆನೆದೇ (ಒಂದು ಗತಿ) | ಮಾನಾವಾಧಿಪಯಮ್ಮಾ | ನೀನು ಸುರುಶ್ರೀಗ್ರದಲೀ | ಮನಸೀನ | ದುಗುಢವನೂ

**ರಾಗ ರೇಗುಪ್ತಿ || ಅಷ್ಟತಾಳ || ಕರ್ಣ ಧರ್ಮರಾಯನಿಗೆ**

ನದಿಯೊಳು ಸ್ನಾನವ ರಚಿಸಿ | ಬಹುವಿಧವಿಧ ತಪವನಾಚರಿಸೀ || ಮುದಿಗೂಭೆ ತೆರದೊಳು | ಕುಳಿತಿರುವದ ಬಿಟ್ಟು | ಕದನದೊಳಗೆ ಕಾಡಬಲ್ಲೆ |

**ಮಟ್ಟತಾಳ || ಧರ್ಮರಾಯ | ಕರ್ಣನಿಗೆ**

ಕೂಳ ರವಿಜಾಕೇಳೋ ನಿನ್ನಾ || (ಒಂದುಗತಿ ಮುಕ್ತಾಯ) || ಖೂಳ ರವಿಜಾ ಕೇಳೋ ನಿನ್ನ | ತೋಳಬಲವಬಲ್ಲೆ ನಾನೂ | ಕೀಳು ನುಡಿಯ ಬಗುಳಬೇಡ | ಖೂಳ ಹೋಗೆಲಾ

**ಏಕತಾಳ | ಕರ್ಣ ಧರ್ಮರಾಯನಿಗೆ |**

ಮೂಢಾ ಹೋಗೋ ಎನುತ ಕರ್ಣ || (ಒಂದು ಗತಿ) | ಮೂಢ ಹೋಗೊ ಎನುತ ಕರ್ಣ | ಘಾಢದಿಂದ ಪಕ್ವತಾಸ್ತ್ರಾ || ಮೂಡಿಗೆಯೊಳು ತೆಗೆದು ಬಿಡಲು | ನೋಡಿ ಯಮಜನು

**|| ಮಟ್ಟತಾಳ || ಧರ್ಮರಾಯ ಕರ್ಣನಿಗೆ**

ವಜ್ರಶರದೊಳಧನುವ ಮುರಿದು | ರೌದ್ರದಿಂದ ಪೋಲ್ವಶರದೀ || ಮಾದ್ರ ಭೂಪತೀಯಶಿರವ ಚಿದ್ರ ಗೈವನೂ



---

**|| ಭಾಮಿನಿ ||**

ರಣದಿಹರಿಗಳ ಗೆಲಿದು ಧಾತ್ರಗೆ | ಶರೀರಶೋಣಿತವ | ಎರೆಯಲೊಲ್ಲದ ಕುರಿಯೆ / ನಿನ್ನಂಥ ಧಮಗೆ || ಬೂಮಾತೆವಲಿಯುವಳೇ | ತರಿದು ಬಿಸುಡುವೆನೆಂದರೇ ಪರಮಪತಿವ್ರತೆ ಮಾತೆಗಿತ್ತೆ | ಪರಮ ಭಾಷೆಯನು ಅದಕೆ ಅಂಜುವೆ | ಪ್ರಾಣ ಉಳಿಸಿಕೊ | ಮೂಢಹೋಗೆಂದು | ಘರ್ಜಿಸಿದನು ಕಲಿಕರ್ಣಾ

**|| ಮಟ್ಟತಾಳ || ಅರ್ಜುನ ಧರ್ಮರಾಯನಿಗೆ ||**

ಮೂಢ ನೀನು ಉದಿಸಲಾಗಿ ಆಡಿಕಪಟಧ್ಯೂತ ಹಗೆಯಾ || ನಾಡಸೋತೆ ನಂಬಿದವರ ಕೂಡಿ ಕಳೆದೆಯಾ |

**|| ಮಟ್ಟತಾಳ ||**

ಕುರುಪತೀಯ ಇಂದ್ರಸೇನ | ತರಿದು ಹೋಯ್ದು ವೇಳೆಯಲ್ಲಿ 1 ಕರೆಸಿಕೊಂಡೆ ನಮ್ಮನೆಲ್ಲಾ | ತಡೆಯಿರೆನುತಲೀ | (ರವಣಮಾಡಲೂ)

ಇಂದ್ರನೊನವಅಗ್ನಿಗಿತ್ತೆ ! ತಂದೆ ದೃಪದಸತಿಯಳನ್ನು | ದ್ಯೋತಕಿಟ್ಟು ಸೋತೆ ನೀನು ಹಂದಿ ಹೋಗೋ ಎನುತಲಾಗ ಪಾರ್ಥ ನುಡಿದನೂ

**|| ರೇಗುಪ್ತಿ ರಾಗ || ಭಾಮಿನಿ || ದುಶ್ಯಾಸನ ||**

ಧರಣಿಪಾಣಿ ಕೇಳು | ಧರ್ಮಜನು | ಪಾಳ್ಯಯಕೆ | ತೆರಳಲಿತ್ತ | ಇತ್ತಲಾ ದುಶ್ಯಾಸನನು | ಭೀಮನೊಳು ಸಂಗರಕೆ ನಡೆತಂದ ಕುರುಬಲಕೇ |

**|| ಜಂಪೆತಾಳ || ಭೀಮ || ದುಶ್ಯಾಸನನಿಗೆ||**

" ಏನಾ ಹೇಳಲಿಯನ್ನಾ | ಪೂರ್ವಾದಪುಣ್ಯವನ್ನೂ ಮಾರೀ ಮುಂದಕೆ ಕುರಿಯು | ತಾನೇ ಬಂದಂತೇ ॥

**|| ರೇಗುಪ್ತಿ ಅಷ್ಟತಾಳ || ಭೀಮ - ದುಶ್ಯಾಸನಿಗೆ||**

ಬಾರಯ್ಯಾ ಕುರುಕುಲಾಗ್ರಣಿಯೆ || (ಒಂದು ಗತಿ) ತಮ್ಮನೆ ನೀನು ವೀರನಹುದು ಸಹಜಾ || ನಾರಿ ದೌಪದಿ ಸೀರೆ | ಸೆಳೆದಂತ ಪೌರುಷ | ತೋರಿಸೋ ಬಣಗುತಾನೆಂದಾ|

**ಮಟ್ಟತಾಳ || ದುಶ್ಯಾಸನ - ಭೀಮನಿಗೆ||**

ಹೊಟ್ಟೆ ಬಾಕಭೀಮಕೇಳೋ || (ಒಂದು ಗತಿ ಮುಕ್ತಾಯ) | ಹೊಟ್ಟೆ ಬಾಕ ಭೀಮ ಕೇಳೊ | ಕುಟ್ಟಿ ಕೆಡಹುವೆನೂ ನಿನ್ನಾ | ಅಟ್ಟಹಾಸ ತೋರಬೇಡ ಸೃಷ್ಟಿಯೊಳಗೇ



**ಮಟ್ಟತಾಳ || ಅರ್ಜುನಾಧರ್ಮರಾಯನಿಗೆ**

1. ಹರನೊಳಕಾದಿಶರವ ತಂದೆ ಗುರುವು ಭೀಷ್ಮರನ್ನು ಗೆಲಿದೆ | ದುರುಳಗಯನ ಬೆನ್ನೋಳ್ ಕಟ್ಟಿ | ಹರಿಯೋಳ್ ಕಾದಿದೇ ||
2. ವೀರ ಮಾತೆಗಾಗಿ ನಾನು ದೇವಪುರಕೆ ಶರವ ಕಟ್ಟಿ | ವಾರಣಾವಗಳನ್ನೂ ಧರಣಿಗೆಳಿಸಿದೇ | (ಸ್ವರ್ಗದಾ ವಸ್ತುಗಳನ್ನು

**|| ಕುರುಕ್ಷೇತ್ರ || ಭೀಮ ದುಷ್ಯಾಸನನ ಯುದ್ಧ ||**

**|| ಮಟ್ಟತಾಳ || ದುಶ್ಯಾಸನ ಭೀಮನಿಗೆ ||**

ಉಗ್ರರೂಪ ನೋಡಿ ತಾನು | ವ್ಯಾಘ್ರರೂಪ ತಾಳಿ ಆಗ | ಉಗ್ರಕೋಪದಿಂದ ತಾನು | ಗಧೆಯೊಳೊಡೆದನೂ

**|| ಮುಖಾರಿ ರಾಗದಲ್ಲಿ || ಭಾಮಿನಿಗಳು ||**

**ದುಶ್ಯಾಸನನಿಂದ ಭೀಮ ಮೂರ್ಚೆ**

ಧರಣಿಪಾಗ್ರಣಿ ಕೇಳಿತ್ತ | ವೀರದುಶ್ಯಾಸನನು ಮರಸುತ ಭೀಮನಂ ಧರಣಿಗೊರಗಿಸಲು | ಹರಹರಾ ಎಂದೆನುತ ಭೀಮ | ಹರನಂಭಜಿಸಿ | ವರವಂ ಪಡೆದು | ರುದ್ರರೂಪಂ ಧರಿಸಲು | ಹರನಂ ಅನನ್ಯ ಭಕ್ತಿಯಿಂಭಜಿಸಿದನೂ ಕಲಿಭೀಮಾ ॥

**|| ಶ್ರೀ ಶಂಕರಾಭರಣ ರಾಗದಲ್ಲಿ ಶಿವಸ್ತೋತ್ರ ||**

|| ಕಂದ ||

ಜಯಕೃಪಾಕರ ಶಂಕರಾ ಮೂರ್ತಿಯೇ | ಜಯ ಕರುಣಾಕರ | ತ್ರಿಪುರಸಂಹಾರನೇ॥ ಈ ದುಷ್ಟ ದುಶ್ಯಾಸನ | ಶತೃ ನಿಗ್ರಹಕೆ | ನಿನ್ನ ರೌದ್ರ ರೂಪವನು ಕರುಣಿಸಿ | ಕೃಪೆಯಿಟ್ಟು ಸಲಹೆ | ಶಂಕರನೇ ॥

**|| ಮಟ್ಟತಾಳ || ಭೀಮ ದುಶ್ಯಾಸನನಿಗೆ||**

ರುದ್ರಕೋಪದಿಂದ ತಾನು | ರಾಯನನುಜನನ್ನು ಹಿಡಿದೂ | ಹಂದಿ ಬಾರೋ ಎನುತಲಾಗನಿಂದಿಸಿದನೂ

**ಮಟ್ಟತಾಳ || ದುಶ್ಯಾಸನ || ಕುರುಕ್ಷೇತ್ರ || ಭೀಮ ದುಶ್ಯಾಸನನ ಯುದ್ಧ ||**

ಉಗ್ರ ರೂಪ ನೋಡಿ ತಾನು ವ್ಯಾಘ್ರರೂಪ ತಾಳಿ ಆಗ | ಶ್ರೀಘ್ರ ಕೋಪದಿಂದ ತಾನು | ಗಧೆಯೊಳೊಡೆದನೂ ||

**ಮಟ್ಟತಾಳ || ಭೀಮ || ರೇಗುಪ್ತಿ ರಾಗ**

|| ರಕ್ತಕಾರಲಾಗದುರುಳ | (ಒಂದುಗತಿ ಮುಕ್ತಾಯ) || ಮತ್ತೆ ಕಾಲಕೆಳಗೆ ಹಾಕಿ | ಬಗೆವೆ ನಿನ್ನ ಕರುಳ ಎನುತ ಧರೆಗೆ ಉರುಳಿಸೇ



**ಭಾಮಿನಿಗಳು**

**|| ಗೌಳರಾಗ || ಭೀಮ ||**

1. ತೊತ್ತಿನಂದದಿ ಬಗೆವೆ ಕರುಳ ದುರುಳ ದುಶ್ಯಾಸನನೆ | ಕಾಂತೆ ದೌಪದಿಯಳ ಹುಟ್ಟ ಸೀರೆಯ ಸೆಳೆದೆ | ಅತಿ ಕಪಟ ಕೃತ್ಯದಲ್ಲಿ ಕೊಂಡೊಯ್ದಿರಿ ನಮ್ಮನು ಕಾನನಾಂತಕ್ಕೆ ॥ ಅದಮದುರುಳನೆ ಮೃತ್ಯುಮಾರಿಗೆ ತುತ್ತು ಮಾಡಿ | ನಿಮ್ಮವರೆ ಹೋದರು | ಹೇಡಿಗಳ ಕರೆ | ನಿನ್ನ | ಬಿಡಿಸಿಕೊಳ್ಳಲೀಗ | ಎಂದೆನುತ ಘರ್ಜಿಸಿದ ಕಲಿಭೀಮಾ |

2. || ಮಧ್ಯಮಾವತಿರಾಗದಲ್ಲಿ || ಭಾಮಿನಿ |

   ವೀರ ವಾಯುಸುತನು ದುರುಳ ದುಶ್ಯಾಸನನ ಉದರವಂ ಬಗೆದಿಹೆನು ಹರರೆ ರಕ್ತರುಚಿ | ಹದ್ದು ಕಾಗೆಗಳೆ ಬನ್ನಿರಿ | ಎಂದೆನುತ | ಘುಡಿಘಡಿಸುತ್ತ | ಕುರುಕುಲದ ಕಡೆಗೆ ನೋಡಿ ಘರ್ಜಿಸಿದನು ಕಲಿಭೀಮಾ ||

3. ಆನಂದ ಭೈರವಿ || ಭಾಮಿನಿ |

ಕುರುಕುಲಾಗ್ರಣಿ | ನೀನು ಬಿಡಿಸೈ ಇವನಿನ್ನನು ಜನಲ್ಲವೆ | ಇವ ಮರಣವಾದುದು ಪತ್ಯವೇ | ಭಾನುಸುತ ನೀನು ಬಿಡಿಸೈ | ವೀರಕೃತವರ್ಮ ಶಲ್ಯಾದಿಗಳೇ | ಕುರುಕುಲದ ವೀರಯ್ಯಾರು | ನೀವು ಬಿಡಿಸಿರೋ ಎಂದೆನುತ ಹುಬ್ಬೇರಿದನು ಕಲಿಭೀಮಾ |

4. ಭೈರವೀ ರಾಗ || ಭಾಮಿನಿ |

ಸಾರಿದನು ಎಲ್ಲವನು ಇವನಸುವ ಕಾಯುವರಾರ ಕಾಣೆನು | ಕುರುಬಲದೊಳಗೆ || ಅಧಮರೆನುತಲಿ | ಮೋರೆಯನು ನಾರಾಯಣನ ಕಡೆ ತಿರುವುತ್ತಾ | ನೀನು ಬಿಡಿಸ್ಕೊ ನಿನಗೆ ಇವಬಾಂಧವನಲ್ಲವೇ | ಮರಣವಾದುದು ನಿನಗೂ ಪತ್ಯವೇ ಎಂದೆನುತ | ಹೂಂಕರಿಸಿದ ಕಲಿಭೀಮಾ |

5. ಅರಬಿ ರಾಗದಲ್ಲಿ (ಈ ಧಾರಿ ನಿರ್ವಿಗ್ನದಾಯಕ ಹರಗಿರಿಜೆ) | ಭಾಮಿನಿ ಮೂರು ಲೋಕದ ವೀರ ಗಂಡನೆಂದೆಭೇರಿ | ಮೆರೆಯುವ ವೀರ ಪಾರ್ಥನೇ ಇವ ನಿನ್ನ ಸೋದರನಲ್ಲವೆ | ನೀನು ವೀರನಾದೊಡೆ ಬಂದು ಬಿಡಿಸಿಕೋ ಶಿಕಂಡಿ | ಎಂದು ಘುಡು ಘುಡಿಸಿ ಆರ್ಭಟಿಸಿದನು ಕಲಿಭೀಮಾ |

6. ಮೋಹನ ರಾಗ (ಈಧಾರಿ) ಏರುಮಂಚವರಾಯ

ಕಂಡು ನಮಧ್ಯದಲಿ

**|| ಭಾಮಿನಿ ||**

**ಪಾರ್ಥ (ಅರ್ಜುನ ) ಶ್ರೀಕೃಷ್ಣನಲ್ಲಿ**

ಮಾಧವನೇ | ನೇಮವಂಪಾಲಿಸೂ ದುರುಳ ಭೀಮನಾಡುವ ನುಡಿಯ ಕೇಳಲಾರೆನು | ದುರದಿಧರೆ ಗುರುಳಿಸುವೆ | ಮಧದಿಂದಾಡುವ | ಭೀಮನ | ಕಣಮಾತ್ರದೊಳಭಯನೀಡುಭಾವನೇ ! ಇವಸೊಕ್ತನಡಗಿಸುವೇ ದೇವಾ || ಎಂದನಾಪಾರ್ಥ



7. ಕಾಂಬೋದಿ ರಾಗದಲ್ಲಿ | ಭಾಮಿನಿ | ಕೃಷ್ಣ ಪಾರ್ಥನಿಗೆ

ಮರುಳತನವೇ ನಿನಗೇ ಪಾರ್ಥ ಹರರೇ ಬುದ್ಧಿಸ್ಥಿರವಿಲ್ಲ ವ್ಯರ್ಥ | ಹೊಹೊಹೋ। ನೀನೊಬ್ಬನೇ ಶೂರ ರಣದೊಳು | ನಾವೆಲ್ಲ ಸಿಖಂಡಿಗಳೇನೋ ಪಾರ್ಥ ||

8. ಕಲ್ಯಾಣಿ ರಾಗದಲ್ಲಿ | ಭಾಮಿನಿ ||

**|| ಕೃಷ್ಣ | ಪಾರ್ಥನಿಗೆ ||**

ಮರುಳೆ ಪಾರ್ಥ | ನೋಡು ನೋಡು | ಇವರಾರೆಂದು ತಿಳಿದಿಹೆ | ದುರದಿ ನೀನೇ ಮಹಾವೀರನೆಂದುಚ್ಚೇರುತಿಹೆ | ನಾ ಇವರೆಲ್ಲ ಸಿಖಂಡಿಗಳೆಂದು ತಿಳಿದಿಹೆ | ಹರವರದ ಕಲಿಭೀಮಾ | ಸ್ಯೆರಿಸು ಕರದ ಚಕ್ರದಿ ತೋರುವೆನೂ ಪಾರ್ಥ ಅಹಂಕರಿಸಬೇಡ ದ್ರಿಷ್ಟಿಸಿ ನೋಡೆಂದನು ಶ್ರೀ ಹರಿಯು

9. ಗೌಳರಾಗದಲ್ಲಿ || ಭಾಮಿನಿ |

**ಅರ್ಜುನನಿಗೆ 1 ಶ್ರೀಹರಿ**

ಪ್ರಳಯ ಕಾಲದ ಹರನಲ್ಲವೇ | ನೋಡು ನೀಪಾರ್ಥಾ ಕರುಣ ದ್ರಿಷ್ಠಿಯ ಕೊಡುವೆ ! ದುರವು ಬೇಕಾದೊಡೆ | ಹೋಗು ಎಂದೆನುತಾ | ಅರುಹು ತೋರಿದ ನಾಗನರಗೇ || ಹರಿಯು

10. ತೋಡಿ ರಾಗದಲ್ಲಿ | ಕೃಷ್ಣ | ಪಾರ್ಥನಿಗೆ || ಭಾಮಿನಿ ||

ಮಾಧವ ಲಾಲಿಸಿಕೇಳೂ | ಅಣ್ಣನಲ್ಲವ | ತ್ರಿಪುರಹರ | ಕೆಟ್ಟೆ ಕೆಟ್ಟೆನು | ಮಾತಾಡಿ ನಾ ಕೆಟ್ಟನು | ಎಂದು ನಮಿಸುತ | ಜಯ ಕೃಪಾಕರ ದಯಾಕರ ಮೂರ್ತಿ ಶಂಕರ | ತನಯನ ಪರಾಧರಗಳನ್ನು | ಮನ್ನಿಸಿ | ಮಹಾದೇವಾ | ಇಂದ್ರಕೀಲದಿ | ಅಭಯವಿತ್ತಂತೇ | ತಂದೆ ಪಾಲಿಸು | ಶತೃನಿಗ್ರಹಕ್ಕೆ ವರವ ಈಗಾ ||

11. ದೇಶ್ ತೋಡಿ || ಭಾಮಿನಿ ||

ಬಾರೆ ದ್ರೌಪದಿ | ಮೋಹನಾಂಗಿಯೇ | ನೆರವೇರಿಸುವೆ ಕಾಲವದಗಿದೆ ನಿನ್ನಯ ಪಂಥಕ್ಕೆ | ದುರುಳನು ದುರವಂ ಭಗೆದು | ನಿನ್ನಯ ತುರುಬಂ ಕಟ್ಟಿಸುವ | ಕರುಳಂ ಬಗೆದು | ಧರಿಸುವೆ ವನಮಾಲೆಯಂ । ಭಯ ಬೇಡ ಬಾ ಬಾ ಹರುಷದಿಂದಲಿ ಬಾಬಾ ಮೋಹನಾಂಗಿಯೇ

ರಾಗ ರೇಗುಪ್ತಿ | ಏಕತಾಳ || ರತೀ ಕಲ್ಯಾಣ | ಕಾಂಡ್ಕೀಕ | ಕಮಲರಾಜನಿಗೆ ಹಿಂದುಮುಂದು ಯೋಚಿಸದೆ । (ಒಂದು ಗತಿ) | ಸುಂದರಾಂಗಿ ರತಿಯಳನ್ನೂ ಮಾತಿನಂತೆ ಕೊಟ್ಟು ಎನಗೆ ಲಗ್ನ ನಡೆಸದಿರ್ದರೇ

| ಎಲ್ಲಾ ರಾಗದ ಭಾಮಿನಿಗಳು | ಅಹಿರಾವಣ ಮಹಿರಾವಣ ಕಥೆ

**ಭಾಮಿನಿ ಜಯ ವಿಜಯ ಶಾಪ | ಶಾಪವಿಮುಕ್ತಿ**

ರಾವಣ ತನ್ನ ಹೆಂಡತಿ ಮಂಡೋದರಿಗೆ ರಾವಣ ಕುಂಬಕರ್ಣರ ಶಾಪ | ವಿಮುಕ್ತಿ

**|| ಭಾಮಿನಿ ತೋಡಿರಾಗದಲ್ಲಿ ||**

1. ಬಾಲೆ ಕೇಳ್ 1 ಪೂರ್ವದಲಿ | ಲಕ್ಷ್ಮೀಲೋಲಿನಿಹ ವೈಕುಂಠ | ದ್ವಾರಪಾಲಕರು ನಾವುಗಳು | ಜಯವಿಜಯರೆಂಬ ನಾಮದಲಿ | ಆಗಲಾ ಸನಕತ್ಸನಂಧನ ಸನಕ್ತುಜಾತರು | ಹರಿಯ ದರುಶನಕೆ ಬಂದರು ಕೇಳ್ ರಮಣೀ

2. ಭಾಮಿನಿ | ಮುಖಾರಿ ರಾಗ ॥

   ವನಿತೆ ಕೇಳ್ ದ್ವಾರದಲಿ ತಡೆದೆವು | ಋಷಿಗಳೆಮಗೆ | ಶಾಪವಿತ್ತರು ರಾಕ್ಷಸರಾಗಿರೆಂದು | ಕೇಳ್ ರಮಣೀ

3. ಭಾಮಿನಿ | ರಾಗಶಂಕರಾಭರಣ |

   ಮುಂದೆ ಗತಿಯೇನೆನುತಾ | ಮುಕುಂದಗೆ ಭಿನ್ನವಿಸಿದೆವು | ಆಗಲಾ ಮುಕುಂದನೂ ಮೂರು ಜನ್ಮದಲಿ | ನಿಂದ್ಯರಾಗಿ ಬರುವಿರೋ | ಮತ್ತೇಳನೆ ಜನ್ಮದಲಿ | ವಂದ್ಯರಾಗಿ ಬರುವಿರೋ | ಎಂದೆನುತ ಶ್ರೀ ಹರಿ ನುಡಿದರು ಕೇಳ್ ರಮಣೀ

4. ಭಾಮಿನಿ || ಆನಂದ ಭೈರವಿ ರಾಗ |

   ತಂದೆ ಕಳೆವುದ ಸಾಧ್ಯವೂ | ಏಳು ಜನ್ಮಗಳ ನಿಂದ್ಯರಾದರು ಸರಿಯೇ | ಮೂರು ಜನ್ಮವ ಕಳೆದು ಮುದದಿ ಬೇಗ ಬರುವೆವು ನಿಮ್ಮ ಸನ್ನಿಧಿಗೆ ಎಂದು ಬೇಡಿದೆವು ಕೇಳ್ ರಮಣೀ

5. ಭಾಮಿನಿ || ರಾಗ ಭೈರವಿ

ಬಾಲೆ ಕೇಳ್ ಮೊದಲನೆಯ ಜನ್ಮದಲಿ | ಉದಿಸಿದೆವು | ಹಿರಣ್ಯ ಕಶ್ಯಪರೆಂಬ ನಾಮದಲೀ | ಎನ್ನುದುರದಲಿ | ಜನಿಸಿದನು | ಪ್ರಹ್ಲಾದನೆಂಬ | ತರಳನ್ನು ಕೇಳ್ ರಮಣೀ |

6. ಭಾಮಿನಿ ॥ ಗೌಳರಾಗ |

ಕೇಳ್ ತರುಣಿ | ಮಗ ಪ್ರಹ್ಲಾದಗೆ ವೈರಿ ಹರಿಯ ಹೆಸರೆತ್ತದಿರೆಂದರು | ಹರಿಹರಿ ಶ್ರೀ ಹರಿ ಎಂದೂರಲುತಿರೇ | ಬೇಡೆಂದೆನುತ | ಕೋಟಲೆ ಪಡಿಸಿದೆವೂ ಆಗಲಾಹರಿ | ವರಹ ನರಸಿಂಹ ರೂಪಿನಲಿ | ಹೋಗಲಾಡಿಸಿದನು ಮೊದಲನೆಯ ಜನ್ಮವನೂ ಕೇಳ್ ರಮಣೀ ॥

**ಜಯವಿಜಯರ ಶಾಪ ವಿಮೋಚನೆ**

**ಮೂರನೇ ಜನ್ಮ ದಂತವಕ್ರ ಶಿಶುಪಾಲ**

**|| ಭಾಮಿನಿ | ಮಧ್ಯಮಾವತಿ ರಾಗದಲ್ಲಿ**

ಬಾಲೆ ಕೇಳ್ ಎರಡನೆಯ ಜನ್ಮದಲಿ ಹುಟ್ಟಿದೆವು | ದಶಶಿರನು | ಅತಿ ದಿಟ್ಟ ತಮ್ಮನು ಕುಂಭಕರ್ಣನು | ಹಟ್ಟಹಾಸದಿ ಸಿರಿಸೀತೆ ರೂಪಾಗಿ ಜನಿಸಿಹಳು | ಈ



ಸೀತೆಯ ದೆಶೆಯಿಂದ | ಮತ್ತೊಂದು ಜನ್ಮವ ಕಳೆದು | ಸಂತಪ್ಪರಾಗಿ | ಮತ್ತೆ ವೈಕುಂಠದ್ವಾರವನು ಸೇರುವೆವು ಕೇಳ್ ರಮಣೀ ॥

**|| ಕರ್ಣ ಅರ್ಜುನ ಕಾಳಗ ||**

**|| ಅಟ್ಟತಾಳ || ಧರ್ಮರಾಯ | ಕೃಷ್ಣನಿಗೆ ||ಕರ್ಣಪರ್ವ**

ತವಚರಣಾ ಕೃಪೆ ಇರಲೂ | ಅನುಜಾರಿನ್ನುಳಿದವರ ಗೆಲಲಾ ಸಾಧ್ಯವೆ ನಮಗೆ ಕೇಳೋ ಮಾದವನೇ |

**|| ರೇಗುಪ್ತಿ ರಾಗದಲ್ಲಿ | ಭಾಮಿನಿ ||**

ಬರಿದೆ ಹೊಗಳಲಿ ಬೇಡ ಸಾಕು ಬಿಡು ಬಿಡು | ದುರುಳದುಷ್ಟ ದುಶ್ಯಾಸನನ ಮರ್ಧಿಸಿ | ಮರುತಸುತ ದೌಪದಿಯ | ಮನದಿರವ ಸಲಿಸುವೆ ಎನುತ | ಖೂಳರ ತೆರದಿ | ಭಾಷೆಯಭೀಮಪಾರ್ಥರಿತ್ತರೆಂದೆನುತ ಹರಿ ನುಡಿಯ ಪವಮಾನಿಘರ್ಜಿಸಿದನಧಿಖರೋಷದಲಿ

**|| ರೇಗುಪ್ತಿ ಏಕತಾಳ || ಭೀಮ ಕೃಷ್ಣನಿಗೆ ||**

1. ಧಾನವಮರ್ದನ | ನೀನೆಂದುಘರಿತ | ಆಲಿಸಿ ನೊಲವಿಂದಾ | ಏನಾನು ಸಿರಿದೆ ನುಡಿ ನುಡಿ | ಖೂಳರ್ಗೆ ಸಮಾನವೇ ನಾನೆಂದಾ ||

2. (ಹರಿ) ತರಣಿ ಜರಡೈಸಲಿ | ಕಾದಲಿ ಬರಲಿಂದನ ಹವಕೇ | ತರುಣಿಯ ಮುಡಿಗಟ್ಟಿಸಿತಾ | ನೃಪಗೊಲಿಸುವೆ ನೀಕ್ಷಣಕೇ

**|| ಅಷ್ಟತಾಳ | ಕೃಷ್ಣ | ಅರ್ಜುನನಿಗೆ ||**

1) ಬಿಲ್ಲುಕೊಬ್ಬುಗಳಿಂದ ಮೂದಲಿಸಿದನು || ಸವ್ಯಸಾಚೀಖುಲ್ಲ ಭೀಮಾರ್ಜುನರಲ್ಲಿ ಪೋದರೆಂದು ಸವ್ಯಸಾಚೀ

2) ಅರಸನುದರದ ಮೇಲೆ | ಕುಳಿತು ಮೂದಲಿಸಿದಾ | ಸವ್ಯಸಾಚಿ | ಕೊರಳಿಗೊಡ್ಡಿದ ಖಡ್ಗ | ಶಿರವ ಹರಿಯುವೆನೆಂದಾ ಸವ್ಯಸಾಚಿ |

3) ವಡನೀಗ ಶಲ್ಯನು ಬಿಡಿಸಿಕೊಂಡನು | ಕೇಳೋ ಸವ್ಯಸಾಚಿ | ಕಡುಪರಾಕ್ರಮಿ ಕರ್ಣನಿಗಿದುತ್ಯಾರೋ ಸವ್ಯಸಾಚಿ

**|| ಆದಿತಾಳ + ಅಟ್ಟತಾಳ || ಅರ್ಜುನ ಧರ್ಮರಾಯನಿಗೆ ||**

1) ಮೋಸ ಹೋದೆ ನಿಮ್ಮನಗಲಿ ದೋಷಕ್ಕೆ ಗುರುಯಾದೆಕೇಷವಾನೇ ಸಲಹೆಂದು | ಅಡಿಗೆರಗಿದಾಪಾರ್ಥ

**|| ಆದಿತಾಳ + ಅಟ್ಟತಾಳ || ಧರ್ಮರಾಯ ಅರ್ಜುನನಿಗೆ||**

2) ಕರದೊಳಾಗೆ ಇರೂವಂಥಾ || ಧನುವಾಡೊಪಾರ್ಥಾ ನೀನೂ || ನರಕವೈರಿಯು ಕಾಯ್ತಾ ನಮ್ಮನ್ನೂ ತಮ್ಮಾ |



3) ತುರಗವನ್ನು ನೀನು ನಡೆಸು ಹರಿಗೆ ನೀಸಾರಥಿಯಾಗಿ ಪರಮ ಕೃಷ್ಣಾನಿಧಿ ನಮ್ಮಾ ಕಾಯ್ದನೂ ಪಾರ್ಥಾ || (ಯಕ್ಷಗಾನ ಅಟ್ಟತಾಳ)

**|| ಅಟ್ಟತಾಳ ||**

ಪರಮನಿಧೀ | ಕೃಷ್ಣಾ ನಮ್ಮ ಕಾಯ್ದನೂ ತಮ್ಮ | (ಮೇಗಳ ಎರಡು ಪದಗಳನ್ನು ಅಟ್ಟತಾಳಕ್ಕಾಡುವುದು)

**|| ಭಾಮಿನಿ || ಅರ್ಜುನ || ರೇಗುಪ್ತಿರಾಗ || ಅಣ್ಣ ಧರ್ಮರಾಜನಿಗೆ ||**

ನುಡಿಯ ಕೇಳುತ (ಪಾರ್ಥಾ) ಲಾಗಪಲ್ಲುಣಾ | ಕಲ್ವದ ಕಗಡೆಲೊಡೆದ ತೆರನಂತೇ ಘರ್ಜಿಸೀ || ಪೊಡವಿಗುರುಳಿಸುವೆ ನಿನ್ನ ಶಿರವ || ತರಿದುಬಿಸುಡುವೆನೆಂದೆನುತ ಕಡು ರೋಷದಲೀ ನುಡಿದ ಪಾರ್ಥಾ ಧರ್ಮಜನೇ

**|| ಕಾನಡ ರಾಗ||**

**|| ಆದಿತಾಳ + ಅಟ್ಟತಾಳ || ಕರ್ಣಖುಷ್ಯ ಸೇನನ ಮರಣದಲ್ಲಿ ||**

ಎತ್ತೀ ಸಾಕಿ ಸಲಹಿದಂತಾ | ತೋಳುತೊಡೆಯೂ | ವ್ಯರ್ಥವಾಯಿತೂಯನ್ನಾ ಬಾಳೂ = ಅಟ್ಟತಾಳದಲ್ಲಿ = ವ್ಯರ್ಥವಾಯ್ತು ಎನ್ನಾ ಬಾಳೂ ಪೃಥ್ವಿಯೊಳಗೇ |

**|| ಕುರುಜಂಪೆ || ಶಲ್ಯ ಕರ್ಣನಿಗೆ || ರೇಗುಪ್ತಿ ರಾಗ ||**

ವೀರನಾರಾಯಣನು | ಪಾರ್ಥನಿಗೆ ಸಾರಥಿಯೂ । ಧಾರುಣಿಗೆ ರಥವನ್ನು ಬತ್ತಿ ತುಳಿಯುವನೂ | ಕೊರಳಿಗೊಡ್ಡಿದ ಶರವ (ಬಾಣ) ಉರಕೆ ಸೇರಿಸು ನೀನು | ಹರಿದು ಪೋಪುದು ಆಗನರನ ಶಿರವಾ

**|| ಗೌಳರಾಗದಲ್ಲಿ | ಭಾಮಿನಿ | ಕರ್ಣ||**

ಸರಿದ ಶಲ್ಯನ ನೋಡಿ | ಕರ್ಣನು | ಹರಹರಾ ಇಂಥಾಯ್ಕೆ | ಶಲ್ಯಕೋಪಿಸಿ ಪೋದೆನೆನುತಲಿ | ಬರಿದೆ ಯೋಚಿಸಿದೊಡೆ ಫಲವಿಲ್ಲೆನುತ । ನರನಕೊಲ್ಲದೆ ಬಿಡೆನು! ತುರುಗವನು ಸಂತೈಸಿ | ಕರದಿ ಧನುಶರವ ಪಿಡಿದು | ತಾನೇ ರಥವೇರಿ ಹರಿಸುತಲಿರಥವನು। ಶರಪ್ರಯೋಗಿಸಿದನು ಪಾರ್ಥಂಗೆ

**|| ಮಟ್ಟತಾಳ || ಕರ್ಣ ಪಾರ್ಥನಿಗೆ | ಕರ್ಣಪರ್ವ ||**

ಎಲವೊ ಇಂದ್ರ ಸುತನೆ ಕೇಳು (ಗತಿ) ಗೆಲಿದೆನೆಂದು ಉರಗ ಶರವ 1 ಎಲ್ಲೆ ಮೀರಿ ಮೆರೆಯಬೇಡ | ಅಧಮ ಕೇಳಲೋ

**|| ಮಟ್ಟತಾಳ ||**

1. ಅರ್ಜುನ | ಮತ್ತೆ ಪಾರ್ಥ ಕೋಪದಿಂದ | ಹತ್ತು ಶರವ ಹೊಡೆಯಲಾಗ | ರಕ್ತಧಾರೆ ಸುರಿದುದಾಗ | ಧರಣಿಗಾಕ್ಷಣಾ || ಕರ್ಣ ಮಡಿದನೂ

**|| ಕುರುಜಂಪೆ ||**

2. ಹೂಡಿದನು ಧನುವನ್ನು ಭರಸೆಳೆದು ಆರ್ಭಟಿಸಿ | ಮಾಡಿದನು | ಶಿರಕಾಗ ಗುರಿಯಾ | ನೋಡೆ ಸಾರಥಿ ನೀನು ಮೂಡಿಗೆಯ ತೆಗೆಯುವೆನು | ಈವುರುಗ ಶರದೀ ॥

**|| ಅಷ್ಟತಾಳ || ಅರ್ಜುನ ಕೃಷ್ಣನಿಗೆ || ಕಾನಡರಾಗ ||**

1) ಕೇಳೋ ಮಾಧವ ನೀನು | ಪೇಳಲಂಜುವೆನಯ್ಯ ! ಕೇಳೊ ಭಾವಾ ಕರ್ಣನ್ಯಾರೋ ಧನುವನೆತ್ತಾಲಾರೆ | ಕೂರ್ಘಣೆ ತೊಡಲಾರೆ | ಕರ್ಣನ್ಯಾರೈ |

**|| ಅಷ್ಟತಾಳ ||**

2) ಅಣ್ಣ ಧರ್ಮಜನಂತೆ | ಕಾಣುವ ನೀತನೂ | ಕರ್ಣನ್ಯಾರ್ ಕೇಳೈ ಕೊಲಿಸದಿರೋ ನಮ್ಮ ಕುಲವೃಕ್ಷವ ನೀನು ಕರ್ಣನ್ಯಾರೆ

3) ಇಂದಿರ ಪತಿ ನಿನ್ನ | ಚರಣಕ್ಕೊಂದಿಪೆನಯ್ಯಾ | ಕರ್ಣನ್ಯಾರೂ ಕೇಳ್ವೆ | ಇಂದಿವನನು ನಾನು | ಕೊಲ್ಲಲಾರೆನು ದೇವ ಕರ್ಣನ್ಯಾರೂ

**|| ಅಷ್ಟತಾಳ || ಬ್ರಾಹ್ಮಣ ವೇಷದಲ್ಲಿ ಕೃಷ್ಣ | ಕರ್ಣನ್ನು | ಕಾನರ ರಾಗ ||**

ಕೊಡುವುದಾದರೆ ಕೊಡು ಕರ್ಣ ಕುಂಡಿಲವನ್ನೂ ಕೊಡುಧಾರೆಯ ನೆರೆದೂ ಬರುವುದು ಧರಣೀಯೊಳ್ ಕೀರ್ತಿಯು ನಿನಗೆ | ಧಾನಶೂರಾನೆಂದು ||

**|| ಕಮಲ ರಾಜ ಶ್ರೀ ಹರಿಗೆ ||**

**||ಜಂಪೆತಾಳ | ರತೀಕಲ್ಯಾಣ ||**

ಆತಾನಿಗೋಲೆಯನು || (ಒಂದು ಗತಿ) || ಆತನಿಗೋಲೆಯನೂ ಕೊಡದೇ ಇರುವೆನು ದೇವಾ ಅತಿಬೇಗದಿಂದಾಲಿ | ಪೂರೈಸಿ ಲಗ್ನವನೂ

**|| ರೇಗುಪ್ತಿ ಅಷ್ಟತಾಳ || ದೌಪದಿ | ಕೃಷ್ಣನಿಗೆ || ರತೀ ಕಲ್ಯಾಣದ ಕಥೆ ||**

1) ಕರುಣವಾರುದಿ ನಿಮ್ಮ ಕೃಪೆಯಿಂದ ತಿರುಗಿದೇ || ಶ್ರೀನಿವಾಸ | ಕೇಳೊದೇವಾ || ಶ್ರೀನಿವಾಸಾ || ಪುರದೊಳು ಕಮಲಾವತಿಯನ್ನು ಹೊಳಹೊಕ್ಕೆ ಶ್ರೀನಿವಾಸಾ |

**|| ರೇಗುಪ್ತಿ ಅಷ್ಟತಾಳ || ರತೀ ಕಲ್ಯಾಣ |**

2) ಕಮಲಭೂಪಾಲಗೆ | ಬಾಲಕಿ ಇರುವಳು | ಶ್ರೀನಿವಾಸಾ || ಕಾಮಗೆ ತಕ್ಕಂತ ಕಡು ಚಲ್ವೆ ಆಕೆಯು (ಶ್ರೀನಿವಾಸಾ) 2 ಕಾಲ | ಕಾಮಗೆ ತಕ್ಕ ಕಡು ಚಲ್ವೆ



ಆಕೆಯು ಶ್ರೀನಿವಾಸಾ | ಕಡುಚೆರತಿಯು ಪಂಚಬಾಣಗೆ ತಕ್ಕ ಕನ್ನಿಕೆಯೂ

**| ರೇಗುಪ್ತಿ ಅಷ್ಟತಾಳ | ದೌಪದಿ | ಶ್ರೀ ಹರಿ ಶ್ರೀ ಕೃಷ್ಣನಿಗೆ)**

3) ಪಂಚಬಾಣಗೆ ಕೊಟ್ಟು ಪರಿಣಯವೆಸಗೆಂದೇ ಶ್ರೀನಿವಾಸ | ನಿಂದಿಸಿಮತವನ್ನೂ ಜರಿದು ಮಾತಾಡಿದ ಶ್ರೀನಿವಾಸಾ ||

**|| ರೇಗುಪ್ತಿ ಅಷ್ಟತಾಳ || ಬ್ರೌಪದಿ (ಶ್ರೀ ಹರಿಗೆ ) ||**

4) ನಾಳೆ ಹನ್ನೆರಡುಗಳಿಗೆಯೋಳ್ ಪುರವನ್ನು ಶ್ರೀನಿವಾಸ | ಕೇಳೋ ದೇವಾ ನಿನ್ನ ಪಟ್ಟಣವನ್ನು ಸೂರೆ ಮಾಡುವೆನೆಂದು | ಪಂಥದಿ ನುಡಿದೆನು || ಶ್ರೀನಿವಾಸಾ ||

**|| ಶಲ್ಯ ಕರ್ಣನಿಗೆ || ಕಾನಡರಾಗ || ಕರ್ಣ ಪಕ್ವ || ಅಟ್ಟತಾಳ ||**

1) ಧಾತುಗೆಡಿಸಿದೇ | ಧರ್ಮಪುತ್ರನಾ | ಮಾತಿನಂದದೀ ಕೊಲ್ಲು ಇವನನೂ

2) ಕೇಳೋ ಮುರರಿಗೂ || ಕಮಲಲೋಚನ | ತಾಳಲಾರೆನೂ | ಒಡಲ ಉರಿಯನೂ

**|| ಆದಿತಾಳ + ಅಟ್ಟತಾಳ | ಐರಾವತ ಕಥೆ | ಗಜಗೌರಿ ವಥ | ಕೌರವ ಗಾಂಧಾರಿಗೆ ||**

ಕಾಂತೆ ಗಾಂಧಾರಿಯೇ ಕೇಳು | ಯಮ್ಮಕುವರ | ಕೌರವರನೂ | ಕೇಡು ದುರ್ಗುಣಹೀನಾರೆಂದು | ಜನರೂ ನುಡಿವಾರೂ || ಅಟ್ಟತಾಳ || ಕೇಡು ದುರ್ಗುಣ ಹೀನರೆಂದು ಜನರು ನಡಿವರೂ

**|| ಅಷ್ಟತಾಳ | ನಾರದ | ಗಾಂಧಾರಿಗೆ | ಐರಾವತ ಗಜಗೌರಿ ವ್ರತ ||**

ನಡೆಸು ನೀಗಜಗೌರಿ ಪ್ರಥವನ್ನು ಪೂಜಿಸುಗಾಂಧಾರಿ | ಆನೆಯ ಮಾಡಿಸು ಗೌರಿಯ ಕೂರಿಸು | ಗಾಂಧಾರಿ ||

**||ರೇಗುಪ್ತಿ ಅಷ್ಟತಾಳ | ಗಜಗೌರಿ ವಥ | ಐರಾವತ ಗಜಗೌರಿ ಪ್ರಥ ||**

ಕರೆಸು ನೀನೆಲ್ಲರ | ಕೊಡಿಸು ಧಾನವ ನೀನೂ ಗಾಂಧಾರಿ / ಸಕಲ ಸ್ತ್ರೀಯರ ಕುಂತಿಯ ಕರೆಸು | ಹರುಷದಲಿ ಪೂಜಿಸು ಗಾಂಧಾರಿ ||

**|| ಜಂಪೆತಾಳ || ಭೀಮ | ಕುಂತಿದೇವಿಗೆ | ಕಥೆ ಗಜಗೌರಿ ವಥ ||**

ಯಾಕೇ ಚಿಂತಿಪೆ ತಾಯೇ || ಈ ಪರಿಮನನೊಂದೂ | ಚಿಂತೆಯ ವಿವರವನೂ ಅರುಹೂ | ನೀಯನಗಿನ್ನೂ ||



**|| ಮಟ್ಟತಾಳ | ಇಂದ್ರಜಿತು ಕಾಳಗ | ಲಕ್ಷ್ಮಣನಿಗೆ ||**

ಅಧಮ ದುರುಳ ಭಗೆವೆ ಕರುಳ | ಮನದ ಘರ್ವದಿ | ತಲೆಗೆ ಪಿತ್ತವೇರಿತೆಲವೋ ಅಧಮ ಕೇಳಲೋ || (ಸುತ್ತಾರ್ಕೆ) ಅಧಮ ದುರುಳ || ಬಗೆವೆ ಕರುಳ | ಮನದ ಗರ್ವದೀ ||

**|| ಜಂಪೆತಾಳ | ಮಹಿರಾವಣನ ಕಥೆ | ಐರಾವಣ (ರಾವಣ) ||**

ಹರ ಹರ ಇಂಥಪ್ಪಾ | ಮಗನೆ ಅಳಿದೆಯಾ ಹಗೆಯಾ | ಕರವಾ ಪಿಡಿದಳು ಸಿರಿಯು ವರಲೀ ಫಲವೆಂದಾ ||

**|| ಜಂಪೆತಾಳ || ಮಹಿರಾವಣ | ರಾವಣನಿಗೆ||**

ಕ್ಷೇಮದಿಂದಿಹರೆನ್ ಮಂದೀಮಾರ್ಭಲವೆಲ್ಲಾ ಕುಂದೇನು ಬಂದಿಹುದು | ಮಂಡೋದರಿ ರಮಣಾ |

**|| ಗೌಳರಾಗ ||**

**|| ಭಾಮಿನಿ || ಕುರುಕ್ಷೇತ್ರದಲ್ಲಿ | ಭೀಮನು ||**

ಧರಣಿ ಪಾತ್ರನೆ ಕೇಳಿತ್ತ | ವೀರದುಷ್ಯಾಸನನು | ಮರುತಸುತ ಭೀಮನಂ | ಧರಣಿಗೊರಗಿಸಲು | ಹರಹರಾ ಎಂದೆನುತ | ಭೀಮ ಹರನಂ ಭಜಿಸಿ | ವರವಂ ಪಡೆದು | ರೌದ್ರರೂಪಂ ಪಡೆದು | ಮತ್ತೆ ದುರಕನು ವಾದ | ಕಲಿಭೀಮಾ |

**|| ಭಾಮಿನಿ || ಭೀಮಾ || ರೇಗುಪ್ತಿ ರಾಗ ||**

1) ತೊತ್ತಿನಂದದಿ ಭಗೆದೆ ನಿನ್ನನು ಮೂಢ | ದೃಪದ ಸುತೆಯಳ | ಹುಟ್ಟ ಸೀರೆಯನು ಸೆಳೆದೆ | ಮೃತ್ಯು ಮಾರಿಗೆ | ತುತ್ತು ಮಾಡುತ | ಹದ್ದು ನಾಯಿ ಕಾಗೆಗಳೆ ಬನ್ನಿರೆಂದೆನುತ | ನಿಮ್ಮವರು ಎತ್ತಹೋದರು ಎಂದೆನುತ | ಉಬ್ಬುಬ್ಬಿ ಚಪ್ಪರಿಸುತ | ಘರ್ಜಿಸಿದ ಕಲಿಭೀಮಾ

2) ಎನುತ ಉದರವ ಬಗೆದು | ಕರುಳ ಧೂಮಾಲೆಯಂ ಧರಿಸಿಕೊಂಡು ಭುಬತಲಿ| ಹರರೆ ರಕ್ತರುಚಿಸಿದೆನುತ ಘರ್ಜಿಸಿದ ಕಲಿಭೀಮಾ

**|| ರೇಗುಪ್ತಿ ಅಷ್ಟತಾಳ ||**

**|| ಅರ್ಜುನ | ಬಬ್ರುವಾಹನರ ಕಾಳಗ ||**

ಕ್ಷತ್ರಿಯನಾದೊಡೆ | ಕ್ಷಿತೆಯೊಳು ಬೆದರದೆ ಅತಿಶಯದೀಮಾಡೊದೂರವಾ ಈಕ್ಷಿಸುವನು ನಿನ್ನ ಶೌರ್ಯ ಪ್ರಥಾಪವ | ವಧಿಸದೆ ಬಿಡೆನೂ ನಿನ್ನಾ ||

**|| ಭಾಮಿನಿ | ಶಲ್ಯ ಕೌರವಗೆ || ರೇಗುಪ್ತಿ ರಾಗ || ಕರ್ಣ ಪರ್ವ||**

ಕೌರವನ ನುಡಿಯ ಕೇಳುತ ಕಂಗಳಲಿ ಕಿಡಿಗೊಳುತ ಶಲ್ಯ | ಕಡಿವೆ ನಿನ್ನನು ನುಡಿ ನುಡಿ ಇನ್ನೊಮ್ಮೆ ನುಡಿದರೆ | ಬಿಡದೆ ಕಡಿಯುವೆನೆಂದೆನುತ | ಘುಡಿಘಡಿಸಿದನು! ಶಲ್ಯ ಭೂಪತಿಯೂ |

**|| ರೇಗುಪ್ತಿ ಅಷ್ಟತಾಳ || ಶಲ್ಯಪದ | ಕೌರವನಿಗೆ | ಕರ್ಣ ಪರ್ವ ||**

ಬರುವೆ ನಿನ್ನಯ ಕಾರ್ಯಕ್ಕಾಗಿ | (ಒಂದು ಗತಿ) | ಬರುವೆ ನಿನ್ನಯ ಕಾರ್ಯಕ್ಕಾಗಿ | ಕರ್ಣಗೆ ನಾನು ದುರಕೆ ಸಾರಥಿಯಾಗುವೆ | ಇರುವದೊಂದು ಸುರನಾ ಪೇಳಿದಂದಳವನ್ನು ತಿರುಗುವೇ ಕೇಳದೊಡೇ ||



**|| ಭಾಮಿನಿ || ಬಬ್ರುವಾಹನ ಕಾಳಗ || ಅರ್ಜುನ ||**

ಇಂತು ಶ್ರೀಹರಿಯಿಂದಪ್ಪಣೆ ಕೈಗೊಂಡು | ಕಲಿಪಾರ್ಥ 1 ರೂಢಿಯೊಳುಯನ್ನಂಥ ವೀರರಾರಿ ಹರೆನುತ | ಅತಿಗರ್ವದಲಿ ಠೀವಿಯಿಂಬರುತಿರ್ದ ಹಯಸಹಿತಾ

**|| ಕುರುಜಂಪೆ || ಅರ್ಜುನ** ||

ಕಾಲಪಾಳಯದಂತೆ | ಕಮಲನೆದೆ ಬಿರಿದಂತೇ | ಮೂಲಬಲಾಸಹಿತ | ಮೂಲೋಕದಾ ಗಂಡ | ತೆಂಕಣಾ ಮುಖವಾಗಿ ನೀಲಧ್ವಜನಪಟ್ಟಣಕೆ ನಡೆತಂದಾ |

**|| ರೇಗುಪ್ತಿ ತಾಳ || ಅಷ್ಟತಾಳ || ಬಬ್ರುವಾಹನ ಪ್ರವೇಶ ||**

ಉತ್ತಮ ಮಣಿಪುರದರಸಿನ ಚಾವಡಿ | ಹತ್ತು ಸಾವಿರ ಕಂಬದೀ | ಕೆತ್ತಿದ ನವರತ್ನ ಮುತ್ತು ಮಾಣಿಕ್ಯರತ್ನ | ವಜ್ರದ ಪ್ರಭೆಗಳಲೀ

**|| ಬಬ್ರುವಾಹನ | ಚಿತ್ರಾಂಗದೆಗೆ ||**

**|| ರೇಗುಪ್ತಿ ಅಷ್ಟತಾಳ ||**

ಪಾರ್ಥನೆಂಬುವರು ಯಾರು | (ಒಂದುಗತಿ) | ನಾನವರಿಗೆ ಪುತ್ರನು ಹೇಗಾದೆನೂ ಸಾರ್ಥಕವಾಯಿತು ಯನ್ನ ಜನ್ಮವು | ಕೀರ್ತಿಯ ಪಡೆವೆನಾನೂ

**|| ರೇಗುಪ್ತಿ ಅಷ್ಟತಾಳ | ಬಬ್ರುವಾಹನ ಪಾರ್ಥನಿಗೆ||**

ಮನ್ನಿಸಬೇಕಯ್ಯಾ ಯನ್ನ ಪರಾಧವ ತಂದೆ ತಂದೆ ಕೇಳೇ ತಂದೆ || ಅರಿಯದೋದೆನು ನಾನು ಜನಕನೆಂಬುದ ನಾನೂ ತಂದೆ ತಂದೆ |

**|| ಜಂಪೆತಾಳ ||**

ಚಿತ್ರಾಂಗದೆಯು ತಾಯೇ | ಪಾರ್ಥನೆಂಬುವ ತಂದೇ ಕ್ಷತ್ರಿಯಾವಂಶದೊಳುದಿಸಿ (ನಾನು ಕೀರ್ತಿಯ ಪಡೆದ) || ವೀರನ ವಂಶದಿ ಜನಿಸಿಹೆನೂ

**|| ತೋಡಿ ರಾಗ || ಭಾಮಿನಿ || ಜಯವಿಜಯರು ||**

1. ಅತ್ತರೇನಾಗುವುದು ಸತಿಯಳೇ || ಅತ್ತವರು ಹೆತ್ತವರು | ಹೊತ್ತವರು | ಅತ್ತಳಲ್ಲದೆ ಇತ್ತಲುಳಿವರೇ ಕಾಂತೆ ಕೇಳ್ ಪೂರ್ವ(ದಲಿ) ಜನ್ಮದಲಿ | ಲಕ್ಷ್ಮೀಲೋಲನ | ವೈಕುಂಠದ್ವಾರಪಾಲಕರು ನಾವುಗಳು | ಜಯವಿಜಯರೆಂಬ ನಾಮದಲೀ ||
2. ಆಗ ಸನಕತ್ ನಂದನ ಸನತ್ತು ಜಾತರು | ಹರಿಯದರುಷನಕೆ ಬರಲು | ನಾವು ದ್ವಾರದಲಿ ತಡೆದೆವು | ಋಷಿಗಳಿಗೆ ಮಗೆ | ಶಾಪವಿತ್ತರು || ರಾಕ್ಷಸರಾಗಿ ಜನಿಸಿದರೆಂದು ರಮಣೀ



**|| ರಾಗ ತೋಡಿ || ಅಟ್ಟತಾಳ || ಮಹಿರಾವಣನ ಕಥೆ | ಆಂಜನೇಯ ಜಾನಕಿಗೆ ||**

ಅಯ್ಯಯ್ಯೋ ಅವನಿಜೇ ಜಾಣೆಯರೊಳು ಪ್ರಿಯೇ | ಮಯ್ಯಾ ಚಾಚುವುದಾಯ್ಥೇ ಧರೆಗೇ ಅಮ್ಮಯ್ಯಾ |

**ತೋಡಿರಾಗ ಅಷ್ಟತಾಳ || ಕರ್ಣಪತ್ವ | ಕೌರವ ಕರ್ಣನಿಗೆ||**

1. ಏನಾಯಿತಿಂದೀನಲಿ ಮಾನನಿ ನಿಧಿ ಕಲಿಕರ್ಣಾ | ಮಾನನಿಧಿಗಳಿಗೇಕೆ | ಈ ಪರಿಯಾ ಮೌನಾ ||
2. ಅಧಿರಥ | ಮಹಾರಥರ | ಜೊತೆಗೆ ನಾ ಕೊಟ್ಟಿರಲೂ ಮತಿಯು ಸಾಲದೆ ರೀಪುಮಲ್ಲಾರಗೆಲಲೂ

**ದೇಶ್ ತೋಡಿ ರಾಗ**

**|| ಭಾಮಿನಿ || ಕರ್ಣಪತ್ವ || ಧರ್ಮರಾಯ | ಕೃಷ್ಣನಿಗೆ||**

ಪಾರ್ಥನುಡಿದ ಹೀನ ಮಾತುಗಳಿಗೆ | ಅಂದು | ಸಹಿಸದೆ ಧರ್ಮಜನು | ತಂದೆ ದೇವ ಶ್ರೀಹರಿ | ಮಂದಭಾಗ್ಯನು ನಾನು | ನನ್ನಿಂದ ನಮ್ಮವರಿಗೆ ಭವಣೆಯಾಯಿತೆಂದೆನುತ | ನೇತ್ರದಲ್ಲಿ ಜಲವಂಸೂಸುತ | ರಾಜ್ಯಬೇಡ ಸಿರಿ ಬೇಡ ಗೋವಿಂದ ಮುಕ್ತನ ಮಾಡಿ | ಸಲಹೆಂದೆನುತ ಕೈಮುಗಿದ ಧರ್ಮಜನೂ

**||ಆದಿತಾಳ + ಅಟ್ಟತಾಳ | ಧರ್ಮರಾಯ ||**

1. ಬೇಡವೆನಗೇ ! ದೊರೆತನವು | ಕಾಡಿನೊಳಗೇ ಇಹುದೇ | ಘನವೂ ಪಾರ್ಥ ಪಡೆದ ರಾಜ್ಯವನ್ನೂ ಅವನೆ ಪಾಲಿಸಲಿನ್ನೂ ಹರಿಯೇ ‖ ಬೇಡವೆನೆಗೆ ದೊರೆತನವೂ ಕಾಡಿನೊಳಗೆ ಇಹುದೇ ಘನವೂ

2. ಈ ದೇಶ್ ತೋಡಿ ರಾಗ || ಅಟ್ಟತಾಳ || ಪಾರ್ಥನೀನೇಗೆಲಿದಂಥಾ | ರಾಜ್ಯಸೀಮೇ ಭೂಮಿಗಳನೂ | ನೀವೆ ಪಾಲಿಸಿ ಭೋಗ ಸುಖದೀ | ಪೋಪೆ ನಾನು ವನಕೇ ಈಗಾ

**|| ಶಂಕರಾಭರಣ ರಾಗ || ಭಾಮಿನಿ | ಕೃಷ್ಣ ಪಾರ್ಥನಿಗೆ||**

ಪಾರ್ಥ ಕೇಳ್ ನಾಡೊಳಗೆ ಘರ್ವದಿಂದಾ | ತಾಮಾಡಿದ ಕಾರ್ಯವ ಆಡಂಭರದಿ ತಾಹೊಗಳಿ ಕೊಂಡರೆ | ತನಗೇಮರಣವು | ಮಾಡುಬೇಗದಿ | ಆತ್ಮಕೃತಿಯನು | ಓಡಿಪೋಪುದು ಅಘವು | ಶೀಘ್ರದಿ ಧರ್ಮಜನಡಿಗೆರಗಿ | ಕರೆತಾರೆಂದ ಶ್ರೀ ಹರಿಯೂ



**ತೋಡಿರಾಗ**

**|| ಅಟ್ಟತಾಳ | ಗಜಗೌರಿ ಪ್ರಥ | ಗಾಂಧಾರಿ ದೃತರಾಷ್ಟ್ರನಿಗೆ||**

ಜಗದೊಳಗೇ ಜಗಜ್ಜನರೂ | ದುರ್ಗುಣರೂ ಕೌರವರೂ ಎಂದೆನುತ ತನುಡಿಯುವರೂ | ಕೊರತೇ ಬಂದಿತೂ ಮನಕೇ

**|| ಅಟ್ಟತಾಳ || ಅರ್ಜುನನಿಗೆ | ಬಬ್ರುವಾಹನ ಕಾಳಗದಲ್ಲಿ||**

ಅಂಗಾಹರೀಣಾ, ಭಾರದ್ವಾಜ | ಮುಂಗೂಸಿ ಮರ್ಜಾಲ | ಈ ಪರಿಯೊಳ್ | ಅಪಶಕುನ | ಅವನೀ ಪಾಲನೀಗೇ

**|| ಮಧ್ಯಮಾವತಿ ರಾಗ ||**

**|| ಅಟ್ಟತಾಳ || ಕುರುಕ್ಷೇತ್ರ | ಕರ್ಣಪರ್ವ | ಕೌರವ ಪದ||**

1) ನೋಡಿದರೆ ಪಾಂಡವರು | ಕಡುಪರಾಕ್ರಮಿಗಳೂ || ಇಳೆಯೋಳು ಗೆಲುವಂತ ಸುಭಠರ ಕಾಣೇ |

2) ಮೂರೂ ಲೋಕದೊಳೊಬ್ಬ | ವೀರಅರ್ಜುನನೊರೆತು || ಬೇರೆ ಭಟರ ಕಾಣೇ ಧಾರುಣಿಯೊಳಗೇ |

3) ಬಲರಾಮನಿಹನೆಂದೂ | ಬಹಳಾ ಧೈರ್ಯದೊಳಿದೆ | ಇಳೆಯೊಳ್ ಭೂಪ್ರದಕ್ಷಿಣೆ ಬಂದೀತು ಆವರ್ಗೇ

4) ಜಲದಾಂಕ ಭೀಷ್ಮರಿಗೆ ಸರಳಾ ಮಂಚಗಳಾಯ್ತು || ಬಿಲ್ಲೂರಿದು ವಿಧುರಾನು ಮೊದಲೇ ಜಾರಿದನೂ

5) ಗರುಡೀಯಾಚಾರ್ಯರಿಗೇ | ದುರದೊಳ್ಪಜಯವಾಯ್ತು || ಹರಕರುಣೆ ತಪ್ಪಿದೊಡೆ ವರಲೀ ಫಲವೇನು |

**|| ಭಾಮಿನಿ | ಶಲ್ಯ | ಕರ್ಣನಿಗೆ||**

ನಂಬಿ ಹಿಡಿದರೇ ನದಿಯ ಮಗ | ಹಗೆ ಅಂಬಿಗಿತ್ತನು ಕಾಯುವನೂ | ಮಗನೆಂಬ ನೆಪದಲ್ಲಿ ದ್ರೋಣ ಪ್ರಾಣವ ಬಿಟ್ಟ | ಅಂಬಿವ್ಯಸನದಿ ಬೇಡೆ | ಮರಳಿ ತೊಡುಬಾಣವ ಎಂದರೆ ತೊಡದೆ ನೀ ಕೇಳೆದೆ ಕೆಟ್ಟೆ | ನಮ್ಮನು ನಂಬಿ ಕೌರವ ಕೆಟ್ಟ ನಕಟ ಎಂದನಾ ಶಲ್ಯ |

**|| ತೋಡಿ ರಾಗ||**

**|| ಅಟ್ಟತಾಳ || ಕರ್ಣಪರ್ವ | ಕರ್ಣ||**

ಶಿವಶಿವ ಸಮರಾದಿ || ಕೈಸೋತೆ ಭುವನೇಶಾ || ಮಮತೆಯಲೀ ಕಷ್ಟಕ್ಕಾಗುವೆನೆಂದು | ಸಲಹಿದನೂ ಕುರುಪತಿಯೂ



**|| ಅಟ್ಟತಾಳ | ಇಂದ್ರಜಿತು ಕಾಳಗ | ಆಂಜನೇಯ - ಶ್ರೀರಾಮನಿಗೆ ||**

ಏನ ಹೇಳಲಿ ನಾನೂ 1 ಮಾನುನಿಯ ಹಿಡಿ ತಂದೂ || ದಾನವನಾ ತನಯಾನೂ ಶಿರವನ್ನೂ ಹರಿದಾ ॥

**|| ಶುದ್ಧ ಯಕ್ಷಗಾನದಲ್ಲಿ | ದೇಶ್ ತೋಡಿ ರಾಗ ||**

**ಆದಿತಾಳ + ಅಟ್ಟತಾಳ || ಅಹಿರಾವಣ ಮತ್ತು ಮಹಿರಾವಣ ಕಥೆ ||**

**|| ಜಾನಕಿ ಮಾರುತಿಗೆ ||**

1. ಬೇಂಟೆಗಾರನಿಟ್ಟಾ ಬಲೆಗೆ | ಬಿದ್ದ ಹುಲ್ಲೇ ಕರುವಿನಂತೆ ಸಿಕ್ಕಿ ನಾನು / ಬಾಯ್ ಬಾಯ್ ಬಿಡುತಲಿಹೆನೂ
2. ರಕ್ಕಸರಬಾಧೆಗಳಿಗೆ ಬಿದ್ದ ಹುಲ್ಲೇ ಕರುವಿನಂತೇ ಪವನಜ | ಪಾಪಿ ಇದ್ದಾ ಬಳಿಗೇ ನೀನೂ

   ಬಂದೆ ಏನೋ | ಕಂದಾ

**|| ರತೀ ಕಲ್ಯಾಣ | ದ್ರೌಪದಿ ||**

**|| ದೇಶ್ ತೋಡಿ ಕಂದ ||**

ಹರಿಹರಿ ಜನಾರ್ಧನಾ ಲಕ್ಷ್ಮೀಕಾಂತ | ಶ್ರೀಹರಿಗೋವಿಂದ ಹರಿ ಮುರಾರಿಯೆ ಹರಿಸನಕತಸನಂದ ವಂದಿತನೇ ಮಧ್ಯಾಂತ ರಹಿತ |

**|| ದ್ರೌಪದಿ ಆದಿತಾಳ ||**

ಕಟ್ಟೇನ್ನೈವಾಯುಜ | ಧಿಟ್ಟಪಾರ್ಥರು ಯನ್ನ ಕುಟೀಕೆಡಹು ತಾಲಹರು | ಪೆಟ್ಟಾನು ತಾಳಲಾರೇ || ಕುಟ್ಟಿ ಬಿಸುಡುವ ತಲೆಯಾ | ದಿಟ್ಟ ಭೀಮೇಶಾ ಕಾಯೋ ನೀ ಮುನ್ನಾ |

**|| ಆನಂದ ಭೈರವಿ ರಾಗ ||**

**|| ಭಾಮಿನಿ || ರತೀಕಲ್ಯಾಣ | ರತಿ -ಕಮಲರಾಜನಲ್ಲಿ**

ಘಡಿಘುಡಿಸುವ ಪಿತನ ನುಜಡಿಯಂ ಕೇಳಿ | ದೌಪದಿಯ ಪಂಥವನು ಲಾಲಿಸಿ ಕಮಲನ ಸುತೆರತಿಯು ಬಂದು ತಂದೆ ಪಾದಕ್ಕೆರಗಿ | ದೌಪದಿಗೆ ವಂದಿಸುತ ತನ್ನಯ ಪೂರ್ವ ಜನ್ಮದ | ವಿವರವನು ಅರುಹಿದಳು | ತನ್ನಯ ತಂದೆಗೇ ||

**|| ಚಾಲು ಆದಿತಾಳ | ರತಿಪದ + ಅಟ್ಟತಾಳ || ತಂದೆಗೆ**

ಅಪ್ಪಯ್ಯಾ ಲಾಲಿಸು ಯನ್ನ ಭಿನ್ನಪವನ್ನೂ ವಪ್ಪದಿಂದಲಿ ಪೇಳ್ವೆ | ಕೇಳೆನ್ನಾ ಜನಕಾ || ಒಪ್ಪಾದಿಂದಲೀ ಪೇಳ್ವೆ ಕೇಳೆನ್ನಾ ಜನಕಾ |



**|| ಆದಿತಾಳ || ಈ ಧಾರಿ | ರತಿ- ಕಮಲರಾಜನಲ್ಲಿ ||**

ಯಾತಕಿಂತಾಬುದ್ಧಿನಿನಗೆ ತಂದೆ ತಂದೆ | ಉಗ್ರತರವಾಗಿರುವುದೇನು ತಂದೆ ತಂದೇ | ವ್ಯಾಘ್ರನಂತೆ | ಇರುವುದೇಕೆ ತಂದೆ ತಂದೆ (ಅಟ್ಟತಾಳ) ಶೀಘ್ರವಾಗಿ ನುಡಿದುದೇನು ತಂದೆ ತಂದೇ

**|| ಆನಂದ ಭೈರವಿ ರಾಗ ||**

**|| ಕಮಲ || ರತಿಗೆ ||**

ಚಂದವಾಯಿತಮ್ಮ ಮಗಳೇ ರತಿದೇವಿ ಕೇಳು | ಚೋರನೆಂದು ಜರಿದು ನುಡಿದ ರತಿದೇವಿ (ಅಟ್ಟತಾಳ) ಚೋರನೆಂದು ಜರಿದು ನುಡಿದೇ ರತೀದೇವೀ ||

**|| ರಾಧೆ -ರುಕ್ಮಿಣಿಗೆ | ಚಾಲು||**

ತಂಗೀ ನಿನ್ನಯ ಮುಖ | ಕಂದಿಹುದೇತಕ್ಕೆ ಇಂದೂಯನ್ನೊಳು ನೀನು | ನಿಂದು ನೀ ತಿಳಿಸೇ (ಅಟ್ಟತಾಳಕ್ಕೆ) ಇಂದೂಯನ್ನೊಳು ನೀನೂ | ನಿಂದೂ ನೀ ತಿಳಿಸೇ

ದಕ್ಷಯಜ್ಞ ಶಿವ ಪಾರ್ವತಿಗೆ | ಆದಿತಾಳ || ಯಕ್ಷಗಾನ ಅಟ್ಟತಾಳ

ಪೋಪೆ ಯೇನೆ ಯನ್ನ ನಗಲಿ | ಪ್ರಾಣಕಾಂತೆ | ಕಾಂತೆ || ಯನ್ನ ಮೋರೆ | ಎರವಾಯ್ತು | ಪ್ರಾಣಕಾಂತೇ

**|| ಆದಿತಾಳ +ಅಟ್ಟತಾಳ |**

ಯಾರೂ ನಿನ್ನನು ಈಗ ದೂರಿ ದರೆಲೆ ತಂಗೀ | ಮಾರಪಿತನು ನಿನ್ನಾ | ದೂರಿಂದಾನೇನೇನೇ || ಮಾರಪಿತನು ನಿನ್ನ ದೂಂದಾನೇನೇ

**|| ಆನಂದ ಭೈರವಿ ||**

**|| ಬಾಲಗೋಪಾಲರನ್ನು ಕುಣಿಸಲು || ಏಕತಾಳ ||**

ಬಾಲಗೋಪಾಲ ಬಾಲ (ಒಂದುಗತಿ ಮುಕ್ತಾಯ)

**|| ಆದಿತಾಳ ||**

ಬಾಲಗೋಪಾಲ ಬಾಲ | (ಒಂದು ಗತಿ) || ವಸುದೇವ ದೇವ || ವಸುದೇವ ವೈಕುಂಠ ವನಮಾಲಾ || ಅಟ್ಟತಾಳಕ್ಕೆ | ವಸುದೇವಾ ವೈಕುಂಠವನಮಾಲಾ || ಯಕ್ಷಗಾನದ ಅಟ್ಟತಾಳ |

**|| ದಕ್ಷಿಣಾದಿ ಏಕತಾಳ ||**

ಶಂಕು ಚಕ್ರಾಂಕಿತ (ಒಂದುಗತಿ ಮುಕ್ತಾಯ) || ಶಂಕುಚಕ್ರಾಂಕಿತ ವನಮಾಲಾ ದೇವ | ಪಂಕಜನಾಭಾನೆ ಗೋಪಾಲ || ಅಟ್ಟತಾಳಕ್ಕೆ | ಪಂಕಜನಾಬಾನೆಗೋಪಾಲ



**|| ಯಕ್ಕತಾಳ ||**

ಭೂಮಿಯಜನರನ್ನು | ಒಂದುಗತಿ ಮುಕ್ತಾಯ |

**|| ಆದಿತಾಳ ||**

ಭೂಮಿಯ ಜನರನ್ನೂ ಪ್ರೇಮದಿಂಪಾಲಿಪ | ಕಾಮಿತ ಫಲಗಳ | ಕೊಡುವ ದೇವಾದೇವಾ || ಅಟ್ಟತಾಳಕ್ಕೆ ಕಾಮಿತಪಲಗಳ ಕೊಡುವ ದೇವರದೇವಾ ||

**|| ಆದಿತಾಳ + ಅಟ್ಟತಾಳ || ಗಜಗೌರಿ ವ್ರತ | ಧರ್ಮರಾಯ | ಅರ್ಜುನನಿಗೆ ||**

1. ಎಂಥಾ ಪಂಥಾ ಮಾಡಿದೆಯೊ ತಮ್ಮ ತಮ್ಮ ತಮ್ಮ || ಇಂದ್ರನಾನೆ ಧರೆಗೆ ಬಹುದೆ ತಮ್ಮ ತಮ್ಮಾ |

**1 ಆದಿತಾಳ + ಅಟ್ಟತಾಳ ||**

**|| ಇಂದ್ರಾನಾನೆಧರೆಗೆ ಬಹುದೆ ತಮ್ಮ ತಮ್ಮಾ ||**

2. ಸ್ವರ್ಗವೆತ್ತಾ ನಾವಗಳೆತ್ತಾ ತಮ್ಮ ತಮ್ಮಾ ತಮ್ಮಾ | ಬರಿದೆ ಪಂಥವ್ಯರ್ಥವಹುದು ತಮ್ಮ ತಮ್ಮಾ | ಬರಿದೆ ಪಂಥ ವ್ಯರ್ಥವಹುದೂ ತಮ್ಮಾ ತಮ್ಮಾ ಸ್ವರ್ಗವೆತ್ತಾ ನಾವ್‌ಗಳೆತ್ತಾ ತಮ್ಮ ತಮ್ಮಾ

ತೋಡಿ ರಾಗದಲ್ಲೂ | ಅನಂದ ಭೈರವಿ ರಾಗದಲ್ಲೂ ಹೇಳಬಹುದು ಅಟ್ಟತಾಳದಲ್ಲೂ ಹೇಳಬಹುದು.

**|| ಇಂದ್ರಜಿತು ಕಾಳಗ || ಶ್ರೀರಾಮ || ಲಕ್ಷ್ಮಣನಿಗೆ ||**

1. ಬಲು ದಣಿಸಿದೇನಯ್ಯಾ ಬಲವನ್ನು ಇಂದಿನಲಿ || ಬಲುವಂತ ನೀನಿರಲು ಖಳನ ವಧೆಯಾಯ್ತು

2. ಅನ್ನಾವರ್ಜಿತವೆಂತು | ತೋರಿದೆಯೊ ನೀತಮ್ಮಾ | ರತಿಯಾಳ ಸುಖವನ್ನು ಎಂತೂ ತೊರೆದೇತಮ್ಮಾ

**|| ಸುಲೋಚನೆ || ಇಂದ್ರಜಿತು ಕಾಳಗ ||**

**| ಚಾಲಿನಲಿ || ಆದಿತಾಳ + ಅಟ್ಟತಾಳ || ಅಹಿರಾವಣ ಮಹಿರಾವಣ ಕಥೆ |**

**ರಾವಣನಿಗೆ ||**

ಸುಲೋಚಿತ ಪಡೆದಾ ಮಕ್ಕಳನ್ನೆಲ್ಲಾ | ಅಡವಿಪಾಲ್ ಮಾಡಿದರೆ ಪೊಡವಿಪಾಲಿಪರಾರೊ ಭಾವಯ್ಯಾ ಕೇಳೊ || (ಅಟ್ಟತಾಳದಲ್ಲಿ) | ಪೊಡವಿ ಪಾಲಿಪರಾರೊ । ಭಾವಯ್ಯಾ ಕೇಳೋ |



**|| ಚಾಲಿನಲಿ || ಆದಿತಾಳ + ಅಟ್ಟತಾಳ || ಮಂಡೋದರಿ - ಮಗ ಇಂದ್ರಜಿತುವಿಗೆ ||**

1. ಯಾತಕಿಂತಾ ಬುದ್ಧಿ ನಿಮಗೆ ಕಂದ ಕಂದಾ ಬಾಲ | ಪ್ರೀತಿಯೇನೊ ಪರಲೋಕವು ಕಂದ ಕಂದ | ನೀತಿಯಲ್ಲ ಪೋಪುದಿನ್ನು ಕಂದ ಕಂದಾ ಮಗನೆ | ಯನ್ನ ಘಾತಿಸಿ ಪೋಗೊ ಮಗನೆ ಕಂದ ಕಂದಾ || + ಅಟ್ಟತಾಳ

2. ಯಾತಕೆನ್ನ ತಡೆದಿರಯ್ಯಾ | ಬಾಲಕಾರಿರಾ ಹೊತ್ತು ಮೀರಿ ತಣ್ಣಗಳಿರಬಾಲಕರಿರಾ। ಅಟ್ಟತಾಳ | ಹೊತ್ತು ಮೀರಿ ತಣ್ಣಾ ಗಳಿರಬಾಲಕರಿರಾ | + ಅಟ್ಟತಾಳ

**|| ಆದಿತಾಳ + ಚಾಲಿನಲ್ಲಿ || ಕುಂತಿದೇವಿ | ಕರ್ಣನಿಗೆ ||**

1. ಯಾತಕೀ ಪರಿಕೋಪ | ಮಾತಾಲಾಲಿಸು ಸುತನೇ | ನೀಜಾತನಾದುದಪೇಳ್ವೆ ಭೂತಳದೊಳಗೇ || ಅಟ್ಟತಾಳದಲ್ಲಿ || ನೀ ಜಾತಾನಾದುದಪೇಳ್ವೆ ಭೂತಾಳದೊಳಗೇ

**| ಆದಿತಾಳ + ಅಟ್ಟತಾಳ |**

2. ಕರವಾ ಮುಗಿಯುವೆ ನಿನಗೆ | ಶರಗೊಡ್ಡಿ ಬೇಡುವೆ || ಶರವಂದೆ ಗುರಿವಂದೆ |

ಕರವಿಡಿಯೋಕುವರಾ | ಶರವಂದೆ ಗುರಿಯೊಂದೇ ಕರವಿಡಿಯೋ ಕುವರಾ॥

**|| ಆದಿತಾಳ || ಧರ್ಮರಾಯನಿಗೆ ದ್ರೌಪದಿ ||**

ಪೋಪುದೆಲ್ಲಿಗೆ ಕಾಂತಾ ನೀಪೇಟೆ ವೃತ್ತಾಂತ | ಯಾರೊಡನೆ ಸಮರವು ನೀ ಪೇಳೋ ರಮಣಾ || (ಅಟ್ಟತಾಳದಲ್ಲಿ | ಯಾರೊಡನೆ ಸಮರವು | ನೀ ಪೇಳೋ ಕಾಂತಾ ॥

**|| ಚಾಲು + ಅಟ್ಟತಾಳ || ಆದಿತಾಳ || ಐರಾವತ | ಗಜಗೌರಿವ್ರತ | ಗಾಂಧಾರಿ |**

**ಕೌರವನಿಗೆ ॥**

ನೀವಾಡುವ ಮಾತೇನೊ | ಸಹಜವಹುದು | ರಮಣ | ಕುಂದು ಬಾರದ ರೀತಿ | ಮಾಡೂವದೇನೂ 1 + ಅಟ್ಟತಾಳ ಕುಂದು ಬಾರದ ರೀತಿ | ಮಾಡೂವದೇನೂ

**|| ರಾಗ ಆನಂದ ಭೈರವಿ ||**

**|| ಅಟ್ಟತಾಳ || ಸಾರಥಿ ||**

ಸಾರುವೆ ಡಂಗೂರ ಊರೆಲ್ಲಾ ಕೇಳಿರಿ | ಸಾರುವೆ ಡಂಗೂರವ || ಕೌರವನ ತಾಯಿ ಗಾಂಧಾರಿ ದೇವಿಯು ಸಾರುವೆ ಡಂಗೂರವ | ಗಜಗೌರಿ ವ್ರತವನ್ನು ನಡೆಸುವರಿನ್ನೂ ಸಕಲರು ಬರಬೇಕು || ಕೇಳಿದ್ದ ಕೊಡುವರು | ಋಷಿಗಳು ಬರುವರು ಸರ್ವರು ಬರಬೇಕೋ || 2ನೇ ಕಾಲ ||



**|| ಐರಾವತ ಕಥೆ || ಆನಂದ ಭೈರವಿ ರಾಗ |**

**|| ಭಾಮಿನಿ || ಕುಂತೀದೇವಿ ||**

ಈ ಪರಿಯೊಳು ಡಂಗೂರಕನ ವಾರ್ತೆಯಂ ಕೇಳಿ | ಕುಂತಿಯು ಹರುಶಿತಳಾಗಿ ನಮ್ಮಕ್ಕ | ಗಜಗೌರಿ ಪೂಜೆಗೆ ಕರೆವಳೆಂದೆನುತಾ | ಸಂತೋಷದಿಂದಿರಲು | ಕಳೆದುದು ದಿನವಂದು | ರಾತ್ರಿ ಕಳೆಯಲು | ಗಾಂಧಾರಿ ಗೌರಿ ಪೂಜೆಯ (ಪೂಜೆಯ) ಪೂರೈಸಿದಳೆಂಬ ವಾರ್ತೆಯಂ ಕೇಳೀ ಕುಂತಿಯು | ಪುತ್ರರೊಡನೆ | ದುಖಿಃಸುತ | ನಿರ್ಭಾಗ್ಯರುನಾವೆನುತ | ಅಯ್ಯೋ ಅಯ್ಯೋ ಕಡುಧರಿದ್ರರೆನುತ | ಪುತ್ರರೊಡನೆ | ಪೇಳಲು ಭೀಮನು ಸಂತೈಸಿದನು | ಮಾತೆಯನೂ

**|| ಆದಿತಾಳ + ಅಟ್ಟತಾಳ + | ರುಕ್ಮಿಣಿ || ರತೀಕಲ್ಯಾಣದಲ್ಲಿ ಕೃಷ್ಣ ||**

1) ಮುದ್ದೂ ಮೋಹನ್ನಾ ಕೇಳ್ ಯನ್ನ ಭಿನ್ನಪವನ್ನೂ ಯಿದ್ದುದ ಪೇಳ್ವೆನೂ | ಕೇಳೆನ್ನಾ ಕಾಂತಾ ||

(ಅಟ್ಟತಾಳದಲ್ಲಿ) | ಇದ್ದೂದ ಪೇಳ್ವೆನು ಕೇಳೆನಾಕಾಂತಾ |

2) ಯಿನ್ನೇನು ಇಲ್ಲವೋ| ಶ್ರೀ ಹರಿಯೆ ಕೇಳ್ ಸೊಲ್ಲಾ | ತರಳಾ ಮನ್ಮಥನಿಗೆ | ಲಗ್ನಾವೂ ಇಲ್ಲಾ ||

(ಅಟ್ಟತಾಳ) ತರುಳ ಮನ್ಮಥನಿಗೆ | ಲಾವೂ ಇಲ್ಲಾ

3) ನಾನೊಪ್ಪೆ ಮಾತುಗಳಾ | ಕಾತುರದಿ ನೀನಿರುವೆ | ನಾನು ತಿಳಿಸಾಲು ಈಗ 1 ಪೇಳ್ವೆ ಈ ಮಾತಾ ||

4) ಸುಜನಸನ್ನತ ನಿನ್ನಾ ಮಾತೀದ ನೋಡುವೆ | ನಿಜವೊ ಪುಸಿಯೋ ಕಾಣೆನೊ

ರಮಣಾ ||

(ಅಟ್ಟತಾಳ) || ನಿಜವೋ ಹುಸಿಯೋ ಕಾಣೆನೂ ರಮಣಾ |

5) ಜೀವೇಶಾ ಈ ಮಾತು | ಹುಸಿಯಾದರೇ ನಾನೂ | ನಿಮ್ಮನ್ನು (ಬಿಟ್ಟನ್ನೂ) ತೊರೆದೊ ಪೋಪವೂ ನಾವು

**|| ಆದಿತಾಳ + ಅಟ್ಟತಾಳ ||**

**|| ರತೀ ಕಲ್ಯಾಣ | ದೌಪದಿ ಕಮಲರಾಜನಿಗೆ||**

1) ಲಾಲಿಸೂ ಭೂಪಾಲ | ಬಾಲೆಯ ನುಡಿಯನ್ನೂ ತಾಳುತ್ತ ಕೃಪೆಯನ್ನೂ | ಯನ್ನಾ ವಾಕ್ಯವನೂ

(ಅಟ್ಟತಾಳ) | ತಾಳುತ್ತ ಕೃಪೆಯನ್ನೂ ಯನ್ನಾ ವಾಖ್ಯವನೂ

2) ನಿನ್ನ  ಬಳಿಗೆ ತಂದ ಕಾರ್ಯವ ನುಡಿಯುವೆನು | ಯನಗೆ ಭಾಷೆಯ ನೀನು ಕೊಡು ರಾಜ ಇನ್ನೂ |

(ಅಟ್ಟತಾಳದಲ್ಲಿ) ಯನಗೆ ಭಾಷೆಯ ನೀನು ಕೊಡು ರಾಜಾ ಇನ್ನೂ

**|| ಆದಿತಾಳ + ಅಟ್ಟತಾಳ || ರತೀದೇವಿಗೆ | ಸಖಿ ||**

1) ಅರಸಿ ಲಾಲಿಸಿ ಕೇಳಿ | ಹೇಳುವೆ ನಿನ್ನೊಳು | ಯಾರೋ ಓರ್ವಳೂ ನಾರಿ ಪುರಕೇ ಬಂದಿಹಳೂ

(ಅಟ್ಟತಾಳ) || ಯಾರೋ ಓರ್ವಳೂ ನಾರಿ | ಪುರಕೇ ಬಂದಿಹಳೂ

2) ಪಾಂಡವರ ಪತ್ನಿಯು | ನಿನ್ನ ಕೇಳಲು ಸರಗೆ | ತಂದೆಗೆ ತಿಳಿಸಿದಳು | ಪರಿಣಯದಾ ವಿಶಯಾ ॥

(ಅಟ್ಟತಾಳ) | ಪಾಂಡವರ ಪತ್ನಿಯೂ ಪುರಕೆ ಬಂದಿಹಳೂ

**|| ಆದಿತಾಳ + ಅಟ್ಟತಾಳ || ರತಿ | ತಂದೆ ಕಮಲರಾಜನಲ್ಲಿ||**

1) ತಾತಾ ಲಾಲಿಸು ಮಾತಾ || ಹೊತ್ತರ್ದ ರಾತ್ರಿಯಲ್ಲಿ ತಮ್ಮನ್ನು ಕಾಣಲು | ಬಂದಾಕೆ ಯಾರೂ

(ಅಟ್ಟತಾಳ) | ತಮ್ಮನ್ನೂ ಕಾಣಲೂ ಬಂದಾಕೆ ಯಾರೂ

2) ನ್ಯಾಯವರಿತು | ಪೇಳೂ ನೀನೂ ತಂದೆ ತಂದೇ | ಜನಕ ಅನ್ಯಾಯದಿಂದಾ| ಪೇಳಬೇಡ | ತಂದೆ ತಂದೇ

(ಅಟ್ಟತಾಳ) || ಅನ್ಯಾಯದಿಂದಾ ಪೇಳಾ ಬೇಡ ತಂದೆ ತಂದೇ

3) ಯಾವ ಕಾರ್ಯಕ್ಕೆ ೧ ಅವಳು ತಂದೆ ತಂದೇ ॥ ಬಂದಿದ್ದ ವಿಷಯ ತಿಳಿಸು ತಂದೆ ತಂದೇ

4) (ಅಟ್ಟತಾಳ) | ಬಂದಿದ್ದಾ ವಿಷಯ ತಿಳಿಸು ತಂದೆ ತಂದೇ ಉಗ್ರತರವಾಗಿರುವುದೇಕೆ ತಂದೆ ತಂದೆ ಜನಕ ವ್ಯಾಘ್ರರಂತೇ ಇರುವುದೇಕೆ | ತಂದೆ ತಂದೇ | (ಅಟ್ಟತಾಳ) |

ವ್ಯಾಘ್ರರಂತೇ ಇರುವುದೇಕೆ | ತಂದೇ ತಂದೇ ||

5) ಅಪ್ಪಯ್ಯಾ ಲಾಲಿಸು | ಹಿಂದಣ ಜನ್ಮದ ಕಥೆಯ | ವಪ್ಪಾದಿಂದ ಲೀಪೇಳ್ವೆ | ತಪ್ಪಾ ನೀ ಕ್ಷಮಿಸೂ

(ಅಟ್ಟತಾಳ) | ವಪ್ಪಾದಿಂದಲಿ ಪೇಳ್ವ ತಪ್ಪಾ ನೀ ಕ್ಷಮಿಸೂ

6) ಪೂರ್ವಾಜನ್ಮದಲ್ಲಿ | ಮನ್ಮಥನೂ ನಾನೂ | ಸತಿಪತಿಗಳು ಸಹಜ ಇದ್ದೇವು ಜನಕ | (ಅಟ್ಟತಾಳ)

ಸತಿಪತಿಗಳು ಸಹಜ ಇದ್ದೇವು ಜನಕಾ

**॥ ಆದಿತಾಳ ||**

ಈಗ ಕಂದರ್ಪನು | ರುಕ್ಮಿಣಿಯ ಗರ್ಭದೊಳು | ನಿನ್ನ ಗರ್ಭದೊಳ್ ನಾನೂ ಉದಿಸಿರುವೆ ಜನಕಾ || (ಅಟ್ಟತಾಳ) || ನಿನ್ನಾ ಗರ್ಭದೊಳೂ ನಾನೂ ಉದಿಸಿರುವೆ ಜನಕಾ |

**|| ಆದಿತಾಳ + ಅಟ್ಟತಾಳ= ಕಮಲನ ಮಗಳು ರತಿಯಲ್ಲಿ ||**

ಚಂದವಾಯಿ ತಮ್ಮ ಮಗಳ ರತಿದೇವಿ | ಗೊಲ್ಲನೆಂದು ಜರಿದು ನುಡಿದ | ರತಿದೇವಿ || ಅಟ್ಟತಾಳ || ಗೊಲ್ಲನೆಂದೂ ಜರಿದೂ ನುಡಿದೆ ರತಿದೇವೀ ||

**|| ಆದಿತಾಳ + ಅಟ್ಟತಾಳ || ಧರ್ಮರಾಯ | ಭೀಮಾರ್ಜುನರಿಗೆ ||**

1) ಇದೇನಿದೇನು ದುರುಳತ್ವ ತಮ್ಮ ತಮ್ಮಾ | ಹೊಮ್ಮಿನಿಂದ ರಣಕೆ ನಿಂತು ತಮ್ಮ ತಮ್ಮಾ | ಅಟ್ಟತಾಳ ಹೊಮ್ಮಿನಿಂದ ರಣಕೆ ನಿಂತು ತಮ್ಮ ತಮ್ಮಾ

2) ಲೋಕದೊಳಗೆ ನಗುವರಲ್ಲೂ ತಮ್ಮ ತಮ್ಮಾ | ನಾಡೀನೋಳಪಕೀರ್ತಿ ಬಂತು ತಮ್ಮ ತಮ್ಮಾ | ಅಟ್ಟತಾಳ ||

ನಾಡಿನೊಳಗಪಕೀರ್ತಿ ಬಂತು ತಮ್ಮ ತಮ್ಮಾ |

3) ಅರ್ಜುನ | ಅರ್ಧರಾತ್ರಿಯಲ್ಲಿ ನಾರಿ ಅಣ್ಣದೇವ | ಮನೆಯ ಬಟ್ಟು ಪೋಗಬಹುದೇ ಅಣ್ಣ ದೇವಾ ||

(ಅಟ್ಟತಾಳದಲ್ಲಿ) | ಮನೆಯ ಬಿಟ್ಟು ಹೋಗಾಬಹುದೆ ಅಣ್ಣದೇವಾ |

4) ಅದಕೆ ಒಂದೂ ಪಟ್ಟ ನಿತ್ತೆ ಅಣ್ಣ ದೇವ || ಭರದಿ ಭೀಮರಣಕೇ ಬಂದಾ ಅಣ್ಣ ದೇವಾ || ಅಟ್ಟತಾಳ |

ಭರದಿ ಭೀಮಾರಣಕೇ ಬಂದ ಅಣ್ಣ ದೇವಾ ||

**|| ಆದಿತಾಳ + ಅಟ್ಟತಾಳ || ಧರ್ಮರಾಯ ||**

1. ಸಂಹರಿಸಿರಿ ನಿಮ್ಮಾ ಮಧ್ಯೆ | ತಮ್ಮಾಗಳಿರಾ ನಿಮ್ಮಾಜಗಳಾ ಬಿಟ್ಟುಯನ್ನಾ ತಮ್ಮಗಳಿರಾ || ಅಟ್ಟತಾಳ || ನಿಮ್ಮ ಜಗಳಾ ಬಿಟ್ಟು ಯಾ | ತಮ್ಮಗಳಿರಾ

**|| ಆದಿತಾಳ + ಅಟ್ಟತಾಳ || ಭೀಮ ಪಾರ್ಥಾ ||**

2. ಬಿಟ್ಟೆವಯ್ಯಾ | ರಣವಾ ನಾವು ಅಣ್ಣ ದೇವಾ ದೇವ | ಚಿಂತೆಯನ್ನು ಬಿಟ್ಟು ಕ್ಷಮಿಸಿ ನಮ್ಮ ದೇವಾ || ಅಟ್ಟತಾಳ || ಚಿಂತೆಯನ್ನೂ ಬಿಟ್ಟು ನಮ್ಮಾ ಕ್ಷಮಿಸು ಅಣ್ಣ ದೇವ

**|| ಆದಿತಾಳ + ಅಟ್ಟತಾಳ || ಬ್ರಹ್ಮ ಕೃಷ್ಣನಿಗೆ ||**

3. ಹೊರಡಿರಿನ್ನೂ ವೇಳೆಯಾಯ್ತು | ಕೃಷ್ಣದೇವಾ | ಸ್ಮರನ ಲಗ್ನ ಮುಗಿಸಲಿನ್ನೂ ಕೃಷ್ಣದೇವಾ ||

4. ಶುಭ ಘಳಿಗೆ ಹದಿನೈದು | ಕೃಷ್ಣದೇವ | ಕಳೆದರಿನ್ನೂ ಕಂಠಕವೂ ಕೃಷ್ಣದೇವಾ | ಅಟ್ಟತಾಳದಲ್ಲಿ | ಕಳೆದರಿನ್ನು | ಕಂಠಕವೂ | ಕೃಷ್ಣದೇವ

**| ಆದಿತಾಳ + ಅಟ್ಟತಾಳ || ಕೌಂಡಲೀಕನಿಗೆ |**

ಬಾರಯ್ಯಾ | ಮೋಹನ್ನಾ | ಮಾಡುವೆ ಪರಿಣಯ | ಯಿನ್ನೇಕೆ ತಡವಮ್ಮಾ | ವಾರೀಜಾನೇತೇ || ಅಟ್ಟತಾಳದಲ್ಲಿ | ಇನ್ನೇಕೆ ತಡವಮ್ಮಾ | ವಾರಿಜಾನೇ ||



**|| ಆದಿತಾಳ + ಅಟ್ಟತಾಳ || ಬಬ್ರುವಾಹನ ಕಾಳಗ || ಚಿತ್ರಾಂಗದೆ ಬಬ್ರುವಾಹನನಿಗೆ||**

1) ಮಗನೇ ಲಾಲಿಸಿ ಕೇಳು | ಮನದೊಳ್ ಖಿಥಿಗೊಡಬೇಡಾ | ಮಮತೆಯಿಂದಲಿ ಪೇಳ್ವೆ ಕೇಳೆನ್ನಾ ಮಾತಾ

2) ಕಂದಾ ಕೇಳೆಲೊ ಪಾರ್ಥಾ | ತೀರ್ಥಾ ಯಾತ್ರೆಗೆ ಬಂದೂ | ನಿಂದಾರುದಿವಸೆನ್ನಾ ಕೂಡಿದರೂ ಯನ್ನಾ | ಅಟ್ಟತಾಳ | ನಿಂದಾರು ದಿವಸೆನ್ನಾ ಕೂಡಿದರೂ

3) ಅಂದೂ ಪಾರ್ಥನಿಂದ ಒಂದೂ ಗರ್ಭತಾಳೆ ತಂದೆಯಾದರು ನಿನಗೆ ಇದು ಸತ್ಯಾ ಕಂದಾ || ಅಟ್ಟತಾಳ || ತಂದೆಯಾದರು ನಿನಗೆ ಪಾರ್ಥಾರು ಕಂದಾ ||

**|| ರೇಗುಪ್ತಿ ರಾಗ ||**

**|| ಶಾರದಾಸ್ತುತಿ || ಆನಂದ ಅಷ್ಟತಾಳ ||**

1) ನಂಬಿದೆ ನಿಮ್ಮ ಪಾದಾಂಬುಜಯುಂಗಳವಾ | ಶಾರದಾಂಬಾ || ಪಲ್ಲವಿ || ಅಂಬಾ ತಾಯೇ ಶಾರದಾಂಬಾ || ತಾಯೇ ಬೆಂಬಿಡದನುದಿನ ನಮ್ಮೆಲ್ಲರ ಸಲಹಮ್ಮಾ | ಶಾರದಾಂಬಾ

2) ಸೃಷ್ಟಿಗಧಿಕವಾದ ಶೃಂಗೇರಿ ಪುರವಾಸೀ | ಶಾರದಾಂಬಾ

ಅಂಬಾ ತಾಯೇ ಶಾರದಾಂಬಾ

ತಾಯೇ ಶ್ರೇಷ್ಠತನದಿ ನಮ್ಮೆಲ್ಲರ ಸಲಹಮ್ಮಾ | ಶಾರದಾಂಬಾ

3) ಕಪಟ ನಾಟಕಿ ನಿನ್ನ ಮಹಿಮೆಯ ನರಿವರೇ | ಶಾರದಾಂಬಾ || ಅಂಬಾ ತಾಯೇ ಶಾರದಾಂಬಾ

ತಾಯೇ ಕೃಪೆಯಿಂದ ಯೆಮಗೆ ಮತಿಯಿತ್ತು ಸಲಹಮ್ಮಾ | ಶಾರದಾಂಬಾ |

4) ಕಮಲ ಬ್ರಹ್ಮನ ರಾಣಿ ಕರದಿ ಪುಸ್ತಕ ವೀಣೇ | ಶಾರದಾಂಬಾ | ಅಂಬಾ ತಾಯೇ ಶಾರದಾಂಬಾ

ತಾಯೆ ಕರವಿಡಿದೆಮ್ಮನು ಕೃಪೆಯಿಟ್ಟು ಸಲಹಮ್ಮಾ ಶಾರದಾಂಬಾ

**|| ಬಬ್ರುವಾಹನನ ಕಥೆ | ಬಬ್ರುವಾಹನ ಅರ್ಜುನನಿಗೆ ||**

**|| ರಾಗ ಅರಬ್ಬಿ | ತ್ರಿಪುಟೆ ಭಾಮಿನಿ ||**

ಏನ ಬೊಗುಳಿದೆ ಎಲವೊ ಪಾರ್ಥನೆ

ಚಾರಿಣಿಯ ಮಗನೆಂದು ನುಡಿವೆಯ

ಹರಿವೆ ನಿನ್ನಯ ಗರ್ವವನುನಾದುರಕೆನಿಲ್ಲೆಲವೋ

**|| ನಾಟಿ ರಾಗ||**

**|| ಶುಭಮಸ್ತು || ಶ್ರೀ ವಿಶ್ಲೇಶ್ವರ ಸ್ತುತಿ ||**

1. ವಿಘ್ನಧ್ವಾಂತ ನಿವಾರಣೈಕ ತರಣೀ ವಿನ್ನಾಟವೀ ಹವ್ಯವಾಟ್ ವಿಘ್ನವ್ಯಾಳ ಕುಲೋಪ ಪ್ರಮತ್ತಗರುಡೋ ವಿಶ್ಲೇಶ್ವರಂ ಪಾಹಿಮಾಂ

2. ವಿಘ್ನಸ್ತುಂಗ ಗಿರಿಪ್ರಬೇಧನಪವೀ | ವಿಘೋಬ್ದಿಕುಂಭೋದ್ಭವಂ | ವಿಗೋಗಾ- ಘನಪ್ರಚಂಡ ಪವನಂ | ವಿಶ್ಲೇಶ್ವರಂ ಪಾಹಿಮಾಂ |



**|| ನಾಟಿರಾಗ | ಝಂಪೆತಾಳ ||**

1. ಶ್ರೀ ಗೌರಿವರಬಾಲಾ || ಒಂದು ಗತಿ | ಶ್ರೀ ಗೌರೀ ವರಬಾಲಾ | ಸಿಂಧೂರಾಂಕಿತ ಪಾಲ | ನಾಗೇಂದ್ರ ವರಜಾಲ | ನಟಸತ್ಯ ಶೀಲಾ ನಿಟಿಲ ನೇತ್ರನ ಸುತನೆ | ಒಂದುಗತಿ |

2. ನಿಟಿಲನೇತ್ರನ ಸುತನೇ | ನಿಗಮಾಗಮ ವಂದಿತನೇ | ಘಟಿಕಾ ಸನ್ನಿಭ ಕರ್ಣಕುಂಡಲ ಧರನೇ

3. ಶ್ರೀ ಕಾತ್ಯಾಯಿನಿ ತನಯ || ನೀ ಕರುಣಿಸು ಘನಮತಿಯ । ಕರುಣದಿಂದಲಿ ಎಮಗೆ | ಕೃಪೆಯಿಟ್ಟು ಸಲಹೆಮ್ಮ

4. ವೇದಾಗಮ ಶೃತಿಗಳಿಗೆ | ಆದಿ ದೇವನೂ ನೀನೂ | ನೀ ದಯಮಾಡೆಮಗೆ | ಮತಿಗೆ ಮಂಗಳವ

5. ಭವಹರನೇ ಭವಸುತನೇ | ಭುವನಾರ್ಚಿತ ಪಾಲಕನೇ | ಭುವಿಯ ಜನರುಗಳನ್ನು | ಕರುಣದಿಂದಲಿ ಮೊರೆ ದೇವಾ

**|| ಅರಬಿ ರಾಗ || ತಾಳ ತ್ರಿಪುಟೆ ||**

**|| ಕರ್ಣ – ಅಶ್ವತಾಥಾಮನಿಗೆ ||**

ಗುರುಕುಮಾರನ ಮಾತಿಗಾಕ್ಷಣನಿಮ್ಮ ತಂದೆಯ | ದೊರೆತನಕೆ ನೀವಿರಲು ಯೆನ್ನನು | ಕರೆಸಬಹುದೇ ||

**|| ಅಶ್ವತ್ಥಾಮ ಕರ್ಣನಿಗೆ | ತ್ರಿಪುಟ ತಾಳ ||**

ಯಾಕವರ ಮಾತಿನ್ನು ಸೇನಾ

ವಿವೇಕ ಭಾರವ ನಡೆಸು ನೀನದ

ಅಕುರುಕ್ಷಿತ ಭೂಪ ನಡೆವನು ವಿವೇಕತನದಿಂದ 1.

**|| ಅಶ್ವತ್ಥಾಮ ಕೌರವನಿಗೆ || ತ್ರಿಪುಟ ತಾಳ ||**

ಬುಧರು ಮಂತ್ರಾಗಮದಿ ಪಂಕಜ

ವದನೆಯರು ಶೋಭಾನದಿಂದಲಿ

ದಳಪತಿತ್ವವ ಸೂತಜನಿಗೆ ನೇಮಿಸ್ಯೆ ನೀನು ||

**|| ಶಲ್ಯಾಭೂಪತಿ – ಕೌರವನಿಗೆ | ತ್ರಿಪುಟ ತಾಳ ||**

ಏನ ಬೊಗುಳಿದೆ ಎಲವೊ ಕೌರವ

ಳು ಮಾಡಿದೆ ಸೂತಗೆನ್ನನು

ಹೇಳಿ ಫಲವಿನ್ನೇನು ನಿನ್ನಯ ಖಳತನವಾ ||



**|| ಶಲ್ಯಾಭೂಪತಿ - ಕೌರವನಿಗೆ | ತ್ರಿಪುಟ ತಾಳ ||**

ನೀನು ಮಾಡಲೊಲ್ಲದೆಡೆ ನಿನ್ನಯ

ಸೂನು ಆನುಜಾದಿಗಳು ಮಾಡಲಿ

ಹೀನ ಕರ್ಣನ ಕಾಲ ಕೆಳಗೆ ಸಾರಥಿ ತನವ |

**|| ಬಭ್ರುವಾಹನನ ಕಥೆ ||**

**|| ಬಭ್ರುವಾಹನ - ಅರ್ಜುನನಿಗೆ | ತ್ರಿಪುಟ ತಾಳ | ಪಾರ್ಥನೆ ||**

ಏನ ಬೊಗುಳಿದೆ ಎಲವೋ

ಜಾರಿಣಿಯ ಮಗನೆಂದು ನುಡಿವೆಯ

ಹರಿವೆ ನಿನ್ನಯ ಗರ್ವವನು ನಾ ದುರುಳ ಕೇಳೆಲವೋ |

**|| ಕರ್ಣಪರ್ವ ಕಥೆ ||**

**|| ಮಧ್ಯಮಾವತಿ ರಾಗ || ಭಾಮಿನಿ ||**

ಧರಣಿ ಪಾಣಿ ಕೇಳಿತ್ತ ಕೌರವನು

ಗರುಡಿಯಾಚಾರ್ಯರ ಧುರವನೀಕ್ಷಿಸು

ತಿರಲು ಚರನೋರ್ವ ನಡೆತಂದು

ಗುರು ರಣದಿ ಮಡಿದ ವಾರ್ತೆಯಂ

ಕುರುಪತಿಗೆ ಪೇಳ್ವನು ಸಾರಥಿಯು

**|| ಸಾರಥಿ ಕೌರವನಿಗೆ || ಅಟ್ಟತಾಳ ||**

ಗರುಡಿಯಾಚಾರ್ಯರಿಗೆ

ಧುರದೊಳಪಜಯವಾಯ್ತು || ಬಿಲ್

ಮುರಿದು ವಿದುರನು ಮೊದಲೇ ಜಾರಿದನು

**|| ಶಲ್ಯ ಕರ್ಣನಿಗೆ || ಅಟ್ಟತಾಳ ||**

ಆಹಹ ಮೆಚ್ಚಿದೆನಿದಕೆ ನಿಮ್ಮಯ

ಸಾಹಸಕ್ಕೆ ಆಹಹ ಮೆಚ್ಚಿದೆನಿದಕೆ |

ಹರಿಗಳ ಗೆಲುವುದಕೆ ಅಸದಳವೆನುತಲಿ

ತಂದುಕೊಂಡಿರಿ ನೀವು ಈರ್ವರೊಳು ಕದನವ

ಆಹಹ ಮೆಚ್ಚಿದೆನಿದಕೆ |

**|| ರತೀ ಕಲ್ಯಾಣ || ಮಧ್ಯಾವತಿ ರಾಗ -1 | |**

**|| ಕೃಷ್ಣ || ಭಾಮಿನಿ ||**

ತಂಗಿ ದೌಪದನಾ ಹಿಂದೆ ಮಾಡಿದ

ಉಪಕಾರವ ನೆನೆನೆನೆದು ಈ ಕಷ್ಟ

ಕಾಲದಿ ನೀ ಬಂದೆನ್ನ ಮಾನಹಾನಿಯ ತಪ್ಪಿಸಿ

ಎನ್ನ ಪ್ರಾಣವ ಉಳಿಸಮ್ಮ ತಂಗಿ ದ್ರೌಪದಿಯೆ ||

**| ಕೃಷ್ಣ - ದ್ರೌಪದಿಗೆ | ಅಟ್ಟತಾಳ |**

ತಂಗಿ ನೀಬಂದುದು ಲೇಸಾಯ್ತು

ಕಾರ್ಯಕ್ಕೆ ಲೇಸಾಯ್ತು ಕಾರ್ಯಕ್ಕೆ

ಬೇಗದಿಂದಲಿ ಹೋಗಿಸುತಗೇ ಕನ್ನಿಕೆಯಾ ||

**| ಇಂದ್ರಜಿತು ಕಾಳಗ |**

**|| ಇಂದ್ರಜಿತು - ಸುಲೋಚನೆಗೆ || ಅಟ್ಟತಾಳ ||**

ತರುಣಿ ರನ್ನಳೆ ಕೇಳು ತಡೆವುದು ಚಿತವಲ್ಲ | ತಡೆವುದು ಚಿತವಲ್ಲ

ಹರಿಗಳ ಗೆಲುವ ವೇಳೆಯೊಳು ನೀನು

**|| ಅಹಿರಾವಣ ಮಹಿರಾವಣನಿಗೆ || ಅಟ್ಟತಾಳ ||**

ಬಲುಬಲನು ಕುಂಭಕರ್ಣಯೆಂಬೋ

ಎಂಬೋ ದಾನವನೀಗ

ಬಲವಂತ ನೀನಿರಲು

ಖಳನಾ ವಧೆಯಾಯ್ತು |

**|| ಇಂದ್ರಜಿತು ಮಧ್ಯಮಾವತಿ ರಾಗ - 2 |**

**|| ಭಾಮಿನಿ ||**

ಚಿಂತೆಯಾತಕೆ ತಂದೆ ರಿಪುಕು

ಲಾಂತಕನು ನಾನಿರಲೂ ಕಪಿಕುಲದ

ಸಂತತಿಯ ಗೆಲುವುದಕೆ ಕೊಡುವೀಳ್ಯವ ತನಗೆಂದ ||

**|| ಕುರುಕ್ಷೇತ್ರ - ಕರ್ಣಪರ್ವ [ಮಧ್ಯಮಾವತಿ ರಾಗ-2] ||**

**|| ಕೃಷ್ಣ – ಧರ್ಮರಾಯನಿಗೆ ||**

**|| ಅಟ್ಟತಾಳ ||**

1. ನಿನ್ನ ಸದ್ಧರ್ಮಫಲ ಅನ್ಯರನು ಜೈಸಿದುದು || ಅನ್ಯರ ಎನ್ನಿಂದಲೇನಹುದು ಕೇಳು ಧರ್ಮಜನೆ

2. ಕರುಣಾವಾರಿಧಿ ನೀವು

ಅರುಹುವುದು ಸಹಜ ಗುಣ |

ಧರೆಯೊಳಗೆ ಸುಜನರು ತಮ್ಮ ಹೊಗಳುವರೇ ||



**|| ಸಾರಥಿ – ಕೌರವನಿಗೆ ||**

**|| ಭಾಮಿನಿ ||**

ಕಂದನಶ್ವತ್ಥಾಮ ಸುರಪುರಕೆ ತೆರಳಿದನೆನಲೂ

ಕೊಂದನತಿದೇಹಗಳಬಿಸುಟಾ

ನಂದನನ ಬಳಿಗೈಯಲಿತ್ತ

ಮಂದಮತಿ ದ್ರುಪದನಸುತ ಖಂಡಿಸಿದನು ಗುರುಗಳ ದೇಹವನು

ಕೌರವ ಕರ್ಣ ಶಲ್ಯರಿಗೆ |

**|| ಅಟ್ಟತಾಳ ||**

ಗೆಲುವ ತಂದಿರಿ ನಮಗೇ

ಇನಸುತನೊಳು ನೀವು

ಕಲಹ ಮಾಳ್ಪದ ನೋಡಿ | ನಗುವರು ಹರಿಗಳು

ಆಹಹ ಮೆಚ್ಚಿದೆನಿದಕೇ ||

**|| ರತೀಕಲ್ಯಾಣ (ಮಧ್ಯಮಾವತಿ ರಾಗ -2) |**

**||ಕೃಷ್ಣ ದೌಪದಿಗೆ ಅಟ್ಟತಾಳ |**

ಬಾರಮ್ಮ ತಂಗಿ ನೀ ಹೋದ ಕಾರ್ಯವು ಈಗ 1 ಹೋದ | ನೇರವೇರಿತೇನಮ್ಮ ತಂಗಿ ದ್ರೌಪದಿಯೇ |

**|| ಅಟ್ಟತಾಳ || ಕೃಷ್ಣ ರುಕ್ಮಿಣಿಗೆ |**

ತರಳ ಮನ್ಮಥನಿಗೆ ಕನ್ಯಾರತ್ನವ ತಂದು | ಕನ್ಯಾರತ್ನವ ತಂದು | ಪರಿಣಯವ ನಡೆಸುವೆ || ಕೇಳೆನ್ನ ರಮಣೀ ||

**|| ಶ್ರೀಹರಿ - ಸಾರಥಿಗೆ || ಅಟ್ಟತಾಳ ||**

ಆಡಿದಂದದಿ ಎಂಟು ದಿನಗಳೆದು ಬರುತಿದೆ | ದಿನಗಳೆದು ......!! ನಾಡಿನೊಳು ಅಪವಾದ ಬರುವ ತೆರನಾಯ್ತು |

**|| ರತೀಕಲ್ಯಾಣ (ಮಧ್ಯಮಾವತಿ ರಾಗ - 3) |**

**|| ಕೃಷ್ಣ – ರತಿ || ಭಾಮಿನಿ ||**

ಅಂಗಜನ ಪಿತನಿಂದು ಧ್ಯಾನಿಸೇ

ಮಂಗಳಾಂಗಿ ದೌಪದಿಯು 1 ಹರಿಹರಿ

ಅಣ್ಣಾ ಜನಾರ್ಧನಯನ್ನ ನೆನೆದ ಪರಿಯೇನೆನುತ |

ಅಂಥ ಕಷ್ಟವೇನು (ಎಂದೆನುತ ) ಅಣ್ಣಾ

ಎಂದೆನುತ ಅತಿ ದುಃಖದೊಳು ಓಡೋಡಿ

ಬಂದಾಗ ವಂದಿಸಿದಳು ಅಗ್ರಜನ ಪಾದಂಗಳಿಗೆ



**|| ಶ್ರೀಹರಿ- ದೌಪದಿಗೆ (ಮಧ್ಯಮಾವತಿ ರಾಗ – 3) ||**

**|| ಅಟ್ಟತಾಳ ||**

ತಂಗಿ ನೀ ಬಂದುದು ಲೇಸಾಯ್ತು ಕಾರ್ಯಕ್ಕೆ |

ಸುಂದರ ಕಂದರ್ಪಗೆ | ತಕ್ಕ ಕನ್ನಿಕೆಯಾ |

**| ಅಹಿರಾವಣ - ಮಹಿರಾವಣ ಕಥೆ |**

**|| ರಾವಣ || ಅಟ್ಟತಾಳ ||**

ಅರುಹಿದನು ಪೂರ್ವದಲಿ | ಸತ್ಯವಂತನು ಎನಗೆ || ಸತ್ಯವಂತನು ಎನಗೆ || ಕಷ್ಟಕ್ಕಾಗುವೆನೆಂದು | ಇತ್ತಿಹ ಭಾಷೆ

**|| ರಾವಣ - ಮಹಿರಾವಣನಿಗೆ ||**

**|| ಅಟ್ಟತಾಳ ||**

ಪಾತಾಳವಾಸೀ ಕೇಳು | ಭುತಳದೊಳಗಿನ್ನು ಭೂತಳದೊಳಗಿನ್ನು ದಶರಥನ ಸುತರಂತೆ | ರಾಮಲಕಣರು ||

**|| ಬಬ್ರುವಾಹನನ ಕಾಳಗ ||**

**|| ಬಬ್ರುವಾಹನ ತಾಯಿಗೆ | ಯಕ್ಷಗಾನ ಅಟ್ಟತಾಳ ||**

ತಾಯೇ ಲಾಲಿಸಿ ಕೇಳು | ಶೂರಪಾರ್ಥನ ಅಶ್ವವ |

ತಾಯೇ ಛಲದಿಂದ | ಬಂದಿಸಿದೆನೂ || 1 |

ಮೂರು ಲೋಕದ ಗಂಡ | ವೀರ ಅರ್ಜುನನೆಂಬುವ

ಅಶ್ವದಿಂದೊಡಗೂಡಿ 1 ಬಂದಿಹನಂತೇ || 2 ||

**ಗೌಳೀರಾಗ -4**

**| ಕರ್ಣಪರ್ವ - ಕುರುಕ್ಷೇತ್ರ | ಅಭಿಮನ್ಯು | ಭಾಮಿನಿ ||**

ಅರಸ ಕೇಳೀ ಪರಿಯೊಳು

ವೀರ ಅಭಿಮನ್ಯುವನ ಘೋರ ಆರ್ಭಟಕ

ಗುರುದ್ರೋಣ ಸರ್ವರೆಲ್ಲರೂ ಹೆದರಿ ಓಡೋಡಿ ಚಕ್ರವ್ಯೂಹದ ಕೋಟೆಯೊಳಗೆ

ಸೇರಲು | ಅಭಿಮನ್ಯು ಬಲು

ರೋಷದಲಿ ಕಿಡಿಗೆದರುತಾ

ವೀರತ್ವದಲಿ ಚಕ್ರವ್ಯೂಹವ ಬೇಧಿಸಿದನು || 1 |

**|| ಕುರುಕ್ಷೇತ್ರ – ಗಧಾಪರ್ವ||**

**|| ಮೋಹನ ರಾಗ || ಭೀಮ - ದೌಪದಿಗೆ || ಭಾಮಿನಿ ||**

ಬಾರೇ ದ್ರೌಪದಿ ಮೋಹನಾಂಗಿಯೆ ನೆರವೇರಿಸುವೆ ನಿನ್ನ ಬಹುದಿನದ ಪಂಥವನ್ನು ಬಾಬಾ ಈ ದುರುಳ ದುಶ್ಯಾಸನನ ಉದರವಂ ಬಗೆದು |



ನಿನ್ನ ಶಪಥವಂ ಈಡೇರಿಸುವೇ

ನಿನ್ನ ಕೆದರಿದ ತುರಬಂಯಿಂದು ಕಟ್ಟುವೇ

ಕರುಳಂ ತೆಗೆದು ಧರಿಸುವೇ ವನಮಾಲೆಯಂ ಬಾಬಾರೇ ||

(ಬಲುಹರುಷದಿಂದ ಬಾರೇ ದೌಪದಿಯೇ)

**| ಅಹಿರಾವಣ-ಮಹಿರಾವಣ ಕಥೆ |**

**|| ರೇಗುಪ್ತಿ ರಾಗ | ರಾವಣ ಮಂಡೋದರಿಗೆ || ಭಾಮಿನಿ ||**

ಬಾಲೆ ಕೇಳ್ ಯೆರಡನೆಯ ಜನ್ಮದಲಿ

ಹುಟ್ಟಿದನು ದಶಶಿರನು ಅತಿದಿಟ್ಟ ತಮ್ಮ ಕುಂಭಕರ್ಣನು

ಅಟ್ಟಹಾಸದಿಸಿರಿ ಸೀತೆ ರೂಪಾಗಿ ಜನಿಸಿದಳು

ಮತ್ತೊಂದು ಜನ್ಮ ಕಳೆದು ಸಂತೃಷ್ಟರಾಗಿ ವೈಕುಂಠದ್ವಾರವನು

ಸೇರುವೆವು ಕೇಳ್ ರಮಣೀ |

**| ರೇಗುಪ್ತಿ ರಾಗ |**

**|| ರುಕ್ಕಿಣಿ ರಾಧೆಗೆ || ಆದಿತಾಳ || ಅಟ್ಟತಾಳ ||**

1. ಅಕ್ಕ ಕೇಳೆ ಚಿಕ್ಕಮಗನ

ಗಕ್ಕನೆ ಲಗ್ನವನೆ ಸಗಲ್ ತಕ್ಕ ಕನ್ಯ ಸಿಕ್ಕಲಿಲ್ಲ

ಅಕ್ಕಯ್ಯ ಕೇಳೇ (ಅಟ್ಟತಾಳದಲ್ಲಿ)

ತಕ್ಕ ಕನ್ಯೆ ಸಿಕ್ಕಲಿಲ್ಲ | ಅಕ್ಕಯ್ಯಾ ಕೇಳೇ ॥ 1 ॥

2. ಸುತಗೆ ಲಗ್ನ ಮಾಡದುದರಿಂದ

ಮನಕೆ ವ್ಯಸನ ಹುಟ್ಟಿದ ಬಳಿಕ

ಚಿಂತೆಯಿದು ಸುಡುತಲಿಹುದು |

ಎನ್ನಯ ಮನದಿ (ಅಟ್ಟತಾಳ)

ಚಿಂತೆಯಿದು ಸುಡುತಲಿಹುದು | ಯೆನ್ನಯ ಮನದೀ ||

**ಅಹಿರಾವಣ - ಮಹಿರಾವಣ ಕಥೆ**

**|| ರೇಗುಪ್ತಿರಾಗ | ಆದಿತಾಳ ||**

**|| ದೌರ್ದುಂಡೀ ನಿಕುಂಬಿಣಿ ದೇವಿಗೆ||**

ಲಾಲಿಸಿ ಕೇಳಮ್ಮ ತಾಯೇ | ಎನ್ನ ಮಗನನ್ನು ನಿನಗೇ

ನಾಳೆಯ ದಿವಸವೇ | ಎಮಗ್ರಜನು ನಿಮಗೆ ಬಲಿಕೊಡುವನಂತೇ ||

ಎಮಗ್ರಜನು ನಿಮಗೆ ಬಲಿಕೊಡುವನಂತೇ ||



**|| ಸೂಚಿಮುಖಿ ಮಹಿರಾವಣನಿಗೆ ||**

**|| ರೇಗುಪ್ತಿ ರಾಗ || ಅಟ್ಟತಾಳ ||**

ಇದಕೆ ಯೋಚನೆ ಏತಕಗ್ರಜ | ಒಂದು ಗತಿ |

ಶೀಘ್ರದಿ ಕೊಡುಯೆನಗಪ್ಪಣೆಯ |

ಶ್ರೀಘ್ರದಿ ಕೊಡುಯೆನಗಪ್ಪಣೆಯ ॥ 1 ॥

ರಾಮ ಲಕ್ಷ್ಮಣರನ್ನು ಹಿಡಿತಂದು ಕೊಡುವೆನು |

ಶೀಘ್ರದಿ ಪಾಲಿಸು ನೇಮವನು || 2 ||

**|| ಮಹಿರಾವಣ- ಆಂಜನೇಯನಿಗೆ ||**

**| ರೇಗುಪ್ತಿ ರಾಗ-2 | ಮಟ್ಟತಾಳ ||**

ಎನಲು ಕೋಪದಿಂದಾ ಖಳನು (ಒಂದು ಗತಿ )

ಎನಲು ಕೋಪದಿಂದ ಖಳನು

ಖಡ್ಗವನು ಝಳಪಿಸುತ್ತಾ | ಶರವ ಬಿಡಲು |

ತರಿದು ಬಿಸುಟ ವಾಯುಜಾತನು (ತಿರುಹೆಜ್ಜೆ)

ಶರವ ಬಿಡಲು ತರಿದು ಬಿಸುಟ ವಾಯುಜಾತನು |

**|| ರತೀ ಕಲ್ಯಾಣ | ಆಂಜನೇಯ - ಕಂಡೀಕನಿಗೆ ||**

**|| ರೇಗುಪ್ತಿರಾಗ -2 || ಮಟ್ಟತಾಳ ||**

ಅಧಮ ದುರುಳ ಬಗೆವೆ ಕರುಳ || (ಒಂದು ಗತಿ ಮುಕ್ತಾಯ )

ಅಧಮ ದುರುಳ ಬಗೆವೆ ಕರುಳ

ಸದರವಲ್ಲ ಸಮರವಿನ್ನು ಹಿಂದಕೋಗಿ

ನಿನ್ನ ಪ್ರಾಣ ಉಳಿಸಿಕೊಳ್ಳಲೋ || (ತಿರುಹೆಜ್ಜೆ )

ಹಿಂದಕ್ಕೋಗಿ ನಿನ್ನಾ ಪ್ರಾಣ ಉಳಿಸಿಕೊಳ್ಳಲೋ

**|| ಕೃಷ್ಣನ ಪದ ||**

**|| ರೇಗುಪ್ತಿ ರಾಗ -2 | ಅಷ್ಟತಾಳ ||**

ಅಂಗ ಕಳಿಂಗ ಕಾಂಭೋಜ (ಒಂದು ಗತಿ)

ಅಂಗ ಕಳಿಂಗ ಕಾಂಭೋಜವು ಮೊದಲಾಗಿ |

ತುಂಗ ಬಂಗಾಳವನು | ಕೇಳೋ ದೇವಾ || ತುಂಗ

ಬಂಗಾಳವನೂ || ಸಂಗಾತ ಸೌರಾಷ್ಟ್ರ ಮಲೆಯಾಳ ಮೊದಲಾಗಿ |

ರಂಗನಾಥನು ತಿರುಗೇ ||

**|| ಅಹಿರಾವಣ- ಮಹಿರಾವಣ ಕಥೆ || ಬೈಸಿಗೆ ಅಹಿರಾವಣ ||**

**|| ರೇಗುಪ್ತಿ ರಾಗ -1 | ಅಷ್ಟತಾಳ||**

ಮಕರಾಕ್ಷ ಮಡಿದ ವಾರ್ತೆಯ ಕೇಳೀ | (ಬೈಸಿಗೆ ಒಂದು ಗತಿ) |

ಮಕರಾಕ್ಷ ಮಡಿದ ವಾರ್ತೆಯ ಕೇಳೀ

ದಶಮುಖ ಮನದೊಳು ಚಿಂತಿಸಿದ |

ಕಳವಳಿಸುತ ಮಂಚಕ್ಕೊರಗಿದ

ಧಿಟ್ಟ ಖಳ ಹೋದೆನೆನುತಲಿ ಮರುಗಿದ

**|| ಆಂಜನೇಯ ||**

**|| ರೇಗುಪ್ತಿ ರಾಗ -2 | ಅಷ್ಟತಾಳ ||**

ಜಯ ಜಯ ತ್ರೈಲೋಕ್ಯಮಾತೆ | ವಿಖ್ಯಾತೇ |

ಜಯ ಜಯ ಸೀತಾ ಮಾತೆ | ಜಯ ಸೀತಾ ಮಾತೇ ||। |

ಜಯ ಜಯ ತ್ರೈಲೋಕ್ಯ ಮಾತೇ | ವಿಖ್ಯಾತೆ

ಜಯ ಜಯ ಸೀತಾ ಮಾತೇ || 2 |

**ರತಿ ಕಲ್ಯಾಣ**

**|| ರೇಗುಪ್ತಿ ರಾಗ 2 ಕಮಲರಾಜ ||**

**|| ಅಷ್ಟತಾಳ ||**

ಅಂಗ ಕಳಿಂಗ ಕಾಂಬೋಜ ಭೂಪಾಲರು ಬಂದಿರೇ |

ಕೇಳೈ ದೇವ ಬಂದಿರೇನೈ

ಸಂಗಾತ ಸೌರಾಷ್ಟ್ರ ಮಲೆಯಾಳದರಸರು ಬಂದಿರೇನೈ ||

**|| ಕಮಲರಾಜ - ಕೃಷ್ಣನಿಗೆ ||**

**|| ರೇಗುಪ್ತಿ ರಾಗ-3 | ಅಷ್ಟತಾಳ ||**

ಮಾಳವ ಮಗಧ ಭೂಮಾಲಕರೆಲ್ಲರು ಬಂದಿರೇ ||

ಕೇಳ್ಳೈ ದೇವಾ ಬಂದಿರೇ ||

ಕೇರಳ ಕುಂತಳ ಮಹಾರಾಷ್ಟ್ರ ದರಸರು ಬಂದಿರೇ |

**|| ಕಮಲರಾಜ – ದ್ರೌಪದಿಗೆ||**

**|| ರೇಗುಪ್ತಿ ರಾಗ -3 || ಅಷ್ಟತಾಳ||**

ಏನೊ ಹೇಳುವಳೆಂದೂ (ನಡೆಹೆಜ್ಜೆ - ಒಂದು ಗತಿ )

ಏನು ಹೇಳುವಳೆಂದು ಭಾಷೆಯ ಕೊಟ್ಟರೆ | 1 |

ಈ ಪರಿ ನುಡಿಯುವುದೇ ಕೇಳೆಲೆ ನಾರಿ ಈ ಪರಿ ನುಡಿಯುವುದೇ



ನಡೆ ನಡೆ ಹಿಂದಕ್ಕೆ ಹೆಚ್ಚು ಮಾತಾಡದೆ

ಕೊಚ್ಚಿ ಬಿಡುವೆ ನಿನ್ನನು || 2 |

**ಕಮಲರಾಜ—ದ್ರೌಪದಿಗೆ**

**|| ರೇಗುಪ್ತಿ ರಾಗ -3 | ಝಂಪೆತಾಳ ||**

ಏನಾ ನುಡಿದಲೆ ನಾರೀ || (ಒಂದು ಗತಿ ಮುಕ್ತಾಯ ) ಏನಾ

ನುಡಿದೆಲೆನಾರೀಕಳ್ಳ ಕೃಷ್ಣನ ಸುತಗೆ | ಎನ್ನ ಸುತೆ ರತಿಯನ್ನು

ಧಾರೆಯನು ಎರೆಯೆಂದು || 2 ||

**ಮಹಿರಾವಣ ಕಥೆ**

**ಮಹಿರಾವಣ ಆಂಜನೇಯನಿಗೆ**

**|| ರೇಗುಪ್ತಿ ರಾಗ -3 | ಯಕ್ಕತಾಳ ||**

ಆರೆಲೋ ವಾನರ ನೀನು || (ಒಂದು ಗತಿ ಮಕ್ತಾಯ )

ಆರೆಲೋ ವಾನರ ನೀನೂ | ಈಗ ಬಂದ ಕಾರ್ಯಗಳೇನೂ

ಯಾವನು ಬಿಟ್ಟನು ನಿನ್ನ

ಎಂದೆನುತಲಿ ಬೋರಿಟ್ಟೋದನು ಮುನ್ನಾ | 1 |

**ಇಂದ್ರಜಿತು ಕಾಳಗ | ಇಂದ್ರಜಿತು ರಾವಣನಿಗೆ**

**|| ರೇಗುಪ್ತಿ ರಾಗ - ಯಕ್ಕತಾಳ ||**

ತಂದೆ ಕೇಳೆನ್ನ | (ಒಂದು ಗತಿ ಮಕ್ತಾಯ )

ತಂದೆ ಕೇಳೆನ್ನ | ಕುಂದು ಮಾಡದೆ

ಇಂದು ಕಳುಹಿಸು | ರಣಕೆ ಬೇಗನೇ 1 |

**ಇಂದ್ರಜಿತು ಆಂಜನೇಯನಿಗೆ**

**|| ಮಟ್ಟತಾಳ ||**

ಎಲವೋ ಮಂಗಗಳಿರ ಕೇಳಿ | (ಒಂದುಗತಿ ಮುಕ್ತಾಯ ) ಸುತ್ತಾರ್ಕೆ |

ಎಲವೋ ಮಂಗಗಳಿರಾ ಕೇಳಿ | ಕೊಲುವೆ ನಿಮ್ಮ ಅಸುವನೀಗಾ

ನಿಮ್ಮ ತಲೆಯ ಕಾಯ್ದ ರಾಮನನ್ನು

ತೋರಿಸೆಂದನೂ (ಸುತ್ತ ತಿರುಗುವನು )

ತಲೆಯ ಕಾಯ್ದ ರಾಮನನ್ನು ತೋರಿಸೆಂದನೂ | |

**|| ಝಂಪೆತಾಳ || ಅಹಿರಾವಣ ರಾವಣನಿಗೆ ॥**

ಕ್ಷೇಮದಿಂದಿರುವರೇ || (ಒಂದುಗತಿ) | ಮಂದೀ ಮಾರ್ಬಲವೆಲ್ಲಾ |

ಪ್ರಜೆಯೂ ಪರಿವಾರವೂ ಆನಂದದಿಂದಿಹರೇ ॥ 1 ॥



**|| ಕರ್ಣ ಪರ್ವ || ಕರ್ಣನ ಪದ ||**

**|| ರೇಗುಪ್ತಿ ರಾಗ | ಕುರುಜಂಪೆತಾಳ ||**

ಆರಿಂಧು ರಣದೊಳಗೆ ವೀರರನು

ತೋರಿದರೆ ಗ್ರಾಮ ಸೀಮೆಗಳ ಕೊಡುವೆ ||

ತೋರೋ ಸಾರಥಿ ನೀನೂ ಕಂಡೆಯಾದರೆ ರಣದಿ

ಮೂರು ಲೋಕದ ಗಂಡ ಪಾರ್ಥನೆಂಬುವನಾ |

**|| ಮಹಿರಾವಣನ ಕಥೆ || || ಮಹಿರಾವಣ- ಇಂದ್ರಜಿತುವಿಗೆ ||**

**|| ರೇಗುಪ್ತಿ ರಾಗ || ಕುರುಝಂಪೆತಾಳ ||**

ಒಂಟೆಯಾ ತಲೆಗಳನು | ಎಂಟು ಸಾವಿರ ತಂದು

ಮಂಟಪದ ಬಾಗಿಲಿಗೆ ತೋರಣವ ಕಟ್ಟೆ |

ಕಂಟಕವು ಪರಿಹರಿದು ಹೋಗುವುದು ದಶ ಕಂಠಸುತ ನೀನೂ ಕೇಳೂ

**|| ಕರ್ಣಪರ್ವ | ಕೃಷ್ಣ ಧರ್ಮರಾಯನಿಗೆ ||**

**|| ರೇಗುಪ್ತಿ ರಾಗ || ಆದಿತಾಳ ||**

ತಂದೆ ನಿಮಗೆ ! ಇಂಥ ಬವಣೆ |

ತಂದೆ ಪಾಪಿ ಇನ್ನು ನಾನೂ || ಅಟ್ಟತಾಳ |

ಕೊಂದಲ್ಲದೆ ಬಿಡೆನು ನಾನೂ | ಎಂದಾ | ಗೋವಿಂದಾ || 1 |

**|| ಕರ್ಣ - ಧರ್ಮರಾಯನನ್ನು || ಕೃಷ್ಣ – ಅರ್ಜುನನಿಗೆ||**

**|| ರೇಗುಪ್ತಿ ರಾಗ | ಅಷ್ಟತಾಳ ||**

ಎಡಗಾಲ ತುದಿಯಿಂದ ಒಡೆದು ಮೂದಲಿಸಿದ |

ಸವ್ಯಸಾಚಿ | ಕೊರಳಿಗೊಡ್ಡಿದ ಖಡ್ಗ

ಶಿರವ ನರಿಯುವೆನೆಂದಾ ಸವ್ಯಸಾಚೀ || 1 ||

**|| ಗಜಗೌರೀ ವ್ರತ ( ಐರಾವತ ಯಕ್ಷಗಾನದಲ್ಲಿ ) ||**

**|| ಕೌರವ- ಭೀಮನಿಗೆ (ಒಂದು ಗತಿ ಕುಕ್ಕರ ಬೈಸಿಗೆ) ||**

**|| ರೇಗುಪ್ತಿ ರಾಗ -4 | ಮಟ್ಟತಾಳ ||**

ಕರೆಯಲಿಲ್ಲ ನಾವ್‌ಗಳೆನುತ | (ಒಂದು ಗತಿ ಮಕ್ತಾಯ )

ಕರೆಯಲಿಲ್ಲ ನಾವ್‌ಗಳೆನುತ ಸ್ವರ್ಗದಿಂದ

ಕರಿಯ ತರಿಸಿ ತೋರ ಬಂದೆ ನಮ್ಮ ಮಂದೆ

ನಿಮ್ಮ ಗರ್ವವ | (ಸುತ್ತೆಜ್ಜೆ)

ತೋರ ಬಂದೇ ನಮ್ಮ ಮಂದೇ ನಿಮ್ಮ ಗರ್ವವ || 1 |



**|| ಇಂದ್ರಜಿತು ಕಾಳಗ || ಇಂದ್ರಜಿತು ||**

**|| ರೇಗುಪ್ತಿ ರಾಗ || ಝಂಪೆತಾಳ ||**

ಹಗೆಗೇ ದೋಷಗಳಾದ್ರೂ (ಒಂದು ಗತಿ)

ಹಗೆಗೇ ದೋಷಗಳಾದ್ರೂ | ಬಗೆಗೆಯ ಮಾಯೆಗಳೂ |

ಹಗರಣಗೊಳುತಿದೆ | ಜಗದೊಳಗಪಜಯವೂ || 1 |

**|| ರೇಗುಪ್ತಿ ರಾಗ | ಅಷ್ಟತಾಳ ||**

**|| ಹನುಮಂತ - ಮಗೃಹನುಮನಿಗೆ ||**

ತಂದೆ ಹೋಗುವುದೆಲ್ಲಿಗೆಂದು ಕೇಳಿದನಾಗ |

ಬಂದಿಹ ಕಾರ್ಯವೇನೂ ||

ಇಂದು ಎನ್ನಿಂದಾಗುವ ಕಾರ್ಯವೇನುಂಟು ಕರೆ

ತಂದಿಹ ದೊರೆಗಳ್ಯಾರೂ |

**|| ಇಂದ್ರಜಿತು – ವಿಭೀಷಣನಿಗೆ ||**

**|| ರೇಗುಪ್ತಿ ರಾಗ || ಭಾಮಿನಿ ||**

ದೀಕ್ಷೆಯನು ಬಿಸುಟಿದ್ದು ಕಿರುಗಣ್ಣಿಂ

ದೀಕ್ಷಿಸುತ ಕಿರಿದಯ್ಯನನು ನೋಡಿ

ಕುಲಕಂಟಕ ಹೇಡಿ ಕುಲಕೆ ಕಂಟಕಪ್ರಾಯನಾದೆಯಾ ।

ಎಂದೆನುತ ಗರ್ಜಿಸಿದ ಇಂದ್ರಜಿತುವೂ || |

**ಅಹಿರಾವಣ-ಮಹಿರಾವಣನ ಕಥೆ || ರಾಮ ಲಕ್ಷ್ಮಣನಿಗೆ ||**

**ರೇಗುಪ್ತಿ ರಾಗ -5 | ಝಂಪೆತಾಳ ||**

ಅನುಜಾ ಲಾಲಿಸಿ ಕೇಳೂ || ಧನುಜ ಮಕರಾಕ್ಷಸನ |

ಗೇಲಿದೇವ್ಯೆ ತಮ್ಮಾ ನೀನಿರಲೂ ಬಲಸಹಿತ

**|| ಅಹಿರಾವಣನಿಗೆ ಮಹಿರಾವಣ | |**

**|| ರೇಗುಪ್ತಿ ರಾಗ -5 | ಏಕತಾಳ ||**

ಇದಕೇತಕೆ ಚಿಂತೆ ದನುಜಾಧಿಪನೆ |

ಮನದೊಳು ಮರುಗದಿರೂ |

ಹುಲು ಕಪಿ ನಾಯ್ಗಳ ಕೊಲ್ವುದಕೆ |

ಕೊಡುಯೆನಗಪ್ಪಣೆ ದಶಶಿರನೇ ||1 ||



**|| ಆಂಜನೇಯ - ಇಂದ್ರಜಿತುವಿಗೆ ||**

**|| ರೇಗುಪ್ತಿ ರಾಗ || ಅಷ್ಟತಾಳ ||**

ಓದಿ ನೋಡಿಕೋ ಶಾಸ್ತ್ರವಾ (ಒಂದು ಗತಿ ಮುಕ್ತಾಯ )

ಓದಿ ನೋಡಿಕೋ ಶಾಸ್ತ್ರವಾ | ಬ್ರಹ್ಮನ ಚತುರ್ವೇದ ಪೌರಾಣದ ಸೂತ್ರವಾ |

ಮೇದಿನಿಯೊಳು ನೀನೂ ಲಂಕೆಯ ಸುತನಾಗಿ ಸ್ತ್ರೀ ಹತ್ಯಕೆ ಗುರಿಯಾಗಬೇಡ | 1 |

**|| ಮಟ್ಟತಾಳ ||**

ಖಳರೊಳಧಮ ಬೊಗುಳಬೇಡ | (ಒಂದು ಗತಿ) | ಮಧದ ಗರ್ವದೀ |

ತಲೆಗೆ ಪಿತ್ತವೇರಿ ತೆಲವೋ ಅಧಮ ಕೇಳ್ಲೋ | (ಸುತ್ತಾಕಿ)

ತಲೆಗೆ ಪಿತ್ತಾವೇರಿ ತೆಲವೋ | ಅಧಮಕೇಳ್ಲೋ ||

**|| ತೋಡಿತಾಗ || ಅಟ್ಟತಾಳ || ಆಂಜನೇಯ ||**

1. ಧರಣಿ ನಂದನೆ ಶಿರವು ಧರೆಗೆ ಬೀಳಲು ಮುನ್ನಾ

ಎರಗಿದನು ಹನುಮಂತ ಕಾಳಗಕೆ ಬೇಗಾ ||

2. ಧುರಕೆ ತಪ್ಪಿಸಿಕೊಳಲು ಖಳಹೋಗಲಾಕ್ಷಣ |

ಮರುಗಿದನು ಮನದೊಳಗೆ ಹನುಮಂತ 1 ||

**|| ರೇಗುಪ್ತಿ ರಾಗ || ಆದಿತಾಳ + ಅಟ್ಟತಾಳ ||**

**|| ಹನುಮಂತ || ಜಾಂಬುವಿಗೆ ||**

ಮಾರುತಿ ಸಲಹೆಂದೆನಲು ಕೆಟ್ಟಾ |

ಚೋರಗೆ ಪೇಳ್ವೆ ನೀತಿಯಾ ನಾನೂ

ರಾಮನರಸಿಯ ತರಿದು ಪೋದನಾಖಳನೂ

ರಾಮನರಸಿಯ ತರಿದು ಹೋದಾನಾಖಳನೂ ||

**|| ರೇಗುಪ್ತಿ ರಾಗ || ಝುಂಪೆತಾಳ ||**

**|| ಧರ್ಮರಾಯ ಕೃಷ್ಣನಿಗೆ ||**

ಜಲಜಾಕ್ಷ ತವಚರಣಾ | (ಒಂದು ಗತಿ ಮುಕ್ತಾಯ)

ಜಲಜಾಕ್ಷ ತವಚರಣಾ | ಸಲಿ ರಾಜನ ಕೃಪೆಯಿರಲೂ |

ಕಲಶಾದಿ ಸುಭಟರನು | ಗೆಲಿದೆವ್ಯೆ ಇಂದಿನಲಿ ||

**|| ಏಕತಾಳ || ಕೌರವ - ಸಾರಥಿಗೆ ||**

1. ಸೂತನೆ ಕೇಳ್ ಬರಿ ರಥವನು ತಿರುಗಿಸಿ

ಯಾತಕಿಲ್ಲಿಗೆ ಬಂದೇ ॥



ಭೀತಿಗಳೇನಿದು ನೀ ತಿಳುಹೂ

ವೃತ್ತಾಂತಗಳನ್ನು ಎನಗೆಂದಾ |

2. ಇತ್ತ ಭಾಷೆಯೇನಾದುದು ದ್ರೋಣರು

ಮತ್ತೆಲ್ಲಿಗೆ ಸರಿದಾ ॥

ವಿಸ್ತಾರದಿ ಪೇಳೆನುತಾ ದುಗುಡದಿ

ಪೃಥ್ವಿಶನು ನುಡಿದಾ ||

**|| ಝುಂಪೆತಾಳ || ಕೌರವ ||**

ಏನಾ ಮಾಡಲಿ ನಾನೂ (ಒಂದು ಗತಿ)

ಏನ ಮಾಡಲಿ ನಾನೂ | ಪಾಂಡೂವರ ಸೋಲಿಪಡೇ |

ದಾನವಾಂತಕನವರ್ಗೇ | ಸಾರಥಿಯಾಗಿಹನೂ

**|| ರೇಗುಪ್ತಿ ರಾಗ -6 | ಝುಂಪೆತಾಳ + ಅಟ್ಟತಾಳ ||**

**|| ಅಶ್ವತ್ಥಾಮ ಕೌರವರಿಗೆ ||**

ಅವನೀಶ ಕೇಳ್ ಭೀಷ್ಮಾ | ದ್ರೋಣಾರಿಚ್ಛಮರಣೀ |

ಅವರಳಿದ ಭಟರೊಳಗೆ | ಧುರಧೀರ ಕರ್ಣಾ |

**|| ಕರ್ಣನ ಪದ ||**

**|| ಏಕತಾಳ ||**

ತಂದೆಯ ಬರುವ ನಿರೀಕ್ಷಿಸಿ ಕರ್ಣನು (ಒಂದು ಗತಿ )

ತಂದೆ ಬರುವನಿರೀಕ್ಷಿಸಿ ಕರ್ಣನೂ | ಸ್ನಾನಂಗಳ ವಿರಚಿಸಿದಾ |

ತಂದೆಗೆ ಅರ್ಥ್ಯವನಿತ್ತಾಕ್ಷಣದೊಳು | ಬಂಧೇರಿದ ಹೊಸರಥವಾ

**| ರೇಗುಪ್ತಿ ರಾಗ || ಏಕತಾಳ + ಯಕ್ಕತಾಳ || ಕರ್ಣ ಸಾರಥಿಗೆ||**

ಕರೆಯಿರಿರೋ ಪಾಂಡುಕುಮಾರರನೀಕ್ಷಣ (ಒಂದು ಗತಿ)

ಕರೆಯಿರಿರೋ ಪಾಂಡುಕುಮಾರರ ವೀಕ್ಷಣ |

ಬರಲಿಂದಿನಾಹವಕೇ ।

ಗುರುಗಳ ದ್ರೋಣರ ಗೆಲಿದಿಹ ಗರ್ವವ | ಮುರಿಯುವೆ ನೀಕ್ಷಣಕೇ ||

**|| ಕುರುಝಂಪೆ ||**

ಧುರಕೆ ದಳಪತಿಯಾದ | ತರಣಿಜನುಯೆಂತೆಂಬ |

ಬಿರುನುಡಿಯ ವಾಖ್ಯವನು ಕೇಳೀ |



ಸರಿದು ಹೋದರು ಕಳ್ಳ | ಭೀಮ ಪಾರ್ಥರ ನೀಗ |

ಹಿಡಿತರುವರಿಲ್ಲ ರಣಕೇ ॥

ಏನೋ

**|| ರೇಗುಪ್ತಿ ರಾಗ | ಮಟ್ಟತಾಳ ||**

**|| ಕರ್ಣಪರ್ವ | ಅರ್ಜುನ ಕರ್ಣನಿಗೆ ||**

ಏನೋಎಲವೋ ಸೂತ ತನಯಾ (ಒಂದು ಗತಿ ) ಸೂತ ತನಯಾ

ಏನೋಎಲವೋ ಸೂತ ತನಯಾ

ನೀನೆ ಬಂದೆ ಸಮರಕೀಗ ||

ಏನ ಹೇಳಲೆನ್ನ ಪುಣ್ಯ ನೀನೆ ದೊರೆತೆಯಾ || (ಸುತ್ತ ತಿರುಗು )

ಏನ ಹೇಳಲೆನ್ನ ಪುಣ್ಯ ನೀನೆ ದೊರೆತೆಯಾ

**|| ಕರ್ಣ ಅರ್ಜುನನಿಗೆರೇಗುಪ್ತಿ ರಾಗ || ಮಟ್ಟತಾಳ ||**

ಬಂದೊಡೇನೋ ಇಂದ್ರಾ ತನಯಾ | (ಒಂದು ಗತಿ)

ಬಂದೊಡೇನೋ ಇಂದ್ರ ತನಯ |

ಕೊಂದೆ ಭೀಷ್ಮ ದ್ರೋಣರನ್ನು |

ಎಂಬ ಗರ್ವವನ್ನು ಎನ್ನ ಮುಂದೆ ತೋರೆಲೋ | (ಪೂರ್ತಿಸುತ್ತು)

ಎಂಬ ಗರ್ವವನ್ನು ಎನ್ನ ಮುಂದೆ ತೋರೆಲೋ

**|| ರೇಗುಪ್ತಿ ಕರ್ಣ-ಕೌರವನಿಗೆ ||**

**|| ಅಷ್ಟತಾಳ ||**

ಶಲ್ಯ ನೃಪಾಲನು ಸಾರಥಿ ತನದೊಳು | ಬಹಳ ಪರಾಕ್ರಮನೂ

ನಿಲ್ಲಾದೆ ಆತನ ಕರೆತಂದು ಕೊಟ್ಟರೆ | ರಿಪುಮಲ್ಲರ ಗೆಲಿವೆ ತಾನೆಂದಾ

**|| ರೇಗುಪ್ತಿ | ಅಷ್ಟತಾಳ || ಕೌರವ – ಕರ್ಣನಿಗೆ ||**

ಇದಕೆ ಯೋಚನೆ ಯಾಕೆ | ಕರೆತಂದು ಕೊಡುವೆನು ಮುದದಿಂದ ಮಾವನನು|| ಕೇಳೈ ಕರ್ಣಮುದದಿಂದ ಮಾವನನು | ಕದನ ಗೆಲುವ ಭಾರ | ನಿನದೆಂದೆನುತಾಲಿ |

ಮುದದಿ ಪೌರುಷವ ನುಡಿದಾ |

**|| ರೇಗುಪ್ತಿ | ಅಷ್ಟತಾಳ | ಕೌರವ-ಶಲ್ಯನಿಗೆ ||**

ಮಾವ ನಿಮ್ಮೊಡನೊಂದು ಕಾರ್ಯ

ಭಾವಿಸಿ ಬಂದೆನಾ ನಿಮ್ಮೆಡೆಗೆ | ಕೇಳ್ ಭಾವ ನಿಮ್ಮೆಡೆಗೆ

ನೀವನು ಗ್ರಹವಾದರೆ ಎನಗೆ । ಯಾವ ದೊಡ್ಡದು ಭಾನು ಸುತಗೇ ॥



|| ರೇಗುಪ್ತಿ | ಅಷ್ಟತಾಳ || ಕೌರವ-ಶಲ್ಯನಿಗೆ ||

ಕರ್ಣಗೆ ನೀವು ಸಾರಥಿಯಾಗಿ

ರಣದೊಳು ವರ್ಣಿಸಬೇಕೊ ವಿಕ್ರಮವಾ | ಕೇಳೊ ಭಾವ ವರ್ಣಿಸಬೇಕೈ

ವಿಕ್ರಮವ

ಕೊರಳಿಗೊಡ್ಡಿದ ಖಡ್ಗ ತೆಗೆಸಿದಿರೆನ್ನುವ

ಬಿರಂದು ಬರ್ಪೂದು ಬಾವ ನಿಮಗೇ ||

**|| ರೇಗುಪ್ತಿ ರಾಗ | ಭಾಮಿನಿ ||**

ನುಡಿಯ ಕೇಳುತ ಶಲ್ಯ ಕಲ್ಪದ

ಕಡಲೊಡೆದ ತೆರನಂತೆ ಘರ್ಜಿಸಿ

ನುಡಿ ನುಡಿ ಇನ್ನೊಮ್ಮೆ ನುಡಿದರೆ ಕಡಿದು ನಿನ್ನನು |

ಭೂತಳಕ್ಕೆ ಬಲಿಯ ಕೊಡುವೆನು ಎಂದ ಮಾದೇಶಾ |

**|| ರೇಗುಪ್ತಿ ರಾಗ || ಅಷ್ಟತಾಳ ||**

**|| ಶಲ್ಯ - ಕೌರವನಿಗೆ !!**

ಬರುವೆ ನಿಮ್ಮಯ ಕಾರ್ಯಕ್ಕಾಗಿ | (ಒಂದು ಗತಿ ಸುತ್ತಾಕಿ)

ಬರುವೆ ನಿಮ್ಮಯ ಕಾರ್ಯಕ್ಕಾಗಿ | ಕರ್ಣಗೆ ನಾನು |

ಧುರಕೆ ಸಾರಥಿಯಾಗುವೇ | ಕೆಳ್ಳೆ ನಾನು ದುರಕೆ ಸಾರಥಿಯಾಗುವೇ ||

ಇರುವುದಂದುಸಿರು ನಾ ಹೇಳಿದಂದಳವನ್ನು ವಿವರವ |

ತಿರುಗುವೇ ಕೇಳದೊಡೇ ||

**|| ರೇಗುಪ್ತಿ | ಕುರುಝಂಪೆ ||**

**|| ಕರ್ಣ - ಕೌರವನಿಗೆ ಶಲ್ಯನಿಗೆ ||**

ಪಾಕಶಾಶನ (ಸುತನ) ತರಿದು ರಕ್ತವನು ತೆಗೆದು |

ಭೀಮನ ಕಪಾಲದಲಿ | ಮೊಗೆದು ಮೊಗೆದು ಶಾಕಿನಿಯ ಬಳಗಕ್ಕೆ |

ಔತಣವ ಮಾಡದಿರೆ ಕುರುರಾಯ ಸಾಕಿದಕೆ | ಫಲವು ಏನೆಂದಾ ||

**|| ಏಕತಾಳ ||**

**|| ಶಲ್ಯ – ಕರ್ಣನಿಗೆ||**

ಕೂಗುವೆ ಯಾತಕೋ ಕುನ್ನೀ | (ಒಂದು ಗತಿ ಮುಕ್ತಾಯ ) ಕೂಗುವೆಯಾತಕೆ ಕುನ್ನಿ ನಿನ್ನತಲೆಗೇರಿತು ಬಲು ಸನ್ನಿ | ಕೊಳಗುಳವನು ನೀ ಬಲ್ಯ ! ಎಂದೆನುತಲಿ ಪೇಳ್ವನು ಶಲ್ಯ



**|| ರಾಗ ಸಾವೇರಿ || ಮಂಗಳಾರತಿ || ಕುರುಝಂಪೆ ||**

ಜಯಮಂಗಳಂ ನಿತ್ಯ ಶುಭಮಂಗಳಂ | ಜಯಜಯತು | ಜಗಜ್ಜನನಿ ಬಗಳಾಂಬೆಗೆ ಜಯಮಂಗಳಂ ನಿತ್ಯ ಶುಭಮಂಗಳಂ || ಕಾಳಿಕೆಯು ಎನಿಸುತಲಿ | ಕೀಳು ಮಧುಎಂಬುವನ ಖೂಳ ಕೈಠಭರೆಂಬ | ಅಸುರರ್ಕಳಾ | ತಾಳಿ ಪರುಷತ್ವವನು ಸೀಳುತಲಿ ಮಸ್ತಕವ | ಹೋಳು ಸಹಸ್ತವ | ಮಾಡ್ದಪಾಲಾಕ್ಷಿಗೇ | ಜಯಮಂಗಳಂ ನಿತ್ಯ ಶುಭಮಂಗಳಂ |

ದುಷ್ಟ ಮಹಿಷಾಸುರನು | ಅಷ್ಟದಿಕ್ಪಾಲಕರ | ಪಟ್ಟಣಕೆ ದೊರೆಯಾಗಿ | ದೇವರ್ಕಳಂ ನಿಷ್ಠೆಯಲಿ ರೋಧಿಸಲು / ಕಷ್ಟಬಿಡಿಸುವೆನೆಂದು | ಕುಟ್ಟಿಮಹಿಷನ ಕೊಂದ ಮಹಾಲಕ್ಷ್ಮಿಗೇ ಜಯಮಂಗಳಂ ನಿತ್ಯ ಶುಭಮಂಗಳಂ |

ಹಿರಿಯ ಶುಂಭನು ತಾನು ಕಿರಿಯವನು | ನಿಶುಂಭ ಸುರರ ಬಾಧಿಸಲವರು ಮೊರೆಯಿಡುತಿರೆ || ದುರುಳ ದೈತ್ಯನ ಶಿರವ | ಹರಿದು ಹರುಷವ ತಾಳ | ಗುರು ಚಿದಾನಂದ ಭಾರತಿದೇವಿಗೆ || ಜಯಮಂಗಳಂ | ನಿತ್ಯ ಶುಭಮಂಗಳಂ ||

ಜಯಾಜಯನಮಃ ಪಾರ್ವತೀಪತಿಯೇ ಹರಹರಾ ಮಹಾದೇವಾ | ಇಂದಿರಾರಮಣ ಗೋವಿಂದ | ಗೋವಿಂದಾ |



ಯಕ್ಷಗಾನವು ಮೂಡಲಪಾಯ ಹಾಗೂ ಪಡುವಲಪಾಯಗಳೆಂದು ಎರಡು ಪ್ರಕಾರವಾಗಿದೆ. ಅವುಗಳಲ್ಲಿ ಪಡುವಲಪಾಯಕ್ಕೆ ಸಿಕ್ಕ ಪ್ರಸಿದ್ಧಿ ಪ್ರತಿಷ್ಠೆಗಳು ಮೂಡಲಪಾಯಕ್ಕೆ ಸಿಕ್ಕಿಲ್ಲ. ಅದಕ್ಕೆ ಹಲವಾರು ಕಾರಣಗಳಿವೆ. ಅವುಗಳನ್ನು ಅರಿತು ಸೂಕ್ತ ಪರಿಹಾರಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ. ಮೂಡಲಪಾಯದ ಕಲಾವಿದರಲ್ಲಿ ಹೆಚ್ಚಿನವರು ಗ್ರಾಮೀಣ ಪ್ರದೇಶಕ್ಕೆ ಸೇರಿದವರಾಗಿದ್ದು ಆಧುನಿಕ ನಾಗರಿಕ ಪ್ರಪಂಚದ ಮನಸ್ಸುಗಳಿಗೆ ಸಮ್ಮತವಾಗುವಂತೆ ಕಲೆಯನ್ನು ಪ್ರಸ್ತುತಪಡಿಸುವಲ್ಲಿ ಹಿಂದುಳಿದಿರುವುದು ಒಂದು ಪ್ರಮುಖವಾದ ಕಾರಣವಾಗಿದೆ. ಹಾಗಾಗಿ ಸತ್ವಸಂಪನ್ನವಾದ ಕಲಾಪ್ರಕಾರವೊಂದು ಅಳಿವಿನ ಅಂಚಿನಲ್ಲಿದೆ. ಅದನ್ನು ಸೂಕ್ತವಾದ ರೀತಿಯಲ್ಲಿ ಪರಿಷ್ಕರಿಸಬೇಕಾದುದು ಕಲೆಯ ಉಳಿವು ಬೆಳೆವುಗಳಲ್ಲಿ ಆಸಕ್ತರಾದವರೆಲ್ಲರ ಕರ್ತವ್ಯವಾಗಿದೆಯೆಂದು ನಮಗನಿಸುತ್ತದೆ. ಕಲಾಸಕ್ತರಲ್ಲಿ ಈಗೀಗ ಅಂಥ ಕಳಕಳಿ ಮೂಡಿ ಕಾರ್ಯಪ್ರವೃತ್ತರಾಗಿರುವುದು ಸಂತೋಷದ ಸಂಗತಿ. ಯಕ್ಷಗಾನ ಅಕಾಡೆಮಿಯು ಮೂಡಲಪಾಯ ಪ್ರಕಾರದ ಅಭಿವೃದ್ಧಿಗೆ ಯಥಾಶಕ್ತಿಯಾಗಿ ಶ್ರಮಿಸುತ್ತಲಿದೆಯೆಂದು ಪ್ರಾಂಜಲವಾಗಿ ನಿವೇದಿಸುತ್ತಿದ್ದೇವೆ.



ಈ ಪುಸ್ತಕದ ಮೂಲಕ ಮೂಡಲಪಾಯ ಯಕ್ಷಗಾನ ಕಲೆ ಜೀವಂತವಾಗಿ ಉಳಿಯಬೇಕೆಂಬುದು ನನ್ನ ಹಂಬಲ. ಇದು ಯಕ್ಷಗಾನ ಭಾಗವತರಿಗೆ, ಕಲಾವಿದರಿಗೆ, ವಾದ್ಯ ಪರಿಕರ ನುಡಿಸುವವರಿಗೂ ಅನುಕೂಲವಾಗುತ್ತೆಂದು ಭಾವಿಸಿದ್ದೇನೆ. ಇದಕ್ಕೆ ಸಹಕರಿಸಿದ ನನ್ನ ಗ್ರಾಮದ ಹಲವು ಭಾಗವತರಿಗೆ, ಕಲಾವಿದರಿಗೆ ವಂದನೆಗಳು. ಹೆಚ್ಚಿನ ಆಸಕ್ತಿ ತೋರಿದ ನನ್ನ ಮಕ್ಕಳಾದ ಭಾಗವತ್ ಎ.ಎನ್ ಜಗದೀಶ್, ಕಲಾವಿದ ಎ.ಎನ್ ವಿರೂಪಾಕ್ಷ ಅವರಿಗೂ ನನ್ನ ಆಶೀರ್ವಾದವಿರಲೆಂದು ಆಶಿಸುತ್ತೇನೆ. ಈ ಕೃತಿಯನ್ನು ಪ್ರಕಟಿಸುತ್ತಿರುವ ಕರ್ನಾಟಕ ಯಕ್ಷಗಾನ ಅಕಾಡೆಮಿಯನ್ನು ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ.

ಕರ್ನಾಟಕ ಯಕ್ಷಗಾನ ಅಕಾಡೆಮಿ